₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಶನಿವಾರ 07.06.2025 ಸಂಪುಟ: 10 ಸಂಚಿಕೆ: 144 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ



ಭಾರತಕ್ಕೆ ಮರಳಲು ಸಿದ್ಧ: ಮಲ್ಯ

ಕಿಂಗ್‌ಫಿಷರ್ ಏರ್‌ಲೈನ್ಸ್‌ನ ವೈಫಲ್ಯಕ್ಕೆ ನಾನು ಎಲ್ಲರಲ್ಲೂ ಕ್ಷಮೆಯಾಚಿಸುತ್ತೇನೆ. ಆದರೆ ನೀವು ನನ್ನನ್ನು ಪರಾರಿಯಾದ ವ್ಯಕ್ತಿ ಎಂದು ಏಕೆ ಕರೆಯುತ್ತೀರಿ? ನಾನು ಓಡಿ ಹೋದವನಲ್ಲ. ಭಾರತದಲ್ಲಿ ನ್ಯಾಯಯುತ ವಿಚಾರಣೆ ಮತ್ತು ಗೌರವಾನ್ವಿತ ಬದುಕಿನ ಭರವಸೆ ಸಿಕ್ಕಿದರೆ ಖಂಡಿತ ಮರಳುವೆ ಎಂದು ಉದ್ಯಮಿ ವಿಜಯ್ ಮಲ್ಯ ಹೇಳಿದ್ದಾರೆ.

ಸೊಂಪಾದ ಪುಟಗಳು

ಗಡಿ ಪ್ರಮಾದಗಳ ಸರದಾರರು: ನೆಹರು ಮತ್ತು ಇಂದಿರಾ ಗಾಂಧಿ

ವೀಕೆಂಡ್ ವಿತ್ ಮೋಹನ್ ಮೋಹನ್ ವಿಶ್ವ 6

ಮೂತ್ರಕೋಶದ ಕಲ್ಲು: ತಿಳಿದುಕೊಳ್ಳಿ ಆಯುರ್ವೇದದ ಸೊಲ್ಲು

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ ಡಾ.ಸಾಧನಶ್ರೀ 7

ದಾರಿದೀಪೋಕ್ತಿ

ನಿಮ್ಮ ಹೊಸ ಐಡಿಯಾವನ್ನು ಹೇಳಿದಾಗ ಯಾರೂ ಅದನ್ನು ಸ್ವೀಕರಿಸುವುದಿಲ್ಲ. ಅದರ ಬದಲು ನಿಮ್ಮನ್ನು ನೋಡಿ ನಗುತ್ತಾರೆ, ಆಸೆಗೆ ತಣ್ಣೀರೆರಚುತ್ತಾರೆ ಅಥವಾ ಟೀಕಿಸುತ್ತಾರೆ. ಅಷ್ಟಕ್ಕೇ ಬೇಸರ ಮಾಡಿಕೊಳ್ಳಬಾರದು ಮತ್ತು ನಿಮ್ಮ ಯೋಜನೆಯಿಂದ ವಿಮುಖರಾಗಬಾರದು.

ವಕ್ರತುಂಡೋಕ್ತಿ



ಮಾತು ಬಿಡುವ ಮೂಲಕ ಗಂಡನಿಗೆ ಶಿಕ್ಷೆ ಕೊಡಬಹುದು ಎಂದು ಹೆಂಡತಿ ಭಾವಿಸಿದರೆ, ಅದನ್ನು ಮುಗ್ಧತೆಯ ಪರಾಕಾಷ್ಠೆ ಎಂದು ಹೇಳಬಹುದು.

ಚೆನಾಬ್ ಸೇತುವೆಗೆ ಮೋದಿ ಚಾಲನೆ

ಹೊಸದಿಲ್ಲಿ: ಜಮ್ಮು-ಕಾಶ್ಮೀರದ ರಿಯಾಸಿ ಜಿಲ್ಲೆಯಲ್ಲಿ ನಿರ್ಮಿಸಲಾದ ವಿಶ್ವದ ಅತಿ ಎತ್ತರದ ಚೆನಾಬ್ ರೈಲ್ವೆ ಕಮಾನು ಸೇತುವೆಯನ್ನು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಉದ್ಘಾಟಿಸಿದ್ದಾರೆ. ಇದೇ ವೇಳೆ ಜಮ್ಮುವಿನ ಶ್ರೀಮಾತಾ ವೈಷ್ಣೋದೇವಿ ಕಾತ್ರಾ ಹಾಗೂ ಕಾಶ್ಮೀರದ ಶ್ರೀನಗರ ನಡುವಿನ ಎರಡು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳಿಗೆ ಪ್ರಧಾನಿ ಚಾಲನೆ ನೀಡಿದರು. ಜಗತ್ತಿನ ಇಂಜಿನಿಯರಿಂಗ್ ಅದ್ಭುತಗಳಲ್ಲಿ ಒಂದಾಗಿರುವ ಸೇತುವೆ ಉದ್ಘಾಟನೆ ಬಳಿಕ ಮೋದಿ ಭಾರತದ ಧ್ವಜ ಹಿಡಿದು ಸೇತುವೆ ಮೇಲೆ ನಡೆದು ಗಮನಸೆಳೆದರು. ವಿವರಪುಟ → 10

19ಕ್ಕೆ ನಂದಿಬೆಟ್ಟದಲ್ಲಿ ವಿಶೇಷ ಸಂಪುಟ ಸಭೆ

ಬೆಂಗಳೂರು: ಕಳೆದ ತಿಂಗಳು ಮಲೆ ಮಹದೇಶ್ವರ ಬೆಟ್ಟದಲ್ಲಿ ಸಚಿವ ಸಂಪುಟ ಸಭೆ ನಡೆಸಿದ್ದ ರಾಜ್ಯ ಸರಕಾರ ಇದೀಗ ನಂದಿಬೆಟ್ಟದಲ್ಲಿ ವಿಶೇಷ ಸಚಿವ ಸಂಪುಟ ಸಭೆ ನಡೆಸಲು ತೀರ್ಮಾನಿಸಿದೆ. ನಂದಿಬೆಟ್ಟದಲ್ಲಿ ವಿಶೇಷ ಸಚಿವ ಸಂಪುಟ ಸಭೆ ನಡೆಸುವ ಸಂಬಂಧ ರಾಜ್ಯ ಸರಕಾರ ಅಧಿಕೃತ ಆದೇಶವನ್ನು ಹೊರಡಿಸಿದ್ದು, ಜೂನ್ 19ರಂದು ಗುರುವಾರ ಮಧ್ಯಾಹ್ನ 12 ಗಂಟೆಗೆ ನಂದಿ ಬೆಟ್ಟದಲ್ಲಿ ಸಚಿವ ಸಂಪುಟ ಸಭೆ ಕರೆಯಲಾಗಿದೆ. ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿ ಬೆಟ್ಟದ ಮಯೂರ ಸಭಾಂಗಣದಲ್ಲಿ 2025ನೇ ಸಾಲಿನ 13ನೇ ಸಚಿವ ಸಂಪುಟ ಸಭೆ ನಡೆಯಲಿದೆ.

ಗುಪ್ತಚರ ಇಲಾಖೆಯಿಂದ ನಿಂಬಾಳ್ಕರ್ ಎತ್ತಂಗಡಿ, ಎಡಿಜಿಪಿ ಹಿತೇಂದ್ರ ವರ್ಗ

ಆರ್‌ಸಿಬಿ ಪ್ರತಿನಿಧಿ ಸೋಸಲೆ, ಡಿಎನ್‌ಎ ಸಿಬ್ಬಂದಿ ಸೇರಿ ನಾಲ್ವರಿಗೆ ನ್ಯಾಯಾಂಗ ಬಂಧನ

ಕಾಲ್ತುಳಿತ: ಮುಂದುವರಿದ ತಲೆದಂಡ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಐಪಿಎಲ್ ವಿಜಯೋತ್ಸವದಲ್ಲಿ ನಡೆದ ಕಾಲ್ತುಳಿತ ಪ್ರಕರಣ ಸಂಬಂಧ 'ಕರ್ತವ್ಯ' ಲೋಪ ಎಸಗಿದ ಹಿರಿಯ ಅಧಿಕಾರಿಗಳ ವಿರುದ್ಧ ಶುಕ್ರವಾರ ರಾಜ್ಯ ಸರಕಾರ 'ವರ್ಗಾವಣೆ'ಯ ಅಸ್ತ್ರವನ್ನು ಪ್ರಯೋಗಿಸಿದೆ. ಘಟನೆ ಸಂಬಂಧ ಆರ್‌ಸಿಬಿ ಮತ್ತು ಡಿಎನ್‌ಎ ಇವೆಂಟ್ಸ್ ಮ್ಯಾನೇಜ್‌ಮೆಂಟ್ ಕಂಪನಿಯ ನಾಲ್ವರನ್ನು ಬಂಧಿಸಲಾಗಿದೆ. ಕ್ರಿಕೆಟಿಗ ವಿರಾಟ್ ಕೊಹ್ಲಿ ವಿರುದ್ಧವೂ ದೂರು ದಾಖಲಾಗಿದೆ. ಇದೇ ವೇಳೆ ಸಿಎಂ ಆಪ್ತ ಗೋವಿಂದರಾಜು ಅವರನ್ನು ರಾಜಕೀಯ ಸಲಹೆಗಾರ ಹುದ್ದೆಯಿಂದ ಕೈ ಬಿಡಲಾಗಿದೆ.

ಗುರುವಾರ ರಾತ್ರಿ ಬೆಂಗಳೂರು ಪೊಲೀಸ್ ಆಯುಕ್ತ ಬಿ.ದಯಾನಂದ ಸೇರಿದಂತೆ ಐವರು ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಿದ್ದ ರಾಜ್ಯ ಸರಕಾರ, ಶುಕ್ರವಾರ ಬೆಳಗ್ಗೆ ಗುಪ್ತಚರ ಇಲಾಖೆ ಮುಖ್ಯಸ್ಥರಾಗಿದ್ದ ಹೇಮಂತ್ ಲಿಂಬಾಳ್ಕರ್ ಅವರನ್ನು ಗುಪ್ತಚರ ಇಲಾಖೆಯಿಂದ ಬಿಡುಗಡೆಗೊಳಿಸಿದೆ. ಇದೇ ರೀತಿ ಕಾನೂನು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಹಿತೇಂದ್ರ ಅವರನ್ನು ವರ್ಗಾಯಿಸಿರುವುದು ಕಾಲ್ತುಳಿತದ 'ಅಡ್ಡಪರಿಣಾಮ' ಎಂದೇ ವಿಶ್ಲೇಷಿಸಲಾಗುತ್ತಿದೆ.

ಈ ಎಲ್ಲವನ್ನು ಮೀರಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅತ್ಯಾಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದ, ಒಲಿಂಪಿಕ್ಸ್ ಅಸೋಸಿಯೇಷನ್ ಅಧ್ಯಕ್ಷರಾಗಿದ್ದ ಗೋವಿಂದರಾಜು ಅವರನ್ನು ಮುಖ್ಯಮಂತ್ರಿ ರಾಜಕೀಯ ಸಲಹೆಗಾರ ಹುದ್ದೆಯಿಂದ ಕೆಳಗಿಳಿಸಿರುವುದು ರಾಜಕೀಯ ವಲಯದಲ್ಲಿ ತೀವ್ರ ಕುತೂಹಲಕ್ಕೆ ಕಾರಣವಾಗಿದೆ. ಆರ್‌ಸಿಬಿ ವಿಜಯೋತ್ಸವ ಕಾರ್ಯಕ್ರಮವನ್ನು ವಿಧಾನಸೌಧದ ಮುಂದೆ ನಡೆಸುವ ನಿರ್ಧಾರದಲ್ಲಿ ಗೋವಿಂದರಾಜು ಅವರ ಪಾತ್ರ ಮಹತ್ವದಾಗಿತ್ತು ಎನ್ನುವ ಕಾರಣಕ್ಕೆ ಈ ಕ್ರಮ ವಹಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಈ ನಡುವೆ ಪ್ರಕರಣ ಗಂಭೀರ ಸ್ವರೂಪ ಪಡೆದುಕೊಳ್ಳುತ್ತಿದ್ದಂತೆ ಮುಂಬೈಗೆ ಹಾರಲು ಪ್ರಯತ್ನಿಸಿದ ಆರ್‌ಸಿಬಿ ಮಾರ್ಕೆಟಿಂಗ್ ಮುಖ್ಯಸ್ಥ ವಿಜಯ್ ಸೋಸಲೆ ಸೇರಿದಂತೆ ನಾಲ್ವರನ್ನು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿಯೇ ಪೊಲೀಸರು ವಶಕ್ಕೆ ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, 14 ದಿನ ನ್ಯಾಯಾಂಗ ಬಂಧನಕ್ಕೆ ಪಡೆಯಲಾಗಿದೆ.

ಹಿರಿಯ ಅಧಿಕಾರಿಗಳ ವರ್ಗಾವಣೆ: ದಯಾನಂದ ಸೇರಿದಂತೆ ಐವರು ಪೊಲೀಸರ ಅಮಾನತಿನ ಬೆನ್ನಲ್ಲೇ, ಗುಪ್ತಚರ ಇಲಾಖೆ ನಿರ್ದೇಶಕರಾಗಿದ್ದ ಹೇಮಂತ್ ನಿಂಬಾಳ್ಕರ್ ಅವರನ್ನು ಅಮಾನತುಗೊಳಿಸಬೇಕು ಎನ್ನುವ ಆಗ್ರಹ ಕೇಳಿ ಬಂದಿತ್ತು. ಇದೀಗ ನಿಂಬಾಳ್ಕರ್ ಅವರ ಹೊಣೆಗಾರಿಕೆಯನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತ ಹುದ್ದೆಗೆ ಸೀಮಿತಗೊಳಿಸಲಾಗಿದೆ. → 4

ಪ್ರಮುಖಾಂಶ

- ಗಾಯಾಳು ರೋಲನ್ ಗೊಮೆಸ್‌ರಿಂದ ಮತ್ತೊಂದು ದೂರು
- ಕ್ರಿಕೆಟಿಗ ವಿರಾಟ್ ಕೊಹ್ಲಿ ಅವರ ವಿರುದ್ಧವೂ ದೂರು
- ಆರ್‌ಸಿಬಿ, ಡಿಎನ್‌ಎಯ ನಾಲ್ವರಿಗೆ 14 ದಿನ ನ್ಯಾಯಾಂಗ ಬಂಧನ
- ಡಿಎನ್‌ಎ ಸಂಸ್ಥೆಯ ಮಾಲೀಕ ವೆಂಕಟ್ ವರ್ಧನ್ ನಾಪತ್ತೆ
- ವಿಮಾನ ನಿಲ್ದಾಣದಲ್ಲಿ ಆರ್‌ಸಿಬಿ ಮಾರ್ಕೆಟಿಂಗ್ ಮುಖ್ಯಸ್ಥ ಸೋಸಲೆ ಬಂಧನ
- ಸಿಸಿಬಿಯಿಂದ ಕಾಲ್ತುಳಿತಕ್ಕೆ ಸಂಬಂಧಿಸಿ ತನಿಖೆ ಆರಂಭ,
- ದುರಂತ ಸ್ಥಳಕ್ಕೆ ಮಾನವ ಹಕ್ಕುಗಳ ಆಯೋಗದ ಭೇಟಿ, ಪರಿಶೀಲನೆ

ಹೈಕೋರ್ಟ್‌ನಲ್ಲಿ ಆರ್‌ಸಿಬಿ ವಾದವೇನು?

- ಆರ್‌ಸಿಬಿ ಫ್ರಾಂಚೈಸಿ; ನಮಗೆ ಪ್ರತ್ಯೇಕ ಭದ್ರತಾ ಪಡೆಗಳಿಲ್ಲ
- ವಿಜಯೋತ್ಸವದ ವೇಳೆ ಭದ್ರತೆ ನೀಡಬೇಕಿರುವುದು ರಾಜ್ಯ ಸರಕಾರ ಕರ್ತವ್ಯ
- ವಿಧಾನಸೌಧದ ಬಳಿ ವಿಜಯೋತ್ಸವಕ್ಕೆ ನಾವು ಕೇಳಿರಲಿಲ್ಲ, ಸರಕಾರದ ನಿರ್ಧಾರ
- ಸರಕಾರ ಆದೇಶ ಹೊರಡಿಸಿದ್ದರಿಂದ ನಾವು ಆಟಗಾರರನ್ನು ಕಳುಹಿಸಿದ್ದೇವೆ
- ಕಾನೂನು ಸುವ್ಯವಸ್ಥೆ ಕಾಪಾಡಬೇಕಿರುವುದು ಸರಕಾರ ಕರ್ತವ್ಯವಾಗಿತ್ತು
- ನಾವು ಬಿಸಿಸಿಐ, ಐಪಿಎಲ್ ರೂಪಿಸಿರುವ ನಿಯಮದಡಿ ಆಡುವ ಆಟಗಾರರಷ್ಟೆ.

ಹೈಕೋರ್ಟ್‌ನಲ್ಲಿ ಕೆಎಸ್‌ಸಿಎ ವಾದವೇನು?

- ವಿಧಾನಸೌಧ ಮುಂದೆ ವಿಜಯೋತ್ಸವಕ್ಕೆ ಆಹ್ವಾನ ನೀಡಿದ್ದು ಸರಕಾರ
- ರಾಜ್ಯಪಾಲರು, ಸಿಎಂ, ಡಿಸಿಎಂ ಆರ್‌ಸಿಬಿ ಆಟಗಾರರನ್ನು ಸನ್ಮಾನಿಸಿದ್ದಾರೆ.
- ಸರಕಾರದ ಮೇಲಿನ ಜನಾಕ್ರೋಶ ತಪ್ಪಿಸಲು ನಮ್ಮ ವಿರುದ್ಧ ಎಫ್‌ಐಆರ್
- ಗೇಟ್ ಬಳಿ ಜನದಟ್ಟಣೆ ನಿರ್ವಹಣೆ ಪೊಲೀಸರ ಕರ್ತವ್ಯವಾಗಿತ್ತು
- ಕರ್ನಾಟಕದ ಕ್ರಿಕೆಟ್ ನಿಯಂತ್ರಣವಷ್ಟೇ ಕೆಎಸ್‌ಸಿಎ ಜವಾಬ್ದಾರಿ.
- ಬಿಸಿಸಿಐ ರೂಪಿಸಿರುವ ನಿಯಮಗಳಲ್ಲಿ ಕಾರ್ಯನಿರ್ವಹಿಸುವುದು ನಮ್ಮ ಕೆಲಸ

ಆರ್‌ಸಿಬಿ ಮಾರ್ಕೆಟ್ ಹೆಡ್ ಸೆರೆ

ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಆರ್‌ಸಿಬಿ ಮಾರ್ಕೆಟಿಂಗ್ ಮುಖ್ಯಸ್ಥ ನಿಖಿಲ್ ಸೋಸಲೆ ಸೇರಿ ಕಾರ್ಯಕ್ರಮ ಆಯೋಜಿಸಿದ್ದ ನಾಲ್ವರನ್ನು ಕಾರ್ಯಕ್ರಮ ಆಯೋಜಕರನ್ನು ಸಿಸಿಬಿ ಹಾಗೂ ಕಬ್ಬನ್ ಪಾರ್ಕ್ ಠಾಣೆ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ಬಂಧಿಸಿದ್ದಾರೆ. ಆರ್‌ಸಿಬಿ ಮಾರ್ಕೆಟಿಂಗ್ ಮುಖ್ಯಸ್ಥ ನಿಖಿಲ್ ಸೋಸಲೆ ಜತೆ ಡಿಎನ್‌ಎ ಮ್ಯಾನೇಜ್‌ಮೆಂಟ್ ಸಿಬ್ಬಂದಿ ಸುನೀಲ್ ಮ್ಯಾಥ್ಯೂ, ಕಿರಣ್ ಮತ್ತು ಸುಮಂತ್‌ನನ್ನು ಬಂಧಿಸಲಾಗಿದೆ. ನಾಲ್ವರು ಮುಂಬೈಗೆ ತೆರಳುತ್ತಿದ್ದಾಗ ಖಚಿತವಾದ ಮಾಹಿತಿಯನ್ನು ಆಧರಿಸಿ ದೇವನಹಳ್ಳಿಯಲ್ಲಿರುವ ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ಕಾರ್ಯಾಚರಣೆ ಕೈಗೊಂಡು ಬಂಧಿಸಿ ತೀವ್ರ ವಿಚಾರಣೆ ಕೈಗೊಳ್ಳಲಾಗಿದೆ. ನ್ಯಾಯಾಲಯದ ಮುಂದೆ ಹಾಜರುಪಡಿಸಿ, 14 ದಿನ ನ್ಯಾಯಾಂಗ ಬಂಧನಕ್ಕೆ ತೆಗೆದುಕೊಳ್ಳಲಾಗಿದೆ. ಇದೇ ವೇಳೆ ಡಿಎನ್‌ಎ ಸಂಸ್ಥೆಯ ಮಾಲೀಕ, ಮಾಜಿ ಸಿಎಂ ಕೆಂಗಲ್ ಹನುಮಂತಯ್ಯ ಅವರ ಮೊಮ್ಮಗ ವೆಂಕಟ್ ವರ್ಧನ್ ನಾಪತ್ತೆಯಾಗಿದ್ದು ಅವರ ಬಂಧನಕ್ಕೆ ಪೊಲೀಸರು ಬಲೆ ಬೀಸಿದ್ದಾರೆ.

ಬ್ಯಾಡ್ಜ್ ಆಫ್ ಹಾನರ್ ಎಂದುಕೊಳ್ಳುವೆ: ದಯಾನಂದ್

ಬೆಂಗಳೂರು ಆಯುಕ್ತರಾಗಿದ್ದ ಬಿ.ದಯಾನಂದ್ ಅವರು ತಮ್ಮ ಅಮಾನತು ಆದೇಶಕ್ಕೆ ಸಾರ್ವಜನಿಕ ವಲಯದಲ್ಲಿ ತೀವ್ರ ಜನಾಕ್ರೋಶ ವ್ಯಕ್ತವಾಗಿದೆ. ಈ ಆದೇಶದ ವಿರುದ್ಧ ಅವರು ಕಾನೂನು ಹೋರಾಟ ನಡೆಸುತ್ತಾರೆ ಎಂದು ಬಹುತೇಕರು ಭಾವಿಸಿದ್ದರು. ಆದರೆ ದಯಾನಂದ್ ತಮ್ಮ ಆಪ್ತರ ಬಳಿಕ ಯಾವುದೇ ಕಾನೂನು ಹೋರಾಟ ನಡೆಸುವುದಿಲ್ಲ ಎಂದು ಹೇಳಿಕೊಂಡಿದ್ದಾರೆ ಎನ್ನಲಾಗಿದೆ. 'ಕಳೆದ ಎರಡು ವರ್ಷಗಳ ನನ್ನ ಸೇವಾವಧಿಯಲ್ಲಿ ಬೆಂಗಳೂರಿಗೆ ಏನು ಮಾಡಿದ್ದೇನೆ ಎನ್ನುವುದು ಜನರಿಗೆ ಹಾಗೂ ನನಗೆ ಗೊತ್ತಿದೆ. ಆದ್ದರಿಂದ ಈ ಅಮಾನತು ವಿರುದ್ಧ ಕಾನೂನು ಹೋರಾಟ ಮಾಡುವುದಿಲ್ಲ. ಬದಲಿಗೆ ಇದನ್ನು 'ಬ್ಯಾಡ್ಜ್ ಆಫ್ ಹಾನರ್' ಎಂದುಕೊಳ್ಳುವೆ' ಎನ್ನುವ ಮಾತನ್ನು ಹೇಳಿಕೊಂಡಿದ್ದಾರೆ ಎಂದು ತಿಳಿದುಬಂದಿದೆ.

ಕೆಎಸ್‌ಸಿಎ ಅಧಿಕಾರಿಗಳಿಗೆ ರಿಲೀಫ್

ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತ ಪ್ರಕರಣ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಕ್ರಿಕೆಟ್ ಅಕಾಡೆಮಿ (ಕೆಎಸ್‌ಸಿಎ)ಯ ಆಡಳಿತ ಸಮಿತಿ ಸದಸ್ಯರ ವಿರುದ್ಧ ಮುಂದಿನ ವಿಚಾರಣೆವರೆಗೂ ಆತುರದ ಕ್ರಮ ಬೇಡ ಎಂದು ಹೈಕೋರ್ಟ್ ಸೂಚನೆ ನೀಡಿದೆ. ಸಮಿತಿಯ ಅಧ್ಯಕ್ಷರಾದ ರಘುರಾಮ್ ಭಟ್, ಕಾರ್ಯದರ್ಶಿ ಎ.ಶಂಕರ್, ಖಜಾಂಚಿ ಇ.ಎಸ್.ಜಯರಾಮ್ ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಿ ನ್ಯಾಯಮೂರ್ತಿ ಕೃಷ್ಣ ಕುಮಾರ್ ಅವರ ಪೀಠ ಈ ಸೂಚನೆ ನೀಡಿದೆ. ಅಲ್ಲದೆ, ಅರ್ಜಿದಾರರು ತನಿಖೆಗೆ ಸಹಕರಿಸಬೇಕು. ನ್ಯಾಯಾಲಯದ ವ್ಯಾಪ್ತಿ ಬಿಟ್ಟು ಹೋಗಬಾರದು ಎಂಬುದಾಗಿ ತಿಳಿಸಿದ ನ್ಯಾಯಪೀಠ, ಅರ್ಜಿದಾರರ ವಿರುದ್ಧ ಮುಂದಿನ ಆದೇಶದವರೆಗೂ ಆತುರದ ಕ್ರಮಕ್ಕೆ ಮುಂದಾಗಬಾರದು ಎಂದು ನ್ಯಾಯಪೀಠ ಆದೇಶಿಸಿ, ಜೂನ್ 16ಕ್ಕೆ ವಿಚಾರಣೆ ಮುಂದೂಡಿತು.

ಕಾಲ್ತುಳಿತ ಪ್ರಕರಣದಲ್ಲಿ ನಾನು ಯಾವುದೇ ರಾಜಕೀಯ ಮಾಡುವುದಿಲ್ಲ. ಬಿಜೆಪಿ-ಜೆಡಿಎಸ್‌ನವರು ಹೇಳುತ್ತಿರುವಂತೆ ಯಾವ ಪೊಲೀಸ್ ಅಧಿಕಾರಿಯನ್ನು ಬಲಿಪಶು ಮಾಡುತ್ತಿಲ್ಲ. ಮೇಲ್ನೋಟಕ್ಕೆ ಜವಾಬ್ದಾರಿ ನಿರ್ವಹಿಸಿಲ್ಲದವರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. ಇದರಲ್ಲಿ ಯಾವುದೇ ಗೊಂದಲಗಳಿಲ್ಲ. - **ಸಿದ್ದರಾಮಯ್ಯ**, ಮುಖ್ಯಮಂತ್ರಿ

ಕಾಂಗ್ರೆಸ್‌ನಲ್ಲಿ ಬೇಬಿ ಎಲಿಫೆಂಟ್ ಎಂದೇ ಗೋವಿಂದರಾಜ್ ಚಿರಪರಿಚಿತ

ಕಾಲ್ತುಳಿತಕ್ಕೆ ಆನೆ ಮರಿ ಬಲಿ!

ಬೆಂಗಳೂರು: ಕಾಂಗ್ರೆಸ್ ವಲಯದಲ್ಲಿ ತಮಾಷೆಗೆ 'ಬೇಬಿ ಎಲಿಫೆಂಟ್' ಎಂದು ಬಹುತೇಕ ಹಿರಿಯ ನಾಯಕರಿಂದ ಕರೆಸಿಕೊಳ್ಳುವ ವಿಧಾನಪರಿಷತ್ ಸದಸ್ಯ ಡಾ.ಕೆ. ಗೋವಿಂದರಾಜು ಅವರನ್ನು ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಸ್ಥಾನದಿಂದ ಕೆಳಗಿಳಿಸಲಾಗಿದೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅತ್ಯಾಪ್ತ ವಲಯದಲ್ಲಿ ಕಾಣಿಸಿಕೊಂಡಿದ್ದ ಹಾಗೂ ಪಕ್ಷದ ಹೈಕಮಾಂಡ್ ಜತೆಗೂ 'ಉತ್ತಮ' ಬಾಂಧವ್ಯವನ್ನು ಗೋವಿಂದರಾಜು ಹೊಂದಿದ್ದರು. ಹೀಗಿದ್ದರೂ ಆರ್‌ಸಿಬಿ ಕಾಲ್ತುಳಿತ ಪ್ರಕರಣದಲ್ಲಿ ಅವರ ತಲೆದಂಡವಾಗಿರುವುದು ಅನೇಕರ ಅಚ್ಚರಿಗೆ ಕಾರಣವಾಗಿದೆ. ಆದರೆ ವಿಧಾನಸೌಧದಲ್ಲಿ ವಿಜಯೋತ್ಸವ ಕಾರ್ಯಕ್ರಮ ಆಯೋಜನೆಯ ಸಲಹೆ ನೀಡಿದ್ದೇ ಗೋವಿಂದರಾಜು ಎನ್ನುವ ಕಾರಣಕ್ಕೆ ಈ ಕ್ರಮವಹಿಸಲಾಗಿದೆ ಎನ್ನುವ ಮಾತುಗಳು ಕೇಳಿ ಬಂದಿವೆ.

ಸಿದ್ದರಾಮಯ್ಯ ಅವರೊಂದಿಗೆ ಸದಾಕಾಲ ಇರುತ್ತಿದ್ದ ಗೋವಿಂದರಾಜು ಅವರ ವಿರುದ್ಧ ಕಾಂಗ್ರೆಸ್‌ನಲ್ಲಿಯೇ ಪರ-ವಿರೋಧ ಚರ್ಚೆಗಳಿತ್ತು. ಗೋವಿಂದರಾಜು ಅವರ ಸಲಹೆ ಮೇರೆಗೆ ನಡೆದ ಕಾರ್ಯಕ್ರಮದಿಂದಲೇ ಇಷ್ಟೆಲ್ಲ ಸಮಸ್ಯೆಯಾಗಿದ್ದರಿಂದ ಅವರನ್ನು ರಾಜಕೀಯ ಕಾರ್ಯದರ್ಶಿ ಹುದ್ದೆಯಿಂದ ಹೊರಗಿಡಬೇಕು ಎನ್ನುವ ಒತ್ತಡ ಮುಖ್ಯಮಂತ್ರಿಗಳ ಮೇಲಿತ್ತು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ 10ಕ್ಕೂ ಹೆಚ್ಚು ಸಚಿವರು ಮುಖ್ಯಮಂತ್ರಿಗಳಿಗೆ ಈ ಸಂಬಂಧ ಸಲಹೆ ನೀಡಿದ್ದರು. ಆದ್ದರಿಂದ ರಾಜಕೀಯ ಕಾರ್ಯದರ್ಶಿ ಸ್ಥಾನದಿಂದ ಕೊಕ್ ನೀಡಲಾಗಿದೆ ಎಂದು ಖಚಿತ ಮೂಲಗಳು ತಿಳಿಸಿವೆ.

ಗೋವಿಂದರಾಜು ಅವರು ಕರ್ನಾಟಕ ಒಲಿಂಪಿಕ್ಸ್ ಅಸೋಸಿಯೇಷನ್, ಭಾರತೀಯ ಬಾಸ್ಕೆಟ್‌ಬಾಲ್ ಅಸೋಸಿಯೇಷನ್ ಹಾಗೂ ಫಿಬಾ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ರಾಜ್ಯದ ಕ್ರೀಡೆಯ ವಿಷಯದಲ್ಲಿ ಸದಾ ಅತ್ಯುತ್ಸಾಹ ತೋರಿಸುತ್ತಿದ್ದ ಗೋವಿಂದರಾಜು ಅವರು, ಸಿದ್ದರಾಮಯ್ಯ ಅವರನ್ನು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಹಲವು ಪಂದ್ಯಗಳಿಗೆ ಕರೆದುಕೊಂಡು ಹೋಗಿದ್ದರು. ಈ ಬಾರಿ ಐಪಿಎಲ್ ಟ್ರೋಫಿಯನ್ನು ಆರ್‌ಸಿಬಿ ಗೆದ್ದಾಗಲೂ, ಸರಕಾರದ ಪರವಾಗಿ ಅಭಿನಂದನೆಯ ಸಲಹೆಯನ್ನು ನೀಡಿದ್ದರು ಎನ್ನಲಾಗಿದೆ.

4 ಎಮ್ಮೆಲ್ಸಿ ಸ್ಥಾನಕ್ಕೆ ಹೆಸರು ಅಂತಿಮ

ಬೆಂಗಳೂರು: ವಿಧಾನಪರಿಷತ್‌ನಲ್ಲಿ ತೆರವಾಗಿರುವ ನಾಲ್ಕು ನಾಮನಿರ್ದೇಶನ ಸ್ಥಾನಗಳಿಗೆ ಕೊನೆಗೂ ಹೆಸರುಗಳು ಅಂತಿಮಗೊಂಡಿದ್ದು, ರಾಜಭವನಕ್ಕೆ ಶಿಫಾರಸು ಪತ್ರ ರವಾನೆಯಾಗಿದೆ ಎನ್ನಲಾಗಿದೆ.

ಸಿದ್ದರಾಮಯ್ಯ ಅವರು ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿದ್ದ ವೇಳೆ ಮಾಧ್ಯಮ ಕಾರ್ಯದರ್ಶಿಯಾಗಿದ್ದ ದಿನೇಶ್ ಅಮಿನ್‌ಮಟ್ಟು, ಎನ್‌ಆರ್‌ಐ ಫೋರಂ ಉಪಾಧ್ಯಕ್ಷೆಯಾಗಿರುವ ಆರತಿ ಕೃಷ್ಣ, ಕೆಪಿಸಿಸಿ ಮಾಧ್ಯಮ ವಿಭಾಗದ ಮುಖ್ಯಸ್ಥರಾಗಿರುವ ರಮೇಶ್ ಬಾಬು ಹಾಗೂ ಹೋರಾಟಗಾರ ಡಿ.ಜಿ. ಸಾಗರ್ ಅವರ ಹೆಸರನ್ನು ಅಂತಿಮಗೊಳಿಸಿದ್ದು, ಈ ಪಟ್ಟಿಯನ್ನು ಮುಖ್ಯಮಂತ್ರಿಗಳ ಕಚೇರಿಯಿಂದ ರಾಜಭವನಕ್ಕೆ ಕಳುಹಿಸಲಾಗಿದೆ. ತೆರವಾಗಿದ್ದ ನಾಮನಿರ್ದೇಶನ ಸ್ಥಾನಕ್ಕೆ ಕಾಂಗ್ರೆಸ್‌ನಲ್ಲಿ 40ಕ್ಕೂ ಹೆಚ್ಚು ಆಕಾಂಕ್ಷಿಗಳಿದ್ದರು.

ರೆಪೋ ದರ ಕಡಿತ, ಗೃಹಸಾಲ ಅಗ್ಗ

ಮುಂಬೈ: ಅಗತ್ಯ ವಸ್ತುಗಳ ಬೆಲೆ ಏರಿಕೆ, ತೆರಿಗೆ ಸಂಘರ್ಷದ ನಡುವೆ ಆರ್‌ಬಿಐ ಸತತ ಮೂರನೇ ಬಾರಿಗೆ ರೆಪೋ ದರ ಕಡಿತ ಮಾಡುವ ಮೂಲಕ ಸಾಲಗಾರರಿಗೆ ಸಂತಸ ನೀಡಿದೆ.

ಆರ್ಥಿಕತೆಯನ್ನು ಮತ್ತಷ್ಟು ಸರಿದಾರಿಗೆ ತರುವ ನಿಟ್ಟಿನಲ್ಲಿ ಆರ್‌ಬಿಐ ಬುಧವಾರ ರೆಪೋ ಬಡ್ಡಿದರ (ಬ್ಯಾಂಕುಗಳಿಗೆ ನೀಡುವ ಸಾಲದ ಮೇಲಿನ ಬಡ್ಡಿ ದರ) ವನ್ನು 50 ಮೂಲಾಂಶಗಳಷ್ಟು ಕಡಿತಗೊಳಿಸಿದೆ. ಇದರಿಂದ 6ರಷ್ಟಿದ್ದ ರೆಪೋ ದರವು ಈಗ 5.5ಕ್ಕೆ ಇಳಿದಿದೆ. ಇದು ಕಳೆದ ಮೂರು ವರ್ಷದಲ್ಲೇ ಅತ್ಯಧಿಕ ಕಡಿತವಾಗಿದೆ.

ಸಾಲಗಾರರ ಮೊಗದಲ್ಲಿ ಸಂಭ್ರಮ: ಆರ್‌ಬಿನ ಈ ನಿರ್ಧಾರದಿಂದ ಗೃಹ, ವಾಹನ ಮತ್ತು ಕಾರ್ಪೊರೇಟ್ ಸಾಲಗಾರರಿಗೆ ಹೆಚ್ಚು ನೆರವಾಗಲಿದೆ. ಸಾಲದ ಬಡ್ಡಿ ದರ ಇಳಿದು, ಇಎಂಐ ಹೊರೆಯೂ ಕಡಿಮೆ ಆಗಲಿದೆ. ರಿಯಲ್ ಎಸ್ಟೇಟ್ ಕ್ಷೇತ್ರಕ್ಕೆ ಉತ್ತೇಜನ ಸಿಗುವ ಸಾಧ್ಯತೆ ಇದೆ. ಗೃಹ ಸಾಲದ ಬಡ್ಡಿ ದರಗಳು ಕಡಿಮೆಯಾಗುವುದರಿಂದ, ಮನೆಗಳಿಗೆ ಬೇಡಿಕೆ ಹೆಚ್ಚಾಗುವ ನಿರೀಕ್ಷೆಯಿದೆ.

ಈ ಬಗ್ಗೆ ಮಾಹಿತಿ ನೀಡಿರುವ ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ, ಆರ್ಥಿಕ ಪ್ರಗತಿಯನ್ನು ಮತ್ತಷ್ಟ ಹೆಚ್ಚಿಸುವ ಸಲುವಾಗಿ ರೆಪೋ ದರವನ್ನು 50 ಬೇಸಿಸ್ ಪಾಯಿಂಟ್‌ಗಳಷ್ಟು ಇಳಿಕೆ ಮಾಡಲಾಗಿದೆ. ಇದು ಕಳೆದ ಮೂರು ವರ್ಷಗಳಲ್ಲೇ ಅತಿ ಕನಿಷ್ಠವಾಗಿದೆ.

2020ರ ಆಗಸ್ಟ್‌ನಲ್ಲಿ 5.40 ರಷ್ಟು ರೆಪೋ ದರವಿತ್ತು ಎಂದು ಅವರು ಮಾಹಿತಿ ನೀಡಿದರು. ಇದೇ ವರ್ಷದ ಫೆಬ್ರವರಿ ಮತ್ತು ಏಪ್ರಿಲ್‌ನಲ್ಲಿ ರೆಪೋ ದರವನ್ನು ತಲಾ 25 ಬೇಸಿಸ್ ಪಾಯಿಂಟ್ಸ್ ಕಡಿಮೆ ಮಾಡಲಾಗಿತ್ತು.

ಇದೀಗ ಮೂರನೇ ಬಾರಿಗೆ ನಿರೀಕ್ಷೆ ಮೀರಿ 50 ಮೂಲಾಂಶಗಳಷ್ಟು ಕಡಿತ ಮಾಡಿದೆ. ಇದರಿಂದ ಒಟ್ಟು ಬಡ್ಡಿ ದರದಲ್ಲಿ 100 ಮೂಲಾಂಶ ಅಂದರೆ ಶೇ. 1ರಷ್ಟು ಕಡಿಮೆ ಮಾಡಿದಂತಾಗಿದೆ.

ಇಎಂಐ ಭಾರ ಇಳಿಕೆ

50 ಲಕ್ಷ ರೂ.ಗಳ ಗೃಹ ಸಾಲವನ್ನು 20 ವರ್ಷಗಳ ಅವಧಿಗೆ ಶೇ. 8ರ ಬಡ್ಡಿದರದಲ್ಲಿ ಪರಿಗಣಿಸಿದರೆ ಶೇ.0.5ರ ಬಡ್ಡಿ ದರ ಕಡಿತದಿಂದ ತಿಂಗಳಿಗೆ ಸುಮಾರು 1,500 ರು.ಗಳಷ್ಟು ಇಎಂಐ ಕಡಿಮೆಯಾಗಲಿದೆ. ಇನ್ನು ಈ ವರ್ಷದ ಮೂರು ರೆಪೋ ದರ ಕಡಿತಗಳನ್ನು ಲೆಕ್ಕ ಹಾಕಿದರೆ ಮಾಸಿಕ ಸಾಲದ ಕಂತಿನಲ್ಲಿ ಸುಮಾರು 3,000 ರು.ಗಳಿಗಿಂತಲೂ ಹೆಚ್ಚು ಉಳಿತಾಯವಾಗಲಿದೆ.

ಪ್ರವಾಸ, ಪ್ರವಾಸೋದ್ಯಮ ಮತ್ತು ಆತಿಥ್ಯ ಕ್ಷೇತ್ರಕ್ಕೆ ಮೀಸಲಾದ

ಕನ್ನಡದ ಪ್ರಪ್ರಥಮ, ಏಕೈಕ ಹಾಗೂ ವಿನೂತನ ಪತ್ರಿಕೆ

ನಿಮಗಾಗಿ ಪ್ರೀತಿಯಿಂದ ಪ್ರಥಮ ಸಂಚಿಕೆ, ಅಪ್ಪಿಕೊಳ್ಳಿ..

32 ಪುಟಗಳ ಸಮೃದ್ಧ ಹೂರಣ

ಎಲ್ಲ ಪುಟಗಳು ವರ್ಣಮಯ

ಪ್ರತಿ ಪುಟದಲ್ಲೂ ಮಾಹಿತಿ ಧಾರೆ

ಅಂಗೈಯಲ್ಲಿ ಬ್ರಹ್ಮಾಂಡ ದರ್ಶನ

ನಿಮ್ಮ ಪ್ರತಿ ಕಾಯ್ದಿರಿಸಿ

ಹೆಚ್ಚಿನ ಮಾಹಿತಿಗೆ +91 831 012 1314

pravasiprapancha

ಸಮಾಚಾರ ಸಣ್ಣದಲ್ಲ

ಸಿಎಂ ಮನೆಗೆ ಬಾಂಬ್ ಬೆದರಿಕೆ

ಬೆಂಗಳೂರು: ನಗರದ ಕೋರಮಂಗಲದ ಪಾಸ್‌ಪೋರ್ಟ್ ಇ-ಕಚೇರಿ ಮತ್ತು ಸಿಎಂ ಸಿದ್ದರಾಮಯ್ಯ ಅವರ ಮನೆಗೆ ಬಾಂಬ್ ಇಟ್ಟು ಬ್ಲಾಸ್ಟ್ ಮಾಡುವುದಾಗಿ ಇ-ಮೇಲ್ ಮೂಲಕ ಬಾಂಬ್ ಬೆದರಿಕೆ ಸಂದೇಶ ಬಂದಿರುವಂತಹ ಘಟನೆ ನಡೆದಿದೆ. ಆತ್ಮಾಹುತಿ ಬಾಂಬ್ ದಾಳಿ ಮಾಡುವುದಾಗಿ ಬೆದರಿಕೆ ಹಾಕಲಾಗಿದೆ.

ಸ್ಥಳಕ್ಕೆ ಬಾಂಬ್ ನಿಷ್ಕ್ರಿಯ ದಳ ಮತ್ತು ಕೋರಮಂಗಲ ಪೊಲೀಸರು ಭೇಟಿ ನೀಡಿ ಪರಿಶೀಲನೆ ಮಾಡಿದ್ದಾರೆ. ಯಾವುದೇ ಸ್ಫೋಟಕ ವಸ್ತುಗಳು ಪತ್ತೆಯಾಗಿಲ್ಲ ಎಂದು ಪೊಲೀಸ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಬಾಂಬ್ ಬೆದರಿಕೆ ಸಂದೇಶದಲ್ಲೇನಿದೆ?: ಶುಕ್ರವಾರ ಅಫ್ಜಲ್ ದುಲ್ ಹಜ್ ಪವಿತ್ರ ದಿನ. ಅಮೋನಿಯಮ್ ಸಲ್ಫರ್ ಬೇಸ್ಡ್ ಐಇಡಿ ಬಳಸಿ ಬೆಂಗಳೂರಿನ ಪಾಸ್‌ಪೋರ್ಟ್ ಕಚೇರಿ ಮತ್ತು ಸಿಎಂ ಮನೆಗೆ ಬಾಂಬ್ ಇಟ್ಟು ಬ್ಲಾಸ್ಟ್ ಮಾಡುತ್ತೇವೆ. ಸವುಕ್ಕು ಶಂಕರ್ ಮತ್ತು ಕಸಬ್ (ತಾಜ್ ಅಟ್ಯಾಕ್)ನನ್ನು ಗಲ್ಲಿಗೇರಿಸಿದ್ದಕ್ಕೆ ಇದು ಪ್ರತಿಕಾರ ಎಂದು ಇ-ಮೇಲ್ ಮೂಲಕ ಬಾಂಬ್ ಬೆದರಿಕೆ ಸಂದೇಶ ಕಳುಹಿಸಲಾಗಿದೆ.

ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಭಿಮತ

ನಮ್ಮ ಉಸಿರಿಗಾಗಿ ಪರಿಸರ ಸಂರಕ್ಷಿಸಬೇಕು

ಬೆಂಗಳೂರು: ನಾವು ಪರಿಸರವನ್ನು ಕೇವಲ ಪಸಿರಿಗಾಗಿ ಮಾತ್ರವಲ್ಲ, ನಮ್ಮ ಉಸಿರಿಗಾಗಿ ಸಂರಕ್ಷಣೆ ಮಾಡಿ ಕೊಳ್ಳಬೇಕು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅಭಿಪ್ರಾಯಪಟ್ಟರು.

ಬಿಬಿಎಂಪಿ ಜವಹರಲಾಲ್ ನೆಹರು ತಾರಾಲಯ ದಲ್ಲಿ ಶುಕ್ರವಾರ ಏರ್ಪಡಿಸಿದ್ದ ವಿಶ್ವ ಪರಿಸರ ದಿನಾ ಚರಣೆ ಕಾರ್ಯಕ್ರಮವನ್ನು ಬೆಂಗಳೂರು ನಗರಾಭಿವೃದ್ಧಿ ಸಚಿವರಾದ ಡಿಸಿಎಂ ಡಿ.ಕೆ ಶಿವಕುಮಾರ್ ಅವರು ಉದ್ಘಾಟಿಸಿ ಮಾತನಾಡಿದ ಅವರು, ಪ್ರಕೃತಿ ಯಾರ ಆಸ್ತಿಯಲ್ಲ, ಮಾನವ ಸೇರಿದಂತೆ ಎಲ್ಲಾ ಪ್ರಾಣಿಗಳು ಬದುಕುತ್ತಿರುವುದು ಪ್ರಕೃತಿಯಿಂದ. ನೀರು, ಗಾಳಿ, ಮರ, ಪರಿಸರಕ್ಕೆ ಜಾತಿ, ಧರ್ಮವಿಲ್ಲ. ಹಿಂದೆ ಹಳ್ಳಿಗಳಲ್ಲಿ ಮನೆಯವರು ಸಣ್ಣ ತೋಟವಾದರೂ ಮಾಡಿಕೊಳ್ಳುತ್ತಿದ್ದರು. ನಂತರ ಮನೆ ಕಾಂಪೌಂಡ್ ಒಳಗೆ ತೆಂಗು, ಮಾವು, ಹುಣಸೆ ಮರ ಹಾಕುತ್ತಿದ್ದರು. ನಗರ ಪ್ರದೇಶ ಗಳಲ್ಲಿ ಜಾಗದ ಕೊರತೆಯಿಂದ ವಿವಿಧ ಸಣ್ಣಪುಟ್ಟ ಗಿಡಗಳನ್ನು ಬೆಳೆಸುತ್ತಿದ್ದೇವೆ ಎಂದರು.

ನಮ್ಮ ಮಕ್ಕಳು ನಮ್ಮ ನಿಜವಾದ ಆಸ್ತಿ. ಅವರಿಗಾಗಿ ಭವಿಷ್ಯ ರೂಪಿಸಬೇಕು ಎಂದು ಮಕ್ಕಳಿಂದಲೇ ಒಂದೊಂದು ಗಿಡ ನೆಡಿಸಿ ಅವರೇ ಅವುಗಳನ್ನು ಬೆಳೆಸಿ ಪೋಷಿಸಬೇಕು ಎಂಬುದು ನಮ್ಮೆಲ್ಲರ ಆಸೆ. ಹೀಗಾಗಿ ನಾನು ಬೆಂಗಳೂರು ನಗರದ ಸಚಿವನಾದ ಬಳಿಕ ಈ ಕಾರ್ಯಕ್ರಮವನ್ನು ನಡೆಸಲು ಆದೇಶ ನೀಡಲಾಯಿತು. ಶಾಲೆಗಳೊಂದಿಗೆ ಒಪ್ಪಂದ ಮಾಡಿ ಕೊಂಡು ಪ್ರತಿ ಶಾಲೆ ಒಂದೊಂದು ಪ್ರದೇಶ ಆಯ್ಕೆ ಮಾಡಿಕೊಂಡು ಅಲ್ಲಿ ತಮ್ಮ ಶಾಲೆ ವಿದ್ಯಾರ್ಥಿಗಳಿಂದ ಗಿಡ ನೆಡಿಸಿ ಅದನ್ನು ಬೆಳೆಸಬೇಕು. ಆ ಗಿಡದ ಮೇಲೆ ಆ ಮಗುವಿನ ಹೆಸರು ಹಾಕಿಕೊಳ್ಳುವ ಅವಕಾಶ ನೀಡುವ ಕಾರ್ಯ ಆರಂಭಿಸಿದೆವು. ಈ ಕಾರ್ಯಕ್ರಮದ ಮೂಲಕ ಇಲ್ಲಿಯವರೆಗೂ 53 ಸಾವಿರ ಮಕ್ಕಳು ಗಿಡ ನೆಟ್ಟು ಅವುಗಳನ್ನು ಬೆಳೆಸುತ್ತಿದ್ದಾರೆ. ಈ ಪ್ರಕ್ರಿಯೆ ಹೀಗೆ ಮುಂದುವರಿಯಬೇಕು ಎಂದು ಹೇಳಿದರು.

ನಾನು ಸರಕಾರಿ ಶಾಲೆ ಕಾರ್ಯಕ್ರಮಕ್ಕೆ ಹೋಗಿದ್ದಾಗ ಶಿಕ್ಷಣ ಇಲಾಖೆ ಅಧಿಕಾರಿಗಳು, ಶಿಕ್ಷಕರು ಕಾರ್ಯಕ್ರಮ ನಡೆಸುತ್ತಿದ್ದರು. ಇದನ್ನು ನೋಡಿ ನನಗೆ ಅಸಮಾಧಾನವಾಯಿತು. ಹೀಗಾಗಿ ಅವರಿಗೆ ನಾನು ಒಂದು ಸೂಚನೆ ನೀಡಿದೆ. ಮುಂದೆ ಬೆಂಗಳೂರಿನಲ್ಲಿ ಶಾಲೆ ಯಲ್ಲಿ ಕಾರ್ಯಕ್ರಮ ಮಾಡಿದರೆ ಅವುಗಳನ್ನು ಶಾಲಾ ಮಕ್ಕಳೇ ನಡೆಸಬೇಕು ಎಂದು ಮಾರ್ಗ ದರ್ಶನ ನೀಡಿದೆ. ಈ ಕಾರ್ಯಕ್ರಮವನ್ನು ಮಕ್ಕಳೇ ನಡೆಸುತ್ತಿದ್ದಾರೆ. ಆಮೂಲಕ ಅವರಲ್ಲಿ ನಾಯಕತ್ವ ಗುಣಬೆಳೆಸಬೇಕು ಎಂದು ಹೇಳಿದರು.

ಬೆಂಗಳೂರನ್ನು ಸ್ವಚ್ಛ ಮಾಡಲು ಜಿಬಿಎ ವತಿಯಿಂದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು. ಇದರಲ್ಲಿ ಸಾರ್ವಜನಿಕರು ಕಸ ಇರುವ ಸ್ಥಳಗಳನ್ನು ಫೋಟೊ, ವಿಡಿಯೋ ಮಾಡಿ ಆ ಸ್ಥಳದ ಲೊಕೇಶನ್ ಕಳುಹಿಸಿದರೆ ಪಾಲಿಕೆ ಅಧಿಕಾರಿಗಳು ಅವುಗಳನ್ನು ಸ್ವಚ್ಛ ಮಾಡಲಿದ್ದಾರೆ. ಪಾಲಿಕೆ ಹೊರಗುತ್ತಿಗೆ ನೌಕರರನ್ನು ಕಾಯಂಗೊಳಿಸಿದ್ದು, ಅವರು ಕೂಡ ಈ ಸ್ವಚ್ಛತಾ ಕಾರ್ಯದಲ್ಲಿ ಭಾಗಿಯಾಗಲಿದ್ದಾರೆ. ಈ ವಿಚಾರವಾಗಿ ಪಾಲಿಕೆ ಆಯುಕ್ತರಿಗೆ ಮಾರ್ಗದರ್ಶನ ನೀಡಿದ್ದೇನೆ.
-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಬಿಬಿಎಂಪಿ ಜವಹರಲಾಲ್ ನೆಹರು ತಾರಾಲಯದಲ್ಲಿ ಶುಕ್ರವಾರ ಏರ್ಪಡಿಸಿದ್ದ ವಿಶ್ವ ಪರಿಸರ ದಿನಾಚರಣೆಯಲ್ಲಿ ಡಿಸಿಎಂ ಡಿ.ಕೆ ಶಿವಕುಮಾರ್ ಅವರು ಸಸಿ ನೆಟ್ಟು ಚಾಲನೆ ನೀಡಿದರು.

ಶಾಲೆಗಳಲ್ಲಿನ ಕ್ಲಬ್‌ಗಳಿಗೆ ಅಗತ್ಯ ನೆರವು

ಇಂದು ನಾವು ಬ್ಲೂ, ಗ್ರೀನ್ ಪ್ರಶಸ್ತಿ ನೀಡಿದ್ದೇವೆ. ವಿವಿಧ ನಾಗರೀಕ ಸಂಘ ಸಂಸ್ಥೆಗಳು ಕೂಡ ಈ ವಿಚಾರದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಇಂದು 175 ಅರ್ಜಿಗಳು ಬಂದಿವೆ. ಮುಂದೆ 500-1000 ಅರ್ಜಿ ಬರಬಹುದು. ಶಾಲೆಗಳಲ್ಲಿನ ಕ್ಲಬ್‌ಗಳಿಗೆ ಅಗತ್ಯ ನೆರವು ನೀಡಲಾಗುವುದು. ಈ ಕ್ಲಬ್‌ಗಳ ಕಾರ್ಯಾಚರಣೆ ಕುರಿತ ಮಾರ್ಗಸೂಚಿ ಪುಸ್ತಕವನ್ನು ಇಂದು ನಾವು ಬಿಡುಗಡೆ ಮಾಡಿದ್ದೇವೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು.

ಆದಿತ್ಯ ಗ್ರೂಪ್ ಕಾರ್ಯಕ್ಕೆ ಶ್ಲಾಘನೆ

ಬೆಂಗಳೂರು: ಆದಿತ್ಯ ಸಮೂಹ ಶಿಕ್ಷಣ ಸಂಸ್ಥೆಯು ಕಾಮಾಕ್ಷಿಪುರದಲ್ಲಿರುವ ಆದಿತ್ಯ ಕಾಲೇಜ್ ಆಫ್ ಎಂಜಿನಿಯರಿಂಗ್ ಕ್ಯಾಂಪಸ್‌ನಲ್ಲಿ ಐದು ಸಾವಿರ ಸಸಿಗಳನ್ನು ನೆಡುವ ಮೂಲಕ ಪರಿಸರ ದಿನಾಚರಣೆ ಆಚರಿಸಿದರು.

ಶಾಸಕ ವಿಶ್ವನಾಥ್, ಆದಿತ್ಯ ಸಮೂಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ.ಬಿ.ಎ. ವಿಶ್ವನಾಥ್ ಇಬ್ಬರು ಸೇರಿ ಸಸಿ ನೆಟ್ಟು ಪರಿಸರ ಕಾಳಜಿ ಕುರಿತು ಅರಿವು ಮೂಡಿಸಿದರು. ಕಾಲೇಜಿನ ಸಿಬ್ಬಂದಿ ಕೂಡ ಭಾಗವಹಿಸಿದ್ದರು.

ಈ ವೇಳೆ ಮಾತನಾಡಿದ ಶಾಸಕ ವಿಶ್ವನಾಥ್, ಪರಿಸರ ನಾವು ಉಳಿಸಿದಲ್ಲಿ, ನಾವು ಮತ್ತಷ್ಟು ದಿನಗಳ ಆರೋಗ್ಯವಾಗಿ ಜೀವಿಸಬಹುದು. ಪರಿಸರ ಮಾಲಿನ್ಯ ಕಡಿಮೆ ಮಾಡಬಹುದು.

ಕೇಂದ್ರ ಸರ ಕಾರ ಕೂಡ ಅಮ್ಮನ ಹೆಸರಿನಲ್ಲಿ ಒಂದು ಗಿಡ ನೆಡಿ ಎಂದು ಅಭಿಯಾನ ಆರಂಭಿ ಸಿದೆ. ಇಂಗಾಲದ ಡೈಆಕ್ಸೈಡ್ ತಡೆಗೆ ನಾವು ಆಮ್ಲಜನಕ ಹೆಚ್ಚು ಮಾಡಲು ಗಿಡ ನೆಡುವುದು ಅನಿವಾರ್ಯವಾಗಿದೆ. ಆದಿತ್ಯ ಗ್ರೂಪ್ ಒಳ್ಳೆಯ ಕೆಲಸ ಮಾಡುತ್ತಿದೆ ಎಂದು ಶ್ಲಾಘಿಸಿದರು.

ಮಾನ್ಯ ಗೌರವಾನ್ವಿತ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ.302/2025

ಅರ್ಜಿದಾರರು: 1) ಶ್ರೀಮತಿ. ಮಂಗಿಬಾಯಿ ಕೋಂ ಲೇಟ್ ಚಿಕ್ಕಣ್ಣ ನಾಯ್ಕ ವಯಸ್ಸು 80 ವರ್ಷ, ವಾಸ: ತುಳಸಿದೊಡ್ಡಿ ಗ್ರಾಮ, ಶಿವನಹಳ್ಳಿ ಅಂಚೆ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇತರರು

ವಿರುದ್ಧ

ಎದುರುದಾರರು: 1) ಜನನ ಮತ್ತು ಮರಣ ನೋಂದಣಿ ಅಧಿಕಾರಿಗಳು, ತಹಶೀಲ್ದಾರ್, ಕನಕಪುರ ತಾಲ್ಲೂಕು, 2) ಗ್ರಾಮ ಲೆಕ್ಕಾಧಿಕಾರಿಗಳು ತುಳಸಿದೊಡ್ಡಿ ಗ್ರಾಮ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಪತ್ರಿಕಾ ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರುಗಳು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರಿಗೆ ಪತಿಯೂ ಹಾಗೂ ಅರ್ಜಿದಾರರಾದ 2 ರಿಂದ 5 ರವರಿಗೆ ತಂದೆಯೂ ಆದ ಲೇಟ್ ಚಿಕ್ಕಣ್ಣನಾಯ್ಕ ಬಿನ್ ಲೇಟ್ ಈರನಾಯ್ಕ ರವರು ದಿನಾಂಕ:27-07-2021 ರಂದು ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ತುಳಸಿದೊಡ್ಡಿ ಗ್ರಾಮದಲ್ಲಿ ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದ್ದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿ ಪಡಿಸಿದ ದಿನಾಂಕದಂದು ಅಂದರೆ 07/07/25ರ ಬೆಳಿಗ್ಗೆ ಸರಿಯಾಗಿ 11 ಗಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಯಾರದು ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.

ದಿನಾಂಕ 06/06/25 ರಂದು ಸ್ವ-ಅಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ ಶಿರಸ್ತೆದಾರರು,
ಮಾನ್ಯ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಅರ್ಜಿದಾರರ ಪರ ವಕೀಲರು
ಶಂಕರನಾಯ್ಕ
ವಕೀಲರು
ಸ್ಥಳ : ಕನಕಪುರ
ದಿನಾಂಕ: 06-06-2025

ಮಾನ್ಯ ಎರಡನೇ ಅಪರ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಧೀಶರ ನ್ಯಾಯಾಲಯ, ಕನಕಪುರ
ಸಿ.ಮಿಸ್ ನಂ. 348/2025

ಅರ್ಜಿದಾರರು: 1. ಶ್ರೀಮತಿ. ಚಿಕ್ಕತಾಯಮ್ಮ ಕೋಂ. ಲೇಟ್ ಬಸವಯ್ಯ ವಯಸ್ಸು 65 ವರ್ಷಗಳು ಮಲ್ಲಪ್ಪನದೊಡ್ಡಿ ಗ್ರಾಮ ಚೀರಣಕುಪ್ಪೆ ದಾಖಲೆ ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಹಾಲಿ ವಾಸ ನಂ.15, 2ನೇ ಕ್ರಾಸ್, 7ನೇ ಕ್ರಾಸ್, 8ನೇ ಮೈನ್, ವಿನಾಯಕ ಲೇಹೌಟ್, ನಾಯಂಡಹಳ್ಳಿ, ಬೆಂಗಳೂರು-560 039 ಮತ್ತು ಇತರರು

ವಿರುದ್ಧ

ಎದುರುದಾರರು: 1. ತಹಶೀಲ್ದಾರ್‌ರವರು ಮತ್ತು ಜನನ ಮತ್ತು ಮರಣ ನೊಂದಣಾಧಿಕಾರಿಗಳು, ಕನಕಪುರ ತಾಲ್ಲೂಕು, ಕನಕಪುರ. 2. ಗ್ರಾಮಲೆಕ್ಕಾಧಿಕಾರಿಗಳು, ಅರಳಾಳು ವೃತ್ತ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ

ಪತ್ರಿಕಾ ಪ್ರಕಟಣೆ ಮೂಲಕ ತಿಳುವಳಿಕೆ ಪತ್ರ.

ಅರ್ಜಿದಾರರು, ಕನಕಪುರ 2ನೇ ಅಪರ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ 1ನೇ ಅರ್ಜಿದಾರ ಗಂಡನಾದ 2 ರಿಂದ 4ನೇ ಅರ್ಜಿದಾರರ ತಂದೆಯಾದ ಶ್ರೀ. ಬಸವಯ್ಯ ಬಿನ್ ದೊಡ್ಡಬಸವಯ್ಯ ರವರು ದಿನಾಂಕ. 24-03-1983 ರಂದು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಚೀರಣಕುಪ್ಪೆ ದಾಖಲೆ ಮಲ್ಲಪ್ಪನದೊಡ್ಡಿ ಗ್ರಾಮದಲ್ಲಿ ಮರಣ ಹೊಂದಿದ್ದು, ಎದುರುದಾರರ ಕಛೇರಿಯಲ್ಲಿ ಮರಣ ನೊಂದಣೆ ಆಗದ ಕಾರಣ ಸದರಿ ಮರಣ ಪ್ರಮಾಣಪತ್ರ ಕೋರಿ ಈ ಘನ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು, ಈ ಸಂಬಂಧ ಘನನ್ಯಾಯಾಲಯವು ಸಾರ್ವಜನಿಕವಾಗಿ ಪತ್ರಿಕಾ ಪ್ರಕಟನೆ ನೀಡಲು ಆದೇಶಿಸಿದ್ದು, ಮೇಲ್ಕಂಡ ಶ್ರೀ. ಬಸವಯ್ಯ ಬಿನ್ ದೊಡ್ಡಬಸವಯ್ಯ ರವರ ಮರಣ ಸಂಬಂಧ ಸಾರ್ವಜನಿಕವಾಗಿ ಯಾರಾದರೂ ತಮ್ಮ ತಕರಾರು ಮತ್ತು ಆಕ್ಷೇಪಣೆ ಇದ್ದರೆ, ಈ ಪ್ರಕರಣವು ದಿನಾಂಕ. 15-07-2025 ರಂದು ಈ ನ್ಯಾಯಾಲಯವು ವಿಚಾರಣೆಗಾಗಿ ಗೊತ್ತುಪಡಿಸಿದ್ದು, ಆದ ಕಾರಣ ಸದರಿ ದಿನಾಂಕದಂದು ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ಈ ನ್ಯಾಯಾಲಯದ ಮುಂದೆ ಖುದ್ದಾಗಿ ಅಥವಾ ತಮ್ಮ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರು/ಆಕ್ಷೇಪಣೆ ಸಲ್ಲಿಸಲು ತಿಳಿಯಪಡಿಸಿದೆ. ತಪ್ಪಿದ್ದಲ್ಲಿ ಪ್ರಕರಣವನ್ನು ಯಾವುದೇ ತಕರಾರು ಇಲ್ಲವೆಂದೂ ಪರಿಗಣಿಸಿ ಲಬ್ಯವಿರುವ ದಾಖಲಾತಿಗಳ ಮೇಲೆ ತೀರ್ಮಾನ ಮಾಡಲಾಗುವುದು ಎಂದೂ ತಿಳಿಯುವುದು.

ಈ ದಿನ ಅಂದರೆ 06/ಜೂನ್/2025 ರಂದು ನ್ಯಾಯಾಲಯದ ಆದೇಶ ಮತ್ತು ಮೋಹರಿನೊಂದಿಗೆ ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ ಶಿರಸ್ತೇದಾರರು.
ಎಸ್.ವಿ.ವೀರಪ್ಪ
ಅರ್ಜಿದಾರರ ಪರ ವಕೀಲರು
ಕನಕಪುರ
ದಿನಾಂಕ.06/06/2025

ಮಾನ್ಯ ಎರಡನೇ ಅಪರ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಧೀಶರ ನ್ಯಾಯಾಲಯ, ಕನಕಪುರ
ಸಿ.ಮಿಸ್ ನಂ. 346/2025

ಅರ್ಜಿದಾರರು: 1. ಶ್ರೀಮತಿ. ಚಿಕ್ಕಮ್ಮ ಕೋಂ. ಲೇಟ್ ದೊಡ್ಡಬಸವಯ್ಯ ವಯಸ್ಸು 72 ವರ್ಷಗಳು ಮಲ್ಲಪ್ಪನದೊಡ್ಡಿ ಗ್ರಾಮ ಚೀರಣಕುಪ್ಪೆ ದಾಖಲೆ ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇತರರು

ವಿರುದ್ಧ

ಎದುರುದಾರರು: 1. ತಹಶೀಲ್ದಾರ್‌ರವರು ಮತ್ತು ಜನನ ಮತ್ತು ಮರಣ ನೊಂದಣಾಧಿಕಾರಿಗಳು, ಕನಕಪುರ ತಾಲ್ಲೂಕು, ಕನಕಪುರ. 2. ಗ್ರಾಮಲೆಕ್ಕಾಧಿಕಾರಿಗಳು, ಅರಳಾಳು ವೃತ್ತ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ

ಪತ್ರಿಕಾ ಪ್ರಕಟಣೆ ಮೂಲಕ ತಿಳುವಳಿಕೆ ಪತ್ರ

ಅರ್ಜಿದಾರರು, ಕನಕಪುರ 2ನೇ ಅಪರ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ಅರ್ಜಿದಾರ ಸಂಖ್ಯೆ-1, 9, 13 ಮತ್ತು 16 ರ ಅತ್ತೆಯಾದ 2 ರಿಂದ 8, 10 ರಿಂದ 12, 14, 15, 17 ರಿಂದ 21 ಅರ್ಜಿದಾರರ ಅಜ್ಜಿಯಾದ ಶ್ರೀಮತಿ. ಚಿಕ್ಕಮ್ಮ ಕೋಂ. ದೊಡ್ಡಬಸವಯ್ಯ ರವರು ದಿನಾಂಕ. 09-03-2002 ರಂದು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಚೀರಣಕುಪ್ಪೆ ದಾಖಲೆ ಮಲ್ಲಪ್ಪನದೊಡ್ಡಿ ಗ್ರಾಮದಲ್ಲಿ ಮರಣ ಹೊಂದಿದ್ದು, ಎದುರುದಾರರ ಕಛೇರಿಯಲ್ಲಿ ಮರಣ ನೊಂದಣೆ ಆಗದ ಕಾರಣ ಸದರಿ ಮರಣ ಪ್ರಮಾಣಪತ್ರ ಕೋರಿ ಈ ಘನ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು, ಈ ಸಂಬಂಧ ಘನನ್ಯಾಯಾಲಯವು ಸಾರ್ವಜನಿಕವಾಗಿ ಪತ್ರಿಕಾ ಪ್ರಕಟನೆ ನೀಡಲು ಆದೇಶಿಸಿದ್ದು, ಮೇಲ್ಕಂಡ ಶ್ರೀಮತಿ. ಚಿಕ್ಕಮ್ಮ ಕೋಂ. ದೊಡ್ಡಬಸವಯ್ಯ ರವರ ಮರಣ ಸಂಬಂಧ ಸಾರ್ವಜನಿಕವಾಗಿ ಯಾರಾದರೂ ತಮ್ಮ ತಕರಾರು ಮತ್ತು ಆಕ್ಷೇಪಣೆ ಇದ್ದರೆ, ಈ ಪ್ರಕರಣವು ದಿನಾಂಕ. 15-07-2025 ರಂದು ಈ ನ್ಯಾಯಾಲಯವು ವಿಚಾರಣೆಗಾಗಿ ಗೊತ್ತುಪಡಿಸಿದ್ದು, ಆದ ಕಾರಣ ಸದರಿ ದಿನಾಂಕದಂದು ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ಈ ನ್ಯಾಯಾಲಯದ ಮುಂದೆ ಖುದ್ದಾಗಿ ಅಥವಾ ತಮ್ಮ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರು/ಆಕ್ಷೇಪಣೆ ಸಲ್ಲಿಸಲು ತಿಳಿಯಪಡಿಸಿದೆ. ತಪ್ಪಿದ್ದಲ್ಲಿ ಪ್ರಕರಣವನ್ನು ಯಾವುದೇ ತಕರಾರು ಇಲ್ಲವೆಂದೂ ಪರಿಗಣಿಸಿ ಲಬ್ಯವಿರುವ ದಾಖಲಾತಿಗಳ ಮೇಲೆ ತೀರ್ಮಾನ ಮಾಡಲಾಗುವುದು ಎಂದೂ ತಿಳಿಯುವುದು.

ಈ ದಿನ ಅಂದರೆ 06/ಜೂನ್/2025 ರಂದು ನ್ಯಾಯಾಲಯದ ಆದೇಶ ಮತ್ತು ಮೋಹರಿನೊಂದಿಗೆ ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ ಶಿರಸ್ತೇದಾರರು.
ಎಸ್.ವಿ.ವೀರಪ್ಪ
ಅರ್ಜಿದಾರರ ಪರ ವಕೀಲರು
ಕನಕಪುರ
ದಿನಾಂಕ.06/06/2025

ಮಾನ್ಯ ಎರಡನೇ ಅಪರ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಧೀಶರ ನ್ಯಾಯಾಲಯ, ಕನಕಪುರ
ಸಿ.ಮಿಸ್ ನಂ. 347/2025

ಅರ್ಜಿದಾರರು: 1. ಶ್ರೀಮತಿ. ಚಿಕ್ಕಮ್ಮ ಕೋಂ. ಲೇಟ್ ದೊಡ್ಡಬಸವಯ್ಯ ವಯಸ್ಸು 72 ವರ್ಷಗಳು ಮಲ್ಲಪ್ಪನದೊಡ್ಡಿ ಗ್ರಾಮ ಚೀರಣಕುಪ್ಪೆ ದಾಖಲೆ ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇತರರು

ವಿರುದ್ಧ

ಎದುರುದಾರರು: 1. ತಹಶೀಲ್ದಾರ್‌ರವರು ಮತ್ತು ಜನನ ಮತ್ತು ಮರಣ ನೊಂದಣಾಧಿಕಾರಿಗಳು, ಕನಕಪುರ ತಾಲ್ಲೂಕು, ಕನಕಪುರ. 2. ಗ್ರಾಮಲೆಕ್ಕಾಧಿಕಾರಿಗಳು, ಅರಳಾಳು ವೃತ್ತ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ

ಪತ್ರಿಕಾ ಪ್ರಕಟಣೆ ಮೂಲಕ ತಿಳುವಳಿಕೆ ಪತ್ರ

ಅರ್ಜಿದಾರರು, ಕನಕಪುರ 2ನೇ ಅಪರ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ಅರ್ಜಿದಾರ ಸಂಖ್ಯೆ-1,9,13 ಮತ್ತು 16 ರ ಮಾವ, 2 ರಿಂದ 8, 10 ರಿಂದ 12, 14, 15, 17 ರಿಂದ 21 ಅರ್ಜಿದಾರರ ತಾತನಾದ ಶ್ರೀ ದೊಡ್ಡಬಸವಯ್ಯ ಬಿನ್ ಲೇಟ್ ತೋಟಿಕುಳ್ಳಯ್ಯ ರವರು ದಿನಾಂಕ. 15-06-1975 ರಂದು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಚೀರಣಕುಪ್ಪೆ ದಾಖಲೆ ಮಲ್ಲಪ್ಪನದೊಡ್ಡಿ ಗ್ರಾಮದಲ್ಲಿ ಮರಣ ಹೊಂದಿದ್ದು, ಎದುರುದಾರರ ಕಛೇರಿಯಲ್ಲಿ ಮರಣ ನೊಂದಣೆ ಆಗದ ಕಾರಣ ಸದರಿ ಮರಣ ಪ್ರಮಾಣಪತ್ರ ಕೋರಿ ಈ ಘನ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು, ಈ ಸಂಬಂಧ ಘನನ್ಯಾಯಾಲಯವು ಸಾರ್ವಜನಿಕವಾಗಿ ಪತ್ರಿಕಾ ಪ್ರಕಟನೆ ನೀಡಲು ಆದೇಶಿಸಿದ್ದು, ಮೇಲ್ಕಂಡ ಶ್ರೀ ದೊಡ್ಡಬಸವಯ್ಯ ಬಿನ್ ಲೇಟ್ ತೋಟಿಕುಳ್ಳಯ್ಯ ರವರ ಮರಣ ಸಂಬಂಧ ಸಾರ್ವಜನಿಕವಾಗಿ ಯಾರಾದರೂ ತಮ್ಮ ತಕರಾರು ಮತ್ತು ಆಕ್ಷೇಪಣೆ ಇದ್ದರೆ, ಈ ಪ್ರಕರಣವು ದಿನಾಂಕ. 15-07-2025 ರಂದು ಈ ನ್ಯಾಯಾಲಯವು ವಿಚಾರಣೆಗಾಗಿ ಗೊತ್ತುಪಡಿಸಿದ್ದು, ಆದ ಕಾರಣ ಸದರಿ ದಿನಾಂಕದಂದು ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ಈ ನ್ಯಾಯಾಲಯದ ಮುಂದೆ ಖುದ್ದಾಗಿ ಅಥವಾ ತಮ್ಮ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರು/ಆಕ್ಷೇಪಣೆ ಸಲ್ಲಿಸಲು ತಿಳಿಯಪಡಿಸಿದೆ. ತಪ್ಪಿದ್ದಲ್ಲಿ ಪ್ರಕರಣವನ್ನು ಯಾವುದೇ ತಕರಾರು ಇಲ್ಲವೆಂದೂ ಪರಿಗಣಿಸಿ ಲಬ್ಯವಿರುವ ದಾಖಲಾತಿಗಳ ಮೇಲೆ ತೀರ್ಮಾನ ಮಾಡಲಾಗುವುದು ಎಂದೂ ತಿಳಿಯುವುದು.

ಈ ದಿನ ಅಂದರೆ 06/ಜೂನ್/2025 ರಂದು ನ್ಯಾಯಾಲಯದ ಆದೇಶ ಮತ್ತು ಮೋಹರಿನೊಂದಿಗೆ ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ ಶಿರಸ್ತೇದಾರರು.
ಎಸ್.ವಿ.ವೀರಪ್ಪ
ಅರ್ಜಿದಾರರ ಪರ ವಕೀಲರು
ಕನಕಪುರ
ದಿನಾಂಕ.06/06/2025

ಮಾನ್ಯ ಎರಡನೇ ಅಪರ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಧೀಶರ ನ್ಯಾಯಾಲಯ, ಕನಕಪುರ
ಸಿ.ಮಿಸ್ ನಂ. 349/2025

ಅರ್ಜಿದಾರರು: 1. ಕುಮಾರ್, ಬಿನ್ ಲೇಟ್ ಚಿಕ್ಕಬಸವಯ್ಯ @ ಬಸವಯ್ಯ ವಯಸ್ಸು 53 ವರ್ಷಗಳು ಮಲ್ಲಪ್ಪನದೊಡ್ಡಿ ಗ್ರಾಮ ಚೀರಣಕುಪ್ಪೆ ದಾಖಲೆ ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ

ವಿರುದ್ಧ

ಎದುರುದಾರರು: 1. ತಹಶೀಲ್ದಾರ್‌ರವರು ಮತ್ತು ಜನನ ಮತ್ತು ಮರಣ ನೊಂದಣಾಧಿಕಾರಿಗಳು, ಕನಕಪುರ ತಾಲ್ಲೂಕು, ಕನಕಪುರ. 2. ಗ್ರಾಮಲೆಕ್ಕಾಧಿಕಾರಿಗಳು, ಅರಳಾಳು ವೃತ್ತ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ

ಪತ್ರಿಕಾ ಪ್ರಕಟಣೆ ಮೂಲಕ ತಿಳುವಳಿಕೆ ಪತ್ರ

ಅರ್ಜಿದಾರರು, ಕನಕಪುರ 2ನೇ ಅಪರ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ಅರ್ಜಿದಾರರ ತಂದೆಯಾದ ಚಿಕ್ಕಬಸವಯ್ಯ @ ಬಸವಯ್ಯ ಬಿನ್ ದೊಡ್ಡಬಸವಯ್ಯ ದಿನಾಂಕ. 11-06-1974 ರಂದು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಚೀರಣಕುಪ್ಪೆ ದಾಖಲೆ ಮಲ್ಲಪ್ಪನದೊಡ್ಡಿ ಗ್ರಾಮದಲ್ಲಿ ಮರಣ ಹೊಂದಿದ್ದು, ಎದುರುದಾರರ ಕಛೇರಿಯಲ್ಲಿ ಮರಣ ನೊಂದಣೆ ಆಗದ ಕಾರಣ ಸದರಿ ಮರಣ ಪ್ರಮಾಣಪತ್ರ ಕೋರಿ ಈ ಘನ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು, ಈ ಸಂಬಂಧ ಘನನ್ಯಾಯಾಲಯವು ಸಾರ್ವಜನಿಕವಾಗಿ ಪತ್ರಿಕಾ ಪ್ರಕಟನೆ ನೀಡಲು ಆದೇಶಿಸಿದ್ದು, ಮೇಲ್ಕಂಡ ಚಿಕ್ಕಬಸವಯ್ಯ @ ಬಸವಯ್ಯ ಬಿನ್ ದೊಡ್ಡಬಸವಯ್ಯ ರವರ ಮರಣ ಸಂಬಂಧ ಸಾರ್ವಜನಿಕವಾಗಿ ಯಾರಾದರೂ ತಮ್ಮ ತಕರಾರು ಮತ್ತು ಆಕ್ಷೇಪಣೆ ಇದ್ದರೆ, ಈ ಪ್ರಕರಣವು ದಿನಾಂಕ. 15-07-2025 ರಂದು ಈ ನ್ಯಾಯಾಲಯವು ವಿಚಾರಣೆಗಾಗಿ ಗೊತ್ತುಪಡಿಸಿದ್ದು, ಆದ ಕಾರಣ ಸದರಿ ದಿನಾಂಕದಂದು ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ಈ ನ್ಯಾಯಾಲಯದ ಮುಂದೆ ಖುದ್ದಾಗಿ ಅಥವಾ ತಮ್ಮ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರು/ಆಕ್ಷೇಪಣೆ ಸಲ್ಲಿಸಲು ತಿಳಿಯಪಡಿಸಿದೆ. ತಪ್ಪಿದ್ದಲ್ಲಿ ಪ್ರಕರಣವನ್ನು ಯಾವುದೇ ತಕರಾರು ಇಲ್ಲವೆಂದೂ ಪರಿಗಣಿಸಿ ಲಬ್ಯವಿರುವ ದಾಖಲಾತಿಗಳ ಮೇಲೆ ತೀರ್ಮಾನ ಮಾಡಲಾಗುವುದು ಎಂದೂ ತಿಳಿಯುವುದು.

ಈ ದಿನ ಅಂದರೆ 06/ಜೂನ್/2025 ರಂದು ನ್ಯಾಯಾಲಯದ ಆದೇಶ ಮತ್ತು ಮೋಹರಿನೊಂದಿಗೆ ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ ಶಿರಸ್ತೇದಾರರು.
ಎರಡನೇ ಅಪರ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಧೀಶರ ನ್ಯಾಯಾಲಯ, ಕನಕಪುರ.
ಎಸ್.ವಿ.ವೀರಪ್ಪ
ಅರ್ಜಿದಾರರ ಪರ ವಕೀಲರು
ಕನಕಪುರ
ದಿನಾಂಕ.06-06-2025

ಬಿಜಿಎಸ್ ಮೇಲ್ಸೇತುವೆಯಲ್ಲಿ ಸಂಚಾರ ನಿರ್ಬಂಧ

ಬೆಂಗಳೂರು: ಶನಿವಾರ ಬಕ್ರೀದ್ ಹಬ್ಬದ ಆಚರಣೆ ಹಿನ್ನೆಲೆಯಲ್ಲಿ ಚಾಮರಾಜಪೇಟೆ 1ನೆ ಮುಖ್ಯರಸ್ತೆಯ ಬಿಬಿಎಂಪಿ ಆಟದ ಮೈದಾನ ಹಾಗೂ ಬಿಬಿ ಜಂಕ್ಷನ್‌ನಲ್ಲಿ ಪ್ರಾರ್ಥನೆ ನಡೆಯುವುದರಿಂದ ಮೈಸೂರು ರಸ್ತೆಯ ಬಿಜಿಎಸ್ ಫ್ಲೈಓವರ್‌ನಲ್ಲಿ ಅಂದು ಬೆಳಗ್ಗೆ 8 ರಿಂದ ಪ್ರಾರ್ಥನೆ ಮುಗಿಯುವವರೆಗೆ ತಾತ್ಕಾಲಿಕವಾಗಿ ಎಲ್ಲಾ ಮಾದರಿಯ ವಾಹನಗಳ ಸಂಚಾರ ನಿಷೇಧಿಸಲಾಗಿದೆ.

ಮೈಸೂರು ರಸ್ತೆಯ ಬಿ.ಬಿ.ಜಂಕ್ಷನ್ ಹತ್ತಿರದ ಮಸೀದಿ ಮತ್ತು ಚಾಮರಾಜಪೇಟೆ 1ನೇ ಮುಖ್ಯ ರಸ್ತೆಯ 7ನೇ ಅಡ್ಡರಸ್ತೆ ಬಳಿಯ ಬಿಬಿಎಂಪಿ ಆಟದ ಮೈದಾನದಲ್ಲಿ ಶನಿವಾರ ಬಕ್ರೀದ್ ಹಬ್ಬದ ಪ್ರಯುಕ್ತ ಮುಸ್ಲಿಂ ಬಾಂಧವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಲು ಅಪಾರ ಸಂಖ್ಯೆಯಲ್ಲಿ ಸೇರುವುದರಿಂದ ಮೈಸೂರು ರಸ್ತೆಯಲ್ಲಿ ವಾಹನಗಳ ಸಂಚಾರವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಿ, ಕೆಳಕಂಡಂತೆ ವಾಹನಗಳ ಸಂಚಾರಕ್ಕೆ ಪರ್ಯಾಯ ವ್ಯವಸ್ಥೆ ಕಲ್ಪಿಸಲಾಗಿದೆ. ಚಾಮರಾಜಪೇಟೆಯ 1ನೆ ಮುಖ್ಯರಸ್ತೆಯ ಬಿಬಿಎಂಪಿ ಆಟದ ಮೈದಾನ ಹಾಗೂ ಬಿಬಿ ಜಂಕ್ಷನ್‌ನಲ್ಲಿ ಪ್ರಾರ್ಥನೆ ನಡೆಯುವುದರಿಂದ ಮೈಸೂರು ರಸ್ತೆಯ ಬಿಜಿಎಸ್ ಫ್ಲೈಓವರ್ ಬೆಳಿಗ್ಗೆ 8 ಗಂಟೆಯಿಂದ ಪ್ರಾರ್ಥನೆ ಮುಗಿಯು ವವರೆಗೆ ತಾತ್ಕಾಲಿಕವಾಗಿ ಎಲ್ಲಾ ಮಾದರಿಯ ವಾಹನಗಳ ಸಂಚಾರ ನಿಷೇಧಿಸಲಾಗಿದೆ.

ಪರ್ಯಾಯ ಮಾರ್ಗಗಳು

ಮೈಸೂರು ಕಡೆಯಿಂದ ಟೌನ್ ಹಾಲ್ ಕಡೆಗೆ ಹೋಗುವ ವಾಹನಗಳು ಬ್ಯಾಟರಾಯನಪುರ ಸಂಚಾರ ಠಾಣಾ ಸರಹದ್ದಿನ ಕಿಮ್ಕೋ ಜಂಕ್ಷನ್‌ನಲ್ಲಿ ಎಡತಿರುವು ಪಡೆದುಕೊಂಡು ವಿಜಯನಗರ ಮೂಲಕ ಸಾಗಬಹುದಾಗಿದೆ. ಟೌನ್‌ಹಾಲ್ ಕಡೆಯಿಂದ ಮೈಸೂರು ಕಡೆಗೆ ಹೋಗುವ ವಾಹನಗಳು ಬಿಜಿಎಸ್ ಫ್ಲೈಓವರ್ ಕೆಳಗಡೆ ಸರ್ವಿಸ್ ರಸ್ತೆಯನ್ನು ಬಳಸಿಕೊಂಡು ಭಾರಿ ವಾಹನಗಳು ವೆಟರ್ನರಿ ಜಂಕ್ಷನ್‌ನಲ್ಲಿ ಬಲ ತಿರುವು ಪಡೆದು ಗೂಡ್‌ಶೆಡ್ ರಸ್ತೆ ಮೂಲಕ ಮತ್ತು ಲಘು ವಾಹನಗಳು ಸಿರ್ಸಿ ಜಂಕ್ಷನ್‌ನಲ್ಲಿ ಬಲ ತಿರುವು ಪಡೆದುಕೊಂಡು ಜೆಜೆ ನಗರ-ಟ್ಯಾಂಕ್‌ಬಂಡ್ ರಸ್ತೆ ಬಿನ್ನಿಮಿಲ್ ಜಂಕ್ಷನ್ ಹುಣಸೇಮರ ಮೂಲಕ ಸಾಗುವುದು.ಬಸವನಗುಡಿ ಮತ್ತು ಚಾಮರಾಜಪೇಟೆ ಕಡೆಯಿಂದ ಮೆಜೆಸ್ಟಿಕ್ ಕಡೆಗೆ ಹೋಗುವಂತಹ ವಾಹನಗಳು ಚಾಮರಾಜಪೇಟೆ 1ನೇ ಮುಖ್ಯರಸ್ತೆ, 6ನೇ ಅಡ್ಡ ರಸ್ತೆ ಮೂಲಕ ಮೈಸೂರು ರಸ್ತೆ, ಸಿರ್ಸಿ ಸರ್ಕಲ್, ಬಿನ್ನಿಮಿಲ್ ರಸ್ತೆಯ ಮೂಲಕ ಸಾಗುವುದು ಇದಕ್ಕೆ ಸಾರ್ವಜನಿಕರು ಸಂಚಾರ ಪೊಲೀಸರೊಂದಿಗೆ ಸಹಕರಿಸಲು ಕೋರಿದೆ.

ಎಕ್ಸಿಸ್ ಬ್ಯಾಂಕ್ ಪ್ಲಾಟ್ ಸಂಖ್ಯೆ 41, ಶೇಷಾದ್ರಿ ರಸ್ತೆ, ಆನಂದ್ ರಾವ್ ಸರ್ಕಲ್, ಬೆಂಗಳೂರು -560009

ತಗಾದೆ ಸೂಚನೆ

ಈ ಕೆಳಗಿನ ಸಾಲಗಾರರು ಬ್ಯಾಂಕಿನಿಂದ ಪಡೆದ ಸಾಲ ಸೌಲಭ್ಯಗಳ ಮೇಲಿನ ಅಸಲು ಮತ್ತು ಬಡ್ಡಿಯನ್ನು ಹಿಂಪಾವತಿಸುವಲ್ಲಿ ವಿಫಲರಾಗಿರುವುದರಿಂದ ಆ ಸೌಲಭ್ಯಗಳು ನಿರ್ವಹಣಾರಹಿತ ಸ್ವತ್ತುಗಳಾಗಿ ಪರಿವರ್ತಿತವಾಗಿವೆ ಎಂದು ಈ ಸೂಚನೆಯ ಮೂಲಕ ತಿಳಿಸಲಾಗಿದೆ. 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನರ್ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ ವಿಭಾಗ 13(2)ರ ಅಡಿಯಲ್ಲಿ, ಅವರು ಕೊನೆಯದಾಗಿ ತಿಳಿಸಲಾಗಿರುವಂತಹ ತಮ್ಮ ವಿಳಾಸಗಳಿಗೆ ಸೂಚನೆಗಳನ್ನು ಕಳುಹಿಸಲಾಯಿತಾದರೂ, ಅವು ಸ್ವೀಕೃತಗೊಳ್ಳದೇ ಹಿಂದಿರುಗಿರುವುದರಿಂದ ಸಾರ್ವಜನಿಕ ಪ್ರಕಟಣೆಯ ಮೂಲಕ ಅವರಿಗೆ ಈ ಕುರಿತು ತಿಳಿಸಲಾಗುತ್ತಿದೆ.

ಕ್ರ. ಸಂ	ಸಾಲಗಾರರ ಹೆಸರು ಮತ್ತು ವಿಳಾಸ	ಸಾಲಗಾರರು ಅಡಮಾನ ಮಾಡಿರುವ ಆಸ್ತಿಯ ವಿವರ	ನೋಟೀಸ್ ದಿನಾಂಕ	ಬರಬೇಕಾದ ಬಾಕಿ (ರೂ.ಗಳಲ್ಲಿ)
1.	1. ಶ್ರೀ ಎನ್ ಮಂಜುನಾಥ ಬಿನ್ ಶ್ರೀ ಎನ್ ನಾರಾಯಣ ಗೌಡ, ಡೋರ್ ನಂ.3535, ಮುತ್ಯಾಲ್ ಪೇಟ್ ಮುಳಬಾಗಿಲು, ಕಾರ್ಮಿ ದೇವಸ್ಥಾನದ ಹತ್ತಿರ, ಕೋಲಾರ, ಕರ್ನಾಟಕ-563131. **ಮತ್ತೊಂದು ವಿಳಾಸ:** ಹನುಮನಹಳ್ಳಿ, ಬಸ್ ನಿಲ್ದಾಣದ ಹತ್ತಿರ, ಕೋಲಾರ, ಕರ್ನಾಟಕ-563127.	**ಈ ಆಸ್ತಿಯು ಶ್ರೀ ಎನ್ ಮಂಜುನಾಥ ಮತ್ತು ಎಂ ಡಾಲಿಕಾ, ಎಂ.ಪಾರ್ಥಭವಿ ಎಂ ಭಾವಿಕ್** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಆಸ್ತಿಯ ಹೊಸ ಅಸೆಸ್‌ಮೆಂಟ್ ನಂ.4926/4282, (ಹಳೆ ಆಸ್ತಿ ನಂ.4926/4282) ಆಸ್ತಿಯ ಐಡಿ ನಂ.20-514-84, ಪೂರ್ವದಿಂದ ಪಶ್ಚಿಮಕ್ಕೆ: 9.144 ಮೀಟರ್‌ಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ: 24.38 ಮೀಟರ್‌ಗಳು, ಒಟ್ಟು ವಿಸ್ತೀರ್ಣ 222.9672 ಚದರ ಮೀಟರ್‌ಗಳು, ಜೊತೆಗೆ ನೆಲ ಮತ್ತು ಮೊದಲನೇ ಪ್ರತಿ ಮಹಡಿಯ ಮನೆಯಲ್ಲಿ ಆರ್‌ಸಿಸಿ ರೂಫ್ಡ್‌ನ್ನು ಒಳಗೊಂಡಿದೆ. ವಿಸ್ತೀರ್ಣ 111.4826 ಚದರ ಮೀಟರ್‌ಗಳು, ಈ ಆಸ್ತಿಯು ಮುತ್ಯಾಲಪೇಟೆ, ಮುಳಬಾಗಿಲು ಟೌನ್ ಮತ್ತು ತಾಲ್ಲೂಕು, ವಾರ್ಡ್ ನಂ.9, ಕೋಲಾರ ಜಿಲ್ಲೆಯಲ್ಲಿ ಮತ್ತು ಚಕ್ಕುಬಂದಿ: (ಖಾತಾ ಫಾರ್ಮ್ ನಂ.3ರ ಪ್ರಕಾರ) ಪೂರ್ವಕ್ಕೆ: ಗುರುಶಂಕರ್‌ರವರ ಮನೆ, ಪಶ್ಚಿಮಕ್ಕೆ: ಮುನಿಸಿಪಲ್ ರಸ್ತೆ, ಉತ್ತರಕ್ಕೆ: ರಾಮಭಟ್ಟರು ರವರ ಮನೆ, ದಕ್ಷಿಣಕ್ಕೆ: ಚಾಮೇಗೌಡರವರ ಮನೆ. **ಯಾವುದೇ ಮಾಹಿತಿಗಾಗಿ ನಂದೀಶ್ ಕೆ ಬಿ, ಕಲೆಕ್ಷನ್ ಮ್ಯಾನೇಜರ್, ಮೊ: 91-9986043776 ರವರನ್ನು ಸಂಪರ್ಕಿಸಿ.**	23.05.2025 ಎನ್‌ಪಿಎ ದಿನಾಂಕ 01.05.2025	**Over Draft Loan A/c No. 920030058785281 Amount: Rs.60,00,000/- O/s Amount: Rs.65,55,017/- (this includes interest till 22.05.2025)** --- **Production Credit (Working Capital) Loan A/c No. 920030058785294 Amount: Rs.30,000/- O/s Amount: Rs.30,935/- (this includes interest till 22.05.2025)** ಒಟ್ಟು ಬಾಕಿ ಮೊತ್ತ : ರೂ. 65,85,952/-
2.	(1) ಶ್ರೀ ಜಂಗಮ ಮತಂ ರವಿ ಪ್ರಕಾಶ್ ಬಿನ್ ಶ್ರೀ ಜಂಗಮ ಮತಂ ಶಿವ ಮೂರ್ತಿ, (2) ಶ್ರೀಮತಿ ಸುಪ್ರಿಯಾ ಪ್ರಕಾಶ್ ಕೋಂ ಶ್ರೀ ಜಂಗಮ ಮತಂ ರವಿ ಪ್ರಕಾಶ್, **ಇವರಿಬ್ಬರ ವಿಳಾಸ:** 134/135, 1ನೇ ಕ್ರಾಸ್, ಸುರಭಿ ನಗರ, ಜೆ ಪಿ ನಗರ, 8ನೇ ಹಂತ, ಜೆ ಎಸ್ ದಿನ್ನೆ, ಬೆಂಗಳೂರು-560076. **ಮತ್ತೊಂದು ವಿಳಾಸ:** ನಿವೇಶನ ನಂ.64, ಪ್ಲಾಟ್ ಸಂಖ್ಯೆ: 64, ಖಾತಾ ನಂ.128, ಡೈಮಂಡ್ ನೆಸ್ಟ್ L/O ಹರಪನಹಳ್ಳಿ ಜಿಗಣಿ ಬೆಂಗಳೂರು-560105.	**ಈ ಆಸ್ತಿಯು ಶ್ರೀ ರವಿ ಪ್ರಕಾಶ್ ಜೆಎಂ ರವರ ಹೆಸರಿನಲ್ಲಿದೆ.** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ಥಿರಾಸ್ತಿಯ ನಿವೇಶನ ನಂ.64, ಖಾತಾ ನಂ.128, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 30 ಅಡಿ & ಉತ್ತರದಿಂದ ದಕ್ಷಿಣಕ್ಕೆ: 60 ಅಡಿ, ವಿಸ್ತೀರ್ಣ 1800 ಚದರ ಅಡಿ, ಈ ಆಸ್ತಿಯು "ಡೈಮಂಡ್ ನೆಸ್ಟ್ ಲೇಔಟ್", ಪರಿರ್ತಿತ ಸರ್ವೆ ನಂ.143ರಲ್ಲಿದೆ, ದಿನಾಂಕ 31-07-1998 ರಂದು ಕರ್ನಾಟಕ ಸರ್ಕಾರ ಬಿಎಂಆರ್‌ಡಿಎ ಆದೇಶ ನಂ. BMRDA\LAO: 168/97-98ರ ಪ್ರಕಾರ ಈ ಭೂಮಿಯನ್ನು ಪರಿವರ್ತಿಸಲಾಗಿದ್ದು, ಹರಪ್ಪನಹಳ್ಳಿ ಗ್ರಾಮ, ಜಿಗಣಿ (ಹೋಬಳಿ), ಆನೇಕಲ್ (ತಾಲ್ಲೂಕು), ಬೆಂಗಳೂರಿನಲ್ಲಿದೆ (ಜಿಲ್ಲೆ) ಜೊತೆಗೆ ಕಲ್ಲಬಾಳು ಗ್ರಾಮ ಪಂಚಾಯಿತಿಯ ಆಡಳಿತ ವ್ಯಾಪ್ತಿಯಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ನಂ.63, ಪಶ್ಚಿಮಕ್ಕೆ: ನಿವೇಶನ ನಂ.65, ಉತ್ತರಕ್ಕೆ: 30 ಅಡಿ ರಸ್ತೆ, ದಕ್ಷಿಣಕ್ಕೆ: ಖಾಸಗಿ ಆಸ್ತಿ. **ಯಾವುದೇ ಮಾಹಿತಿಗಾಗಿ ರಘುನಾಥ್, 9886960484 ರವರನ್ನು ಸಂಪರ್ಕಿಸಿ.**	19.05.2025 ಎನ್‌ಪಿಎ ದಿನಾಂಕ 01.07.2018	**POWER HOME Loan A/c No. PHR000900723249 Rs. 11,81,250/-** ಒಟ್ಟು ಬಾಕಿ ಮೊತ್ತ ರೂ. 26,81,178/- ದಿನಾಂಕ: 14.05.2025 ರಂದು ಇದ್ದಂತೆ
3.	(1) ಶ್ರೀ ಸಿದ್ದಲಿಂಗಯ್ಯ ಚನ್ನಬಸಯ್ಯ ಹಿರೇಮಠ ಬಿನ್ ಶ್ರೀ ಚನ್ನಬಸಯ್ಯ ಬಿ ಹಿರೇಮಠ, (2) ಶ್ರೀಮತಿ ಸರ್ವಮಂಗಳ ಸಿದ್ಧಲಿಂಗಯ್ಯ ಹಿರೇಮಠ ಕೋಂ ಶ್ರೀ ಸಿದ್ದಲಿಂಗಯ್ಯ ಚನ್ನಬಸಯ್ಯ ಹಿರೇಮಠ, **ಇವರಿಬ್ಬರ ವಿಳಾಸ:** ಎನ್‌ಸಿಸಿ ಕಚೇರಿ ಹತ್ತಲಗೇರಿ ಮಾಕಾ ಎದುರು, ಚರ್ಚ್ ಹತ್ತಿರ, ಗದಗ, ಕರ್ನಾಟಕ-582101. **ಮತ್ತೊಂದು ವಿಳಾಸ:** ಪ್ಲಾಟ್.ನಂ.34, ಆರ್‌ಎಸ್ ನಂ.397/ಬಿ, ಶ್ರೀ ವೀರರ ದರಾಯಣ ಬಡವಾಣೆ, ರಾಜೀವ್ ಗಾಂಧಿ ನಗರ, ಬೆಟಗೇರಿ, ಗದಗ, ಕರ್ನಾಟಕ-582101.	**ಈ ಆಸ್ತಿಯು ಶ್ರೀ ಸಿದ್ದಲಿಂಗಯ್ಯ ಚನ್ನಬಸಯ್ಯ ಹಿರೇಮಠ ರವರ ಹೆಸರಿನಲ್ಲಿದೆ.** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಎನ್.ಎ. ಪ್ಲಾಟ್ ನಂ.34, ಆರ್.ಎಸ್.ನಂ.397/ಬಿ ರಲ್ಲಿದೆ, ವಿಸ್ತೀರ್ಣ 2 ಗುಂಟೆಗಳು 2.1/2 ಅನ್ನಸ್, ಈ ಆಸ್ತಿಯು ಬೆಟಗೇರಿ ಗ್ರಾಮ, ಗದಗದಲ್ಲಿದ್ದು, ಗದಗ-ಬೆಟಗೇರಿ ಟೌನ್ ಮುನಿಸಿಪಾಲಿಟಿ ವ್ಯಾಪ್ತಿಯಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಪ್ಲಾಟ್ ನಂ.27, ಉತ್ತರಕ್ಕೆ: ಪ್ಲಾಟ್ ನಂ.33, ದಕ್ಷಿಣಕ್ಕೆ: ಪ್ಲಾಟ್ ನಂ.35. **ಯಾವುದೇ ಮಾಹಿತಿಗಾಗಿ ರಘುನಾಥ್, 9886960484 ರವರನ್ನು ಸಂಪರ್ಕಿಸಿ.**	19.05.2025 ಎನ್‌ಪಿಎ ದಿನಾಂಕ 01.01.2019	**POWER HOME Loan A/c No. PH1290100094012 Rs.7,00,000/-** ಒಟ್ಟು ಬಾಕಿ ಮೊತ್ತ : ರೂ. 12,04,230/- ದಿನಾಂಕ: 14.05.2025 ರಂದು ಇದ್ದಂತೆ
4	(1) ಶ್ರೀ ಮೊಹಮ್ಮದ್ ಶೆರಿಫ್ ಬಿನ್ ಶ್ರೀ ಮಹಿನ್ ಹಾಜಿ, (2) ಶ್ರೀಮತಿ ಸಾಹಿರಾ ಬಾನು ಕೋಂ ಶ್ರೀ ಮೊಹಮ್ಮದ್ ಶೆರಿಫ್ ಕಾಸಾ ಗ್ರಂಡಾ, **ಇವರಿಬ್ಬರ ವಿಳಾಸ:** ಫ್ಲಾಟ್ ನಂ.101, ಎ-ಬ್ಲಾಕ್, ಸ್ಟರ್ ರಾಕ್ ರೋಯಿ ಅತ್ತಾವರ, ಮಂಗಳೂರು, ಕರ್ನಾಟಕ-575001.	**ಈ ಆಸ್ತಿಯು ಶ್ರೀ ಟಿ ಕೆ ಮೊಹಮ್ಮದ್ ಶರೀಫ್ ರವರ ಹೆಸರಿನಲ್ಲಿದೆ.** **ಷೆಡ್ಯೂಲ್ 'ಎ' ಆಸ್ತಿಯ ವಿವರ: ಎಲ್ಲಾ ಹಕ್ಕು, ಬಾಧ್ಯತೆಗಳನ್ನೊಳಗೊಂಡಿರುವ ಕೃಷಿಯೇತರ ಸ್ಥಿರಾಸ್ತಿಯ ನಂ.86** ಅತ್ತಾವರ ಗ್ರಾಮ, ಮಂಗಳೂರು ತಾಲ್ಲೂಕು ನಂ.17, ಮಂಗಳೂರು ಮಹಾನಗರ ಪಾಲಿಕೆಯ ಫಲ್ನೀರ್ ವಾರ್ಡ್ ಮತ್ತು ಮಂಗಳೂರು ನಗರದ ನೋಂದಣಿ ಉಪ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿದೆ ಮತ್ತು comprised in: Item No.1: R.S.NO: 783-2A1, T. S. NO: 705-2A1, KISSAM: Converted, EXTENT A-C: 1-95.5, PORTION: Eastern. Item No.2: R.S.NO: 762-2, T. S. NO: 724-2, KISSAM: Converted, EXTENT A-C: 0.32.0, PORTION: Whole. Item No.3: R.S.NO: 783-2A2B, T. S. NO: 705-2A2, KISSAM: Converted, EXTENT A-C: 0-10.0, PORTION: Whole. Total: 2-37.5 [ಎರಡು ಎಕರೆ ಮೂವತ್ತೇಳು ಪಾಯಿಂಟ್ ಐದು ಸೆಂಟ್ಸ್]. ಮೇಲೆ ತಿಳಿಸಿದ ಎಲ್ಲಾ ಮೂರು ಐಟಂಗಳು ಒಂದು ಕಂಪ್ಯಾಕ್ಟ್ ಬ್ಲಾಕ್‌ಗಳಾಗಿ ರೂಪಿಸಲಾಗಿದೆ. ಒಟ್ಟು ವಿಸ್ತೀರ್ಣ 2 ಎಕರೆ ಮತ್ತು 37.5 ಸೇಂಟ್ಸ್ ಮತ್ತು ಎಲ್ಲಾ ಹಕ್ಕು ಭಾಧ್ಯತೆಗಳನ್ನೊಳಗೊಂಡಿರುವ ಆಸ್ತಿಯಾಗಿದೆ. ಚಕ್ಕುಬಂದಿ: ಉತ್ತರಕ್ಕೆ: ಎಸ್.ಎಲ್. ಮಥಾಯಿಸ್ ರಸ್ತೆ, ದಕ್ಷಿಣಕ್ಕೆ: ಶಂಕರ್ ವಿಟ್ಟಲ್ ಗ್ಯಾರೇಜ್, ಪೂರ್ವಕ್ಕೆ: ಶಂಕರ್ ವಿಟ್ಟಲ್ ಗ್ಯಾರೇಜ್ & ಶ್ರೀಮತಿ ಮಸ್ಕರೇನಿಯಸ್ ರವರ ಆಸ್ತಿ, ಪಶ್ಚಿಮಕ್ಕೆ: ಕಮರ್ಷಿಯಲ್ ಕಟ್ಟಡದ ಭಾಗ & ಸ್ಟರ್‌ರಾಕ್ ರಸ್ತೆ. ಅಪಾರ್ಟ್‌ಮೆಂಟ್‌ನ ಷೆಡ್ಯೂಲ್ 'ಬಿ' ಆಸ್ತಿ: ಮೂರು ಬೆಡ್‌ರೂಮ್‌ಗಳನ್ನು ಒಳಗೊಂಡಿರುವ ವಾಸಯೋಗ್ಯ ಅಪಾರ್ಟ್‌ಮೆಂಟ್‌ನ ಫ್ಲಾಟ್ ನಂ.101, ಮಂಗಳೂರು ಸಿಟಿ ಕಾರ್ಪೋರೇಷನ್ ಡೋರ್ ನಂ.17-17-1320, ಈ ಆಸ್ತಿಯು 'ಎ' ಬ್ಲಾಕ್, ನೆಲ ಮಹಡಿಯಲ್ಲಿದ್ದು, 'CASA GRANDE' ಎಂದು ಕರೆಯಲ್ಪಡುವ ವಾಸಯೋಗ್ಯ ಅಪಾರ್ಟ್‌ಮೆಂಟ್ ಕಟ್ಟಡದ ವಿಸ್ತೀರ್ಣ 1700 ಚದರ ಅಡಿ ಮತ್ತು ಜೊತೆಗೆ 0.57% ಹಕ್ಕು, ಶೀರ್ಷಿಕೆ ಮತ್ತು ಹಿತಾಸಕ್ತಿಯೊಂದಿಗೆ ಷೆಡ್ಯೂಲ್ ಎ ಆಸ್ತಿ ಮತ್ತು ಸಾಮಾನ್ಯ ಹಕ್ಕುಗಳು ಮತ್ತು ಸೌಲಭ್ಯಗಳಲ್ಲಿ ಹಕ್ಕಿನೊಂದಿಗೆ ದಿನಾಂಕ: 23.12.1997 ರಂದು ಡೀಡ್ ಆಫ್ ಡಿಕ್ಲರೇಶನ್‌ನಲ್ಲಿ ವಿವರಿಸಲಾಗಿದೆ, ದಾಖಲೆ ಸಂಖ್ಯೆ 89/1997-98, ಪುಸ್ತಕ ಸಂಖ್ಯೆ IV, ಮಂಗಳೂರು ನಗರದ ಉಪ ನೋಂದಾಯಕರ ಮುಂದೆ ನೋಂದಾಯಿಸಲಾಗಿದೆ ಮತ್ತು ಕವರ್ಡ್ ಡ್ರೈವ್ ವೇ ಕಾರ್ ಪಾರ್ಕಿಂಗ್ ಅನ್ನು ಒಳಗೊಂಡಿದೆ. **ಯಾವುದೇ ಮಾಹಿತಿಗಾಗಿ ರಘುನಾಥ್, 9886960484 ರವರನ್ನು ಸಂಪರ್ಕಿಸಿ.**	19.05.2025 ಎನ್‌ಪಿಎ ದಿನಾಂಕ 01.01.2022	**ASSET POWER Loan A/c No. LPR007702169001 Rs. 27,10,894/-** ಒಟ್ಟು ಬಾಕಿ ಮೊತ್ತ ರೂ.24,02,079/- ದಿನಾಂಕ: 14.05.2025 ರಂದು ಇದ್ದಂತೆ
5	(1) ಶ್ರೀ ಶ್ಯಾಮಲ್ ಪಬಿತ್ರಾ ಬಚ್ಚರ್ ಬಿನ್ ಶ್ರೀ ಪಬಿತ್ರಾ ಬಚ್ಚರ್, (2) ಶ್ರೀಮತಿ.ಅಪರ್ಣಾ ಬಾಚಾರ್ ಕೋಂ ಶ್ರೀ.ಶ್ಯಾಮಲ್ ಪಬಿತ್ರಾ ಬಚ್ಚರ್, **ಇವರಿಬ್ಬರ ವಿಳಾಸ:** ಸರ್ವೆ ನಂ-40/11, 3ನೇ ಮಹಡಿ, C/o ಸಂಪತ್ ಗುಣವೇರ್ ಮಾಥೋಶ್ರೀ ಕಾಲೋನಿ, ಸೂಜೂರ್ ನಗರ ಥಗೋರ್ನ್, ಮಾಥುಶ್ರೀ ಕಾಲೋನಿ, ಪುಣೆ-411033. **ಮತ್ತೊಂದು ವಿಳಾಸ:** ಆರ್.ಹೆಚ್. ಕಾಲೋನಿ ನಂ-4, ಗಾಂಧಿನಗರ, ರಾಯಚೂರು, ಕರ್ನಾಟಕ-584128. **ಮತ್ತೊಂದು ವಿಳಾಸ:** ಫ್ಲಾಟ್ ನಂ.503, ವಿಂಗ್ ಸಿ ಹಂತ, 25 ನೇ ಮಹಡಿ, ಸೋಮಾನಿ ಡ್ರೀಮ್ ಹೋಮ್, ಎಸ್‌ಆರ್ 26/4/4-7 27/4/4-7, ಗಾಯಕ್ವಾಡ್ ನಗರ, ಪುಣೆ ಮಾಮ್ ಹೈವೆ, ಪುನಾವಾಲೆ, ಪುಣೆ-411015.	**ಈ ಆಸ್ತಿಯು ಶ್ರೀ ಶ್ಯಾಮಲ್ ಪಬಿತ್ರಾ ಬಚ್ಚರ್ ಮತ್ತು ಶ್ರೀಮತಿ.ಅಪರ್ಣಾ ಬಾಚಾರ್‌ರವರ ಹೆಸರಿನಲ್ಲಿದೆ** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಭೂಮಿಯು ಎ) ಸರ್ವೆ ನಂ.26/4/4, ವಿಸ್ತೀರ್ಣ 00 ಹೆಕ್ಟೇರ್ 74.53 ಎಕರೆಗಳು, ಬಿ) ಸರ್ವೆ ನಂ.26/4/5, ವಿಸ್ತೀರ್ಣ 00 ಹೆಕ್ಟೇರ್ 37.27 ಎಕರೆಗಳು, ಸಿ) ಸರ್ವೆ ನಂ.26/4/6, ವಿಸ್ತೀರ್ಣ 00 ಹೆಕ್ಟೇರ್ 37.26 ಎಕರೆಗಳು, ಡಿ) ಸರ್ವೆ ನಂ.26/4/7, ವಿಸ್ತೀರ್ಣ 00 ಹೆಕ್ಟೇರ್ 74.53 ಎಕರೆಗಳು, ಇ) ಸರ್ವೆ ನಂ.27/4/4, ವಿಸ್ತೀರ್ಣ 00 ಹೆಕ್ಟೇರ್ 27.99 ಎಕರೆಗಳು, ಎಫ್) ಸರ್ವೆ ನಂ.27/4/5, ವಿಸ್ತೀರ್ಣ 00 ಹೆಕ್ಟೇರ್ 14 ಎಕರೆಗಳು, ಜಿ) ಸರ್ವೆ ನಂ.27/4/6, ವಿಸ್ತೀರ್ಣ 00 ಹೆಕ್ಟೇರ್ 06.24 ಎಕರೆಗಳು, ಹೆಚ್) ಸರ್ವೆ ನಂ.27/4/7, ವಿಸ್ತೀರ್ಣ 00 ಹೆಕ್ಟೇರ್ 27.99 ಎಕರೆಗಳು, ಒಟ್ಟು ವಿಸ್ತೀರ್ಣ 02 ಹೆಕ್ಟೇರ್ 99.81 ಎಕರೆಗಳು, ಪೇಸ್ II ಪ್ರದೇಶದಲ್ಲಿ 4000.00 ಚದರ ಮೀಟರ್‌ಗಳು, ಈ ಆಸ್ತಿಯು ಮೌಜೆ ಪುನವಾಲೆ, ಮುಲ್ಶಿ ತಾಲ್ಲೂಕು, ಪುಣೆ ಜಿಲ್ಲೆಯಲ್ಲಿದ್ದು, ಪಿಂಪ್ರಿ ಚಿಂಚ್‌ವಾಡ್ ಪುರಸಭೆಯ ವ್ಯಾಪ್ತಿಯಲ್ಲಿದೆ ಮತ್ತು ಹವೇಲಿಯ ಉಪ ಜಿಲ್ಲಾ ತಾಲ್ಲೂಕಿನಲ್ಲಿ ನೋಂದಣಿಯಾಗಿದೆ ಮತ್ತು ಪುಣೆ ನೋಂದಣಿ ಜಿಲ್ಲೆಯಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ: ಎಸ್‌ಆರ್ ನಂ.26 ಪೈಕಿ & ಪೇಸ್ III (ಕಟ್ಟಡ 03_ವಿಂಗ್ ಇ & ವಿಂಗ್ ಎಫ್), ಪಶ್ಚಿಮಕ್ಕೆ: ಎಸ್‌ಆರ್ ನಂ.26 ಪೈಕಿ & ಪೇಸ್ I (ಕಟ್ಟಡ 01_ವಿಂಗ್ ಎ & ವಿಂಗ್ ಬಿ), ಉತ್ತರಕ್ಕೆ: ಎಸ್‌ಆರ್ ನಂ.27 ಪೈಕಿ, ದಕ್ಷಿಣಕ್ಕೆ: ಎಸ್‌ಆರ್ ನಂ.24 ಪೈಕಿ. ಈ ಎಲ್ಲಾ ಆಸ್ತಿಯನ್ನು "ದಿ ಸೈಡ್ ಪ್ರಾಪರ್ಟಿ / ಸೈಡ್ ಲ್ಯಾಂಡ್" ಎಂದು ಕರೆಯಲಾಗುತ್ತದೆ. **ಅಪಾರ್ಟ್‌ಮೆಂಟ್/ಫ್ಲಾಟ್‌ನ ಷೆಡ್ಯೂಲ್- ಬಿ ಆಸ್ತಿ:** ಖರೀದಿದಾರ/ರು ಪ್ರವರ್ತಕರು/ಮಾಲೀಕರಿಂದ ಖರೀದಿಸಲು ಒಪ್ಪಿದ್ದಾರೆ ಮತ್ತು ಮತ್ತು ಪ್ರವರ್ತಕರು/ಮಾಲೀಕರು ಖರೀದಿದಾರರಿಗೆ/ಗಳಿಗೆ ಆಸ್ತಿಯನ್ನು ಮಾರಾಟ ಮಾಡಲು ಒಪ್ಪಿದ್ದು, ಫ್ಲಾಟ್ ನಂ.503, ಮಹಡಿ: 5ನೇ ಮಹಡಿ, ವಿಂಗ್: ಸಿ, ಟೈಪ್: 1 ಬಿಹೆಚ್‌ಕೆ, ಕಾರ್ಪೆಟ್ ಪ್ರದೇಶ: 310 ಚದರ ಅಡಿ ಅಂದರೆ 28.79 ಚದರ ಮೀಟರ್‌ಗಳು, ಎನ್‌ಕ್ಲೋಸ್ಡ್ ಬಾಲ್ಕನಿ: 34 ಚದರ ಅಡಿಗಳು ಅಂದರೆ 3.15 ಚದರ ಮೀಟರ್‌ಗಳು. [ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಕಾಯ್ದೆ 2016 ರ ಸೆಕ್ಷನ್ 2(ಕೆ) ಪ್ರಕಾರ ಲೆಕ್ಕಹಾಕಲಾಗಿದೆ] 'ಸೋಮಾನಿ-ಡ್ರೀಮ್ ಹೋಮ್ ಫೇಸ್ II' ಎಂದು ಕರೆಯಲ್ಪಡುವ ಯೋಜನೆಯ ಅಪಾರ್ಟ್‌ಮೆಂಟ್ / ಫ್ಲಾಟ್ ಕಾರ್ಪೆಟ್ ಪ್ರದೇಶದ ಜೊತೆಗೆ ಬಾಲ್ಕನಿ / ಟೆರೇಸ್‌ನ ವಿಸ್ತೀರ್ಣ: 35 ಚದರ ಅಡಿ ಅಂದರೆ 3.25 ಚದರ ಮೀಟರ್. ಸಂಪೂರ್ಣ ಆಸ್ತಿಯ ವಿವರ: ಇಡೀ ಯೋಜನೆಯು 5 ಹಂತಗಳನ್ನು ಒಳಗೊಂಡಿದ್ದು, ಅವುಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ: ಪೇಸ್ I: 'ಎ' ಎಂದು ಕರೆಯಲ್ಪಡುವ 2 ವಾಸಯೋಗ್ಯ ಕಟ್ಟಡವನ್ನೊಳಗೊಂಡಿದೆ ಮತ್ತು 'ಬಿ' ಪ್ರತಿಯೊಂದು ಕಟ್ಟಡವು ಸ್ಟಿಲ್ಟ್ ಅನ್ನು ಹೊಂದಿದೆ + 12 ಮಹಡಿಗಳು ಮತ್ತು ಪ್ರತಿ ಮಹಡಿಯಲ್ಲೂ 10 ವಾಸಯೋಗ್ಯ ಮನೆಗಳನ್ನು ಒಳಗೊಂಡಿದೆ. Total 236 tenements in PHASE II. PHASE II: (PROPOSED FUTURE DEVELOPMENT): Consist of 2 residential buildings namely 'C' and 'D'. PHASE III: (PROPOSED FUTURE DEVELOPMENT): Consist of 2 residential buildings namely 'E' and 'F'. PHASE IV: (PROPOSED FUTURE DEVELOPMENT): Consist of 2 residential buildings namely 'G' and 'H'. PHASE V: (PROPOSED FUTURE DEVELOPMENT): Consist of 2 residential buildings namely 'I'. **ಯೋಜನೆಯ ವಿವರ:** ಈ ಯೋಜನೆಯು 'ಎ', 'ಬಿ', 'ಸಿ', 'ಡಿ', 'ಇ', 'ಎಫ್', 'ಜಿ', 'ಹೆಚ್' ಮತ್ತು 'ಐ' ಎಂಬ 10 ವಾಸಯೋಗ್ಯ ಕಟ್ಟಡಗಳನ್ನೊಳಗೊಂಡಿದೆ. ಪ್ರತಿಯೊಂದು ಕಟ್ಟಡವು ಸ್ಟಿಲ್ಟ್ ಮತ್ತು ನೆಲಮಟ್ಟದ ಪಾರ್ಕಿಂಗ್ ಅನ್ನು ಹೊಂದಿದ್ದು, ಮುಂದಿನ ಹಂತಗಳಲ್ಲಿ 12 ಮಹಡಿಗಳಿಗಿಂತ ಹೆಚ್ಚಿನ (ಹಂತ II) ಮತ್ತು 20 ಮಹಡಿಗಳನ್ನು ಹೊಂದಿರುತ್ತದೆ. **ಟೆನೆಮೆಂಟ್‌ನ ವಿವರಗಳು:** 1. ಫ್ಲಾಟ್ ನಂ.503, 2. 5ನೇ ಮಹಡಿ, 3. ಕಟ್ಟಡದ ನಂ.ಸಿ, 4. ಕಾರ್ಪೆಟ್ ಪ್ರದೇಶ 310 ಚದರ ಅಡಿ ಅಂದರೆ 28.79 ಚದರ ಮೀಟರ್‌ಗಳು, ಜೊತೆಗೆ ಸುತ್ತುವರಿದ ಬಾಲ್ಕನಿ ಪ್ರದೇಶ 37 ಚದರ ಅಡಿಗಳು ಅಂದರೆ 3.15 ಚದರ ಮೀಟರ್‌ಗಳು & ಬಾಲ್ಕನಿ/ ಟೆರೇಸ್ ಪ್ರದೇಶದ ವಿಸ್ತೀರ್ಣ 35 ಚದರ ಅಡಿಗಳು ಅಂದರೆ 3.25 ಚದರ ಮೀಟರ್‌ಗಳು (ಲಭ್ಯವಿರುವ ಸಿದ್ಧ ಲೆಕ್ಕಾಚಾರದ ಪ್ರಕಾರ ಜೊತೆಗೆ ಉಪ-ನೋಂದಣಿದಾರ ಹವೇಲಿ ಆಸ್ತಿಯು ವಿಭಾಗ 22, ಪುನಾವಾಲೆ, ಪಿಂಪ್ರಿ ಚಿಂಚ್‌ವಾಡ್ ಮುನ್ಸಿಪಲ್ ಕಾರ್ಪೊರೇಷನ್, ಸರ್ವೆ ನಂ.26/4/4 ರಿಂದ 7 & 27/4/4 ರಿಂದ 7). **ಯಾವುದೇ ಮಾಹಿತಿಗಾಗಿ ರಘುನಾಥ್, 9886960484 ರವರನ್ನು ಸಂಪರ್ಕಿಸಿ.**	19.05.2025 ಎನ್‌ಪಿಎ ದಿನಾಂಕ 10.03.2022	**POWER HOME VANILLA BRE Loan A/c No. PHR010304902530 Rs. 22,63,564/-** ಒಟ್ಟು ಬಾಕಿ ಮೊತ್ತ ರೂ. 30,08,012/- ದಿನಾಂಕ: 14.05.2025 ರಂದು ಇದ್ದಂತೆ
6.	(1) ಶ್ರೀಮತಿ ದಿವ್ಯಾ ಎಸ್ ಕೋಂ ಶ್ರೀ.ನಾಗರಾಜು ಎಂಎಂ, (2) ಶ್ರೀ ನಾಗರಾಜ ಎಂ.ಎಂ ಬಿನ್ ಶ್ರೀ ಮಂಜುನಾಥ್ ಎಂ.ವಿ ಮುಳ್ಳುಸೋಗೆ, ಸೋಮಾರಪೇಟೆ, ಕೊಡಗು, ಕರ್ನಾಟಕ-571234. ಗಣೇಶ ಗೌರಿ ದೇವಸ್ಥಾನದ ಹತ್ತಿರ. 3. ಶ್ರೀಮತಿ ಸಣ್ಣಮ್ಮ ಕೋಂ ಶ್ರೀ ನಾಗೇಗೌಡ ಕುರುಬರ ಅಬ್ಬೂರು ಅರಕಲಗೂಡು, ಬನ್ನೂರು, ಹಾಸನ, ಕರ್ನಾಟಕ-573130. (4) ಶ್ರೀಮತಿ ಮುತ್ತಮ್ಮ ಕೋಂ ಶ್ರೀ.ಶೇಖರ ಗೌಡ, ಕೊಡಿಗೆ ರಸ್ತೆ, ಕಾವೇರಿ ಕಾಂಪೌಂಡ್ಸ್, ಗುಮ್ಮನಕೊಲ್ಲಿ, ಸೋವರಪೇಟೆ, ಮುಳ್ಳುಸೋಗೆ, ಕೊಡಗು, ಕರ್ನಾಟಕ-571234. ಗೌರಿ ಗಣೇಶ ದೇವಸ್ಥಾನದ ಹತ್ತಿರ.	**ಈ ಆಸ್ತಿಯು ಶ್ರೀ. ನಾಗರಾಜ್ ಎಂ ಎಂ ಅವರಿಗೆ ಸೇರಿದ್ದು** ವಾಸಯೋಗ್ಯ ಕಟ್ಟಡದ ಖಾತಾ ನಂ. 151800208300420131, ಎನ್‌ಎ ಸರ್ವೆ ನಂ.10/ಬಿ/*, ವಿಸ್ತೀರ್ಣ 2178 ಚದರ ಅಡಿ & ಕಟ್ಟಡವನ್ನೊಳಗೊಂಡಿದೆ, ಈ ಆಸ್ತಿಯು ಮಾರುತಿ ಎಕ್ಸ್‌ಟೆನ್ಷನ್, ಮುಳ್ಳುಸೋಗೆ ಗ್ರಾಮದ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿದೆ, ಕುಶಾಲನಗರ ಹೋಬಳಿ, ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ-571234ರಲ್ಲಿದ್ದು, ಶ್ರೀ ನಾಗರಾಜ ಎಂ ಎಂ ಬಿನ್ ಮಂಜುನಾಥ್ ಎಂ ವಿ ರವರ ಹೆಸರಿನಲ್ಲಿದೆ. ಅಸೆಸ್‌ಮೆಂಟ್ ನಂ. ಪಿಐಡಿ-151800208300420131, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 9.2 X ಉತ್ತರದಿಂದ ದಕ್ಷಿಣಕ್ಕೆ: 22 ಮೀಟರ್‌ಗಳ ವಾಸಯೋಗ್ಯ ಮನೆ, ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ನಂ.1, ಪಶ್ಚಿಮಕ್ಕೆ: ನಿವೇಶನ ನಂ.3, ಉತ್ತರಕ್ಕೆ: ಲೇಔಟ್ ರಸ್ತೆ, ದಕ್ಷಿಣಕ್ಕೆ: ನಿವೇಶನ ನಂ.4 ಮತ್ತು 5. **ಯಾವುದೇ ಮಾಹಿತಿಗಾಗಿ ನಂದೀಶ್ ಕೆ ಬಿ, ಕಲೆಕ್ಷನ್ ಮ್ಯಾನೇಜರ್, ಮೊ: 91-9986043776 ರವರನ್ನು ಸಂಪರ್ಕಿಸಿ.**	23.05.2025 ಎನ್‌ಪಿಎ ದಿನಾಂಕ 01.05.2025	**Over Draft Loan A/c No. 920030074360343 Amount: Rs. 24,00,000/- O/s Amount: Rs. 24,57,110/- (this includes interest till 22.05.2025)** --- **Production Credit (Working Capital) Loan A/c No. 920030074360372 Amount: Rs.50,000/- O/s Amount: Rs.45,912/- (this includes interest till 22.05.2025)** ಒಟ್ಟು ಬಾಕಿ ಮೊತ್ತ : ರೂ. 25,03,022/-

ದಯವಿಟ್ಟು ಗಮನಿಸಿ, ಮೇಲೆ ತಿಳಿಸಿದ ಕಾಯಿದೆಯ ಸೆಕ್ಷನ್-13 ರ ಉಪ-ಸೆಕ್ಷನ್ 13 ರಲ್ಲಿ ಉಲ್ಲೇಖಿಸಿರುವಂತೆ, ಈ ಸೂಚನೆಯಲ್ಲಿ ಉಲ್ಲೇಖಿಸಲಾದ ಭದ್ರತೆಯ ಅಡಿಯಲ್ಲಿ ಹೇಳಲಾದ ಯಾವುದೇ ಸ್ವತ್ತುಗಳನ್ನು ನಮ್ಮ ಬ್ಯಾಂಕಿನ ಪೂರ್ವ ಲಿಖಿತ ಅನುಮತಿಯಿಲ್ಲದೆ ನೀವು ಮಾರಾಟ, ಗುತ್ತಿಗೆ ಅಥವಾ ಇತರ ರೀತಿಯಲ್ಲಿ ವರ್ಗಾಯಿಸಬಾರದು.

ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಸೂಚನೆಯ ಆದೇಶಾನುಸಾರವಾಗಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಮೇಲೆ ಉಲ್ಲೇಖಿಸಲಾದ ಸಾಲಗಾರರು ಮತ್ತು/ಅಥವಾ ಖಾತರಿದಾರರು (ಎಲ್ಲೆಲ್ಲಿ ಅನ್ವಯವಾಗುತ್ತದೆಯೋ) ಈ ಮೇಲೆ ತಿಳಿಸಿಲಾದ ಬಾಕಿ ಉಳಿದಿರುವ ಮೊತ್ತವನ್ನು ಭವಿಷ್ಯದ ಬಡ್ಡಿ ಮತ್ತು ಅನ್ವಯವಾಗುವ ಶುಲ್ಕಗಳೊಂದಿಗೆ, ಈ ಸೂಚನೆ ಪ್ರಕಟಣೆಗೊಂಡ ದಿನಾಂಕದಿಂದ 60 ದಿನಗಳೊಳಗಾಗಿ ಪಾವತಿಸುವಂತೆ ಸಲಹೆ ನೀಡಲಾಗಿದ್ದು, ವಿಫಲವಾದಲ್ಲಿ ಸೂಚನಾ ತಾರೀಖಿನಿಂದ 60 ದಿನಗಳ ಅವಧಿ ಮುಕ್ತಾಯದ ನಂತರ, 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನರ್ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆಯ ನಿಬಂಧನೆಗನುಸಾರವಾಗಿ, ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.

ಮೇಲೆ ತಿಳಿಸಲಾದ ಕಾಯ್ದೆಯ ವಿಭಾಗ 13(13), ಉಪ-ವಿಭಾಗ(2)ರ ಅಡಿಯಲ್ಲಿ ಉಲ್ಲೇಖಿಸಿರುವಂತೆ, ಯಾವುದೇ ಒಬ್ಬ ಸಾಲಗಾರ ಈ ಸೂಚನೆಯು ತಲುಪಿದ ನಂತರ, ಭದ್ರತಾ ಸಾಲ ನೀಡಿದವರ ಲಿಖಿತ ಪೂರ್ವಾನುಮತಿ ಪಡೆಯದೇ, ಸೂಚನೆಯಲ್ಲಿ ಪ್ರಸ್ತಾಪಿಸಲಾಗಿರುವ ಭದತಾ ಆಸ್ತಿಗಳನ್ನು ಮಾರಾಟದ ಮೂಲಕ ವರ್ಗಾಯಿಸುವುದಾಗಲಿ, ಭೋಗ್ಯಕ್ಕೆ ನೀಡುವುದಾಗಲಿ ಅಥವಾ ಬೇರೆ ರೀತಿಯಲ್ಲಿ ಬಳಸಿಕೊಳ್ಳುವುದಾಗಲಿ ಮಾಡುವಂತಿಲ್ಲ ಎಂಬುದನ್ನು ದಯವಿಟ್ಟು ಗಮನಿಸತಕ್ಕದ್ದು.

ಆಕ್ಟನ ಸೆಕ್ಷನ್ 13ರ ಸಬ್ ಸೆಕ್ಷನ್ (8)ರಲ್ಲಿನ ನಿಯಮಗಳ ಅನುಸಾರ ಭದ್ರತಾ ಸ್ವತ್ತುಗಳನ್ನು ಹಿಂದಕ್ಕೆ ಪಡೆದುಕೊಳ್ಳಲು ಕಾಲಾವಕಾಶವನ್ನು ನೀಡಲಾಗುವುದು ಎಂದು ಈ ಮೂಲಕ ಸಾಲಗಾರರ ಗಮನಕ್ಕೆ ತರಲಾಗುವುದು. ಸಾರ್ವಜನಿಕ ಹರಾಜಿಗಾಗಿ ಅಥವಾ ಭೋಗ್ಯ, ಹಂಚಿಕೆ ಅಥವಾ ಮಾರಾಟದ ಮೂಲಕ ಭದ್ರತಾ ಸ್ವತ್ತುಗಳ ವರ್ಗಾವಣೆಗಾಗಿ ಸಾರ್ವಜನಿಕ ಅಥವಾ ಖಾಸಗಿ ಒಪ್ಪಂದಕ್ಕೆ ಉಲ್ಲೇಖಗಳನ್ನು ಅಥವಾ ಟೆಂಡರ್ ಆಹ್ವಾನಿಸುವ ಸೂಚನಾ ಪ್ರಕಟಣೆಯ ದಿನಾಂಕಕ್ಕಿಂತ ಮೊದಲು ಯಾವುದೇ ಸಮಯದಲ್ಲಿ ಸಾಲಗಾರರು, ಸುರಕ್ಷಿತ ಸಾಲದಾತರ ಖರ್ಚು, ವೆಚ್ಚ ಮತ್ತು ಶುಲ್ಕಗಳನ್ನು ಒಳಗೊಂಡಂತೆ ಎಲ್ಲಾ ಬಾಕಿಯನ್ನು ಪಾವತಿಸಿ, ಭದ್ರತಾ ಸ್ವತ್ತುಗಳನ್ನು ಬಿಡಿಸಿಕೊಳ್ಳಬಹುದು.

ದಿನಾಂಕ : 05.06.2025
ಸ್ಥಳ : ಬೆಂಗಳೂರು
ಸಹಿ/- ಅಧಿಕೃತ ಅಧಿಕಾರಿ
ಎಕ್ಸಿಸ್ ಬ್ಯಾಂಕ್ ಲಿಮಿಟೆಡ್

ವಿಶ್ವ ಪರಿಸರ ದಿನದ ಅಂಗವಾಗಿ ಪ್ಲಾಸ್ಟಿಕ್ ಮುಕ್ತ ಪರಿಸರ, ಜನ ಜಾಗೃತಿ ಕಾರ್ಯಕ್ರಮ ಗುರುವಾರ ಸೆಂಟ್ ಫ್ಲವರ್ ಶಾಲೆಯಲ್ಲಿ ನಡೆಯಿತು. ಕಾರ್ಯಕ್ರಮದಲ್ಲಿ ಪ್ಲಾಸ್ಟಿಕ್ ಮುಕ್ತ ಶಾಲೆ ಮತ್ತು ಮನೆ ಹಾಗೂ ಸಮಾಜ ಸೃಷ್ಟಿಸುವ ಆಶಯ ಹೊಂದಿ ಸೈಕಲ್ ಜಾಥಾ, ಶಾಲಾ ಮಕ್ಕಳ ಪಥಸಂಚಲನ ನಡೆಯಿತು. ಬೀದಿ ನಾಟಕ, ಪರಿಸರ ಸಂರಕ್ಷಣಾ ಗೀತೆ ಹಾಡಿ, ಭಿತ್ತಿ ಪತ್ರ ಹಂಚುವುದರ ಮೂಲಕ ಜನರಲ್ಲಿ ಜಾಗೃತಿ ಮೂಡಿಸಲಾಯಿತು. ಅಳಿದರೆ ಕಾಡು ಅಳುವುದು ನಾಡು, ವೃಕ್ಷೋ ರಕ್ಷತಿ ರಕ್ಷಿತಃ ಎಂಬ ಘೋಷ ವಾಕ್ಯದೊಂದಿಗೆ ಶಾಲೆಯ ಆವರಣದಲ್ಲಿ ಗಿಡಗಳನ್ನು ನೆಡಲಾಯಿತು. ಮಕ್ಕಳು ಪ್ಲಾಸ್ಟಿಕ್ ಬಳಕೆ ನಿಷೇಧಿಸುವುದಾಗಿ ವಾಗ್ದಾನ ಮಾಡಿದರು. ಶಾಲೆಯ ಸಂಸ್ಥಾಪಕ ಡಾ.ಜಿ.ಆರ್.ಕೃಷ್ಣಪ್ಪ, ಪ್ರಾಂಶುಪಾಲರಾದ ಸೌಮ್ಯ ಉಪಸ್ಥಿತರಿದ್ದರು.



ಶುಕ್ರವಾರ ನಡೆದ ಪರಿಸರ ಸಂರಕ್ಷಣಾ ಜಾಗೃತಿ ಜಾಥಾದಲ್ಲಿ ಪಾಲ್ಗೊಂಡ ಅಂಜಲಿ ಕಾನ್ವೆಂಟ್ ಮತ್ತು ನೈಟಿಂಗೇಲ್ ಪ್ರೌಢ ಶಾಲಾ ವಿದ್ಯಾರ್ಥಿಗಳು.

ಪರಿಸರ ಸಂರಕ್ಷಣಾ ಜಾಗೃತಿ ಜಾಥಾ

ಬೆಂಗಳೂರು: ಅಂಜಲಿ ಕಾನ್ವೆಂಟ್ ಮತ್ತು ನೈಟಿಂಗೇಲ್ ಪ್ರೌಢ ಶಾಲೆಯ ವತಿಯಿಂದ ಶುಕ್ರವಾರ ಪರಿಸರ ಸಂರಕ್ಷಣಾ ಜಾಗೃತಿ ಜಾಥಾ ನಡೆಯಿತು. ವಿಶ್ವಪರಿಸರ ದಿನ ಆಚರಣೆಯ ಸಲುವಾಗಿ ಆಯೋಜಿಸಿದ್ದ ಜಾಥದಲ್ಲಿ ಅಂಜಲಿ ಕಾನ್ವೆಂಟ್ ಮತ್ತು ನೈಟಿಂಗೇಲ್ ಪ್ರೌಢ ಶಾಲೆಯ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪೋಷಕರು ಪ್ಲಾಸ್ಟಿಕ್ ತ್ಯಜಿಸಿ ಪರಿಸರ ಉಳಿಸಿ ಎಂಬ ಘೋಷವಾಕ್ಯ ಉದ್ಗರಿಸುತ್ತ ಸುಮಾರು ಎರಡು ಕಿಮೀ ಹೆಜ್ಜೆ ಹಾಕಿದರು. ಜಾಥಾ ನಡೆದ ನಂತರ ಸಂಸ್ಥೆಯ ಕಾರ್ಯದರ್ಶಿ ಎಂ.ಎಸ್.ಸರಳ ವಿದ್ಯಾರ್ಥಿಗಳ ಜತೆಗೂಡಿ ಸಸಿ ನೆಟ್ಟರು. ಪ್ರಾಂಶುಪಾಲ ಡಾ.ಬಿ.ಕೃಷ್ಣೇಗೌಡ ವಿಶ್ವ ಪರಿಸರ ದಿನದ ಇತಿಹಾಸ ಹಾಗೂ ಮಹತ್ವವನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು. ಈ ವೇಳೆ 2024-25 ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ 5ನೇ ಸ್ಥಾನ ಪಡೆದ ಮಂಜುನಾಥ್.ಸಿ.ಬಗಸಿ ಎಂಬ ವಿದ್ಯಾರ್ಥಿಗೆ ಅಭಿನಂದನೆ ಸಲ್ಲಿಸಲಾಯಿತು.



ಯಲಹಂಕದ ಸಿಆರ್‌ಪಿಎಫ್ ಮಹಿಳಾ ಬೆಟಾಲಿಯನ್ ವತಿಯಿಂದ ಶಿಬಿರದ ಆವರಣದಲ್ಲಿ ಕಾಲೇಜು ವಿದ್ಯಾರ್ಥಿನಿಯರಿಗೆ ಜೇನು ಸಾಕಣೆಯ ಮಾಹಿತಿ ಮತ್ತು ಪ್ರಯೋಜನಗಳ ಬಗ್ಗೆ ತರಬೇತಿ ನೀಡಿ ಪ್ರಮಾಣ ಪತ್ರ ವಿತರಿಸಲಾಯಿತು. ಇದೇ ವೇಳೆ ಜೇನುನೊಣಗಳಿಂದ ರಕ್ಷಣೆ ಬಗ್ಗೆ ಜಾಗೃತಿ ಮೂಡಿಸಲಾಯಿತು.

ಸಮಾಚಾರ ಸಣ್ಣದಲ್ಲ

ಸಿಎಂ, ಡಿಸಿಎಂ ವಿರುದ್ಧ ದೂರು ದಾಖಲು

ಬೆಂಗಳೂರು: ಆರ್‌ಸಿಬಿ ವಿಜಯೋತ್ಸವದ ವೇಳೆ ಕಾಲ್ತುಳಿತದಿಂದ ಆದ ಸಾವಿಗೆ ಮತ್ತು ಅದರ ಹಿಂದಿನ ಅವ್ಯವಸ್ಥೆಗೆ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಗೃಹಸಚಿವರೇ ಕಾರಣರಾಗಿದ್ದು, ಮೂವರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಬಿಜೆಪಿ ಕಬ್ಬನ್ ಪಾರ್ಕ್ ಠಾಣೆಯಲ್ಲಿ ದೂರು ಸಲ್ಲಿಸಿದೆ. ದೂರು ಸಲ್ಲಿಸಿದ ಬಳಿಕ ಮಾತನಾಡಿದ ವಿಧಾನಪರಿಷತ್ ಪ್ರತಿಪಕ್ಷ ಮುಖ್ಯ ಸಚೇತಕ ಎನ್.ರವಿಕುಮಾರ್, ಏನೂ ತಪ್ಪು ಮಾಡದ ಪೊಲೀಸರ ಬಲಿ ತೆಗೆದುಕೊಳ್ಳಲಾಗಿದೆ. ಪೊಲೀಸ್ ಇಲಾಖೆ, ಕಮಿಷನರ್ ದಯಾನಂದ್ ಕಾರ್ಯಕ್ರಮ ಬೇಡ ಎಂದಿದ್ದರು. 3-4 ದಿನ ಬಿಟ್ಟು ಮಾಡುವಂತೆ ಹೇಳಿದರೂ ಕೇಳಿಲ್ಲ . ಒತ್ತಡ ಹಾಕಿ ಕಾರ್ಯಕ್ರಮ ನಡೆಸಿದ್ದಾರೆ. ಎಲ್ಲ ಅವ್ಯವಸ್ಥೆ, 11 ಜನರ ಬಲಿ, 50-60 ಜನರು ಆಸ್ಪತ್ರೆಗೆ ಸೇರುವ ಪರಿಸ್ಥಿತಿ ಬಂದಿರುವುದಕ್ಕೆ ಈ ಸರಕಾರ, ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಗಳು ಕಾರಣ ಎಂದು ಆರೋಪಿಸಿದರು. ಯಾವ ಸರಕಾರವಾದರೂ ಮೂರು ಮೂರು ತನಿಖೆ ಮಾಡಿಸಲು ಸಾಧ್ಯವೇ? ಡಿ.ಸಿ, ಸಿಐಡಿ ಮಾತ್ರವಲ್ಲದೆ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ತನಿಖೆಗೆ ಸೂಚಿಸಿದ್ದಾರೆ. ಇದು ಸರಿಯಲ್ಲ. ಮಾತೆತ್ತಿದರೆ ಸಂವಿಧಾನ, ಪ್ರಜಾಪ್ರಭುತ್ವ, ನೈತಿಕತೆ ಎನ್ನುವ ಸಿದ್ದರಾಮಯ್ಯ ರಾಜೀನಾಮೆ ಕೊಡಬೇಕಿದೆ. ರಾಹುಲ್ ಗಾಂಧಿಯವರು ಸಂವಿಧಾನದ ಪ್ರತಿ ಹಿಡಿದು ಓಡಾಡುತ್ತಾರೆ. ಆ ಸಂವಿಧಾನದ ಬಗ್ಗೆ ಡಿ.ಕೆ.ಶಿವಕುಮಾರರಿಗೆ ಗೌರವ ಇದ್ದಲ್ಲಿ ಮೊದಲು ರಾಜೀನಾಮೆ ಕೊಡಲಿ ಎಂದು ಒತ್ತಾಯಿಸಿದರು. ಬಿಜೆಪಿ ರಾಜ್ಯ ಮುಖ್ಯ ವಕ್ತಾರ ಅಶ್ವತ್ಥನಾರಾಯಣ್, ಬಿಜೆಪಿಯ ಎಸ್.ದತ್ತಾತ್ರೀ, ಎಸ್.ಹರೀಶ್, ಸಪ್ತಗಿರಿ ಗೌಡ, ವಸಂತಕುಮಾರ್ ಹಾಗೂ ಪ್ರಮುಖರು ಉಪಸ್ಥಿತರಿದ್ದರು.

ಲೋಕಾ ಬಲೆಗೆ ಸರ್ವೇ ಸೂಪರ್‌ವೈಸರ್

ಬೆಂಗಳೂರು: ಕೈಗಾರಿಕಾ ನಿವೇಶನದ ಸರ್ವೇ ಸ್ಕೆಚ್ ನೀಡಲು 1.50 ಲಕ್ಷ ಲಂಚ ಪಡೆಯುತ್ತಿದ್ದ ವೇಳೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ (ಕೆಐಎಡಿಬಿ) ಸರ್ವೇ ಸೂಪರ್‌ವೈಸರ್ ಅನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ. ಬೆಂಗಳೂರು ನಿವಾಸಿ ರವಿ ಅವರಿಗೆ ಕೆಐಎಡಿಬಿ ಯಿಂದ ಕೈಗಾರಿಕಾ ನಿವೇಶನ ಮಂಜೂರಾಗಿದ್ದು, ಅದರ ಸರ್ವೇ ಸ್ಕೆಚ್‌ಗಾಗಿ ಕೆಐಎಡಿಬಿಯ ಬೆಂಗಳೂರು ಕಚೇರಿಗೆ ಅರ್ಜಿ ಸಲ್ಲಿಸಿದ್ದರು. ಸಂಬಂಧಿತ ಸರ್ವೇ ಸೂಪವೈಸರ್ ನರೇಂದ್ರ ಕುಮಾರ್ ಅವರು 1.50 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು' ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ. ರವಿ ದೂರು ನೀಡಿದ್ದರು. ಲೋಕಾಯುಕ್ತ ಎಸ್ಪಿ ಕೋನ ವಂಶಿ ಕೃಷ್ಣ ಅವರ ಮಾರ್ಗದರ್ಶನದಂತೆ ಕಾರ್ಯಾಚರಣೆ ರೂಪಿಸಲಾಗಿತ್ತು. ರವಿ ಅವರು ಕೆಐಎಡಿಬಿ ಕಚೇರಿ ಬಳಿ ನರೇಂದ್ರ ಅವರಿಗೆ ಹಣ ನೀಡಿದಾಗ ಬಂಧಿಸಲಾಯಿತುಎಂದು ತಿಳಿಸಿದರು. ಬಂಧಿತರಿಂದ ಲಂಚದ ಹಣ ವಶಕ್ಕೆ ಪಡೆದಿದ್ದು, ತನಿಖೆ ಮುಂದುವರೆಸಲಾಗಿದೆ ಎಂದು ತಿಳಿಸಿದ್ದಾರೆ.

ಸ್ವಯಂಪ್ರೇರಿತ ದೂರು ದಾಖಲು

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದ ಹೊರಗಡೆ ಸಂಭವಿಸಿದ ಕಾಲ್ತುಳಿತ ದಲ್ಲಿ 11 ಮಂದಿ ಆರ್‌ಸಿಬಿ ಅಭಿಮಾನಿಗಳು ಮೃತಪಟ್ಟಿದ್ದರು. ಶುಕ್ರವಾರ ಎಂ.ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಶ್ಯಾಂಭಟ್, ಸದಸ್ಯ ಸುರೇಶ್, ಡಿವೈಎಸ್‌ಪಿಗಳಾದ ಸುಧೀರ್ ಹೆಗ್ಡೆ, ಮೋಹನ್ ನೇತೃತ್ವದ ನಿಯೋಗ ಭೇಟಿ ನೀಡಿತು. ಭೇಟಿ ಬಳಿಕ ಮಾಧ್ಯಮ ಪ್ರತಿನಿಧಿ ಗಳೊಂದಿಗೆ ಮಾತನಾಡಿದ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಶ್ಯಾಂ ಭಟ್, ಕಾಲ್ತುಳಿತದಿಂದ 11 ಜನ ಮೃತಪಟ್ಟಿದ್ದು, 70 ಜನ ಗಾಯಗೊಂಡಿದ್ದಾರೆ. ಬೌರಿಂಗ್ ಮತ್ತು ವೈದೇಹಿಯಲ್ಲಿ ತಲಾ ಇಬ್ಬರು ಚಿಕಿತ್ಸೆ ಪಡೆಯು ತ್ತಿದ್ದಾರೆ. ಆಂಬ್ಯುಲೆನ್ಸ್ ಇರಲಿಲ್ಲ, ಸರಿಯಾದ ಸಮಯಕ್ಕೆ ಗೇಟ್ ತೆಗೆದಿಲ್ಲ ಎಂಬ ಮಾಹಿತಿ ಸಿಕ್ಕಿದೆ. ಮಾನವ ಹಕ್ಕುಗಳ ಆಯೋಗದಿಂದ 2 ಪ್ರಕರಣ ದಾಖಲಿಸಿಕೊಂಡಿದ್ದೇವೆ. ಬೆಂಗಳೂರು ಪೊಲೀಸ್ ಕಮಿಷನರ್, ಆರೋಗ್ಯ ಇಲಾಖೆ ಕಾರ್ಯದರ್ಶಿ ಮತ್ತು ಕ್ರೀಡಾಂಗಣದವರ ಮೇಲೆ ಸುಮೋಟೋ ಕೇಸ್ ದಾಖಲು ಮಾಡಿದ್ದೇವೆ ಎಂದು ತಿಳಿಸಿದರು.

ಸ್ಟೇಡಿಯಂ ಸುತ್ತಲೂ ಚಪ್ಪಲಿಗಳ ರಾಶಿ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸಾವಿರಾರು ಆರ್‌ಸಿಬಿ ಅಭಿಮಾನಿಗಳ ಭೀಕರ ಕಾಲ್ತುಳಿತದಲ್ಲಿ ಜನರು ತೊಟ್ಟಿದ್ದ ಶೂಗಳು ಮತ್ತು ಚಪ್ಪಲಿಗಳು ಸ್ಟೇಡಿಯಂ ಸುತ್ತಲೂ ಬಿದ್ದಿರುವ ದೃಶ್ಯವು ಕಾಲ್ತುಳಿತದ ಭೀಕರತೆಯನ್ನು ಬಿಚ್ಚಿಡುವಂತಿತ್ತು. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ ಕಾಲ್ತುಳಿತ ದುರ್ಘಟನೆ ಸಂಭವಿಸಿದ ಬಳಿಕ ಅಲ್ಲಿಂದ ಹಂತ-ಹಂತವಾಗಿ ಜನರನ್ನು ಕಳುಹಿಸಲಾಯಿತು. ಆದರೆ, ಚಿನ್ನಸ್ವಾಮಿ ಸ್ಟೇಡಿಯಂನ ಪ್ರತಿ ಗೇಟ್ ಮುಂಭಾಗ ರಾಶಿ ರಾಶಿ ಚಪ್ಪಲಿ, ಶೂಗಳು ಬಿದ್ದಿದ್ದವು. ಗುರುವಾರ ಬೆಳಗ್ಗೆ ಬಿಬಿಎಂಪಿ ಸಿಬ್ಬಂದಿಗಳು ಸ್ಟೇಡಿಯಂ ಬಳಿ ಬಿದ್ದಿದ್ದ ಲೋಡ್‌ಗಟ್ಟಲೇ ಚಪ್ಪಲಿಗಳನ್ನು ಕಸದ ಗಾಡಿಯಲ್ಲಿ ತುಂಬಿಕೊಂಡು ಹೋಗಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಸಿಎಂ ರಾಜಕೀಯ ಕಾರ್ಯದರ್ಶಿ ತಲೆದಂಡ

ಸುದ್ದಿ



ತಪ್ಪು ಮಾಡಿದ್ದು ಸರಕಾರ, ಶಿಕ್ಷೆಗೆ ಗುರಿಯಾಗಿದ್ದು ಅಧಿಕಾರಿಗಳು: ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ

ಸಿಎಂ, ಡಿಸಿಎಂ ರಾಜೀನಾಮೆಗೆ ಎನ್‌ಡಿಎ ಆಗ್ರಹ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆ ಶಿವಕುಮಾರ್ ಹಾಗೂ ಗೃಹಸಚಿವ ಡಾ.ಜಿ.ಪರಮೇಶ್ವರ ವಿರುದ್ಧ ಬಿಜೆಪಿ ದೂರು ದಾಖಲಿಸಿದೆ. ಇದರೊಂದಿಗೆ ಕ್ರೀಡಾಂಗಣದ ಬಳಿಯ ಕಾಲ್ತುಳಿತಕ್ಕೆ ಸರಕಾರವೇ ನೇರ ಹೊಣೆ. ಕಾಂಗ್ರೆಸ್ ಹೈಕಮಾಂಡ್‌ಗೆ ಕನ್ನಡಿಗರ ಮೇಲೆ ಕಿಂಚಿತ್ತಾದರೂ ಗೌರವ ಇದ್ದರೆ ತಕ್ಷಣವೇ ಕೂಡಲೇ ಮುಖ್ಯಮಂತ್ರಿ, ಉಪಮುಖ್ಯಮಂತ್ರಿಯನ್ನು ಕಿತ್ತೆಸೆಯಬೇಕು ಎಂದು ಬಿಜೆಪಿ ಹಾಗೂ ಜೆಡಿಎಸ್ ಜಂಟಿಯಾಗಿ ಆಗ್ರಹಿಸಿದೆ.

ಬಿಜೆಪಿ ನಿಯೋಗ ಬೆಂಗಳೂರಿನ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಗೆ ತೆರಳಿ, ಸಿಎಂ, ಡಿಸಿಎಂ ಹಾಗೂ ಗೃಹ ಸಚಿವ ಮೂವರ ವಿರುದ್ಧ ದೂರು ನೀಡಿದೆ. ಚಿನ್ನಸ್ವಾಮಿ ಸ್ಟೇಡಿಯಂ ಬಳಿ ಕಾಲ್ತುಳಿತ ಪ್ರಕರಣದಲ್ಲಿ 11 ಮಂದಿ ಸಾವನ್ನಪ್ಪಿರುವ ಪ್ರಕರಣ ಸಂಬಂಧ ಸಿಎಂ, ಡಿಸಿಎಂ ಹಾಗೂ ಗೃಹಸಚಿವರ ವಿರುದ್ಧ ಎಫ್ಐಆರ್ ದಾಖಲಿಸಿ, ಕಾನೂನು ಕ್ರಮ ಕೈಗೊಳ್ಳುವಂತೆ ದೂರಿನಲ್ಲಿ ಮನವಿ ಮಾಡಿದೆ.

ಇದಕ್ಕೂ ಮುನ್ನ ಬೆಂಗಳೂರಿನಲ್ಲಿ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ದುರಂತಕ್ಕೆ ಮುಖ್ಯಮಂತ್ರಿ ಮತ್ತವರ ಕಚೇರಿ ನೇರ ಕಾರಣ. ಎರಡು ಮೂರು ಕಡೆ ವಿಜಯೋತ್ಸವ ಮಾಡಲು ಸಾಧ್ಯವಿಲ್ಲ, ಭದ್ರತೆ ಕೊಡುವುದು ಕಷ್ಟ ಆಗುತ್ತದೆ ಎಂದು ಪೊಲೀಸರು ಪರಿಪರಿಯಾಗಿ ಹೇಳಿದರೂ ಕೇಳದೇ ವಿಜಯೋತ್ಸವ ಆಗಲೇಬೇಕು ಎಂದು ಸಿಎಂ ಪಟ್ಟು ಹಿಡಿದರು. ಅಲ್ಲದೆ ಪೊಲೀಸರಿಗೆ ತಾಕೀತು ಮಾಡಿ ಧಮ್ಕಿಯನ್ನು ಹಾಕಿದ್ದರು ಎಂದು ಮಾಡಿದ್ದು, ಕೂಡಲೇ ಮೂವರನ್ನು ಕಿತ್ತೆಯಸಬೇಕು ಎಂದು ಕಾಂಗ್ರೆಸ್ ಹೈಕಮಾಂಡ್‌ಗೆ ಒತ್ತಾಯಿಸಿದರು.

ವಿಜಯೋತ್ಸವ ಆಚರಣೆಗೆ ಇದಕ್ಕೆ ಮೊದಲೇ ಆರ್‌ಸಿಬಿ ಪೊಲೀಸರ ಅನುಮತಿ ಕೇಳಿತ್ತು. ಆ ಮನವಿ ಪೊಲೀಸರು ತಿರಸ್ಕರಿಸಿದ್ದರು. ಹಾಗಿದ್ದರೂ ವಿಜಯೋತ್ಸವ ಆಗಲೇಬೇಕು ಎಂದು ಸಿಎಂ ತಾಕೀತು ಮಾಡಿದ್ದು ಯಾಕೆ? ಅಮಾಯಕರ ಸಾವಿಗೆ ಸಿಎಂ, ಡಿಸಿಎಂ ಹಾಗೂ ಸಿಎಂ ಅವರ ರಾಜಕೀಯ ಕಾರ್ಯದರ್ಶಿ ಗೋವಿಂದ ರಾಜು ಅವರೇ ಕಾರಣ. ಮಾತೆತ್ತಿದರೆ ನಾವು ಜನರ ಪರ ಎಂದು ರಾಗಾ ತೆಗೆಯುವ ರಾಹುಲ್ ಗಾಂಧಿ ಹಾಗೂ ಮಲ್ಲಿಕಾರ್ಜುನ ಖರ್ಗೆ ಅವರು ಇವರಿಂದ ರಾಜಿನಾಮೆ ಪಡೆಯಬೇಕು. ಮಾತೆತ್ತಿದರೆ ಸಿಎಂ ಗೋವಿಂದ.. ಗೋವಿಂದ.. ಎನ್ನುತ್ತಾರಲ್ಲ.. ಈ ದುರಂತಕ್ಕೆ ಮೂಲ ಪುರುಷನೇ ಆತ ಎಂದು ಆರೋಪಿಸಿದರು.

ತಪ್ಪು ಮಾಡಿದ್ದು ಸರಕಾರ, ಶಿಕ್ಷೆಗೆ ಗುರಿಯಾಗಿದ್ದು ಅಧಿಕಾರಿಗಳು. ದಕ್ಷ ಪೊಲೀಸ್ ಆಯುಕ್ತ ದಯಾನಂದ್ ಅವರೂ ಸೇರಿ ಐವರು ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡುವ ಮೂಲಕ ಜನತೆಗೆ ರಾಜ್ಯ ಕಾಂಗ್ರೆಸ್ ಸರಕಾರ ಅತ್ಯಂತ ಕೆಟ್ಟ ಸಂದೇಶ ನೀಡಿದೆ. ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಗೋವಿಂದ ರಾಜ್ ಎಂಬ ವ್ಯಕ್ತಿ ಇಷ್ಟೆಲ್ಲಾ ಸಾವು ನೋವುಗಳಿಗೆ ಕಾರಣ. ಅವರ ಬಗ್ಗೆ ಏನೇನೋ ಕಥೆಗಳನ್ನು ಹೇಳುತ್ತಾರೆ. ಕಾಂಗ್ರೆಸ್ ಹೈಕಮಾಂಡ್ ಎನ್ನುವುದು ಇದ್ದರೆ, ಅದಕ್ಕೆ ಸಂಕೋಚ ನಾಚಿಕೆ ಎನ್ನುವುದು ಇದ್ದರೆ ಮೊದಲು ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವರನ್ನು ತೆಗೆದು ಅವರ ಜಾಗಕ್ಕೆ ಸಭ್ಯರನ್ನು ತರಬೇಕು ಎಂದರು.

ಬೆಂಗಳೂರಿನಲ್ಲಿ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮಾತನಾಡಿದರು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಪ್ರತಿಪಕ್ಷ ನಾಯಕ ಆರ್.ಅಶೋಕ್ ಇದ್ದರು.

> **ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಅನುಮತಿ ಕೊಟ್ಟಿರಲಿಲ್ಲ. ಕಾನೂನುಬಾಹಿರವಾಗಿ ಕಾರ್ಯಕ್ರಮ ನಡೆದಿದೆ ಎಂದು ಎಫ್ಐಆರ್ ಮಾಡಿದ್ದಾರೆ. ಅಲ್ಲಿ ಅನುಮತಿ ಇಲ್ಲದಿದ್ದರೂ ಡಿಸಿಎಂ ಡಿ.ಕೆ.ಶಿವಕುಮಾರ್ ಸ್ಟೇಡಿಯಂಗೆ ಹೋಗಿ, ಅಲ್ಲಿ ಸಂಭ್ರಮಾಚರಣೆಯಲ್ಲಿ ಯಾಕೆ ಭಾಗವಹಿಸಿದ್ದರು? ಅಲ್ಲಿ ಕಪ್ ಹಿಡಿದು ಮುತ್ತಿಕ್ಕುವ ಕೆಲಸ ಯಾಕೆ ಮಾಡಿದರು. ಈ ವಿಚಾರ ಹೊರಬರಲಿ.**
>
> **- ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ**

ಪೊಲೀಸರ ಹರಕೆಯ ಕುರಿ ಮಾಡಿದ ಸರಕಾರ

ಕಾಲ್ತುಳಿತದ ಘಟನೆಯಲ್ಲಿ ಸರಕಾರವೇ ಅಪರಾಧಿ. ಇದನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಿ ತಪ್ಪಿತಸ್ಥರಿಗೆ ಶಿಕ್ಷೆಯಾಗುವವರೆಗೂ ನಾವು ಹೋರಾಟ ಮಾಡುತ್ತೇವೆ. ಈ ಘಟನೆಯಲ್ಲಿ ಪೊಲೀಸರನ್ನು ಹರಕೆಯ ಕುರಿ ಮಾಡಲಾಗಿದೆ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ ಆಕ್ರೋಶ ವ್ಯಕ್ತಪಡಿಸಿದರು. ಸಿಎಂ ಸಿದ್ದರಾಮಯ್ಯ ರಾಜ್ಯದ ಕಾನೂನನ್ನು ಕಗ್ಗತ್ತಲಿನಲ್ಲಿಟ್ಟಿದ್ದಾರೆ. ಆರ್‌ಸಿಬಿ ತಂಡ ಐಪಿಎಲ್ ಗೆದ್ದಿದ್ದರೆ, ಕೆಪಿಸಿಸಿ ತಂಡ ಫೋಟೊಗೆ ಪೋಸ್ ನೀಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಬ್ಯಾಟ್ಸ್‌ಮನ್ ಹಾಗೂ ಡಿ.ಕೆ. ಶಿವಕುಮಾರ್ ಅವರೇ ಬೌಲರ್ ಆಗಿದ್ದಾರೆ. ಸಿದ್ದರಾಮಯ್ಯನವರನ್ನು ಬೋಲ್ಡ್ ಮಾಡಬೇಕೆಂದು ಡಿ.ಕೆ.ಶಿವಕುಮಾರ್ ಪ್ರಯತ್ನ ಮಾಡುತ್ತಿದ್ದರೆ, 5ವರ್ಷ ಸೆಂಚುರಿ ಹೊಡೆಯಬೇಕೆಂದು ಸಿಎಂ ಸಿದ್ದರಾಮಯ್ಯ ಪ್ರಯತ್ನ ಮಾಡುತ್ತಿದ್ದಾರೆ. ಇವರಿಬ್ಬರ ನಡುವೆ ರಾಜ್ಯದ ಜನರು ಹಿಟ್ ವಿಕೆಟ್ ಆಗಿದ್ದಾರೆ. 11 ಪ್ರತಿಭಾವಂತ ಯುವಜನರು ಬಲಿಯಾಗಿದ್ದಾರೆ. ವೇದಿಕೆಯಲ್ಲಿ ಕಾಂಗ್ರೆಸ್ ನಾಯಕರ ಕೈಯಲ್ಲೇ ಟ್ರೋಫಿ ಇತ್ತು. ವರ್ಷಾನುಗಟ್ಟಲೆ ಶ್ರಮವಹಿಸಿ ಆಟವಾಡಿದ ಆಟಗಾರರನ್ನು ಮೂಲೆಗೆ ತಳ್ಳಿದ್ದರು. ಈ ಸಂಭ್ರಮಾಚರಣೆ ಆತುರದ ತೀರ್ಮಾನ ವೆಂದು ಕಾಂಗ್ರೆಸ್‌ನವರು ಹೇಳುತ್ತಿದ್ದಾರೆ. ಕಾಂಗ್ರೆಸ್‌ನ ಸಮಾವೇಶಕ್ಕೆ ಮಾಡಿದ್ದ ಸಿದ್ಧತೆ ಯ ಒಂದು ಪರ್ಸೆಂಟ್‌ನಷ್ಟು ಸಮಯ ಇಲ್ಲಿ ನೀಡಿದ್ದರೆ ಯುವಜನರ ಬದುಕು ಉಳಿಯುತ್ತಿತ್ತು ಎಂದರು.

ರಾಜೀನಾಮೆ ನೀಡಲಿ: ವಿಜಯೇಂದ್ರ

ಕಾಲ್ತುಳಿತದ ಸಾವಿನ ಸಂಬಂಧ ಸಿಎಂ, ಡಿಸಿಎಂ ಹಾಗೂ ಗೃಹ ಸಚಿವರು ರಾಜೀನಾಮೆ ಕೊಡಬೇಕು. ಸ್ವತಃ ಮುಖ್ಯಮಂತ್ರಿಗಳೇ ಆರೋಪಿ ನಂಬರ್ 1, ಉಪ ಮುಖ್ಯಮಂತ್ರಿ ನಂಬರ್ 2, ಗೃಹ ಸಚಿವ ಪರಮೇಶ್ವರ್ ಆರೋಪಿ ನಂಬರ್ 3 ಆಗಿದ್ದಾರೆ. ಪೊಲೀಸ್ ಅಧಿಕಾರಿಗಳನ್ನು ಹರಕೆಯ ಕುರಿ ಮಾಡುವ ಬದಲಾಗಿ ತಾವೇ ಜವಾಬ್ದಾರಿ, ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಒತ್ತಾಯಿಸಿದರು. 11 ಜನರ ಸಾವಿಗೆ ರಾಜ್ಯ ಸರಕಾರದಿಂದ ತಪ್ಪಾಗಿದೆ ಎಂದು ಒಪ್ಪಿಕೊಂಡಿದ್ದಾರೆ. ತಮ್ಮ ತಪ್ಪನ್ನು ಮುಚ್ಚಿಹಾಕಿಕೊಳ್ಳಲು ಪೊಲೀಸರನ್ನು ಹರಕೆಯ ಕುರಿಯಾಗಿ ರಾಜ್ಯ ಸರಕಾರ ಮಾಡಿದೆ. ಪೊಲೀಸ್ ಇಲಾಖೆ ಸಂಭ್ರಮಾಚರಣೆಗೆ ಅನುಮತಿ ಕೊಟ್ಟಿರಲಿಲ್ಲ. ಲಕ್ಷ ಲಕ್ಷ ಜನರು ಬರುವುದು ಗೊತ್ತಿದ್ದು ಹೀಗೆ ಹೇಳಿದ್ದಾರೆ. ಹಾಗಿದ್ದರೆ ರಾಜ್ಯ ಸರಕಾರಕ್ಕೆ ಯಾರು ಅನುಮತಿ ಕೊಟ್ಟರು? ವಿಧಾನಸೌಧದ ಬಳಿ ಲಕ್ಷ ಲಕ್ಷ ಜನ ಆರ್ಸಿಬಿ ಅಭಿಮಾನಿಗಳು ಬಂದಿದ್ದರು. ಅವರಿಗೆ ಯಾರ ಅನುಮತಿ ಇತ್ತು ಎಂದು ಪ್ರಶ್ನಿಸಿದರು.

ಹೆಡ್ ಕಾನ್ಸ್‌ಟೇಬಲ್ ಏಕಾಂಗಿ ಪ್ರತಿಭಟನೆ

ದಯಾನಂದ್ ಅಮಾನತು ರದ್ದಿಗೆ ಆಗ್ರಹ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತ ದುರಂತ ಹಿನ್ನೆಲೆಯಲ್ಲಿ ನಗರ ಪೊಲೀಸ್ ಆಯುಕ್ತರಾಗಿದ್ದ ದಯಾನಂದ ಸೇರಿದಂತೆ ಐವರು ಅಧಿಕಾರಿಗಳನ್ನು ಅಮಾನತುಗೊಳಿಸಿದೆ. ಏಕಾಏಕಿ ಮಾಡಿರುವ ದಯಾನಂದ್ ಅವರ ಅಮಾನತು ರದ್ದುಪಡಿಸಬೇಕೆಂದು ರಾಜ್ಯಭವನ ಮುಂದೆ ಹೆಡ್ ಕಾನ್ಸ್‌ಟೇಬಲ್ ಏಕಾಂಗಿ ಪ್ರತಿಭಟನೆ ನಡೆಸಿದರು.

ತೋಳಿಗೆ ಕಪ್ಪುಪಟ್ಟಿ ಧರಿಸಿ ಅಂಬೇಡ್ಕರ್ ಫೋಟೊ ಇಟ್ಟುಕೊಂಡು ರಾಜಭವನ ಮುಂದೆ ಪ್ರತಿಭಟನೆ ನಡೆಸಿದರು. ಅಮಾನತು ಮಾಡಿರುವ ದಯಾನಂದ್ ಅವರನ್ನು ಅಮಾನತುಗೊಳಿಸಿರುವ ಆದೇಶ ಕೂಡಲೇ ಹಿಂಪಡೆಯಬೇಕು ಹಾಗೂ ಪೊಲೀಸರಿಗೆ ರಕ್ಷಣೆ ನೀಡಬೇಕೆಂದು ನರಸಿಂಹರಾಜ್ ಅವರು ದೂರಿನಲ್ಲಿ ತಿಳಿಸಿದ್ದಾರೆ. ಈ ಬಗ್ಗೆ ಮಾಧ್ಯಮಗಳೊಂದಿಗೆ ಮಾತನಾಡಿದ ಹೆಡ್ ಕಾನ್ಸ್‌ಟೇಬಲ್, ಆರ್‌ಸಿಬಿ ವಿಜಯೋತ್ಸವ ವೇಳೆ ಕಾಲ್ತುಳಿತವಾಗಿ 11 ಮಂದಿ ಸಾವನ್ನಪ್ಪಿರುವ ಸಂಬಂಧ ಆಯುಕ್ತರಾಗಿದ್ದ ದಯಾನಂದ ಅವರನ್ನು ಸರಕಾರವು ಅಮಾನತು ಮಾಡಿರುವ ಆದೇಶ ಹಿಂಪಡೆದು ಪೊಲೀಸರಿಗೆ ರಕ್ಷಣೆ ನೀಡಬೇಕೆಂದು ಆಗ್ರಹಿಸಿದರು. ಪೊಲೀಸರು ಒಂದು ರೀತಿ ಬ್ರೋಕರ್‌ಗಳಾಗಿದ್ದಾರೆ. ಈ ಕಡೆ ಕಾಂಗ್ರೆಸ್‌ನವರು ಒದ್ದರೂ ಒದಿಸಿಕೊಳ್ಳಬೇಕು. ಬಿಜೆಪಿ ಒದ್ದರೂ ಒದಿಸಿಕೊಳ್ಳಬೇಕು. ಜೆಡಿಎಸ್‌ನವರು ಗುದ್ದಿದರೂ ಗುದ್ದಿಸಿಕೊಳ್ಳಬೇಕು. ಸಂಜೆ ಆದರೆ ನಮ್ಮವರು ರಾಜಕಾರಣಿಗಳ ಮನೆ ಮುಂದೆ ಹೋಗಿ ಕೈಕಟ್ಟಿ ನಿಲ್ಲುತ್ತಿದ್ದಾರೆ. ದಯಾನಂದ್ ಸಾಹೇಬರು ಒಳ್ಳೆ ಕೆಲಸ ಮಾಡಿದ್ದಾರೆ. ಅವರನ್ನು ಅಮಾನತು ಮಾಡಿದ್ದು ಸರಿಯಿಲ್ಲ. ಹೀಗಾಗಿ ಅಮಾನತು ರದ್ದು ಮಾಡಬೇಕು ಎಂದು ಒತ್ತಾಯಿ ಸಿದರು. ಈ ವೇಳೆ ವಿಧಾನಸೌಧ ಪೊಲೀ ಸರು ಕಾನ್ಸ್‌ಟೇಬಲ್ ಅವರನ್ನು ವಶಕ್ಕೆ ಪಡೆದರು.

ಸಹಕಾರ ಇಲಾಖೆ ನಿವೃತ್ತ ಕಾರ್ಯದರ್ಶಿ ಡಾ.ಸಿ.ಸೋಮಶೇಖರ್ ಬೇಸರ

ವಿವೇಚನಾರಹಿತ ತೀರ್ಮಾನ; ಅಭಿಮಾನಿಗಳು ಬಲಿ

ಬೆಂಗಳೂರು: ರಾಜ್ಯ ಸರಕಾರ, ಆರ್‌ಸಿಬಿ ಹಾಗೂ ಕ್ರಿಕೆಟ್ ಮಂಡಳಿಗಳು ತೆಗೆದುಕೊಂಡ ವಿವೇಚನಾ ರಹಿತ ನಿರ್ಧಾರಗಳಿಂದ ಮುಗ್ಧ ಅಭಿಮಾನಿಗಳು ಬಲಿಯಾಗಿದ್ದಾರೆ ಎಂದು ಸಹಕಾರ ಇಲಾಖೆ ನಿವೃತ್ತ ಕಾರ್ಯದರ್ಶಿ ಡಾ.ಸಿ.ಸೋಮಶೇಖರ್ ಬೇಸರ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು, ಜೂನ್ 4ರಂದು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕಾಲ್ತುಳಿತದಿಂದ ಸುಮಾರು 11 ಜನ ಕ್ರಿಕೆಟ್ ಅಭಿಮಾನಿಗಳು ಅಸುನೀಗಿದ್ದು ದುರಂತದ ವಿಷಯ. ಆರ್‌ಸಿಬಿ ಫೈನಲ್ ಗೆದ್ದ ಮರುದಿನವೇ ವಿಜಯೋತ್ಸವ ಆಚರಿಸುವ ಅಗತ್ಯತೆ ಇರಲಿಲ್ಲ. ಕೆಲವು ದಿನಗಳ ನಂತರ ಮುಂಜಾಗ್ರತೆಯ ಕ್ರಮ ಕೈಗೊಂಡು ವಿಜಯೋತ್ಸವ ಆಚರಿಸಬಹುದಿತ್ತು. ಒಂದು ವೇಳೆ ಅಂದೇ ವಿಜಯೋತ್ಸವ ಆಚರಿಸಲೇಬೇಕೆಂಬ ಸಂಕಲ್ಪ ಸರಕಾರಕ್ಕೆ ಇದ್ದಲ್ಲಿ, ಸಮಾರಂಭವನ್ನು ಚಿನ್ನಸ್ವಾಮಿ ಕ್ರೀಡಾಂಗಣ ಒಂದರಲ್ಲಿಯೇ ಎಲ್ಲಾ ಮುಂಜಾಗ್ರತಾ ಕ್ರಮ ಕೈಗೊಂಡು ಏರ್ಪಡಿಸಿದ್ದರೆ, ಈ ಅನಾಹುತ ತಪ್ಪಿಸಬಹುದಿತ್ತು. ಒಂದೇ ದಿನ ಕಡಿಮೆ ಸಮಯದ ಅಂತರದಲ್ಲಿ ಎರಡು ಕಡೆ ಸಮಾರಂಭ ಏರ್ಪಡಿಸಬೇಕೆಂಬ ನಿರ್ಧಾರವೇ ಅನಾಹುತಕ್ಕೆ ಕಾರಣ ಎಂದು ತಿಳಿಸಿದ್ದಾರೆ.

ಈ ಮಧ್ಯೆ ಸರಕಾರ ದುರಂತದ ಬಗ್ಗೆ ಮ್ಯಾಜಿಸ್ಟ್ರೇಟ್ ತನಿಖೆ, ಸಿಓಡಿ ತನಿಖೆ, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿಗಳಿಂದ ತನಿಖೆ ಹೀಗೆ ಒಂದೇ ಪ್ರಕರಣದ ಬಗ್ಗೆ ಏಕಕಾಲಕ್ಕೆ ಮೂರು ತನಿಖೆಗೆ ಆದೇಶಿಸಿರುವುದು ಸೋಜಿಗದ ವಿಷಯ. ಅಲ್ಲದೆ ಯಾವುದೇ ಕಾರಣ ಕೇಳಿ ನೋಟಿಸ್ ನೀಡದೆ, ಪ್ರಕ್ರಿಯೆಗೂ ಕಾಯದೆ ಪೊಲೀಸ್ ಆಯುಕ್ತರಂತಹ ಹಿರಿಯ ಪೊಲೀಸ್ ಅಧಿಕಾರಿಯನ್ನು ಒಳಗೊಂಡಂತೆ ಕೆಲ ಪೊಲೀಸ್ ಅಧಿಕಾರಿಗಳನ್ನು ಅಮಾನತ್ತಿನಲ್ಲಿ ಇಟ್ಟಿರುವುದು, ಪೊಲೀಸ್ ವೃಂದದ ನೈತಿಕ ಸ್ಥೈರ್ಯ ಕುಗ್ಗಿಸುವ ಕ್ರಮವಾಗಿದೆ. ಸರಕಾರವು ಈ ಇಡೀ ಘಟನೆಯನ್ನು ಲಘುವಾಗಿ ಪರಿಗಣಿಸದೆ, ಘಟನೆಗೆ ಕಾರಣರಾದ ರಾಜಕೀಯ ಅಧಿಕಾರಸ್ತರನ್ನು ಒಳಗೊಂಡಂತೆ ಎಲ್ಲರನ್ನು ತನಿಖೆಗೆ ಒಳಪಡಿಸಿ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು ಎಂದು ಸೋಮಶೇಖರ್ ಆಗ್ರಹಿಸಿದ್ದಾರೆ.

ವಿಧಾನಸೌಧದ ಆಚರಣೆ ಸೂಕ್ತವಲ್ಲ

ಆರ್‌ಸಿಬಿ ತಂಡ ನಮ್ಮ ರಾಜ್ಯವನ್ನು ಪ್ರತಿನಿಧಿಸುವ ಸಮಗ್ರ ತಂಡ ಎಂದು ಭಾವಿಸುವ ಅವಶ್ಯಕತೆ ಇಲ್ಲ. ಏಕೆಂದರೆ ಆರ್‌ಸಿಬಿ ತಂಡದಲ್ಲಿ ಕನ್ನಡಿಗ ಆಟಗಾರರ ಸಂಖ್ಯೆ ಅತ್ಯಂತ ಕಡಿಮೆ. ಆದ್ದರಿಂದ ವಿಧಾನಸೌಧದ ಮೆಟ್ಟಿಲುಗಳ ಮೇಲೆ ಆರ್‌ಸಿಬಿ ತಂಡದ ವಿಜಯೋತ್ಸವ ಆಚರಿಸಿದ್ದು ಅಷ್ಟು ಸೂಕ್ತವಲ್ಲ. ಬದಲಾಗಿ ರಾಷ್ಟ್ರದ ಸಿಂದೂರ ಹೋರಾಟದಲ್ಲಿ ಮಡಿದ ಯೋಧರ ಕುಟುಂಬದ ಸದಸ್ಯರಿಗೆ ಅಥವಾ ಬೂಕರ್ ಅಂತಹ ಅಂತಾರಾಷ್ಟ್ರೀಯ ಪ್ರಶಸ್ತಿ ಪಡೆದ ಸಾಹಿತಿಗಳಿಗೆ, ಪದ್ಮಭೂಷಣ, ಭಾರತರತ್ನ ಪಡೆದಂತಹ ಕನ್ನಡ ನಾಡಿನ ಹಿರಿಯ ಸಾಹಿತಿಗಳಿಗೆ, ವಿಜ್ಞಾನಿಗಳಿಗೆ, ಹಿರಿಯ ಸಾಧಕರಿಗೆ ವಿಧಾನಸೌಧದ ಮೆಟ್ಟಿಲುಗಳ ಮೇಲೆ ವಿಶೇಷ ಅಭಿನಂದನೆ ಸಲ್ಲಿಸಿದ್ದಲ್ಲಿ ಅದಕ್ಕೊಂದು ಮಹತ್ವವಿತ್ತು ಎಂದು ಸೋಮಶೇಖರ್ ತಿಳಿಸಿದ್ದಾರೆ.

> **ಅತಿ ಕಡಿಮೆ ಸಮಯದಲ್ಲಿ ಎರಡು ಕಡೆ ವಿಜಯೋತ್ಸವ ಆಚರಿಸಬೇಕೆಂಬ ಸರಕಾರದ ನಿರ್ಧಾರವೇ ಈ ಅನಾಹುತಕ್ಕೆ ಕಾರಣ. ಅವರ ಈ ತಪ್ಪು ನಿರ್ಧಾರಗಳಿಂದಾಗಿ 11 ಮುಗ್ಧ ಜೀವಗಳು ಬಲಿಯಾಗಿವೆ. ಸರಕಾರವು ಘಟನೆಗೆ ಕಾರಣರಾದ ರಾಜಕೀಯ ಅಧಿಕಾರಸ್ತರನ್ನು ಒಳಗೊಂಡಂತೆ ಸೂಕ್ತ ತನಿಖೆ ನಡೆಸಿ ನಿರ್ದಾಕ್ಷಿಣ್ಯ ಕ್ರಮ ಕೈಗೊಂಡರೆ ಮೃತರ ಆತ್ಮಕ್ಕೆ ಶಾಂತಿ ಸಿಗಲಿದೆ.**
>
> **- ಡಾ.ಸಿ.ಸೋಮಶೇಖರ್, ಸಹಕಾರ ಇಲಾಖೆ ನಿವೃತ್ತ ಕಾರ್ಯದರ್ಶಿ**

ತೆರೆಮರೆಯಲ್ಲಿ ಯಾರು ಏನೇನು ಮಾಡುತ್ತಿದ್ದಾರೆ ಎಂಬುದು ಗೊತ್ತಿದೆ: ಡಿಕೆಶಿ

ನನ್ನ ವಿರುದ್ಧ ಬೊಟ್ಟು ಮಾಡುತ್ತಿರುವುದೇಕೆ?

ಬೆಂಗಳೂರು: ಬೇರೆಯವರು ಯಾವಾಗ ಕಣ್ಣೀರು ಹಾಕಿದ್ದಾರೆ, ಎಷ್ಟು ಕುಟುಂಬಗಳ ಕಣ್ಣೀರು ಹಾಕಿಸಿದ್ದಾರೆ, ಎಷ್ಟು ಕುಟುಂಬಗಳ ಕಣ್ಣೀರು ಒರೆಸಿದ್ದಾರೆ ಎಂದು ಅಧಿವೇಶನದಲ್ಲಿ ಚರ್ಚೆ ಮಾಡೋಣ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಕೇಂದ್ರ ಸಚಿವ ಕುಮಾರಸ್ವಾಮಿಗೆ ತಿರುಗೇಟು ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನನಗೆ ಯಾವುದೇ ಇಮೇಜ್ ಅವಶ್ಯಕತೆ ಇಲ್ಲ. ಜನರು ಕೊಟ್ಟಿರುವ ಇಮೇಜ್ ನಮಗೆ ಬೇಕಾದಷ್ಟಿದೆ. ಆರ್‌ಸಿಬಿ ಗೆದ್ದ ಖುಷಿಯಲ್ಲಿ ಯುವ ಅಭಿಮಾನಿಗಳು ಸಂಭ್ರಮಾಚರಣೆ ಮಾಡಲು ಬಯಸಿದ್ದರು. ಅದಕ್ಕೆ ಬಿಜೆಪಿ, ಜೆಡಿಎಸ್ ಏನೆಲ್ಲಾ ಟ್ವೀಟ್ ಮಾಡಿದ್ದರು, ಆಮೇಲೆ ಹೇಗೆ ಉಲ್ಟಾ ಹೊಡೆದರು ಎಂಬುದನ್ನು ಬಿಚ್ಚಿಡಲಿ. ಅವರು ಹೆಣದ ಮೇಲೆ ರಾಜಕಾರಣ ಮಾಡುತ್ತಿದ್ದಾರೆ. ನಾವು ಅಂತ ಹೀನ ರಾಜಕಾರಣ ಮಾಡುವುದಿಲ್ಲ. ನಮಗೆ ಪ್ರಾಮಾಣಿಕತೆ ಇದೆ ಎಂದು ತಿರುಗೇಟು ನೀಡಿದರು.

ನಾನು ಭಾವುಕನಾಗಿದ್ದಕ್ಕೆ ಕಣ್ಣಲ್ಲಿ ನೀರು ಬಂದಿತು. ಅದನ್ನು ಟೀಕೆ ಮಾಡಿದ್ದಾರೆ. ಇವರು ಯಾವ, ಯಾವ ಸಂದರ್ಭದಲ್ಲಿ, ಎಲ್ಲೆಲ್ಲಿ ಕಣ್ಣೀರಾಕಿದ್ದಾರೆ? ಅವು ಏನಾದವು? ರಾಜ್ಯದ ಯಾವ ಯಾವ ಜಿಲ್ಲೆಯಲ್ಲಿ ಸುರಿಸಿದ ಕಣ್ಣೀರು ಏನಾಯ್ತು? ಎಷ್ಟು ಕುಟುಂಬಗಳು ಕಣ್ಣೀರು ಹಾಕಿದ್ದವು? ಎಷ್ಟು ಕುಟುಂಬಗಳ ಕಣ್ಣೀರು ಒರೆಸಿದ್ದಾರೆ? ಈ ಎಲ್ಲಾ ವಿಚಾರಗಳನ್ನು ಅಧಿವೇಶನದಲ್ಲಿ ಚರ್ಚೆ ಮಾಡಲಿ, ಅಲ್ಲಿ ಮಾತನಾಡಿದರೆ ದಾಖಲೆಗಳು ಶಾಶ್ವತವಾಗಿ ಉಳಿಯುತ್ತವೆ. ನನ್ನ ವಿರುದ್ಧ ಬೊಟ್ಟುಮಾಡಿ ತೋರಲು ಏನಿದೆ? ಎಂದು ಪ್ರಶ್ನಿಸಿದರು.

ಸೌಂದರ್ಯ ವಿದ್ಯಾಸಂಸ್ಥೆಯ ಎನ್‌ಎಸ್‌ಎಸ್ ವಿಭಾಗದಿಂದ ವಿಶ್ವ ಪರಿಸರ ದಿನಾಚರಣೆ ನಡೆಯಿತು. ಸಂಸ್ಥೆಯ ಸಿಇಒ ಕೀರ್ತನ್ ಕುಮಾರ್, ಟ್ರಸ್ಟಿ ವರುಣ್ ಕುಮಾರ್, ಪ್ರಾಚಾರ್ಯ ಬಿ.ಎ.ವಾಸು ಉಪಸ್ಥಿತರಿದ್ದರು.

ಸಿಸಿಬಿ ಡಿಸಿಪಿ ಅಕ್ಷಯ್ ಎಂ.ನೇತೃತ್ವದಲ್ಲಿ ಕಬ್ಬನ್ ಪಾರ್ಕ್ ಠಾಣೆಯಲ್ಲಿ ನಾಲ್ವರ ವಿಚಾರಣೆ

ಚಿನ್ನಸ್ವಾಮಿ ಕಾಲ್ತುಳಿತ ಪ್ರಕರಣ: ನಾಲ್ವರ ಬಂಧನ

ಬೆಂಗಳೂರು: ಆರ್‌ಸಿಬಿ ಐಪಿಲ್ ವಿಜಯೋತ್ಸವದ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತ ಸಂಬಂಧ ಆರ್‌ಸಿಬಿ ಮಾರ್ಕೆಟಿಂಗ್ ಮುಖ್ಯಸ್ಥ ನಿಖಿಲ್ ಸೋಸಲೆ ಸೇರಿ ನಾಲ್ವರು ಕಾರ್ಯಕ್ರಮ ಆಯೋಜಕರನ್ನು ಸಿಸಿಬಿ ಪೊಲೀಸರು ಹಾಗೂ ಕಬ್ಬನ್ ಪಾರ್ಕ್ ಠಾಣೆ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ಬಂಧಿಸಿದ್ದಾರೆ.

ಆರ್‌ಸಿಬಿ ಮಾರ್ಕೆಟಿಂಗ್ ಮುಖ್ಯಸ ನಿಖಿಲ್ ಸೋಸಲೆ ಜತೆ ಡಿಎನ್‌ಎ ಮ್ಯಾನೇಜ್ಮೆಂಟ್ ಸಿಬ್ಬಂದಿ ಸುನೀಲ್ ಮ್ಯಾಥ್ಯೂ, ಕಿರಣ್ ಮತ್ತು ಸುಮಂತ್‌ನನ್ನು ಬಂಧಿಸಲಾಗಿದೆ. ನಾಲ್ವರು ಮುಂಬೈಗೆ ತೆರಳುತ್ತಿದ್ದಾಗ ಖಚಿತವಾದ ಮಾಹಿತಿ ಆಧರಿಸಿ ದೇವನಹಳ್ಳಿಯಲ್ಲಿರುವ ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ಕಾರ್ಯಾಚರಣೆ ಕೈಗೊಂಡು ಬಂಧಿಸಿ ವಿಚಾರಣೆ ಕೈಗೊಳ್ಳಲಾಗಿದೆ. ಖುದ್ದು ಸಿಸಿಬಿ ಡಿಸಿಪಿ ಅಕ್ಷಯ್ ಎಂ.ನೇತೃತ್ವದಲ್ಲಿ ಕಬ್ಬನ್ ಪಾರ್ಕ್ ಠಾಣೆಯಲ್ಲಿ ನಾಲ್ವರ ವಿಚಾರಣೆ ನಡೆಸಲಾಗುತ್ತಿದೆ. ಇದೇ ವೇಳೆ ಹಲವು ಪ್ರಶ್ನೆಗಳನ್ನು ಪೊಲೀಸರು ಕೇಳಿದ್ದಾರೆ ಎಂಬುದು ತಿಳಿದುಬಂದಿದೆ.

ಪೊಲೀಸರು ಅನುಮತಿ ನಿರಾಕರಿಸಿದ್ದರೂ ಉಚಿತ ಪಾಸ್ ಸಂಬಂಧ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಹಾಕಿದ್ದು ಏಕೆ?, ನಿಮಗೆ ಬೇರೆ ಯಾರಾದರೂ ಆ ರೀತಿಯ ಪೋಸ್ಟ್ ಹಾಕಲು ಹೇಳಿದ್ದರೇ ಸ್ಟೇಡಿಯಂ ಕಾರ್ಯಕ್ರಮ ನಿಗದಿ ಮಾಡಿಕೊಂಡಿದ್ದು ಯಾವಾಗ?, ವಿಕ್ಟರಿ ಪರೇಡ್ ಬಗ್ಗೆ ಹೇಗೆ ನಿರ್ಧಾರ ಕೈಗೊಂಡಿರಿ?, ಟಿಕೆಟ್ ವಿಚಾರದಲ್ಲಿ ಗೊಂದಲ ಆಗಿದ್ದು ಏಕೆ?,ಕಾಲ್ತುಳಿತ ಪ್ರಕರಣದ ಬಗ್ಗೆ ನಿಮಗೆ ಗೊತ್ತಿರುವುದು ಏನು?, ಇಷ್ಟೇ ಅಲ್ಲದೆ, ಇನ್ನೂ ಅನೇಕ ಪ್ರಶ್ನೆಗಳನ್ನು ಬಂಧಿತರಿಗೆ ಕೇಳಲಾಗಿದ್ದು, ಮಾಹಿತಿ ಕಲೆ ಹಾಕಲಾಗಿದೆ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

ವಿಧಾನಸೌಧದಿಂದ ಚಿನ್ನಸ್ವಾಮಿ ಸ್ಟೇಡಿಯಂವರೆಗೂ ವಿಕ್ಟರಿ ಪರೇಡ್ ಎಂದು, ಪೊಲೀಸರು ಅನುಮತಿ ನಿರಾಕರಿಸಿದ ನಂತರವೂ ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಮಾಡಿ ನಂತರ ಡಿಲೀಟ್ ಮಾಡಿದ ಆರೋಪ ನಿಖಿಲ್ ಸೋಸಲೆ ಮೇಲಿದೆ. ಅಲ್ಲದೆ, ಸ್ಟೇಡಿಯಂಗೆ ಉಚಿತ ಪಾಸ್ ಸಂಬಂಧ ಸಾಮಾಜಿಕ ಮಾಧ್ಯಮ ಪೋಸ್ಟ್ ಹಾಕಿದ ಆರೋಪವಿದೆ. ಅನುಮತಿ ಪಡೆಯದಿದ್ದರೂ ಆರ್‌ಸಿಬಿ ವಿಜಯೋತ್ಸವಕ್ಕೆ ಮುಂದಾಗಿದ್ದ ಕೆಎಸ್‌ಸಿಎ ಕಾರ್ಯದರ್ಶಿ ಶಂಕರ್, ಖಜಾಂಜಿ ಜಯರಾಮ್ ಮನೆಗಳ ಮೇಲೆ ಸಿಸಿಬಿ ಪೊಲೀಸರು ದಾಳಿ ನಡೆಸಿದ್ದಾರೆ. ಅಷ್ಟೊತ್ತಿಗಾಗಲೇ ಬಂಧನ ಭೀತಿಯಿಂದ ಇಬ್ಬರು ನಾಪತ್ತೆಯಾಗಿದ್ದಾರೆ ಎಂದು ತಿಳಿದುಬಂದಿದೆ.

ನಾಲ್ವರಿಗೆ 14 ದಿನ ನ್ಯಾಯಾಂಗ ಬಂಧನ

ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತ ಪ್ರಕರಣ ಸಂಬಂಧ ಬಂಧಿಸಲಾಗಿರುವ ಆರ್‌ಸಿಬಿ ಮಾರ್ಕೆಟಿಂಗ್ ಮುಖಸ್ಥ ನಿಖಿಲ್ ಸೋಸಲೆ ಸೇರಿದಂತೆ ನಾಲ್ವರು ಕಾರ್ಯಕ್ರಮ ಆಯೋಜಕರನ್ನು ಪೊಲೀಸರು ಬೆಂಗಳೂರಿನ 41ನೇ ಎಸಿಜೆಎಂ ನ್ಯಾಯಾಲಯದ ಮುಂದೆ ಹಾಜರು ಪಡಿಸಿದರು. ನ್ಯಾಯಾಲಯ ನಾಲ್ವರು ಆರೋಪಿಗಳಿಗೆ ಜೂನ್ 19ರವರೆಗೆ ನ್ಯಾಯಾಂಗ ಬಂಧನ ವಿಧಿಸಿದೆ. ಆರ್‌ಸಿಬಿ ಮಾರ್ಕೆಟಿಂಗ್ ಮುಖಸ್ಥ ನಿಖಿಲ್ ಸೋಸಲೆ, ಸುಮಂತ್, ಡಿಎನ್‌ಎ ಮ್ಯಾನೇಜರ್ ಕಿರಣ್, ಸಿಬ್ಬಂದಿ ಸುನೀಲ್ ಮ್ಯಾಥ್ಯೂ ಅವರಿಗೆ ನ್ಯಾಯಾಂಗ ಬಂಧನ ವಿಧಿಸಿ ಬೆಂಗಳೂರಿನ 41ನೇ ಎಸಿಜೆಎಂ ನ್ಯಾಯಾಲಯ ಆದೇಶ ಹೊರಡಿಸಿದೆ.

ವೆಂಕಟ್‌ವರ್ಧನ್ ನಾಪತ್ತೆ

ಕಾಲ್ತುಳಿತ ಪ್ರಕರಣ ಸಂಬಂಧ ಎಫ್ಐಆರ್ ದಾಖಲಾಗುತ್ತಿದ್ದಂತೆ ಇವೆಂಟ್ ಮ್ಯಾನೇಜ್‌ಮೆಂಟ್ ಡಿಎನ್‌ಎ ಮಾಲೀಕ ನಾಪತ್ತೆಯಾಗಿದ್ದಾರೆ. ರಾಜ್ಯದ ಮಾಜಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಅವರ ಮೊಮ್ಮಗ ವೆಂಕಟ್ ವರ್ಧನ್ ಡಿಎನ್‌ಎ ಕಂಪನಿಯ ಮುಖ್ಯಸ್ಥರಾಗಿದ್ದಾರೆ. ಸಿಎಂ ಸೂಚನೆಯ ಮೇರೆಗೆ ಪೊಲೀಸರು ಬಂಧನಕ್ಕೆ ಮುಂದಾಗುತ್ತಿದ್ದಂತೆ ವೆಂಕಟ್ ವರ್ಧನ್ ನಾಪತ್ತೆಯಾಗಿದ್ದಾರೆ. ಕಾಲ್ತುಳಿತ ಪ್ರಕರಣಕ್ಕೆ ಸಂಬಂಧೆ ಆರ್‌ಸಿಬಿ, ಕರ್ನಾಟಕ ರಾಜ್ಯ ಕ್ರಿಕೆಟ್ ಮಂಡಳಿ ಮತ್ತು ಕಾರ್ಯಕ್ರಮ ನಿರ್ವಹಣೆ ಮಾಡಿದ್ದ ಡಿಎನ್‌ಎ ಮೇಲೆ ಎಫ್ಐಆರ್ ದಾಖಲಾಗಿದೆ.

ಕಬ್ಬನ್‌ಪಾರ್ಕ್ ಠಾಣೆಯಲ್ಲಿ ಮತ್ತೊಂದು ಪ್ರಕರಣ

ಎಂ. ಚಿನ್ನಸ್ವಾಮಿ ಕ್ರೀಡಾಂಗಣದ ಹೊರಗೆ ನಡೆದ ಕಾಲ್ತುತಿಳಿತದಲ್ಲಿ 11 ಮಂದಿ ಮೃತಪಟ್ಟಿದ್ದಾರೆ. 30ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಸಂಭ್ರಮಾಚರಣೆಗೆ ಸೂತಕ ಅಂಟಿಕೊಂಡಿದೆ. ಈ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯಲ್ಲಿ ಮತ್ತೆ ಎರಡು ಪ್ರಕರಣ ದಾಖಲಾಗಿವೆ. ಕಾಲ್ತುಳಿತದಲ್ಲಿ ಗಾಯಗೊಂಡ ರೋಲನ್ ಗೊಮೆಸ್ ಎಂಬುವರು ನೀಡಿದ ದೂರಿನ ಆಧಾರದ ಮೇಲೆ ಆರ್‌ಸಿಬಿ ಫ್ರಾಂಚೈಸಿ, ಕೆಎಸ್‌ಸಿಎ ಮತ್ತು ಡಿಎನ್‌ಎ ಕಂಪನಿ ವಿರುದ್ಧ ಬಿಎನ್‌ಎಸ್ ಕಾಯಿದೆ 2023 (ಯು/ಎಸ್-125(ಎ) ಅಡಿಯಲ್ಲಿ ಪ್ರಕರಣ ದಾಖಲಾಗಿದೆ. ಜಾಲತಾಣದಲ್ಲಿ ಆರ್‌ಸಿಬಿ ಪೋಸ್ಟ್ ನೋಡಿ ನನ್ನ ಗೆಳೆಯರ ಜತೆ ಸಂಭ್ರಮಾಚರಣೆ ವೀಕ್ಷಿಸಲು ಬಂದಿದ್ದೆ. ತೆರದ ಬಸ್ ಮೂಲಕ ಮೆರವಣಿಗೆ ಇದೆ ಎಂದು ತಿಳಿಸಲಾಗಿತ್ತು. ಗೇಟ್ ನಂಬರ್ 17ರಲ್ಲಿ ನಾನು ಹೋಗುವಾಗ ನೂಕುನುಗ್ಗಲು ಆಯಿತು. ಈ ವೇಳೆ ನನ್ನ ತೋಳಿಗೆ ಪೆಟ್ಟಾಗಿದೆ ಎಂದು ಗಾಯಾಳು ರೋಲನ್ ಗೊಮೆಸ್ ದೂರು ನೀಡಿದ್ದಾರೆ.

ಚಿಕ್ಕಬಳ್ಳಾಪುರ ಹಾಗೂ ಪ್ರವಾಸೋದ್ಯಮಕ್ಕೆ ಸಂಬಂಧಿಸಿದಂತೆ ಹಲವು ತೀರ್ಮಾನ ಸಾಧ್ಯತೆ

19ಕ್ಕೆ ನಂದಿಬೆಟ್ಟದಲ್ಲಿ ಸಚಿವ ಸಂಪುಟ ಸಭೆ

ಬೆಂಗಳೂರು: ಕೆಲ ದಿನಗಳ ಹಿಂದಷ್ಟೇ ಮಲೆಮಹದೇಶ್ವರ ಬೆಟ್ಟದಲ್ಲಿ ಸಚಿವ ಸಂಪುಟ ಸಭೆ ನಡೆಸಿದ್ದ ರಾಜ್ಯ ಸರಕಾರ ಇದೀಗ ನಂದಿಬೆಟ್ಟದಲ್ಲಿ ವಿಶೇಷ ಸಚಿವ ಸಂಪುಟ ಸಭೆ ನಡೆಸಲು ತೀರ್ಮಾನಿಸಿದ್ದು, ಜೂನ್ 19ಕ್ಕೆ ನಡೆಯಲಿದೆ.

ನಂದಿಬೆಟ್ಟದಲ್ಲಿ ವಿಶೇಷ ಸಚಿವ ಸಂಪುಟ ಸಭೆ ನಡೆಸುವ ಸಂಬಂಧ ರಾಜ್ಯ ಸರಕಾರ ಅಧಿಕೃತ ಆದೇಶವನ್ನು ಹೊರಡಿಸಿದ್ದು, ಜೂನ್ 19ರಂದು ಗುರುವಾರ ಮಧ್ಯಾಹ್ನ 12 ಗಂಟೆಗೆ ನಂದಿ ಬೆಟ್ಟದಲ್ಲಿ ಸಚಿವ ಸಂಪುಟ ಸಭೆ ಕರೆಯಲಾಗಿದೆ. ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿ ಬೆಟ್ಟದ ಮಯೂರ ಸಭಾಂಗಣದಲ್ಲಿ 2025ನೇ ಸಾಲಿನ 13 ನೇ ಸಚಿವ ಸಂಪುಟ ಸಭೆ ನಡೆಯಲಿದೆ. ಈ ಹಿಂದೆ ಮಲೆ ಮಹದೇಶ್ವರ ಬೆಟ್ಟದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ 3,647 ಕೋಟಿ ವೆಚ್ಚದ ಯೋಜನೆಗಳಿಗೆ ಅನುಮೋದನೆ ಕೊಡಲಾಗಿತ್ತು. ಚಾಮರಾಜನಗರ ಜಿಲ್ಲೆಯ ಮಲೆ ಮಹದೇಶ್ವರ ಬೆಟ್ಟದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ 78 ವಿಷಯಗಳ ಬಗ್ಗೆ ಚರ್ಚೆ ನಡೆಸಲಾಗಿತ್ತು.

ಪ್ರಾಂತ್ಯವಾರು ಅಭಿವೃದ್ಧಿಗೆ ಅವಕಾಶ ನೀಡಬೇಕೆಂಬ ನಿಟ್ಟಿನಲ್ಲಿ ರಾಜ್ಯ ಸರಕಾರ ವಿಶೇಷ ಸಚಿವ ಸಂಪುಟ ಸಭೆಗಳನ್ನು ಬೆಂಗಳೂರಿನ ಆಚೆ ನಡೆಸುತ್ತಿದೆ. ಬೆಂಗಳೂರಿನ ಆಚೆ ಸಚಿವ ಸಂಪುಟ ಸಭೆಗಳು ನಡೆದಾಗ, ಆ ಭಾಗದ ಯೋಜನೆಗಳಿಗೆ ಹೆಚ್ಚು ಅವಕಾಶ ನೀಡಲಾಗುತ್ತದೆ. ಇದೀಗ ಚಿಕ್ಕಬಳ್ಳಾಪುರ ಭಾಗದ ಹಾಗೂ ನಂದಿಬೆಟ್ಟ ಪ್ರವಾಸೋದ್ಯಮ ಅಭಿವೃದ್ಧಿಗೆ ಹಲವು ಯೋಜನೆ ಹಾಗೂ ಅನುದಾನವನ್ನು ಹಂಚಿಕೆ ಮಾಡುವ ಸಾಧ್ಯತೆಯಿದೆ ಎನ್ನಲಾಗಿದೆ.

ನಂದಿ ಗಿರಿಧಾಮ ಕರ್ನಾಟಕದಲ್ಲಿ ಪ್ರವಾಸ ಯೋಗ್ಯವಾದ ಸ್ಥಳವಾಗಿದೆ. ಬೆಂಗಳೂರು ನಗರಕ್ಕೆ ಹತ್ತಿರದಲ್ಲಿರುವ ಈ ಗಿರಿಧಾಮಕ್ಕೆ ಸಾಕಷ್ಟು ಪ್ರವಾಸಿಗರು ತೆರಳುತ್ತಾರೆ. ನಂದಿ



ಬೆಟ್ಟದಲ್ಲಿ ಪ್ರವಾಸಿಗರನ್ನು ಸೆಳೆಯುವ ನಿಟ್ಟಿನಲ್ಲಿ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಮಾಡಲಾಗುತ್ತಿದೆ. ಪ್ರವಾಸಿ ತಾಣವಾಗಿ ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ 1.5 ಕೋಟಿ ವೆಚ್ಚದಲ್ಲಿ ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಲಾಗಿತ್ತು. ಪ್ರವಾಸೋದ್ಯಮ ಕ್ಷೇತ್ರವಾಗಿ ಅಭಿವೃದ್ಧಿಪಡಿಸಲು ಇನ್ನು ಹಲವು ಅವಕಾಶಗಳಿರುವುದರಿಂದ ಅವುಗಳಿಗೆ ಈ ಬಾರಿಯ ವಿಶೇಷ ಸಚಿವ ಸಂಪುಟದಲ್ಲಿ ಅನುಮೋದನೆ ಸಿಗುವ ಸಾಧ್ಯತೆಯಿದೆ ಎನ್ನುವ ವಿಶ್ವಾಸದಲ್ಲಿ ಸ್ಥಳೀಯರಿದ್ದಾರೆ.



ನಂದಿಬೆಟ್ಟದಲ್ಲಿ ರೂಪ್ ವೇ

ನಂದಿ ಬೆಟ್ಟದಲ್ಲಿ ರೂಪ್ ವೇ ನಿರ್ಮಾಣ ಮಾಡುವ ನಿಟ್ಟಿನಲ್ಲಿಯೂ ರಾಜ್ಯ ಸರಕಾರ ಮುಂದಾಗಿದೆ. ಈ ಯೋಜನೆಯನ್ನು ಆರಂಭಿಸುವ ನಿಟ್ಟಿನಲ್ಲಿ ಕೇಂದ್ರ ಸರಕಾರದ ಅನುಮೋದನೆಗಾಗಿ ಕಾಯುತ್ತಿದೆ. ರಾಜ್ಯ ಪ್ರವಾಸೋದ್ಯಮ ಇಲಾಖೆಯಿಂದ ಅತಿ ಶೀಘ್ರದಲ್ಲೇ ಶಿಲಾನ್ಯಾಸ ಮಾಡು ಸಾಧ್ಯತೆಯಿದೆ. ಪರಿಸರ ಸೂಕ್ಷ್ಮ ನಂದಿ ಬೆಟ್ಟದಲ್ಲಿ ರೋಪ್ ವೇ ನಿರ್ಮಾಣಕ್ಕೆ ಪರಿಸರವಾದಿಗಳು ವಿರೋಧ ವ್ಯಕ್ತಪಡಿಸಿದ್ದಾರೆ. ಆದರೆ ರಾಜ್ಯ ಅರಣ್ಯ ಇಲಾಖೆ ಕೆಲವೊಂದು ಷರತ್ತುಗಳೊಂದಿಗೆ ಅನುಮತಿ ನೀಡಿದೆ. ಆದರೆ ರೋಪ್ ವೇ ಯೋಜನೆಗೆ ವೇಗ ನೀಡುವ ನಿಟ್ಟಿನಲ್ಲಿ ತೀರ್ಮಾನಗಳಾಗುವ ಸಾಧ್ಯತೆಯಿದೆ ಎನ್ನಲಾಗಿದೆ.

ತಾಂತ್ರಿಕ ದೋಷದಿಂದ ಹೊತ್ತಿ ಉರಿದ ಬಸ್

ಮೈಸೂರು: ತಾಂತ್ರಿಕ ದೋಷದಿಂದ ಚಲಿಸುತ್ತಿದ್ದ ಸರಕಾರಿ ಬಸ್ ಹೊತ್ತಿ ಉರಿದ ಘಟನೆ ಬನ್ನೂರು ಬಳಿ ನಡೆದಿದೆ. ಮೈಸೂರು ನಗರ ಸಾರಿಗೆ ಬಸ್ ಇದಾಗಿದ್ದು, ಬೆಂಕಿ ಕಾಣಿಸಿಕೊಂಡ ತಕ್ಷಣ ಚಾಲಕ ಬಸ್ ಅನ್ನು ರಸ್ತೆ ಬದಿ ನಿಲ್ಲಿಸಿದ್ದರಿಂದ ಪ್ರಯಾಣಿಕರು ಕೆಳಗಿಳಿದು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಬಸ್ ಮುಂಭಾಗ ಸುಟ್ಟು ಕರಕಲಾಗಿದೆ. ಬೆಂಕಿಯನ್ನು ಅಗ್ನಿಶಾಮಕ ದಳ ನಂದಿಸಿದೆ. ಸ್ಥಳಕ್ಕೆ ಬನ್ನೂರು ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ
ವಿಶ್ವೇಶ್ವರಯ್ಯ ನಾಲಾ ವಿಭಾಗ, ಮಂಡ್ಯ
ದೂ : 08232–225046,
ಇ–ಮೇಲ್ : vcdnmndya@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ :02/2025–26 ದಿ:26.05.2025
ದ್ವಿ–ಲಕೋಟೆ ಪದ್ಧತಿ

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಮೈಸೂರು/ಬೆಂಗಳೂರು ಇವರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ 3ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ ಕಾಮಗಾರಿಗೆ ಐಟಂವಾರು ದರದ ಟೆಂಡರನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಒಟ್ಟು ಕಾಮಗಾರಿಗಳ ಸಂಖ್ಯೆ–04, ಟೆಂಡರ್‌ಗಿಟ್ಟ ಕನಿಷ್ಟ ಮೊತ್ತ ರೂ. 40.05 ಲಕ್ಷಗಳಿಂದ ಗರಿಷ್ಠ ಮೊತ್ತ ರೂ. 79.79 ಲಕ್ಷಗಳು, ಕೆಲಸ ಪೂರ್ಣಗೊಳಿಸಲು ನಿಗಧಿ ಪಡಿಸಿರುವ ಅವಧಿ 180 ದಿನಗಳು (ಮಳೆಗಾಲ ಸೇರಿ) ಇ.ಎಂ.ಡಿ ಶುಲ್ಕವನ್ನು ಟೆಂಡರಿಗಿಟ್ಟ ಮೊತ್ತಕ್ಕೆ ಶೇ 2.0% ರಷ್ಟು ಇ–ಪೇಮೆಂಟ್ ಮೂಲಕ ಸಂದಾಯ ಮಾಡುವುದು, Date of access in e-portal : As per e-portal, ಆನ್ ಲೈನ್ ಮೂಲಕ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ.ಎಂ.ಡಿ ಯೊಂದಿಗೆ ಸಲ್ಲಿಸುವ ಕೊನೆಯ ದಿನಾಂಕ: As per e-portal, ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: As per e-portal, ಆರ್ಥಿಕ ಬಿಡ್ ತೆರೆಯುವ ದಿನಾಂಕ : As per e-portal. ಹೆಚ್ಚಿನ ವಿವರಗಳಿಗೆ kppp.karnataka.gov.in ನಲ್ಲಿ ಹಾಗೂ ಈ ಕಛೇರಿಯ ದೂರವಾಣಿ ಸಂಖ್ಯೆ 08232 225046 ನಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಕಾವೇರಿ ನೀರಾವರಿ ನಿಗಮ(ನಿ), ವಿ.ಸಿ.ವಿಭಾಗ, ಮಂಡ್ಯ

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/161/2025–26

ಮೈಸೂರು ಮಹಾನಗರ ಪಾಲಿಕೆ, ಮೈಸೂರು
ಕಾರ್ಯಪಾಲಕ ಅಭಿಯಂತರರು, ಸಿವಿಲ್ ವಿಭಾಗ, ಸಯ್ಯಾಜಿರಾವ್ ರಸ್ತೆ, ಮೈಸೂರು. ಇ–ಮೇಲ್:eewmccmys@gmail.com
ಸಂಖ್ಯೆ:ಮೈನಪಾ/ಕಾ.ಇಂ(ಪ)/ಸಾ.ಟೆಂ.ಪ್ರ–05/2025–26 ದಿನಾಂಕ:02.06.2025

ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಮೈಸೂರು ಮಹಾನಗರ ಪಾಲಿಕೆಯ ಅನುದಾನದಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ.ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ	ಒಟ್ಟು ಕಾಮಗಾರಿಗಳು	ಒಟ್ಟು ಮೊತ್ತ (ರೂ.ಲಕ್ಷಗಳಲ್ಲಿ)	ಇ–ಪೋರ್ಟಲ್‌ನಲ್ಲಿ ಟೆಂಡರ್ ಚಾಲಿಗೆ ಬರುವ ದಿನಾಂಕ:	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
1.	ಟೆಂ.ಪ್ರ.ಸಂ:ಮೈನಪಾ/ಕಾ.ಅ(ಪ)/ಟಿ.ಎನ್–12/2025–26 ದಿನಾಂಕ:02.06.2025	07	271.80	02.06.2025 ಬೆಳಿಗ್ಗೆ 11ರ ನಂತರ	16.06.2025 ಸಂಜೆ 5.25 ಗಂಟೆಗೆ	18.06.2025 ಸಂಜೆ 5.26ರ ನಂತರ

ಅರ್ಹ ಗುತ್ತಿಗೆದಾರರು (https://kppp.karnataka.gov.in) ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರವನ್ನು ಕಚೇರಿ ಸಮಯದಲ್ಲಿ ಮೈಸೂರು ಮಹಾನಗರ ಪಾಲಿಕೆಯ ಸಿವಿಲ್ ಕಾ.ಅ (ಪಶ್ಚಿಮ) ರವರ ಕಚೇರಿಯನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಬಹುದು.
ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ / ಬದಲಾವಣೆ / ತಿದ್ದುಪಡಿಗಳಿದ್ದಲ್ಲಿ (https://kppp.karnataka.gov.in) ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು(ಪಶ್ಚಿಮ)
ಮೈಸೂರು ಮಹಾನಗರ ಪಾಲಿಕೆ, ಮೈಸೂರು
DIPR/MYS/KAVITA/423/25-26

ಪುರಸಭಾ ಕಾರ್ಯಾಲಯ ಆನೇಕಲ್
ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ – 562106. ಫೋನ್ : 080–27859225, ಫ್ಯಾಕ್ಸ್ : 080–27830092, Email :- itstaff_ulb_anekal@yahoo.com
ಸಂಖ್ಯೆ : ಪು.ಕಾ.ಆ/ಆ.ಶಾ/ಟೆಂಡರ್/03/2025–26 ದಿನಾಂಕ: 06.06.2025

ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ)

ಆನೇಕಲ್ ಪುರಸಭೆಯ 2023–24ನೇ ಸಾಲಿನ 15ನೇ ಹಣಕಾಸು ಯೋಜನೆ ಮತ್ತು ಪುರಸಭಾ ನಿಧಿಯಡಿಯಲ್ಲಿ ಈ ಕೆಳಕಂಡ ಕಾಮಗಾರಿಗಳಿಗೆ ಅರ್ಹ ಏಜೆನ್ಸಿದಾರರು/ಗುತ್ತಿಗೆದಾರರು/ಬಿಡ್‌ದಾರರಿಂದ ಟೆಂಡರ್ ಆಹ್ವಾನಿಸಲಾಗಿದ್ದು, ಸ್ಟಾಂಡರ್ಡ್ ಡಾಕ್ಯುಮೆಂಟ್‌ನ ಕೆ.ಪಿ.ಪಿ.ಪಿ ಪೋರ್ಟಲ್ http://kppp.karnataka.gov.in ಮುಖಾಂತರ ಈ ಕೆಳಗಡೆ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ಸಮಯದಲ್ಲಿ ಆರೋಗ್ಯ ಶಾಖೆಯ ಅಧಿಕಾರಿಗಳಿಂದ ಮಾಹಿತಿಯನ್ನು ಪಡೆದುಕೊಳ್ಳಬಹುದು. ಟೆಂಡರ್ ಡಾಕ್ಯುಮೆಂಟ್ ಮತ್ತು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ನಿಗಧಿಪಡಿಸಿರುವ ಮಾನದಂಡಗಳ ಆಧಾರದ ಮೇಲೆ ಟೆಂಡರ್‌ಗಳ ಮೌಲ್ಯಮಾಪನ ಮಾಡಲಾಗುವುದು ಮತ್ತು ಯಶಸ್ವಿ ಬಿಡ್ಡುದಾರರನ್ನು ಆಯ್ಕೆ ಮಾಡಲಾಗುವುದು.

ಕ್ರ ಸಂ	ಕಾಮಗಾರಿ ವಿವರ	ಇಂಡೆಂಟ್ ನಂ	ಅಂದಾಜು ಮೊತ್ತ (ಲಕ್ಷಗಳಲ್ಲಿ)	ಇ.ಎಂ.ಡಿ (ರೂ.ಗಳಲ್ಲಿ) (2.5%)
1	ಆನೇಕಲ್ ಪುರಸಭಾ ವ್ಯಾಪ್ತಿಯ ದೊಡ್ಡಕೆರೆ ಬಳಿ ಇರುವ ಎಸ್.ಟಿ.ಪಿ ಘಟಕದ ಯಂತ್ರೋಪಕರಣಗಳ ದುರಸ್ಥಿ ಕಾಮಗಾರಿ.	DMA/2025-26/OW/WORK IN DENT40594	44.80	75857/–
2	ಆನೇಕಲ್ ಪುರಸಭೆಯ ಘನತ್ಯಾಜ್ಯ ನಿರ್ವಹಣೆಗಾಗಿ ವಾಹನ ಚಾಲಕರನ್ನು ಮತ್ತು ಸಹಾಯಕರನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯುವ ಬಗ್ಗೆ.	DMA/2024-25/Se3983	42.97	85940/–
3	ಆನೇಕಲ್ ಪುರಸಭೆಯ ಘನತ್ಯಾಜ್ಯ ನಿರ್ವಹಣೆಗಾಗಿ ವಾಹನಚಾಲಕರನ್ನು, ಲೋಡರ್ಸ್ ಮತ್ತು ಸಹಾಯಕರನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯುವ ಬಗ್ಗೆ.	DMA/2025-26/Se5311	53.44	106885/–
4	ಆನೇಕಲ್ ಪುರಸಭೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ, ನೇರಪಾವತಿ ಪೌರಕಾರ್ಮಿಕರು, ಹಾಗೂ ಆರೋಗ್ಯ ಶಾಖೆಯಲ್ಲಿ ಕಾರ್ಯನಿರ್ವಹಿಸುವ ಹೊರಗುತ್ತಿಗೆ ಕಾರ್ಮಿಕರಿಗೆ ಪ್ರತಿ ದಿನ ಬೆಳಗಿನ ಉಪಹಾರ ಪೂರೈಸುವುದು.	DMA/2025-26/Se5331	10.35	25870/–

ವೇಳಾಪಟ್ಟಿ : (1) ಕ್ರಮ ಸಂಖ್ಯೆ 01 ರಿಂದ 03 ರವರೆಗೆ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 18.06.2025 ರಂದು ಸಂಜೆ 4.30 ಘಂಟೆಯವರೆಗೆ. (2) ಕ್ರಮ ಸಂಖ್ಯೆ 01 ರಿಂದ 03ರ ಟೆಂಡರ್‌ಗಳ ಸ್ವೀಕೃತವಾದ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 19.06.2025 ರಂದು ಸಂಜೆ 5.00 ಘಂಟೆಗೆ. (3) ಕ್ರಮ ಸಂಖ್ಯೆ 03 ರ ಟೆಂಡರ್ ಸ್ವೀಕೃತವಾದ ಆರ್ಥಿಕ ಬಿಡ್ + ತೆರೆಯುವ ದಿನಾಂಕ: 25.06.2025 ರಂದು ಬೆಳಿಗ್ಗೆ 11.00 ಘಂಟೆಗೆ. (4) ಕ್ರಮ ಸಂಖ್ಯೆ 04ರ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 26.06.2025 ರಂದು ಸಂಜೆ 4.30 ಘಂಟೆಯವರೆಗೆ. (5) ಕ್ರಮ ಸಂಖ್ಯೆ 04ರ ಟೆಂಡರ್ ಸ್ವೀಕೃತವಾದ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 27.06.2025 ರಂದು ಸಂಜೆ 5.00 ಘಂಟೆಗೆ. (6) ಹೆಚ್ಚಿನ ಮಾಹಿತಿಗಾಗಿ ಕೆಪಿಪಿಪಿ ಪೋರ್ಟಲ್‌ನಲ್ಲಿ ನೋಡಬಹುದು.

ಸಹಿ/– ಅಧ್ಯಕ್ಷರು ಪುರಸಭೆ ಆನೇಕಲ್ | ವಾಸಾಸಂಇ/ವಾ.ಪ್ರ/1104/2025–26 | ಸಹಿ/– ಉಪಾಧ್ಯಕ್ಷರು ಪುರಸಭೆ ಆನೇಕಲ್ | ಸಹಿ/– ಮುಖ್ಯಾಧಿಕಾರಿ ಪುರಸಭೆ ಆನೇಕಲ್

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕೋಲಾರ ಜಿಲ್ಲೆ, ಕೋಲಾರ
ಜಿಲ್ಲಾ ನಗರಾಭಿವೃದ್ಧಿ ಕೋಶ, ಕೋಲಾರ
E-mail: ka.kolar.dudc@gmail.com, phone & Fax no: 08152-243555
ಸಂಖ್ಯೆ:ಜಿನಕೋ/ನಗರೋತ್ಥಾನ–04/ಸಿಆರ್/155/2024–25 ದಿನಾಂಕ:03.06.2025

ಟೆಂಡರ್ ಪ್ರಕಟಣೆ (ಕರ್ನಾಟಕ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕೋಲಾರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ವಿವಿಧ ಕಾಮಗಾರಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕತೆ ಅಧ್ಯಾದ್ಯೇಶ 2000ರಂತೆ ಹಾಗೂ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಸರ್ಕಾರದ ಆದೇಶ ಸಂಖ್ಯೆ:ಎಫ್.ಡಿ/06/ಪಿಸಿಎಲ್/2006, ಬೆಂಗಳೂರು ರಂತೆ ಕರ್ನಾಟಕ ಪ್ರಕ್ಯೂರ್‌ಮೆಂಟ್ ಪೋರ್ಟಲ್ ನಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಹಾಗೂ ಟೆಂಡರ್ ಸಲ್ಲಿಕೆಗಾಗಿ ಅಂತರ್ಜಾಲ http//kppp.karnataka.gov.in ಮೂಲಕ ಟೆಂಡರ್ ಸಲ್ಲಿಸುವುದು. ಈ ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ ಹಾಗೂ ಟೆಂಡರ್ ತಿದ್ದುಪಡಿಗಳನ್ನು ಕರ್ನಾಟಕ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರವೇ ಪ್ರಚುರಪಡಿಸಲಾಗುತ್ತದೆ.

ಕ್ರ ಸಂ	ಇಂಡೆಂಟ್ ನಂಬರ್	ಟೆಂಡರ್ ಇಟ್ಟ ಮೊತ್ತ (ರೂ.ಲಕ್ಷಗಳಲ್ಲಿ) ಜಿ.ಎಸ್.ಟಿ ಹೊರತುಪಡಿಸಿ
1	DMA/2025-26/BD/WORK_INDENT41681	21.73
2	DMA/2025-26/OW/WORK_INDENT41687	20.29
3	DMA/2025-26/OW/WORK_INDENT41698	81.48
4	DMA/2025-26/OW/WORK_INDENT41706	210.00
5	DMA/2024-25/OW/WORK_INDENT28953/CALL-6	13.62
6	DMA/2024-25/SE3614/CALL-2	37.10
7	DMA/2024-25/IND3573/CALL-2	11.99
8	DMA/2024-25/IND3364/CALL-2	9.99
9	DMA/2024-25/IND3361/CALL-2	10.15
10	DMA/2024-25/IND4139/CALL-2	25.33

ಕರ್ನಾಟಕ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಹಾಗೂ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಇತರೆ ಮಾಹಿತಿ ವೆಬ್‌ಸೈಟ್ ಮೂಲಕ ಪಡೆದುಕೊಳ್ಳುವುದು.

ಸಹಿ/–
ಕಾರ್ಯಪಾಲಕ ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿ ಕೋಶ
ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:108/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ
ಇಲಾಖೆ ವಿಭಾಗ ಬಾಗಲಕೋಟ ಇವರ ಕಛೇರಿ.
ಸಂಖ್ಯೆ.ಲೋಇ:ಬಾವಿ:ಪಿಬಿ:ಕೆಡಬ್ಲು:2025–26/717 ದಿನಾಂಕ: 05–06–2025.

–:ಟೆಂಡರ ಪ್ರಕಟಣೆ:–

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆ್ಯಕ್ಟ 2000ರ ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ ಕೆ/ಡಬ್ಲೂ–1/2/3 ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರ ರಿಂದ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಬಾಗಲಕೋಟ ವಿಭಾಗದ ಅಡಿಯಲ್ಲಿಯ ಈ ಕೆಳಕಾಣಿಸಿದ ಕಾಮಗಾರಿಯ ಟೆಂಡರ ಅಹ್ವಾನಿಸಲಾಗಿದೆ.
ವರ್ಕ ಇಂಡೆಂಟ್ ನಂ:ಸಾಮಾನ್ಯ: 22198, 20406 Call-2 SC: 22197 CAT-II-A: 21988

ಈ ಎಲ್ಲ ಕಾಮಗಾರಿಗಳ ಗರಿಷ್ಠ ಟೆಂಡರಗಿಟ್ಟ ಮೊತ್ತ ರೂ.300.00 ಲಕ್ಷ ಹಾಗೂ ಕನಿಷ್ಠ ಮೊತ್ತ ರೂ.20.00 ಲಕ್ಷಗಳ ವರೆಗಿನ ಕಾಮಗಾರಿಗಳಿಗೆ ಈ ಕೆಳಕಾಣಿಸಿದ ದಿನಾಂಕಗಳಂತೆ ಟೆಂಡರ ಅಹ್ವಾನಿಸಲಾಗಿದೆ.
ಅ)ಟೆಂಡರ ಆಕ್ಷೇಪಣೆಗಾಗಿ ನಿಗಧಿ ಪಡಿಸಿದ ದಿನಾಂಕ:17–06–2025 ರಂದು ಸಂಜೆ 5–30 ಘಂಟೆಯವರೆಗೆ, ಬ)ಟೆಂಡರ ಸ್ವೀಕರಿಸುವ ದಿನಾಂಕ: 18–06–2025 ರಂದು ಸಂಜೆ 4–00 ಘಂಟೆಯವರೆಗೆ, ಕ) ತಾಂತ್ರಿಕ ಬಿಡ್ ತೆರೆಯುವ ದಿನಾಂಕ:19–06–2025 ರಂದು ಸಂಜೆ 4.30 ಘಂಟೆಯವರೆಗೆ, ಡ) ಆರ್ಥಿಕ ಬಿಡ್ ತೆರೆಯುವ ದಿನಾಂಕ:20–06–2025 ರಂದು ಸಂಜೆ 4.30 ಘಂಟೆಯವರೆಗೆ

ಕಾಮಗಾರಿಗಳಿಗೆ ಸಂಬಂಧಿಸಿದ ವಿವರವಾದ ಮಾಹಿತಿಯನ್ನು ವೈಬ್‌ಸೈಟ್ ವಿಳಾಸ http://kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ ಬಾಗಲಕೋಟೆ.
DIPR/BGK/RO-NO-102/KSMCA/2025-26

ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ನಗರ, ಸಾಮಾಜಿಕ ಅರಣ್ಯ ವಿಭಾಗ,
ಜಾರಕ್ ಬಂಡೆ ಅರಣ್ಯ ವಸತಿ ಸಂಕೀರ್ಣ, ಜಾಲಹಳ್ಳಿ ಪಶ್ಚಿಮ, ಬೆಂಗಳೂರು–560 015.
E-mail: dcf.buzp@yahoo.in Phone No: 080-29900992.
ಸಂ: ಎ1/ಬಿಯುಡಿ/ಟೆಂಡರ್/ಸಿಆರ್–02/2025–26 ದಿನಾಂಕ: 06.06.2025

ಟೆಂಡರ್ ಪ್ರಕಟಣೆ

2025–26ನೇ ಸಾಲಿನಲ್ಲಿ ನಗರ ಸಾಮಾಜಿಕ ಅರಣ್ಯ ವಿಭಾಗದ ಆನೇಕಲ್ ಮತ್ತು ಯಲಹಂಕ ಸಾಮಾಜಿಕ ಅರಣ್ಯ ವಲಯಗಳಲ್ಲಿ ಆರ್.ಕೆ.ವಿ.ವೈ ಮತ್ತು ಕಟ್ಟಡ ಯೋಜನೆಯಡಿ ಕಾಮಗಾರಿಗಳನ್ನು ಕೈಗೊಳ್ಳುವ ಸಂಬಂಧ ಪಿಡಬ್ಲ್ಯೂಡಿ ಇಲಾಖೆಯಲ್ಲಿ ನೋಂದಾಯಿತ ಸಿವಿಲ್ ಗುತ್ತಿಗೆದಾರರಾಗಿ ಹೆಸರನ್ನು ನೋಂದಾಯಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಇ–ಪೋರ್ಟಲ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ: 26.06.2025 ಸಂಜೆ 5.00 ಗಂಟೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 27.06.2025 ರಂದು ಸಂಜೆ 5:10 ಗಂಟೆ. ತಾಂತ್ರಿಕ ಬಿಡ್‌ನಲ್ಲಿನ ಷರತ್ತುಗಳು ಯಶಸ್ವಿಯಾಗಿದ್ದರೆ ಮಾತ್ರ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು. ಷರತ್ತುಗಳು ಪೂರೈಕೆ ಇಲ್ಲದ ಬಿಡ್‌ಗಳನ್ನು ತಿರಸ್ಕರಿಸಲಾಗುವುದು. ಯಶಸ್ವಿಯಾಗಿದ್ದರೆ ದಿನಾಂಕ: 01.07.2025 ಸಂಜೆ 5:00 ಗಂಟೆಗೆ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು. ಒಂದನೇ ಬಾರಿ ಇ–ಪೋರ್ಟಲ್‌ನಲ್ಲಿ ಯಾರೂ ಭಾಗವಯಿಸದೇ ಇದ್ದಲ್ಲಿ ಮರು–ಟೆಂಡರ್‌ಗೆ ದಿನಾಂಕ: 03.07.2025 ಸಂಜೆ 5:00 ಗಂಟೆಯವರೆಗೂ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಿ ಇ–ಟೆಂಡರ್‌ನಲ್ಲಿ ಭಾಗವಹಿಸಬಹುದು. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 04.07.2025 ಸಂಜೆ 5:10 ಗಂಟೆಗೆ. ತಾಂತ್ರಿಕ ಬಿಡ್‌ಗಳಲ್ಲಿನ ಷರತ್ತುಗಳು ಯಶಸ್ವಿಯಾಗಿದ್ದರೆ ಮಾತ್ರ ದಿನಾಂಕ: 08.07.2025 ಸಂಜೆ 5:00 ಗಂಟೆಗೆ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು. ಪ್ರತ್ಯೇಕ ಕೆಲಸಗಳ ವಿವರಗಳನ್ನು ಕರ್ನಾಟಕ ಸರ್ಕಾರದ ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ಮಾಹಿತಿಗಳನ್ನು ಪಡೆಯಬಹುದು.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ವಾಸಾಸಂಇ/ವಾಪ್ರ/1124/ಆಕಾರ್/2025–26 ನಗರ ಸಾಮಾಜಿಕ ಅರಣ್ಯ ವಿಭಾಗ, ಬೆಂಗಳೂರು

ಕರ್ನಾಟಕ ಸರಕಾರ
ಜಿಲ್ಲಾ ಪಂಚಾಯತ ಕೊಪ್ಪಳ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ
ಜಿಲ್ಲಾ ಆರ್.ಸಿ.ಹೆಚ್.ಅಧಿಕಾರಿಗಳ ಕಚೇರಿ, ಜಿಲ್ಲಾ ಆಡಳಿತ ಭವನ, ಕೊಪ್ಪಳ–583231.
ದೂರವಾಣಿ ಸಂಖ್ಯೆ : 08539–221811 E – Mail : rchokoppal6@gmail.com
ಸಂಖ್ಯೆ: ಡಿಹೆಚ್‌ಎಸ್/ಆರ್‌ಸಿಹೆಚ್/ಕೊ/ಎನ್‌ಹೆಚ್‌ಎಂ/156/2025–26 ದಿನಾಂಕ: 06–06–2025

ಅಲ್ಪಾವಧಿ ಮರು ಇ–ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ) ದ್ವಿ ಲಕೋಟೆ ಪದ್ದತಿ.

ವಿಷಯ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ಕೊಪ್ಪಳದ ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆ ಅಡಿಯಲ್ಲಿನ 2025–26ನೇ ಸಾಲಿಗೆ ವಿವಿಧ ವೃಂದದ ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದಲ್ಲಿ ಮಾನವ ಸಂಪನ್ಮೂಲದಿಂದ ಸೇವೆಯನ್ನು ಪಡೆಯುವ ಅಲ್ಪಾವಧಿ ಮರು ಇ–ಟೆಂಡರ್‌ನ ಬಗ್ಗೆ.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಕೊಪ್ಪಳ ಜಿಲ್ಲೆಯ ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆ ಅಡಿಯಲ್ಲಿ ವಿವಿಧ ವೃಂದದ ಹುದ್ದೆಗಳನ್ನು ಮಾನವ ಸಂಪನ್ಮೂಲ ಸಂಸ್ಥೆಗಳಿಂದ ಸೇವೆಯನ್ನು ಪಡೆಯಲು ದ್ವಿ–ಲಕೋಟೆ ಪದ್ದತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಮರು ಇ–ಟೆಂಡರ್ 2ನೇ ಕರೆ ಅಹ್ವಾನಿಸಲಾಗಿದೆ. ಟೆಂಡರ್ ಅಂದಾಜು ಮೊತ್ತ ರೂ.2,75,67,984/– ಹಾಗೂ ಇ.ಎಂ.ಡಿ.ಮೊತ್ತ ರೂ. 4,13,517.00 ಇರುತ್ತದೆ. ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವಿಳಾಸ http://kppp.karnataka.gov.in ರಲ್ಲಿ ಪರಿಶೀಲಿಸಿ ಸೂಕ್ತ ದಾಖಲಾತಿಗಳೊಂದಿಗೆ ಟೆಂಡರ್ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೂ.ಸಂ 08539–221660 ಸಂಪರ್ಕಿಸಬಹುದಾಗಿದೆ. ಇ–ಪೋರ್ಟಲ್‌ನಲ್ಲಿ ಕಾಣಿಸಿದ ಷರತ್ತು ಮತ್ತು ನಿಬಂಧನೆಗಳು ಹಾಗೂ ಇತರೆ ವಿವರಗಳನ್ನು ಗಮನಿಸಿ ಕ್ರಮ ವಹಿಸುವುದು. ವಿವರ ಈ ಕೆಳಕಂಡಂತೆ ಇರುತ್ತದೆ.

INDENT NO :- DHFWS/2024-25/SE1407/CALL-2

ಕ್ರ.ಸಂ	ವಿಷಯ	ದಿನಾಂಕ
1	ಟೆಂಡರ್‌ನ್ನು ಇ–ಪೋರ್ಟಲ್ ಮೂಲಕ ಈ ದಿನಾಂಕ ದಿಂದ ಡೌನ್‌ಲೋಡ್ ಮಾಡಿ–ಕೊಳ್ಳಬಹುದಾಗಿದೆ.	06/06/2025
2	ದ್ವಿ ಲಕೋಟೆ ಪದ್ದತಿಯಂತೆ ಇ–ಪೋರ್ಟಲ್ ನಲ್ಲಿ ಟೆಂಡರ್‌ನ್ನು ಸಲ್ಲಿಸುವ ಕಡೆಯ ದಿನಾಂಕ	25–06–2025 ಸಮಯ 5.00 ರವರೆಗೆ
3	ದ್ವಿ ಲಕೋಟೆ ಪದ್ದತಿಯಲ್ಲಿ ಇ–ಪೋರ್ಟಲ್ ನಲ್ಲಿ ಟೆಂಡರ್‌ನ್ನು ತೆರೆಯುವ ದಿನಾಂಕ	27–06–2024 ಸಮಯ ಬೆಳಿಗ್ಗೆ 11.00

ಸಹಿ/–ಉಪಾಧ್ಯಕ್ಷರು,
ಜಿಲ್ಲಾ ಆರೋಗ್ಯ ಮತ್ತು ಕುಟುಂಬ
ಕಲ್ಯಾಣ ಸಂಘ,ಕೊಪ್ಪಳ.
ವಾ.ಸಾ.ಇ/ಕೊಪ್ಪಳ/141/ದೇಶಪಾಂಡೆಪಬ್ಲಿಸಿಟಿ/2025–26

ಮುಂದುವರಿದ ತಲೆದಂಡ

← ಮೊದಲಪುಟದಿಂದ

ಪೊಲೀಸ್ ದೂರು ಪ್ರಾಧಿಕಾರದ ಪ್ರಧಾನ ಕಾರ್ಯದರ್ಶಿ ಎಸ್.ರವಿ ಅವರನ್ನು ಗುಪ್ತಚರ ವಿಭಾಗದ ನೂತನ ಎಡಿಜಿಪಿಯಾಗಿ ನೇಮಿಸಲಾಗಿದೆ. ಕಾನೂನು, ಸುವ್ಯವಸ್ಥೆ ವಿಭಾಗದ ಎಡಿಜಿಪಿಯಾಗಿದ್ದ ಹಿತೇಂದ್ರ ಅವರನ್ನು ಸಂಚಾರ ವಿಭಾಗಕ್ಕೆ ವರ್ಗಾಯಿಸಲಾಗಿದೆ. ಪೊಲೀಸ್ ನೇಮಕಾತಿ ವಿಭಾಗದ ಎಡಿಜಿಪಿ ಕೆ.ವಿ.ಶರತ್ ಚಂದ್ರ ಅವರನ್ನು ಗೃಹ ಇಲಾಖೆ ಪ್ರಧಾನ ಕಾರ್ಯದರ್ಶಿಯನ್ನಾಗಿ ವರ್ಗಾಯಿಸಲಾಗಿದೆ. ಅಲ್ಲದೇ, ರಾಜ್ಯ ಪೊಲೀಸ್ ವಸತಿ ಹಾಗೂ ಮೂಲಸೌಕರ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕರ ಹೆಚ್ಚುವರಿ ಹೊಣೆಗಾರಿಕೆಯನ್ನು ವಹಿಸಲಾಗಿದೆ. ಕಮ್ಯುನಿಕೇಷನ್, ಲಾಜಿಸ್ಟಿಕ್ ಅಂಡ್ ಮಾಡರ್ನೈಶೇಷನ್ ವಿಭಾಗದ ಎಡಿಜಿಪಿ ಎಸ್.ಮುರುಗನ್ ಅವರನ್ನು ಪೊಲೀಸ್ ನೇಮಕಾತಿ ವಿಭಾಗದ ಎಡಿಜಿಪಿಯಾಗಿ ವರ್ಗಾವಣೆ ಮಾಡಲಾಗಿದೆ.

ತೆರವಾಗಿದ್ದ ಸ್ಥಾನಗಳಿಗೆ ನೇಮಕ

ಅಮಾನತುಗೊಂಡಿದ್ದ ಅಧಿಕಾರಿಗಳ ಜಾಗಕ್ಕೆ ಅಧಿಕಾರಿಗಳನ್ನು ಶುಕ್ರವಾರ ನೇಮಿಸಲಾಗಿದೆ. ಪೂರ್ವ ವಿಭಾಗ ಹೆಚ್ಚುವರಿ ಪೊಲೀಸ್ ಆಯುಕ್ತರಾಗಿದ್ದ ವಿಕಾಸ್ ಕುಮಾರ್ ವಿಕಾಸ್ ಅವರ ಜಾಗಕ್ಕೆ ಸಿಸಿಬಿ ಜಂಟಿ ಪೊಲೀಸ್ ಆಯುಕ್ತರಾಗಿದ್ದ ಚಂದ್ರಗುಪ್ತ ಅವರನ್ನ ಪ್ರಭಾರಿಯಾಗಿ ನಿಯೋಜಿಸಿದೆ. ಕೇಂದ್ರ ವಿಭಾಗದ ಡಿಸಿಪಿ ಶೇಖರ್ ಟೆಕ್ಕಣ್ಣನವರ ಸ್ಥಳಕ್ಕೆ ಸಿಸಿಬಿ ಡಿಸಿಪಿ ಅಕ್ಷಯ್ ಎಂ. ಹಕಾಯ್ ಅವರನ್ನ ಹೆಚ್ಚುವರಿಯಾಗಿ ನೀಡಲಾಗಿದೆ. ಕಬ್ಬನ್ ಪಾರ್ಕ್ ಉಪವಿಭಾಗಕ್ಕೆ ಎಸಿಪಿ ರಾಮಚಂದ್ರ, ಹಾಗೂ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಗೆ ದೇವೇಂದ್ರಪ್ಪ ಅವರನ್ನ ವರ್ಗಾವಣೆ ಮಾಡಿ ನಗರ ಪೊಲೀಸ್ ಕಮೀಷನರ್ ಸೀಮಂತ್ ಕುಮಾರ್ ಸಿಂಗ್ ಆದೇಶಿಸಿದ್ದಾರೆ.



ಹುಬ್ಬಳ್ಳಿ ನಗರದ ಕೋರ್ಟ್ ಸರ್ಕಲ್ ಹತ್ತಿರ ಇರುವ ಕೇಂದ್ರದ ಮಾಜಿ ಸಚಿವ ಎಸ್.ಆರ್ ಬೊಮ್ಮಾಯಿರವರ ಪುತ್ಥಳಿಗೆ ಹಾಗೂ ಅವರ ಜನ್ಮದಿನೋತ್ಸವದ ಅಂಗವಾಗಿ ಮಾಜಿ ಮುಖ್ಯಮಂತ್ರಿ, ಸಂಸದ ಬಸವರಾಜ ಬೊಮ್ಮಾಯಿ ಅವರು ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು. ಈ ಸಂದರ್ಭದಲ್ಲಿ ಪತ್ನಿ ಚನ್ನಮ್ಮ ಬೊಮ್ಮಾಯಿ, ಪುತ್ರ ಭರತ ಬೊಮ್ಮಾಯಿ, ಹು–ಧಾ ಮಹಾನಗರ ಪಾಲಿಕೆಯ ಸದಸ್ಯರು ಉಪಸ್ಥಿತರಿದ್ದರು.

ಲಾರಿಗೆ ಬೈಕ್ ಡಿಕ್ಕಿ: 3 ಸಾವು

ತುಮಕೂರು: ಜಿಲ್ಲೆಯ ಹಿರೇಹಳ್ಳಿ ಸಮೀಪದ ನಂದಿಹಳ್ಳಿ ಬಳಿಯ ರಾಷ್ಟ್ರೀಯ ಹೆದ್ದಾರಿ 48 ರಲ್ಲಿ ಶುಕ್ರವಾರ ಕಂಟೈನರ್ ಲಾರಿಗೆ ಬೈಕ್ ಡಿಕ್ಕಿಯಾಗಿ ಮೂವರು ಮೃತಪಟ್ಟಿದ್ದಾರೆ. ಬಂಕ್‌ನಿಂದ ಪೆಟ್ರೋಲ್ ತುಂಬಿಸಿಕೊಂಡು ಹೆದ್ದಾರಿಗೆ ಬರುತ್ತಿದ್ದ ಕಂಟೈನರ್ ಲಾರಿಗೆ ಬೈಕ್ ಡಿಕ್ಕಿ ಹೊಡೆದಿದೆ. ಬೈಕ್‌ನಲ್ಲಿ ತ್ರಿಬಲ್ ರೈಡ್ ಹೋಗುತ್ತಿದ್ದ ಸವಾರರು ಮೃತಪಟ್ಟಿದ್ದಾರೆ. ಅಪಘಾತದಲ್ಲಿ ಮೃತಪಟ್ಟವರನ್ನು ರಾಜೇಶ್ (25), ಧನಂಜಯ್ (27), ಧನುಷ್ (23) ಎಂದು ಗುರುತಿಸಲಾಗಿದೆ. ಇವರು ದಾಬಸ್‌ಪೇಟೆಯ ಖಾಸಗಿ ಕಂಪನಿಯಲ್ಲಿ ಸೆಕ್ಯೂರಿಟಿಗಳಾಗಿ ಕಾರ್ಯನಿರ್ವಹಿಸುತ್ತಿದ್ದರು.

ಸೇರ್ಪಡೆ: ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿ ಕ್ರಿಕೆಟಿಗ ವಿರಾಟ್ ಕೊಹ್ಲಿ ವಿರುದ್ಧವೂ ದೂರು ದಾಖಲಾಗಿದೆ. ಕೊಹ್ಲಿ ವಿರುದ್ಧ ನೈಜ್ಯ ಹೋರಾಟಗಾರರ ಸಂಘ ಕಬ್ಬನ್ ಪಾರ್ಕ್ ಠಾಣೆಯಲ್ಲಿ ದೂರು ದಾಖಲಿಸಿದೆ. ದೂರಿನಲ್ಲಿ, ಈ ನೂಕು ನುಗ್ಗಲಿಗೆ ಕೊಹ್ಲಿ ಸಹ ಕಾರಣ ಎಂದು ಆರೋಪಿಸಲಾಗಿದೆ. ಅಲ್ಲದೇ ದುರಂತ ನಡೆದ ಕುಟುಂಬವನ್ನು ಕೊಹ್ಲಿ ಭೇಟಿ ಮಾಡಿಲ್ಲ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ರಾಡ್‌ನಿಂದ ಹಲ್ಲೆ

ತೀರ್ಥಹಳ್ಳಿ: ಹಾಡಹಗಲೇ ಯುವ ವಕೀಲ, ಬಿಜೆಪಿ ಮುಖಂಡರಾದ ಮಧುಕರ ಮಯ್ಯ ಎಂಬುವರ ಮೇಲೆ ನಾಲ್ವರಿಂದ ಮಧುಕರ್ ಮಯ್ಯ ಅವರ ತಲೆಗೆ ರಾಡ್ ನಿಂದ ಹಲ್ಲೆ ನಡೆಸಲಾಗಿದೆ. ಶುಕ್ರವಾರ 4 ಗಂಟೆಯ ವೇಳೆಗೆ ಪಟ್ಟಣದ ಸಿಬಿನಕೆರೆಯ ಬಳಿ ಮಯ್ಯ ಅವರನ್ನು ಕೋರ್ಟ್ ಬಳಿಯಿಂದ ಬೆನ್ನಟ್ಟಿ ಮಾರಣಾಂತಿಕ ಹಲ್ಲೆ ನಡೆಸಲಾಗಿದೆ. ಸದ್ಯಕ್ಕೆ ಅವರನ್ನು ತೀರ್ಥಹಳ್ಳಿ ಸರಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಲಾಗಿದೆ. ತೀರ್ಥಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶಾಸಕರಿಂದ 40 ಗೋವುಗಳ ರಕ್ಷಣೆ

ಬೀದರ್: ಬಕ್ರೀದ್ ಹಬ್ಬ ಹಿನ್ನೆಲೆಯಲ್ಲಿ ಬಲಿಗೆ ಸಿದ್ಧವಾಗಿದ್ದ 40ಕ್ಕೂ ಅಧಿಕ ಗೋವುಗಳನ್ನು ಬಿಜೆಪಿ ಶಾಸಕ ಶರಣು ಸಲಗರ್ ರಕ್ಷಿಸಿದ್ದಾರೆ. ಬಸವಕಲ್ಯಾಣ ಪಟ್ಟಣದ ಮಹಿಬೂಬ್ ಗಲ್ಲಿಯಲ್ಲಿ ಗೋವುಗಳನ್ನು ಅಕ್ರಮವಾಗಿ ಇರಿಸಿದ್ದಾರೆ ಎಂಬ ಖಚಿತ ಮಾಹಿತಿಯ ಮೇರೆಗೆ ಶರಣು ಸಲಗರ್ ಶುಕ್ರವಾರ ಬೆಳಗ್ಗೆ ಶೆಡ್ ಮೇಲೆ ದಾಳಿ ಮಾಡಿದ್ದಾರೆ. ದಾಳಿಯ ವೇಳೆ ಗೋಮಾಂಸ ಪತ್ತೆಯಾಗಿದೆ. ನಿಮ್ಮ ಕುಮ್ಮಕ್ಕಿನಿಂದಲೇ ಗೋವುಗಳ ಹತ್ಯೆ ನಡೆಯುತ್ತಿದೆ. ಧಮ್ ಇದ್ದರೆ ಇಲ್ಲಿಗೆ ಬಾರೋ ಎಂದು ಕಾಂಗ್ರೆಸ್ ಮುಖಂಡ ವಿಜಯ್ ಸಿಂಗ್ಗೆ ಸಲಗಾರ್ ಸವಾಲು ಎಸೆದಿದ್ದಾರೆ. ನಾನು ಇರುವವರೆಗೂ ಗೋವುಗಳ ಬಲಿ ಕೊಡಲು ಬಿಡಲ್ಲ. ಯಾರು ಯಾವುದಕ್ಕೆ ಭಯ ಪಡುವ ಅಗತ್ಯವಿಲ್ಲ. ಯಾರಿಗೂ ಹೆದರಿ ಕೆಲಸ ಮಾಡಬೇಡಿ ಎಂದು ಪೊಲೀಸರಿಗೆ ಹೇಳಿದ್ದಾರೆ.

ನಕಲಿ ಚಿನ್ನ ಅಡವಿಟ್ಟು 63 ಕೋಟಿ ರು. ಸಾಲ ಕೊಟ್ಟಿದ್ದ ಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ

ಮಂಜುನಾಥ್ ಗೌಡ ಆಸ್ತಿ ಮುಟ್ಟುಗೋಲು

ನವದೆಹಲಿ: ನಕಲಿ ಚಿನ್ನ ಅಡವಿಟ್ಟು 63 ಕೋಟಿ ರುಪಾಯಿ ಸಾಲ ಕೊಟ್ಟಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಶಿವಮೊಗ್ಗ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಬ್ಯಾಂಕ್ ಮಾಜಿ ಅಧ್ಯಕ್ಷ ಮಂಜುನಾಥ್ ಗೌಡ ಮತ್ತು ಅವರ ಪತ್ನಿಗೆ ಸೇರಿದ ಸುಮಾರು 14 ಕೋಟಿ ರೂಪಾಯಿ ಮೌಲ್ಯದ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಿದೆ ಎಂದು ಜಾರಿ ನಿರ್ದೇಶನಾಲಯ(ಇಡಿ) ಶುಕ್ರವಾರ ತಿಳಿಸಿದೆ.

ಡಿಸಿಸಿ ಬ್ಯಾಂಕ್ ಹಗರಣ ಸಂಬಂಧ ಇಡಿ ಅಧಿಕಾರಿಗಳು ಕಳೆದ ಏಪ್ರಿಲ್ ನಲ್ಲಿ ಶಿವಮೊಗ್ಗದಲ್ಲಿ ಮಂಜುನಾಥ್ ಗೌಡ ಮನೆ, ಕಚೇರಿ ಸೇರಿದಂತೆ 8 ಕಡೆ ದಾಳಿ ನಡೆಸಿದ್ದರು. ಅಲ್ಲದೇ ಮಂಜುನಾಥ್ ಅವರನ್ನು ವಶಕ್ಕೆ ಪಡೆದುಕೊಂಡು ಬೆಂಗಳೂರಿನ ಚಾಮರಾಜಪೇಟೆಯ ಅಪೆಕ್ಸ್ ಬ್ಯಾಂಕ್ ಅತಿಥಿಗೃಹದಲ್ಲಿ ವಿಚಾರಣೆ ನಡೆಸಿದ್ದರು. ಶಿವಮೊಗ್ಗದಲ್ಲಿ ಪ್ರಧಾನ ಕಚೇರಿಯನ್ನು ಹೊಂದಿರುವ ಶಿವಮೊಗ್ಗ ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕಿನ ಮಾಜಿ ಅಧ್ಯಕ್ಷರು ಪ್ರಸ್ತುತ ನ್ಯಾಯಾಂಗ ಬಂಧನದಲ್ಲಿದ್ದಾರೆ.

ಸಹಕಾರಿ ಬ್ಯಾಂಕಿನ ನಗರ ಶಾಖೆಯಲ್ಲಿ ನಡೆದ ಚಿನ್ನದ ಸಾಲ ಹಗರಣಕ್ಕೆ ಸಂಬಂಧಿಸಿದಂತೆ ಮಂಜುನಾಥ್ ಗೌಡ ಮತ್ತು ಅವರ ಪತ್ನಿಗೆ ಸೇರಿದ 13.91 ಕೋಟಿ ರು. ಮೌಲ್ಯದ ಪ್ರಸ್ತುತ ಮಾರುಕಟ್ಟೆ ಮೌಲ್ಯದ ಸ್ಥಿರ ಮತ್ತು ಚರ ಆಸ್ತಿಗಳನ್ನು ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ(ಪಿಎಂಎಲ್‌ಎ) ಅಡಿಯಲ್ಲಿ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಇಡಿ ಪ್ರಕಟಣೆಯಲ್ಲಿ ತಿಳಿಸಿದೆ.

ಸಮಾಚಾರ ಸಣ್ಣದಲ್ಲ

ಸರಕಾರ ಜನತೆಯ ಕ್ಷಮೆ ಕೇಳಲಿ



ಹುಬ್ಬಳ್ಳಿ: ಆರ್‌ಸಿಬಿ ವಿಜಯೋತ್ಸವ ಮಾಡುವುದು ಬೇಡ ಎಂದು ಪೊಲೀಸ್ ಇಲಾಖೆ ಹೇಳಿದ್ದರೂ, ರಾಜ್ಯ ಸರಕಾರ ಸೊಕ್ಕಿನಿಂದ ಅದಕ್ಕೆ ಅವಕಾಶ ನೀಡಿ ಅಮಾಯಕರನ್ನು ಬಲಿ ಪಡೆದಿದೆ. ತಕ್ಷಣ ರಾಜ್ಯದ ಜನತೆಯ ಕ್ಷಮೆ ಕೇಳಿ, ಮೃತಪಟ್ಟವರ ಕುಟುಂಬಕ್ಕೆ 1 ಕೋಟಿ ಪರಿಹಾರ ನೀಡಬೇಕು' ಎಂದು ಶ್ರೀರಾಮ ಸೇನಾ ಸಂಸ್ಥಾಪಕ ಅಧ್ಯಕ್ಷ ಪ್ರಮೋದ ಮುತಾಲಿಕ್ ಆಗ್ರಹಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜಕೀಯ ಲಾಭ ಪಡೆಯುವುದಕ್ಕೋಸ್ಕರ ವಿವೇಚನೆಯಿಲ್ಲದೆ ರಾಜ್ಯ ಸರಕಾರ, ವಿಜಯೋತ್ಸವ ಸಮಾರಂಭ ನಡೆಸಿತು. ಸೂಕ್ತ ಭದ್ರತೆ ಮತ್ತು ಯೋಜನೆಯಿಲ್ಲದ ಕಾರಣ ಕಾಲ್ತುಳಿತವಾಗಿ 11 ಮಂದಿ ಮೃತಪಟ್ಟರು. ಅಚಾತುರ್ಯದ ಹೊಣೆ ಯನ್ನು ಸರಕಾರ ತಾನು ಹೊರುವ ಬದಲು, ಪೊಲೀಸ್ ಇಲಾಖೆಯ ಅಧಿಕಾರಿಗಳನ್ನು ಅಮಾನತು ಮಾಡಿದೆ. ತಕ್ಷಣ ಅವರ ಅಮಾನತು ಆದೇಶ ವಾಪಸ್ ಪಡೆದು, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಹಾಗೂ ಗೃಹ ಸಚಿವ ಜಿ. ಪರಮೇಶ್ವರ ಅವರು ರಾಜ್ಯದ ಕ್ಷಮೆ ಕೇಳಬೇಕು' ಎಂದು ಒತ್ತಾಯಿಸಿದರು.

ಮಕ್ಕಳೊಂದಿಗೆ ಕೆರೆಗೆ ಹಾರಿ ತಾಯಿ ಆತ್ಮಹತ್ಯೆ



ಚಿಕ್ಕಬಳ್ಳಾಪುರ: ಇಬ್ಬರು ಮಕ್ಕಳೊಂದಿಗೆ ಕೆರೆಗೆ ಹಾರಿ ತಾಯಿ ಆತ್ಮಹತ್ಯೆ ಮಾಡಿಕೊಂಡಿರುವ ಮನಕಲುಕುವ ಘಟನೆ ಚಿಕ್ಕಬಳ್ಳಾಪುರ ತಾಲೂಕಿನ ರಂಗಸ್ಥಳ ಗ್ರಾಮದ ರಂಗಧಾಮ ಕೆರೆಯಲ್ಲಿ ನಡೆದಿದೆ. ಬಾಧಗಾನಹಳ್ಳಿ ಗ್ರಾಮದ ಲಾವಣ್ಯ (30) ಮಕ್ಕಳಾದ ನಿಹಾರಿಕಾ (10) ನೇಹಾ (6) ವರ್ಷ ಮೃತರು. ಅಂದಹಾಗೆ ಗಂಡ ಜಯಣ್ಣನ ಜತೆ ಗುರುವಾರ ಲಾವಣ್ಯ ವಾಗ್ವಾದ ನಡೆಸಿದ್ದರು. ಮಕ್ಕಳನ್ನ ಶಾಲೆಗೆ ಸೇರಿಸಬೇಕು ಚೆನ್ನಾಗಿ ದುಡಿ, ಏರ್‌ಪೋರ್ಟ್‌ಗೆ ಡ್ರೈವರ್ ಕೆಲಸಕ್ಕೆ ಹೋಗು ವಂತೆ ಪೀಡಿಸುತ್ತಿದ್ದರಂತೆ. ಇದೇ ವಿಚಾರದಲ್ಲಿ ಮನ ನೊಂದು ಆತ್ಮಹತ್ಯೆ ಮಾಡಿಕೊಂಡಿರುವ ಅನುಮಾನ ಮೂಡಿದೆ. ಗುರುವಾರ ಸಂಜೆ ಮನೆ ಯಿಂದ ನಾಪತ್ತೆಯಾಗಿದ್ದ ತಾಯಿ ಹಾಗೂ ಮಕ್ಕಳ ದೇಹ ಶುಕ್ರವಾರ ಕೆರೆಯಲ್ಲಿ ತೇಲಾಡಿದ್ದು ಸ್ಥಳೀಯರು ನೋಡಿ ಪೊಲೀಸರಿಗೆ ಮಾಹಿತಿ ನೀಡಿದ್ದರು. ಮೂರು ಮೃತದೇಹಗಳನ್ನ ಹೊರತೆಗೆದು ಚಿಕ್ಕಬಳ್ಳಾಪುರ ಜಿಲ್ಲಾಸ್ಪತ್ರೆಯ ಶವಾಗಾರಕ್ಕೆ ರವಾನೆ ಮಾಡಲಾಗಿದೆ. ಹೆಂಡತಿ ಮಕ್ಕಳನ್ನ ಕಳೆದುಕೊಂಡ ಗಂಡ ಜಯಣ್ಣ ರೋಧಿಸುವಂತಾಗಿದೆ.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಬೆಳಗಾವಿ**

ಸಮಸ್ಯೆಯೇನು..?

- ಬೆಳಗಾವಿ ನಗರದ ಮರಾಠಾ ಕಾಲೋನಿ ಎಸ್‌ಬಿಐ ಬ್ಯಾಂಕ್ ಎದುರುಗಡೆ ಟಿಳಕವಾಡಿಯಲ್ಲಿ ಚರಂಡಿ ದುರಸ್ತಿಯ ಬಗ್ಗೆ.
- **ಪರಿಹಾರ:** ಬೆಳಗಾವಿ ನಗರದ ಮರಾಠಾ ಕಾಲೋನಿ ಎಸ್‌ಬಿಐ ಬ್ಯಾಂಕ್ ಎದುರುಗಡೆ ಟಿಳಕವಾಡಿಯಲ್ಲಿ ಹಾಳಾದ ಚರಂಡಿಯ ಸ್ಥಳವನ್ನು ಅಧಿಕಾರಿಗಳು ಪರಿಶೀನೆ ನಡೆಸಲಾಗಿದ್ದು, ಸದರಿ ಚರಂಡಿ ಕಾಮಗಾರಿಯನ್ನು ಅನುದಾನ ಲಭ್ಯತೆ ಮೇರೆಗೆ ಕೈಗೊಂಡು ಸರಿಪಡಿಸುತ್ತೇವೆ.

ಟ್ವೀಟೂ-ಖಾರಾ

ಆರ್.ಅಶೋಕ್, ಪ್ರತಿಪಕ್ಷ ನಾಯಕ

ಡಿಸಿಎಂ DKShivakumar ಅವರು ಪೊಲೀಸರು ಮೊದಲೇ ಅಪಾಯದ ಮುನ್ಸೂಚನೆ ನೀಡಿದ್ದರು, ಪೊಲೀಸರು ಹೊಣೆಯಲ್ಲ ಎಂದು ಹೇಳಿದ್ದರು. ಈಗ ಸಿಎಂ siddaramaiah ಅವರು ಏಕಾಏಕಿ ಬೆಂಗಳೂರು ಪೊಲೀಸ್ ಕಮಿಷನರ್ ಸೇರಿದಂತೆ ಹಲವು ಹಿರಿಯ ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಿದ್ದಾರೆ. ಸಿಎಂ ಸಿದ್ದರಾಮಯ್ಯ ಹಾಗು ಡಿಸಿಎಂ ಡಿ.ಕೆ.ಶಿವಕುಮಾರ್‌ಅವರ ನಡುವೆ ನಡೆಯುತ್ತಿರುವ ಶೀತಲ ಸಮರ, ಮುಸುಕಿನ ಗುದ್ದಾಟವೇ ಈ ದುರಂತಕ್ಕೂ ಕಾರಣವಾಯ್ತಾ?

ಅಚೇ ಗೌಡ

ಬೀದಿಗೆ ಬಂದು ಸರಕಾರದ ವಿರುದ್ಧ ಹೋರಾಟ ಮಾಡಿ. ಸಾಮಾಜಿಕ ಜಾಲತಾಣಗಳಲ್ಲಿ ಬೊಬ್ಬೆ ಹೊಡೆಯುವುದಲ್ಲ... ಇಲ್ಲಾ ಅವರೊಂದಿಗೆ ಕಾಂಪ್ರಮೈಸ್ ಮಾಡಿಕೊಳ್ಳಿ

ಕೆಎಸ್‌ಸಿಎಯ ಆಡಳಿತ ಸಮಿತಿ ಸದಸ್ಯರ ವಿರುದ್ಧ ಮುಂದಿನ ವಿಚಾರಣೆವರೆಗೂ ಕ್ರಮ ಬೇಡ ಎಂದ ಹೈಕೋರ್ಟ್

ಕಾಲ್ತುಳಿತ: ಕೆಎಸ್‌ಸಿಎ ಸದಸ್ಯರಿಗೆ ರಿಲೀಫ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತ ಪ್ರಕರಣ ಸಂಬಂಧ ಕರ್ನಾಟಕ ರಾಜ್ಯ ಕ್ರಿಕೆಟ್ ಅಕಾಡೆಮಿ (ಕೆಎಸ್‌ಸಿಎ)ಯ ಆಡಳಿತ ಸಮಿತಿ ಸದಸ್ಯರ ವಿರುದ್ಧ ಮುಂದಿನ ವಿಚಾರಣೆವರೆಗೂ ಆತುರದ ಕ್ರಮ ಬೇಡ ಎಂದು ಹೈಕೋರ್ಟ್ ಸೂಚನೆ ನೀಡಿದೆ.



ಸಮಿತಿಯ ಅಧ್ಯಕ್ಷರಾದ ರಘುರಾಮ್ ಭಟ್, ಕಾರ್ಯದರ್ಶಿ ಎ.ಶಂಕರ್, ಖಜಾಂಚಿ ಇ.ಎಸ್.ಜಯರಾಮ್ ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣ ಕುಮಾರ್ ಅವರ ಪೀಠ ಈ ಸೂಚನೆ ನೀಡಿದೆ. ಅಲ್ಲದೆ, ಅರ್ಜಿದಾರರು ತನಿಖೆಗೆ ಸಹಕರಿಸಬೇಕು. ನ್ಯಾಯಾಲಯದ ವ್ಯಾಪ್ತಿ ಬಿಟ್ಟು ಹೋಗಬಾರದು ಎಂಬುದಾಗಿ ತಿಳಿಸಿರುವ ಪೀಠ, ಅರ್ಜಿದಾರರ ವಿರುದ್ಧ ಮುಂದಿನ ಆದೇಶದ ವರೆಗೂ ಆತುರದ ಕ್ರಮಕ್ಕೆ ಮುಂದಾಗಬಾರದು ಎಂದು ನ್ಯಾಯಪೀಠ ಆದೇಶಿಸಿ, ಜೂನ್ 16ಕ್ಕೆ ವಿಚಾರಣೆ ಮುಂದೂಡಿತು.

ಘಟನೆ ಸಂಬಂಧ ಸರಕಾರ ನ್ಯಾಯಾಂಗ ತನಿಖೆ, ಜಿಲ್ಲಾ ಮ್ಯಾಜಿಸ್ಟ್ರೇಟ್ ತನಿಖೆ ನಡೆಸುತ್ತಿದೆ. ಜತೆಗೆ, ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಲಾಗಿದೆ. ಹೈಕೋರ್ಟ್ ಸಹ ಸ್ವಯಂಪ್ರೇರಿತವಾಗಿ ಅರ್ಜಿ ದಾಖಲಿಸಿಕೊಂಡು ವಿಚಾರಣೆ ನಡೆಸುತ್ತಿದೆ ಎಂಬ ಅರ್ಜಿದಾರರ ವಾದವನ್ನು ಪೀಠ ಆದೇಶದಲ್ಲಿ ತಿಳಿಸಿದೆ.

ಅರ್ಜಿಯಲ್ಲಿದ್ದ ಅಂಶಗಳೇನು?

ಎಫ್‌ಐಆರ್ ದಾಖಲಾಗುತ್ತಿದ್ದಂತೆ ಕೆಎಸ್‌ಸಿಎ ಸಮಿತಿಯ ಅಧ್ಯಕ್ಷರಾದ ರಘುರಾಮ್ ಭಟ್, ಕಾರ್ಯದರ್ಶಿ ಎ.ಶಂಕರ್, ಖಜಾಂಚಿ ಇ.ಎಸ್.ಜಯರಾಮ್ ಅರ್ಜಿ ಸಲ್ಲಿಸಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಯುಡಿಆರ್ ದಾಖಲಿಸಿಕೊಳ್ಳಲಾಗಿದೆ. ಇದೀಗ ಅರ್ಜಿದಾರರ ವಿರುದ್ಧ ಎಫ್‌ಐಆರ್ ದಾಖಲು ಮಾಡಲಾಗಿದೆ. ಈ ಒಂದೇ ಪ್ರಕರಣ ಸಂಬಂಧ ಎರಡು ರೀತಿಯಲ್ಲಿ ತನಿಖೆ ನಡೆಸಲಾಗುತ್ತಿದ್ದು, ಕಾನೂನು ಬಾಹಿರವಾಗಲಿದೆ. ಪ್ರಕರಣ ಸಂಬಂಧ ಹೈಕೋರ್ಟ್ ಈಗಾಗಲೇ ಸ್ವಯಂಪ್ರೇರಿತವಾಗಿ ಅರ್ಜಿ ದಾಖಲಿಸಿಕೊಂಡು ವಿಚಾರಣೆ ನಡೆಸುತ್ತಿದೆ. ಈ ನಡುವೆ ಮತ್ತೊಂದು ಎಫ್‌ಐಆರ್ ದಾಖಲಿಸಿ ವಿಚಾರಣೆಗೊಳಪಡಿಸುವುದಕ್ಕೆ ಅವಕಾಶವಿಲ್ಲ. ಜತೆಗೆ, ಹಿರಿಯ ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಿರುವ ಸರಕಾರದ ಕ್ರಮ, ಅಧಿಕಾರಿಗಳ ವೈಫಲ್ಯ ತೋರಿಸುತ್ತದೆ. ಘಟನೆ ಆಕಸ್ಮಿಕ ಮತ್ತು ಉದ್ದೇಶ ಪೂರ್ವಕವಲ್ಲದ ಕೃತ್ಯವಾಗಿದೆ. ಆದರೂ ಅರ್ಜಿದಾರರನ್ನು ಆರೋಪಿಗಳನ್ನಾಗಿ ಮಾಡಿ ಎಫ್‌ಐಆರ್ ದಾಖಲಿಸಿರುವುದು ಕಾನೂನಿನ ದುರ್ಬಳಕೆಯಾಗಲಿದೆ.

ಆರ್‌ಸಿಬಿ ತಂಡದ ಆಟಗಾರರನ್ನು ಸನ್ಮಾನಿಸಿರುವ ಕಾರ್ಯಕ್ರಮ ವಿಧಾನಸೌಧದಲ್ಲಿ ಹಮ್ಮಿಕೊಳ್ಳಲಾಗಿದ್ದು, ಮುಖ್ಯಮಂತ್ರಿ ಸೇರಿದಂತೆ ಸರಕಾರದ ಸಚಿವರು, ಅಧಿಕಾರಿಗಳು ಭಾಗಿಯಾಗಿದ್ದರು. ಈ ಸಂದರ್ಭದಲ್ಲಿ ಆಟಗಾರರು ವಿಧಾನಸೌಧದಿಂದ ಕ್ರೀಡಾಂಗಣಕ್ಕೆ ಹೋದ ಪರಿಣಾಮ ಏಕಾಏಕಿ ನೂಕುನುಗ್ಗಲು ಉಂಟಾಗಿದೆ. ಜತೆಗೆ, ಕ್ರೀಡಾಂಗಣದ ದ್ವಾರಗಳನ್ನು ನಿರ್ವಹಣೆ ಮಾಡುವ ಜವಾಬ್ದಾರಿ ಆರ್‌ಸಿಬಿ ಫ್ರಾಂಚೈಸಿ ಮತ್ತು ಪೊಲೀಸ್ ಅಧಿಕಾರಿಗಳದ್ದಾಗಿತ್ತು. ಕೆಎಸ್‌ಸಿಯು ಚಿನ್ನಸ್ವಾಮಿ ಕ್ರೀಡಾಂಗಣವನ್ನು ಬಾಡಿಗೆಗೆ ಮಾತ್ರ ನೀಡುತ್ತದೆ. ಆದರೆ, ಪ್ರೇಕ್ಷಕರು ಹಾಗೂ ಅಭಿಮಾನಿಗಳನ್ನು ಯಾವುದೇ ರೀತಿಯಲ್ಲಿಯೂ ನಿಯಂತ್ರಿಸುವುದಿಲ್ಲ. ಆದ್ದರಿಂದ ಅರ್ಜಿದಾರರೇ ಘಟನೆಗೆ ಕಾರಣ ಎಂಬುದಕ್ಕೆ ಯಾವುದೇ ಸಾಕ್ಷ್ಯಾಧಾರಗಳು ಇಲ್ಲ, ಪೊಲೀಸರು ಒತ್ತಡಕ್ಕೆ ಮಣಿದು ಅರ್ಜಿದಾರರ ವಿರುದ್ಧ ಪ್ರಕರಣ ದಾಖಲಿಸಿದ್ದು, ಸಂಪೂರ್ಣವಾಗಿ ಕಾನೂನು ಬಾಹಿರವಾಗಿದೆ ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

ಸರಕಾರದ ಮೇಲೆ ಕೆಎಸ್‌ಸಿಎ ಆರೋಪ

ಕಾಲ್ತುಳಿತದಲ್ಲಿ 11 ಮಂದಿ ಸಾವನ್ನಪ್ಪಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಎಫ್‌ಐಆರ್ ರದ್ದು ಕೋರಿ ಹೈಕೋರ್ಟ್‌ಗೆ ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ (ಕೆಎಸ್‌ಸಿಎ) ರಿಟ್ ಅರ್ಜಿ ಸಲ್ಲಿಸಿದೆ. ಐಪಿಎಲ್ ಟ್ರೋಫಿ ಗೆಲುವಿನ ಸಂಭ್ರಮಾಚರಣೆಯನ್ನು ವಿಧಾನಸೌಧದ ಎದುರು ನಡೆಸುವಂತೆ ಕರೆ ಕೊಟ್ಟಿದ್ದೇ ಸರಕಾರ ಎಂದು ರಿಟ್ ಅರ್ಜಿಯಲ್ಲಿ ಕೆಎಸ್‌ಸಿಎ ಆರೋಪಿಸಿದೆ. ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಹಾಗೂ ಸಚಿವರು ವಿಧಾನಸೌಧಲ್ಲಿ ಆರ್‌ಸಿಬಿ ಆಟಗಾರರನ್ನು ಸನ್ಮಾನಿಸಿದ್ದಾರೆ. ಸರಕಾರ, ಸಚಿವರ ಮೇಲಿನ ಜನರ ಆಕ್ರೋಶದ ಹಾದಿ ತಪ್ಪಿಸಲು ಎಫ್‌ಐಆರ್ ದಾಖಲಿಸಲಾಗಿದೆ. ಘಟನೆಯ ಹೊಣೆ ಕೆಎಸ್‌ಸಿಎ ಮೇಲೆ ಹೊರಿಸಲು ಯತ್ನಿಸಲಾಗುತ್ತಿದೆ. ಗೇಟ್ ಬಳಿ ಜನದಟ್ಟಣೆ ನಿರ್ವಹಣೆ ಆರ್‌ಸಿಬಿ, ಪೊಲೀಸರ ಕರ್ತವ್ಯ. ಕರ್ನಾಟಕದ ಕ್ರಿಕೆಟ್ ನಿಯಂತ್ರಣವಷ್ಟೇ ಕೆಎಸ್‌ಸಿಎ ಜವಾಬ್ದಾರಿ. ಕೆಎಸ್‌ಸಿಎ ಆಡಳಿತ ಮಂಡಳಿಯವರನ್ನು ಬಂಧಿಸಲು ಸಿಎಂ ಆದೇಶಿಸಿದ್ದಾರೆ. ಮಾಧ್ಯಮಗಳ ಮೂಲಕವೇ ಸಿಎಂ ಬಂಧಿಸುವ ಆದೇಶ ನೀಡಿದ್ದಾರೆ. ಪೊಲೀಸರನ್ನು ಅಮಾನತುಗೊಳಿಸುವ ಮೂಲಕ ಲೋಪ ಒಪ್ಪಿಕೊಂಡಿದ್ದಾರೆ ಎಂದು ರಿಟ್ ಅರ್ಜಿಯಲ್ಲಿ ಸರಕಾರದ ಮೇಲೆ ಕೆಎಸ್‌ಸಿಎ ಆರೋಪ ಮಾಡಿದೆ.

ಸಂಭ್ರಮಾಚರಣೆ ನಿರ್ಧಾರ ಸರಕಾರದ್ದು

ಇನ್ನು ಆರೋಪಕ್ಕೆ ಸಂಬಂಧ ಆರ್‌ಸಿಬಿ ಒಂದು ಖಾಸಗಿ ಒಡೆತನದ ಸಂಸ್ಥೆ. ಐಪಿಎಲ್ ಬಿಸಿಸಿಐ ಅಡಿ ಕಾರ್ಯನಿರ್ವಹಿಸುತ್ತದೆ. ಇಲ್ಲಿ ಆಟಗಾರರನ್ನು ಆಡಿಸುವುದೇ ಪ್ರಮುಖ ಹಾಗೂ ಇಲ್ಲಿ ಕ್ರಿಕೆಟ್ ಕ್ರೀಡೆಯೇ ಪ್ರಮುಖ. ಹೀಗಿದ್ದರೂ ಸಂಸ್ಥೆಯ ಅಧಿಕಾರಿಗಳನ್ನು ಸಿಎಂ ಹೇಳಿದ ನಂತರ ಬಂಧಿಸಲಾಗಿದೆ. ಈ ರೀತಿ ಬಂಧಿಸಿ ಎಂದು ಹೇಳುವುದೇ ಕಾನೂನು ಬಾಹಿರ. ಸರಕಾರ ತನ್ನ ಇಮೇಜ್ ಕಾಪಾಡಲು ಈ ರೀತಿ ಮಾಡಲಾಗಿದೆ.

ಚಿನ್ನಸ್ವಾಮಿ ಕ್ರೀಡಾಂಗಣ ಹಾಗೂ ವಿಧಾನಸೌಧದಲ್ಲಿ ಸಂಭ್ರಮಾಚರಣೆ ಮಾಡಲು ನಿರ್ಧಾರ ಮಾಡಿದ್ದೇ ಸರಕಾರ. ಕ್ರೀಡಾಂಗಣದೊಳಗೆ ಸಣ್ಣ ತೊಂದರೆ ಆದರೂ ಅದು ಇವೆಂಟ್ ಮ್ಯಾನೇಜ್‌ಮೆಂಟ್ ಜವಾಬ್ದಾರಿಯಾಗುತ್ತದೆ. ಆದರೆ ಅಲ್ಲಿ ಏನು ಆಗಿಲ್ಲ. ಸಂಪೂರ್ಣವಾಗಿ ಕಾರ್ಯಕ್ರಮ ಸುರಕ್ಷಿತವಾಗಿ ನಡೆಸದೇ ನಮ್ಮ ಸಿಬ್ಬಂದಿಯನ್ನು ಬಂಧಿಸಲಾಗಿದೆ ಎಂದು ಆರ್‌ಸಿಬಿ ತನ್ನ ಅರ್ಜಿಯಲ್ಲಿ ತಿಳಿಸಿದ್ದು, ಸರಕಾರದತ್ತಲೇ ತಪ್ಪನ್ನು ಬೊಟ್ಟು ಮಾಡಿ ತೋರಿಸಿದೆ.

ಆರ್‌ಸಿಬಿ ಮಾರ್ಕೆಟಿಂಗ್ ಮುಖ್ಯಸ್ಥನಿಗೆ ಸದ್ಯಕ್ಕಿಲ್ಲ ರಿಲೀಫ್

ಬೆಂಗಳೂರಿನ ಎಂ. ಚಿನ್ನಸ್ವಾಮಿ ಸ್ಟೇಡಿಯಂ ಬಳಿ ಸಂಭವಿಸಿದ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಆರ್‌ಸಿಬಿ ತಂಡದ ಮಾರ್ಕೆಟಿಂಗ್ ಹೆಡ್ ನಿಖಿಲ್ ಸೋಸಲೆ



ಅವರ ಬಂಧನ ಪ್ರಶ್ನಿಸಿ ಪತ್ನಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್, ವಿಚಾರಣೆ ಜೂನ್ 9 ಮಧ್ಯಾಹ್ನ 2.30ಕ್ಕೆ ಮುಂದೂಡಿಕೆ ಮಾಡಿದೆ. ಹೀಗಾಗಿ ನಿಖಿಲ್ ಸೋಸಲೆಗೆ ಸದ್ಯ ಯಾವುದೇ ರಿಲೀಫ್ ಸಿಕ್ಕಿಲ್ಲ. ತಂಡದ ಮಾರ್ಕೆಟಿಂಗ್ ಹೆಡ್ ನಿಖಿಲ್ ಸೋಸಲೆ ಅವರನ್ನು ಶುಕ್ರವಾರ ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ಬಂಧಿಸಲಾಗಿದ್ದು, ಇದನ್ನು ಪ್ರಶ್ನಿಸಿ ನಿಖಿಲ್ ಸೋಸಲೆ ಪತ್ನಿ ಮಾಳವಿಕಾ ನಾಯ್ಕ್ ರಿಟ್ ಸಲ್ಲಿಸಿದ್ದರು. ಈ ಅರ್ಜಿ ವಿಚಾರಣೆ ಹೈಕೋರ್ಟ್‌ನಲ್ಲಿ ನಡೆದಿದ್ದು, ನಿಖಿಲ್ ಸೋಸಲೆ ಪರವಾಗಿ ಹಿರಿಯ ವಕೀಲ ಸಂದೇಶ್ ಚೌಟ ವಾದ ಮಂಡಿಸಿದರು.

ಚಿನ್ನಸ್ವಾಮಿ ಪ್ರಕರಣ: ಪರ-ವಿರೋಧ ಚರ್ಚೆ

ಆರ್‌ಸಿಬಿ ತಂಡದ ಮೇಲಿನ ಅತಿಯಾದ ಕ್ರೇಜ್‌ನಿಂದ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ 11 ಅಭಿಮಾನಿಗಳನ್ನು ಬಲಿ ಪಡೆದಿದೆ. ಇದೀಗ ಕಾಲ್ತುಳಿತದ ಪ್ರಕರಣ ರಾಜಕೀಯ ತಿರುವು ಪಡೆದಿದ್ದು, ಕಾಂಗ್ರೆಸ್, ಪ್ರತಿಪಕ್ಷ ನಾಯಕರು ಪರ ವಿರೋಧವಾಗಿ ಚರ್ಚೆ ನಡೆಸಿದ್ದಾರೆ.

ಲೋಪವಾಗಿದ್ದರೆ ಸತ್ಯಾಸತ್ಯತೆ ಹೊರಬರಲಿದೆ

ಕಲಬುರಗಿ: ಬೆಂಗಳೂರಿನಲ್ಲಿ ನಡೆದ ಘಟನೆಯನ್ನು ಸಮರ್ಥನೆ ಮಾಡುತ್ತಿಲ್ಲ. ಆರ್‌ಸಿಬಿ, ಕೆಎಸ್‌ಸಿಎ, ಹಾಗೂ ಬಿಸಿಸಿಐ ಪ್ಲಾನಿಂಗ್ ನಲ್ಲಿ ಲೋಪವಾಗಿದೆ. ಸರಕಾರದ ಲೋಪ ಏನಾದರೂ ಆಗಿದ್ದರೆ ತನಿಖೆಯಲ್ಲಿ ಸತ್ಯಾಸತ್ಯತೆ ಹೊರಬಲಿದೆ ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರಾದ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಭದ್ರತೆಯ ದೃಷ್ಟಿಯಿಂದ ಸರಕಾರ ವಿಕ್ಟರಿ ಪರೇಡ್‌ಗೆ ನಿರಾಕರಣೆ ಮಾಡಿತ್ತು. ಆದರೆ, ಬಿಜೆಪಿಯವರು ಇದಕ್ಕೆ ತಕರಾರು ತೆಗೆದು ಟ್ವೀಟ್ ಮಾಡಿ, ನಂತರ ಡಿಲೀಟ್ ಮಾಡಿದ್ದಾರೆ. ಈಗ ಘಟನೆ ನಡೆದು ಹೋಗಿದೆ. ಎಲ್ಲದರಲ್ಲೂ ರಾಜಕೀಯ ಮಾಡಬಾರದು, ಇದು ಸಮಯವಲ್ಲ. ಸರಕಾರ ತನ್ನ ಜವಾಬ್ದಾರಿಯಿಂದ ಹಿಂದೆ ಸರಿದಿಲ್ಲ. ಸಾವಿಗೀಡಾದವರ ಮನೆಯ ವರಿಗೆ ಸಾಂತ್ವನ ಹೇಳಿದೆ. ಪರಿಹಾರ ಘೋಷಿಸಿದೆ. ಘಟನೆ ಕುರಿತಂತೆ ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ತನಿಖೆ ನಡೆಯುತ್ತಿದೆ. ಪೊಲೀಸ್ ಅಧಿಕಾರಗಳ ಸಸ್ಪೆಂಡ್ ಮಾಡಲಾಗಿದೆ ಎಂದರು.

ಬಿಜೆಪಿಯವರು ರಾಜೀನಾಮೆ ಒತ್ತಾಯಕ್ಕೆ ಪ್ರತಿಕ್ರಿಯೆ, ಎಲ್ಲ ಘಟನೆಗಳಿಗೂ ಒಂದೇ ಮಾನದಂಡ ಅನ್ವಯ ಆಗಬೇಕು. ಪಹಲ್ಗಾಮ್ ನಲ್ಲಿ ಉಗ್ರರು ಜನರನ್ನು ಹತ್ಯೆ ಮಾಡಿ ಹೋಗಿದ್ದಾರೆ ಅವರು ಎಲ್ಲಿ ಹೋಗಿದ್ದಾರೆ. ಭಾರತದ ಒಳಗೆ ಇದ್ದಾರ ಅಥವಾ ಪಾಕಿಸ್ತಾನಕ್ಕೆ ಹೋಗಿದ್ದಾರ ಎನ್ನುವ ಮಾಹಿತಿ ಇಲ್ಲ. ಘಟನೆಗೆ ಸಂಬಂಧಿಸಿದಂತೆ ಕೇಂದ್ರ ಗೃಹ ಸಚಿವರ, ವಿದೇಶಾಂಗ ಸಚಿವರ ರಾಜೀನಾಮೆಗೆ ಯಾರಾದರೂ ಒತ್ತಾಯಿಸಿದ್ದಾರೆಯೇ?.

ಪ್ರಿಯಾಂಕ್ ಖರ್ಗೆ, ಸಚಿವ

ಅಧಿಕಾರಿಗಳ ಅಮಾನತು ಒಳ್ಳೆಯ ನಿರ್ಧಾರ

ಹುಬ್ಬಳ್ಳಿ: ಚಿನ್ನಸ್ವಾಮಿ ಮೈದಾನದಲ್ಲಿ ನಡೆದ ನೂಕುನುಗ್ಗಲು ಹಾಗೂ ಸುಮಾರು 11 ಜನರ ಸಾವಿನ ಪ್ರಕರಣಕ್ಕೆ ಸಂಬಂಧಿಸಿ ದಂತೆ ಬೆಂಗಳೂರು ನಗರ ಪೊಲೀಸ್ ಆಯುಕ್ತ ಸೇರಿ ಹಿರಿಯ ಅಧಿಕಾರಿಗಳ ಅಮಾನತು ಮಾಡಿದ ಕ್ರಮ ಒಳ್ಳೆಯ ನಿರ್ಧಾರವಾಗಿದೆ ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಬೆಂಗಳೂರಿನ ಘಟನೆ ದುರಾದೃಷ್ಟಕರ. ಘಟನೆ ಬಗ್ಗೆ ಯಾರು, ಏನು ಎಂಬುದರ ತಾಳ ಮೇಳ ಇಲ್ಲದಂತಾಗಿದೆ. ನನ್ನ 45 ವರ್ಷಗಳ ರಾಜಕೀಯ ಜೀವನದಲ್ಲಿ ಪೊಲೀಸ್ ಆಯುಕ್ತ ಸೇರಿ ಐಪಿಎಸ್ ಅಧಿಕಾರಿಗಳನ್ನು ಏಕಕಾಲಕ್ಕೆ ಅಮಾನ ತುಗೊಳಿಸಿದ್ದು ಇದೇ ಮೊದಲು ಎಂದರು.

ಮಧ್ಯರಾತ್ರಿ ನಿರ್ಧಾರ ತೆಗೆದುಕೊಂಡು ಮರುದಿನವೇ ಕಾರ್ಯಕ್ರಮ ಆಯೋಜನೆಗೆ ಮುಂದಾಗಿದ್ದೆ ಅನಾಹುತಕ್ಕೆ ಕಾರಣವಾಗಿದೆ. ದೊಡ್ಡ ಕಾರ್ಯಕ್ರಮಕ್ಕೆ ಮುಂಚಿತವಾಗಿ ದಿನಾಂಕ, ಸಮಯ ನಿಗದಿ ಮಾಡಿ ಅಗತ್ಯ ಕ್ರಮ ಕೈಗೊಳ್ಳಬೇಕು. ಪೊಲೀಸ್ ಪರವಾನಗಿ ಇಲ್ಲದೆಯೇ ದೊಡ್ಡ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಕ್ರಿಕೆಟ್ ಸಂಸ್ಥೆಯವರು ಸರಕಾರವನ್ನು ಕೇಳದ ಮಟ್ಟಿಗೆ ವರ್ತಿಸುತ್ತಾರೆ. ಅವರಿಗೆ ಕಡಿವಾಣ ಹಾಕಬೇಕಾಗಿದೆ. ದೇಶದಲ್ಲಿ ಕ್ರಿಕೆಟ್ ಒಂದೇ ಕ್ರೀಡೆ ಎನ್ನುವ ಮಟ್ಟಕ್ಕೆ ಭ್ರಮೆ ಸೃಷ್ಟಿಸಲಾಗುತ್ತಿದೆ. ಹಳ್ಳಿಗಳಲ್ಲಿಯೂ ಕ್ರಿಕೆಟ್ ಹೆಚ್ಚು ಪ್ರಭಾವ ಬೀರುತ್ತಿದ್ದು ಇತರೆ ಕ್ರೀಡೆಗಳು ಸೊರಗುತ್ತಿದ್ದು, ಇದು ಸರಿಯಲ್ಲ . ಚಿನ್ನಸ್ವಾಮಿ ಕ್ರೀಡಾಂಗಣ ಬಳಿ ಅನಾಹುತದ ಬಗ್ಗೆ ಆರ್‌ಸಿಬಿ, ಕ್ರಿಕೆಟ್ ಸಂಸ್ಥೆ ಮೇಲೆ ಇನ್ನಷ್ಟು ಕಠಿಣ ದೂರುಗಳನ್ನು ದಾಖಲಿಸಬೇಕು.

-ಬಸವರಾಜ ಹೊರಟ್ಟಿ, ವಿಧಾನಪರಿಷತ್ ಸಭಾಪತಿ

ಡ್ರಾಮಾ ಮಾಡೋದ್ರಲ್ಲಿ ಎಚ್‌ಡಿಕೆ ಎಕ್ಸ್‌ಪರ್ಟ್

ರಾಮನಗರ: ಡ್ರಾಮಾ ಮಾಡೋದ್ರಲ್ಲಿ ಕುಮಾರಸ್ವಾಮಿ ಎಕ್ಸ್‌ಪರ್ಟ್. ಅದು ಇಡೀ ರಾಜ್ಯದ ಜನರಿಗೆ ಗೊತ್ತು. ಯಾವ ಸಂದರ್ಭದಲ್ಲಿ ಯಾವ ರೀತಿ ಡ್ರಾಮಾ ಆಡಬೇಕು, ವಿಷಯಗಳನ್ನ ಯಾವ ರೀತಿ ತಿರುಚಬೇಕು ಅನ್ನೋದು ಗೊತ್ತಿದೆ. ಅವರಿಗೆ ಸತ್ತವರ ಬಗ್ಗೆ ಅನುಕಂಪ ಇದ್ಯೋ, ರಾಜಕೀಯ ಇದ್ಯೋ. ಅವರು ಯಾವತ್ತೂ ಸತ್ತವರ ಮೇಲೆ ರಾಜಕಾರಣ ಮಾಡಿಕೊಂಡು ಬೆಳೆದು ಬಂದವರು ಎಂದು ಮಾಜಿ ಸಂಸದ ಡಿ.ಕೆ.ಸುರೇಶ್ ತಿರುಗೇಟು ನೀಡಿದರು.

ಕಾಲ್ತುಳಿತ ಪ್ರಕರಣದಲ್ಲಿ ಡಿಸಿಎಂ ಡಿಕೆಶಿಯದ್ದು ಡ್ರಾಮಾ ಕಣ್ಣೀರು ಎಂಬ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿಕೆ ವಿಚಾರ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿ, ಅವರಿಗೆ ಯಾವತ್ತೂ ಸಾರ್ವಜನಿಕ ಹಿತಾಸಕ್ತಿ ಬಗ್ಗೆ ಗೌರವ ಇಲ್ಲ. ಇವತ್ತೂ ರಾಜಕೀಯಕ್ಕಾಗಿ ಆರೋಪ ಮಾಡ್ತಿದ್ದಾರೆ. ಸರಕಾರದ ಕಾರ್ಯಕ್ರಮ ಇದ್ದಿದ್ದರಿಂದ ಡಿಕೆಶಿ ಅಲ್ಲಿ ಹೋಗಿದ್ರು. ವಿಧಾನ ಸೌಧದಲ್ಲಿ ಕಾರ್ಯಕ್ರಮ ಮುಗಿದ ಬಳಿಕ ಕಾಲ್ತುಳಿತ ಆಗಿದೆ ಎಂದರು.

ಕಾಲ್ತುಳಿತ ಪ್ರಕರಣ ಕೂಡಾ ಅನಿರೀಕ್ಷಿತ ಅವಘಡ. ಲಕ್ಷಾಂತರ ಜನರು ಒಂದೇ ಕಡೆ ಸೇರಿದ್ರೆ ಅನಿರೀಕ್ಷಿತ ಘಟನೆ ನಡೆಯೋದು ಸಹಜ. ಕುಮಾರಸ್ವಾಮಿ ಸಿಎಂ ಆಗಿದ್ದಾಗ ಡಾ.ರಾಜಕುಮಾರ್ ಅಂತ್ಯಕ್ರಿಯೆಯಲ್ಲಿ ಅವಘಡ ಆಯ್ತು. ಕುಮಾರಸ್ವಾಮಿ ಆಗ ರಾಜೀನಾಮೆ ಕೊಟ್ರಾ? ಆಗ ಅವಿತುಕೊಂಡು ಕೂತಿದ್ದರು. ಇದನ್ನ ಕುಮಾರಸ್ವಾಮಿ, ಅಶೋಕ್, ವಿಜಯೇಂದ್ರಗೆ ಕೇಳಿ. ಇದರಲ್ಲಿ ರಾಜಕೀಯ ಬಿಡಿ. ಲೋಪ ಆಗಿರೋದು ನಿಜ. ಅದನ್ನ ಸರಿಪಡಿಸೋದು ಸರಕಾರದ ಜವಾಬ್ದಾರಿ.

ಡಿ.ಕೆ.ಸುರೇಶ್, ಮಾಜಿ ಸಂಸದ

ತನಿಖೆಯ ನಂತರ ಚರ್ಚಿಸಿ ಕ್ರಮ

ದಾವಣಗೆರೆ: ಆರ್‌ಸಿಬಿ ಮೆರವಣಿಗೆಯಲ್ಲಿ ಸಾವಿನ ಪ್ರಕರಣ ಕುರಿತು ಸಂಪೂರ್ಣ ತನಿಖೆ ನಡೆಸಲಾಗುತ್ತಿದ್ದು, ತನಿಖೆ ನಂತರ ಯಾರ ತಪ್ಪಿದೆ

ಎಂಬುದನ್ನು ಅವಲೋಕಿಸಿ, ಅಂತಹವರ ಮೇಲೆ ಕ್ಯಾಬಿನೆಟ್‌ನಲ್ಲಿ ಚರ್ಚಿಸಿ ಕ್ರಮಕ್ಕೆಗೊಳ್ಳಲಾಗುವುದು ಎಂದು ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಆರ್‌ಸಿಬಿ ಮೆರವಣಿಗೆ ಕಾಲ್ತುಳಿತ ಪ್ರಕರಣಕ್ಕೆ ಬಿಜೆಪಿಯವರೂ ಹೊಣೆಗಾರರು. ಮೆರವಣಿಗೆಗೆ ಅವಕಾಶ ನೀಡದೆ ಇರುವ ಸಂದರ್ಭದಲ್ಲಿ ಅವರೇ ಮೊದಲು ಟ್ವೀಟ್ ಮಾಡಿದ್ದರು. ಆದರೆ, ಈಗ ಅವರೇ ಉಲ್ಟಾ ಆಗಿದ್ದಾರೆ. ಇದೆಲ್ಲವೂ ತನಿಖೆ ನಂತರ ಗೊತ್ತಾಗಲಿದೆ ಎಂದರು.

ಆರ್‌ಸಿಬಿ ಮೆರವಣಿಗೆಯಲ್ಲಿ ಕಲ್ತುಳಿತ ಪ್ರಕರಣದಲ್ಲಿ ಮೈಲೇಜ್ ತೆಗೆದುಕೊಳ್ಳುವ ಅವಶ್ಯಕತೆ ಸರಕಾರಕ್ಕಿಲ್ಲ. ಆದರೆ, ಮೆರವಣಿಗೆ ಮುನ್ನ ಅಧಿಕಾರಿಗಳು ಮುಂಜಾಗ್ರತೆ ವಹಿಸಬೇಕಿತ್ತು. ಸರಕಾರ ತರಾತುರಿಯಲ್ಲಿ ಯಾವುದೇ ರೀತಿಯಾದ ನಿರ್ಧಾರ ತೆಗೆದು ಕೊಂಡಿಲ್ಲ. ಯಾವ ಪೊಲೀಸ್ ಅಧಿಕಾರಿಯಿಂದ ಎಲ್ಲೆಲ್ಲಿ ಲೋಪವಾಗಿದೆ ಎಂಬುದನ್ನು ಆಧರಿಸಿ ಅವರನ್ನು ಸಸ್ಪೆಂಡ್ ಮಾಡಲಾಗಿದೆ. ಇದಕ್ಕಾಗಿ ಡಿಸಿಎಂ, ಗೃಹ ಸಚಿವರು ರಾಜೀನಾಮೆ ನೀಡಬೇಕಾಗಿಲ್ಲವೆಂದರು.

ಸರಕಾರಕ್ಕೆ ದೇವರೇ ಬುದ್ಧಿ ಹೇಳಲಿ

ಚಿಕ್ಕಮಗಳೂರು: ನೋವಿನ ಸಂಗತಿ ಅಂದರೆ, ಈ ಸರಕಾರಕ್ಕೆ ದೇವರೇ ಬುದ್ಧಿ ಹೇಳಬೇಕು ಎಂದು ಸಂಸದ ಕೋಟ ಶ್ರೀನಿವಾಸ್ ಪೂಜಾರಿ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿ, ವಿಜಯೋತ್ಸವ ಸಂದರ್ಭದಲ್ಲಿ ಪೂರ್ಣ ತಯಾರಿ ಕಡಿಮೆ ಇತ್ತು. ಸಿದ್ಧತೆಗಳನ್ನು ಮಾಡಿಕೊಳ್ಳಬೇಕಿತ್ತು. ಒಬ್ಬರ ಮೇಲೆ ಒಬ್ಬರು ಆರೋಪ ಮಾಡುವುದರಲ್ಲಿ ನನಗೆ ಅರ್ಥವಿದೆ ಎನಿಸುವುದಿಲ್ಲ. ಪೂರ್ವಭಾವಿ ಸಿದ್ಧತೆ ಇಲ್ಲದೆ ಕಾರ್ಯಕ್ರಮ ಮಾಡಿದರೆ ಸಮಸ್ಯೆಗಳು ಉಂಟಾಗುತ್ತದೆ ಎಂದು ಪೊಲೀಸ್ ಇಂಟಲಿಜೆನ್ಸ್ ಕೂಡ ಹೇಳಿದೆ ಎನ್ನುವುದು ಸುದ್ದಿ, ಇಂತದರಲ್ಲಿ ಸರಕಾರ ನಿರ್ಣಯ ತೆಗೆದುಕೊಂಡಿದೆ ಎಂದು ಹೇಳಿದರು. ನೋವಿನ ಸಂಗತಿ ಎಂದರೆ ಇಂತಹ ಸಾವಿನ ಹಿನ್ನೆಲೆ ಸಮಸ್ಯೆಯನ್ನು ಅರ್ಥಮಾಡಿಕೊಂಡು ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ವಿಷಾದ ವ್ಯಕ್ತಪಡಿಸುತ್ತೇವೆಂದು ಹೇಳುತ್ತಾರೆಂದು ಅಂದುಕೊಂಡರೆ, ನಮಗೆ ಸಂಬಂಧವಿಲ್ಲವೆಂದು ಸರ್ಕಾರ ಹೇಳಿದೆ. ಸಂಬಂಧಪಟ್ಟ ಸಂಸ್ಥೆಯವರು ನಮಗೆ ಸಂಬಂಧವಿಲ್ಲ ನಾವೂ ಕರೆಕೊಟ್ಟಿಲ್ಲವೆಂದರೆ ಏನು ಅರ್ಥ? ಸರಕಾರ ನಾಲ್ಕೈದು ಪೊಲೀಸ್ ಅಧಿಕಾರಿಗಳನ್ನು ಅಮಾನತ್ತು ಮಾಡಿ ತಪ್ಪು ನಾವು ಮಾಡಿಲ್ಲದಲ್ಲ, ಅವರು ಮಾಡಿದ್ದು ಎಂದು ಹೇಳಿದರೆ ಇದಕ್ಕೆಲ್ಲ ಅರ್ಥವಿಲ್ಲ ಎಂದರು.

ಗುಪ್ತಚರ ಇಲಾಖೆಯ ವೈಫಲ್ಯ

ಬೆಳಗಾವಿ: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ವಿಜಯೋತ್ಸವ ಆಚರಣೆಗೆ ಆರ್ ಸಿಬಿ ಹಾಗೂ ಕೆಎಸ್‌ಸಿಎ ಸರಕಾರದಿಂದ ಅನುಮತಿ ಪಡೆಯದೆ

ಕಾರ್ಯಕ್ರಮ ಆಯೋಜನೆ ಮಾಡಿದ್ದು ದುರ್ಘಟನೆಗೆ ಕಾರಣವಾಗಿದೆ. ಜತೆಗೆ ಗುಪ್ತಚರ ಇಲಾಖೆ ಲೋಪ ಕಂಡುಬಂದ ಹಿನ್ನೆಲೆಯಲ್ಲಿ ಅಧಿಕಾರಿಗಳ ಅಮಾನತು ಮಾಡಲಾಗಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ವಿಜಯೋತ್ಸವ ಆಚರಣೆಗೆ ಸಂಬಂಧಪಟ್ಟವರು ಅನುಮತಿ ಪಡೆಯಬೇಕಿತ್ತು. ಅನುಮತಿ ನೀಡದೆ ಕಾರ್ಯಕ್ರಮಕ್ಕೆ ಅವಕಾಶ ಮಾಡಿಕೊಟ್ಟ ಹಿನ್ನಲೆಯಲ್ಲಿ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲಾಗಿದೆ ಎಂದರು. ಬೆಂಗಳೂರು ನಗರ ಪೊಲೀಸ್ ಆಯುಕ್ತ ದಯಾನಂದ ವರ್ಗಾವಣೆಗೆ ವಿರೋಧ ವ್ಯಕ್ತವಾಗುತ್ತಿದೆ ಎಂಬ ಪ್ರಶ್ನೆಗೆ ಉತ್ತರಿಸಿದ ಇವರು. ನಗರದ ಕಾನೂನು ಸುವ್ಯವಸ್ಥೆ ಕಾಪಾಡುವ ಜವಾಬ್ದಾರಿ ಪೊಲೀಸ್ ಆಯುಕ್ತರಿಗೆ ಇರುತ್ತದೆ. ಈ ವಿಚಾರದಲ್ಲಿ ಲೋಪವಾದ ಹಿನ್ನೆಲೆಯಲ್ಲಿ ಕ್ರಮ ಜರುಗಿಸಲಾಗಿದೆ ಎಂದು ಅಭಿಪ್ರಾಯಪಟ್ಟರು. ಆರ್‌ಸಿಬಿ ವಿಜಯೋತ್ಸವದಲ್ಲಿ ಸರಕಾರದ ಲೋಪವಾಗಿದೆ. ಅದನ್ನು ನಾನು ಇಲ್ಲ ಎನ್ನುವುದಿಲ್ಲ. ಆದರೆ ಅದಕ್ಕೆ ನಮ್ಮ ಇಲಾಖೆ ಅನುಮತಿ ತೆಗೆದುಕೊಳ್ಳಬೇಕು ಎಂದು ಹೇಳಬೇಕಿತ್ತು ಎಂದು ಹೇಳಿದರು.

ದುರಂತದಲ್ಲಿ ರಾಜಕೀಯ ಬೇಡ

ರಾಮನಗರ: ಪಹಲ್ಗಾಮ್ ಘಟನೆಯಲ್ಲೂ ಅಮಾಯಕರು ಸತ್ತಿರಲಿಲ್ಲವೇ? ಅದೂ ಕೇಂದ್ರ ಸರಕಾರದ ವೈಫಲ್ಯವಲ್ಲವೇ? ಅದಕ್ಕೆ

ಸಂಬಂಧಿಸಿದಂತೆ, ಪ್ರಧಾನಿ ನರೇಂದ್ರ ಮೋದಿ ಅವರಿಂದ ಯಾಕೆ ರಾಜೀನಾಮೆ ಕೇಳಲಿಲ್ಲ? ದುರಂತದಲ್ಲೂ ರಾಜಕೀಯ ಮಾಡುವುದು ಬಿಜೆಪಿಯ ಕೆಟ್ಟ ಚಾಳಿ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಕಿಡಿಕಾರಿದರು.

ಆರ್‌ಸಿಬಿ ವಿಜಯೋತ್ಸವದಲ್ಲಿ ಸಂಭವಿಸಿದ ಕಾಲ್ತುಳಿತಕ್ಕೆ ಸರಕಾರವೇ ಹೊಣೆ ಎಂಬ ವಿರೋಧ ಪಕ್ಷಗಳ ವಾಗ್ದಾಳಿ ಕುರಿತು ತಾಲೂಕಿನ ಜಾಲಮಂಗಲದಲ್ಲಿ ಸುದ್ದಿಗಾರರೊಂದಿಗೆ ಮಾತ ನಾಡಿ, ಕಾಲ್ತುಳಿತದ ದುರಂತವನ್ನು ಪಹಲ್ಗಾಮ್ ಘಟನೆಗೆ ಹೋಲಿಸ ಲಾರೆ. ಆದರೆ, ದುರಂತಕ್ಕೆ ಸಂಬಂಧಿಸಿದಂತೆ ನಮಗೆ ಪ್ರಶ್ನೆ ಕೇಳುವ ಬಿಜೆಪಿಯವರು, 'ಆಪರೇಷನ್ ಸಿಂಧೂರ' ಯಾಕೆ ನಿಲ್ಲಿಸಿದರು ಎಂಬ ಪ್ರಶ್ನೆಗೆ ಇಲ್ಲಿಯವರೆಗೆ ಉತ್ತರ ಕೊಟ್ಟಿದ್ದಾರಾ?' ಎಂದು ಪ್ರಶ್ನಿಸಿದರು. ಕಾಲ್ತುಳಿತಕ್ಕೆ ಮುಂಚೆ ಬಿಜೆಪಿಯವರು ಏನೇನು ಟ್ವೀಟ್ ಮಾಡಿದ್ದಾರೆಂದು ಗೊತ್ತಿದೆ. ಘಟನೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈಗಾಗಲೇ ಚರ್ಚಿಸಿ ಕೆಲವರ ವಿರುದ್ಧ ಕ್ರಮ ಕೈಗೊಂಡಿದ್ದಾರೆ. ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ನ್ಯಾಯಾಂಗ ತನಿಖೆಗೂ ಆದೇಶಿಸಿದ್ದಾರೆ ಎಂದು ಹೇಳಿದರು.

ವಿಪಕ್ಷಗಳಿಂದ ಹೆಣದ ಮೇಲೆ ರಾಜಕಾರಣ

ಬೆಳಗಾವಿ: ಕಾಲ್ತುಳಿತ ದುರ್ಘಟನೆ ಭೀಕರತೆಯಿಂದ ನೊಂದು ಉಪಮುಖ್ಯಮಂತ್ರಿ ಕಣ್ಣೀರು ಹಾಕಿದ್ದರೆ ಇದನ್ನೇ ವಿಪಕ್ಷಗಳು ಟೀಕೆ ಮಾಡುತ್ತಿರುವು



ಶೋಚನೀಯ. ನೊಂದ ಜನರ ಪರವಾಗಿ ಸರಕಾರ ನಿಂತಿದ್ದನ್ನು ಸಹಿಸಲಾಗದೆ ವಿರೋಧ ಪಕ್ಷಗಳು ರಾಜಕಾರಣ ಮಾಡುತ್ತಿರುವುದು ನಾಚಿಕೆಗೇಡಿನ ಸಂಗತಿ ಎಂದು ಕಾನೂನು ಸಚಿವ ಎಚ್.ಕೆ ಪಾಟೀಲ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಸರಕಾರ ತನಿಖೆ ತೀವ್ರಗೊಳಿಸಿದೆ. ವಿಪಕ್ಷಗಳು ಇದೇ ವಿಚಾರವಾಗಿ ರಾಜಕಾರಣ ಮಾಡುತ್ತಿವೆ. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುತ್ತೇವೆ ಎಂದರು.

ಕಾಲ್ತುಳಿತದ ದುರ್ಘಟನೆ ನಡೆದ ನಂತರ ಸರಕಾರ ನಿರ್ಣಾಯ ತಗೆದುಕೊಂಡು ಕರ್ತವ್ಯ ಲೋಪ ಎಸಗಿದ ಅಧಿಕಾರಿಗಳನ್ನು ಅಮಾನತು ಮಾಡಿದೆ. ತಪ್ಪು ಮಾಡಿದವರ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಆದೇಶ ನೀಡಿದ್ದು, ಇದರಲ್ಲಿ ವಿಪಕ್ಷಗಳು ರಾಜಕಾರಣ ಮಾಡುತ್ತಿವೆ ಎಂದು ಕಿಡಿಕಾರಿದರು.

ಒಂದು ಕೋಟಿ ಪರಿಹಾರ ನೀಡಲಿ

ಬೆಳಗಾವಿ:18 ಆವೃತ್ತಿಯ ಐಪಿಎಲ್ ಟೂರ್ನಿ ಯಲ್ಲಿ ಚಾಂಪಿಯನ್ ಪಟ್ಟ ಅಲಂಕರಿಸಿದ ಆರ್ ಸಿಬಿ ತಂಡದ ಸಂಭ್ರಮಾಚರಣೆ ವೇಳೆ ಮೃತಪಟ್ಟ

ಕುಟುಂಬದವರಿಗೆ ಕೆಎಸ್‌ಸಿಎಹಾಗೂ ಆರ್ ಸಿಬಿ ಮ್ಯಾನೇಜ್‌ಮೆಂಟ್ ವತಿಯಿಂದ ಒಂದು ಕೋಟಿ ರೂಪಾಯಿ ಪರಿಹಾರ ನೀಡಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್ ಆಗ್ರಹಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಆರ್‌ಸಿಬಿ ಸಂಭ್ರಮಾಚರಣೆ ವೇಳೆ ಅಭಿಮಾನಿಗಳ ಸಾವು ನೋವು ತಂದಿದೆ. ಆರ್ ಸಿಬಿ ಹಾಗೂ ಕೆಎಸ್‌ಸಿಎ ಹೆಚ್ಚಿನ ಪರಿಹಾರ ಕೊಡಬೇಕು ಎಂದು ಹೇಳಿದರು.

ಈ ಪ್ರಕರಣದಲ್ಲಿ ವಿರೋಧ ಪಕ್ಷಗಳು ಜನರ ದಾರಿ ತಪ್ಪಿಸುತ್ತಿವೆ. ನಮ್ಮ ಹಿರಿಯರು ಇದಕ್ಕೆ ತಕ್ಕ ಉತ್ತರ ಕೊಡಲಿದ್ದಾರೆ. ರಾಜಕಾರಣಕ್ಕಿಂತ ಘಟನೆ ಯಾಕೆ ಆಯಿತು ಎಂಬುದು ಗೊತ್ತಾಗಬೇಕು. ಇಂಥ ದುರ್ಘಟನೆ ನಡೆದಿದ್ದು ನಿಜಕ್ಕೂ ದುರದೃಷ್ಟಕರ ತಪ್ಪು ಮಾಡಿದವರ ವಿರುದ್ಧ ತಕ್ಷಣ ಕ್ರಮಕ್ಕೈಗೊಳ್ಳುತ್ತೇವೆ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

11 ಜನರ ಸಾವಿಗೆ ಸಿಎಂ,ಡಿಸಿಎಂ ಹೊಣೆ

ಮೈಸೂರು: ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆದ ಕಾಲ್ತುಳಿತ ದುರಂತಕ್ಕೆ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ನೇರ ಹೊಣೆ ಎಂದು

ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಆರೋಪಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷ ತನ್ನ ಕ್ರೆಡಿಟ್ ಗೋಸ್ಕರ ರಾಜಕೀಯ ಲಾಭಕ್ಕಾಗಿ, ರಾಜಕೀಯ ಕುಟುಂಬದ ಸದಸ್ಯರ ಸೆಲ್ಫಿ ಹುಚ್ಚಿಗೆ 11 ಜನ ಬಲಿಯಾದರು. ಬಳಿಕ ಈಗ ದಕ್ಷ ಅಧಿಕಾರಿಯನ್ನು ಸಸ್ಪೆಂಡ್ ಮಾಡಿ ಕೈ ತೊಳೆದುಕೊಂಡಿದ್ದಾರೆ ಎಂದು ಟೀಕಿಸಿದರು.

ಸರಕಾರ ಅಂದರೆ ಅಧಿಕಾರಿಗಳಲ್ಲ. ಮಂತ್ರಿಗಳು, ಸಿಎಂ, ಡಿಸಿಎಂ ಎಲ್ಲರೂ ಸೇರಿ ಸರಕಾರ. ವಿಧಾನ ಸೌಧದ ಮುಂದೆ ಎಲ್ಲ ಮಂತ್ರಿಗಳ ಕುಟುಂಬವೇ ಇತ್ತು. ಅವರೆಲ್ಲರೂ ಸೆಲ್ಫಿ ತೆಗೆದು ಕೊಳ್ಳುತ್ತಿದ್ದರು. ಅವರೆಲ್ಲರೂ ಪರ್ಮಿಷನ್ ತೆಗೆದುಕೊಂಡು ಹೋಗಿದ್ದರಾ? ಎಂದು ಪ್ರಶ್ನಿಸಿದರು. ಡಿಸಿಎಂ ಸಾಹೇಬರು ಆರ್‌ಸಿಬಿ ಕೋಚ್ ರೀತಿ ಪೋಸ್ ಕೊಟ್ಟಿದ್ದರು. . ಸಮಾರಂಭಕ್ಕೆ ಅನುಮತಿ ಕೊಟ್ಟಿದ್ದ್ಯಾರು? ದಕ್ಷ ಅಧಿಕಾರಿ ಸಸ್ಪೆಂಡ್ ಮಾಡಿ ಕೈ ತೊಳೆದುಕೊಂಡರು ಎಂದು ಕಿಡಿಕಾರಿದರು.

ಡಿಕೆಶಿ ಬಾಲಿಶತನಕ್ಕೆ 11 ಮಂದಿ ಸಾವು

ಬಳ್ಳಾರಿ: ಚಿನ್ನಸ್ವಾಮಿ ಕ್ರಿಕೆಟ್ ಮೈದಾನದ ಬಳಿ ನಡೆದ ದುರಂತಕ್ಕೆ ಡಿ.ಕೆ ಶಿವಕುಮಾರ್ ಅವರ ಬಾಲಿಶ ನಡವಳಿಕೆ, ಮುಖ್ಯಮಂತ್ರಿ ಮತ್ತು ಸಚಿವರ

ಸೆಲ್ಫಿ-ರೀಲ್ಸ್ ಹುಚ್ಚು, ಸರಕಾರದ ವೈಫಲ್ಯವೇ ಕಾರಣ' ಎಂದು ಮಾಜಿ ಸಚಿವ ಬಿ. ಶ್ರೀರಾಮುಲು ವಾಗ್ದಾಳಿ ನಡೆಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿಎಂ, ಸಚಿವರೆಲ್ಲರೂ ವರ್ಕ್‌ಫ್ರಮ್ ಹೋಂ ಮಾಡುತ್ತಿ ದ್ದಾರೆ. ಅವರ ನಿರ್ಲಕ್ಷ್ಯ, ಪ್ರಚಾರಪ್ರಿಯತೆಯೇ ಘಟನೆಗೆ ಕಾರಣ. ಸಿಎಂ ಸಿದ್ದರಾಮಯ್ಯ ಅವರನ್ನು ಎ-1 ಆರೋಪಿ ಮಾಡಬೇಕು. ಡಿಸಿಎಂ ಡಿ.ಕೆ ಶಿಕುಮಾರ್ ಎ-2, ಗೃಹ ಸಚಿವ ಪರಮೇಶ್ವರ ಅವರನ್ನು ಎ-3 ಆರೋಪಿಯನ್ನಾಗಿ ಮಾಡಿ, ಎಫ್‌ಐಆರ್ ದಾಖಲಿಸಬೇಕು. ಈ ಕೂಡಲೇ ಬಂಧಿಸಬೇಕು' ಎಂದು ಒತ್ತಾಯಿಸಿದರು.

ಘಟನೆಯನ್ನು ನ್ಯಾಯಾಧೀಶರಿಂದ ತನಿಖೆ ಮಾಡಿಸುವುದಾಗಿ, ಸಿಐಡಿಗೆ ವಹಿಸುವುದಾಗಿ ಸಿಎಂ ಹೇಳಿದ್ದಾರೆ. ಈ ತನಿಖೆಗಳಿಂದ ಸತ್ಯಾಂಶ ಹೊರಬರಲು ಸಾಧ್ಯವೇ? ಘಟನೆಯನ್ನು ಸಿಬಿಐ ಮೂಲಕ ತನಿಖೆ ಮಾಡಿಸಬೇಕು' ಎಂದರು.

ಪೊಲೀಸರು ಮಾಹಿತಿ ನೀಡುವಲ್ಲಿ ವಿಫಲ

ಮಂಡ್ಯ: ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ಇಲಾಖೆ ಸರಕಾರಕ್ಕೆ ಕೆಲವು ಮಾಹಿತಿ

ಕೊಡುವುದರಲ್ಲಿ ವಿಫಲವಾಗಿದೆ. ಕ್ಯಾಬಿನೆಟ್‌ನಲ್ಲಿ ಸುದೀರ್ಘ ಚರ್ಚೆ ನಂತರ ಅಮಾನತು ತೀರ್ಮಾನ ಕೈಗೊಂಡಿದ್ದು, ಪೊಲೀಸರು ಕೆಟ್ಟವರಲ್ಲ, ಈ ಘಟನೆ ಎಲ್ಲರಿಗೂ ನೋವು ತಂದಿದೆ ಎಂದು ಸಚಿವ ಎನ್. ಚಲುವರಾಯಸ್ವಾಮಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಇಂತಹ ಸಾವು-ನೋವಲ್ಲೂ ರಾಜಕಾರಣ ಮಾಡುವವರಿಗೆ ಏನು ಹೇಳಲು ಆಗುತ್ತದೆ. ದೇವರು ಅವರಿಗೆ ಒಳ್ಳೆ ಬುದ್ಧಿ ಕೊಡಬೇಕಷ್ಟೇ. ಪೊಲೀಸ್ ಇಲಾಖೆ ಜನರನ್ನು ನಿಯಂತ್ರಣ ಮಾಡಬೇಕಿತ್ತು. ಸರಕಾರ ಪೊಲೀಸ್ ಇಲಾಖೆಗೆ ಜವಾಬ್ದಾರಿ ಕೊಡುತ್ತದೆ. ಆದರೆ ಅವರ ವಿಫಲತೆ ಇದ್ದದ್ದರಿಂದ ಅಮಾನತು ಮಾಡಲಾಗಿದೆ ಎಂದು ಅಮಾನತು ವಿಚಾರವನ್ನು ಸಮರ್ಥಿಸಿಕೊಂಡರು. ಈ ಘಟನೆ ನಡೆಯಬಾರದಿತ್ತು. ಕೆಲವೊಮ್ಮೆ ಉದ್ವೇಗದಿಂದ ಇಂತಹ ಘಟನೆಗಳು ನಡೆದು ಬಿಡುತ್ತವೆ. ಬೇರೆ ಘಟನೆ ಉದಾಹರಣೆ ಕೊಟ್ಟು ಈ ಘಟನೆ ಸಮರ್ಥಿಸಿಕೊಳ್ಳಲ್ಲ ಎಂದರು.

ವಿಶ್ವವಾಣಿ

ಸಂಪಾದಕೀಯ

ಇದು ಪ್ರಶಂಸಾರ್ಹ ಬೆಳವಣಿಗೆ

ಪಹಲ್ಗಾಮ್ ಮಾರಣಹೋಮಕ್ಕೆ ಕುಮ್ಮಕ್ಕು ನೀಡಿದ ಪಾಕಿಸ್ತಾನಕ್ಕೆ ಬುದ್ಧಿ ಕಲಿಸಲೆಂದು ಪಾಕ್-ಕೃಪಾಪೋಷಿತ ಉಗ್ರರ ಬೀಡುಗಳ ಮೇಲೆ ದಾಳಿಮಾಡಲು ಹಮ್ಮಿಕೊಳ್ಳಲಾದ 'ಆಪರೇಷನ್ ಸಿಂದೂರ' ಕಾರ್ಯಾಚರಣೆಯು ಹಲವು ನೆಲೆಗಳಲ್ಲಿ ಭಾರತದ ಸೇನಾಶಕ್ತಿಯನ್ನು ಜಗದೆದುರು ತೆರೆದಿಟ್ಟಿದೆ. ಈ ಕಾರ್ಯಾಚರಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ 'ಬ್ರಹ್ಮೋಸ್' ಕ್ಷಿಪಣಿ ವ್ಯವಸ್ಥೆಯ ಖರೀದಿಗೆ ಈಗ ವಿಶ್ವದ ವಿವಿಧ ದೇಶಗಳು ಸರದಿಯಲ್ಲಿ ನಿಂತಿರುವುದು ಇದಕ್ಕೊಂದು ಪುರಾವೆಯಾಗಬಲ್ಲದು. 'ಬ್ರಹ್ಮೋಸ್' ಎಂಬುದು ಭಾರತ ಮತ್ತು ರಷ್ಯಾ ದೇಶಗಳ ಜಂಟಿ ಸಹಯೋಗದಲ್ಲಿ ಸಾಕಾರಗೊಂಡಿರುವ ಕನಸು ಎಂಬುದಿಲ್ಲಿ ಉಲ್ಲೇಖನೀಯ. ಇಂಥ ಮತ್ತಷ್ಟು ಉಪಕ್ರಮಗಳಿಗೆ ಭಾರತವು ಮುಂದಾದರೆ ಒಳಿತು ಎಂಬ ಗ್ರಹಿಕೆ ಬಹುತೇಕರಲ್ಲಿ ಗಟ್ಟಿಯಾಗುತ್ತಿರುವಾಗಲೇ, ಅಂಥ ಮತ್ತೊಂದು ಸಹಯೋಗಕ್ಕೆ ಭಾರತ ಮುಂದಾಗಿದೆ. ಫ್ರಾನ್ಸ್ ಮೂಲದ ರಫೇಲ್ ಯುದ್ಧ ವಿಮಾನಗಳ ತಯಾರಕನಾಗಿರುವ 'ಡಸಾಲ್ಟ್ ಏವಿಯೇಷನ್' ಸಂಸ್ಥೆಯು ಭಾರತದ 'ಟಾಟಾ ಸಮೂಹ'ದೊಂದಿಗೆ ಒಡಂಬಡಿಕೆ ಮಾಡಿಕೊಂಡಿರುವುದು ಇತ್ತೀಚಿನ ಹೆಮ್ಮೆಯ ಸುದ್ದಿ. ಈ ಸಹಯೋಗವು ಭಾರತ ಹಾಗೂ ಇತರ ದೇಶಗಳ ಮಾರುಕಟ್ಟೆಗಳಿಗೆಂದು ಫೈಟರ್ ಜೆಟ್‌ಗಳ ಕೆಲವು ಭಾಗಗಳನ್ನು ತಯಾರಿಸಲಿದೆ ಎಂಬುದು ಲಭ್ಯ ಮಾಹಿತಿ. ಈ ಸಹಯೋಗದ ಫಲವಾಗಿ ಭಾರತದ ಏರೋಸ್ಪೇಸ್ ಮೂಲಸೌಕರ್ಯ ವಲಯದಲ್ಲಿ ಗಣನೀಯ ಪ್ರಮಾಣದಲ್ಲಿ ಹೂಡಿಕೆಯಾಗಲಿದೆ ಎಂಬ ಅಂಶವೂ ಈ ಬೆಳವಣಿಗೆಗೆ ಇರುವ ಮಹತ್ವವನ್ನು ಒತ್ತಿ ಹೇಳಿದೆ. ಬಹುತೇಕರಿಗೆ ಗೊತ್ತಿರುವಂತೆ, ಸ್ವಾತಂತ್ರ್ಯನಂತರದ ಹಲವು ವರ್ಷಗಳವರೆಗೆ, ಸಾಕಷ್ಟು ಉತ್ಪನ್ನಗಳು ಮತ್ತು ಸೇವೆಗಳಿಗೆ ಪರದೇಶಗಳ ಕಡೆಗೇ ಕಣ್ಣು ನೆಡಬೇಕಾಗಿದ್ದ ಭಾರತವು 10 ವರ್ಷಗಳಿಂದೀಚೆಗೆ ಹಲವು ಕ್ಷೇತ್ರಗಳಲ್ಲಿ ಸ್ವಾವಲಂಬಿಯಾಗಿದೆ. ಉಪಗ್ರಹಗಳ ಉಡಾವಣೆಗೆ ಅನ್ಯದೇಶಗಳ ತಂತ್ರಜ್ಞಾನ ಮತ್ತು ಉಡಾವಣಾ ಕೇಂದ್ರವನ್ನು ನೆಚ್ಚಬೇಕಿದ್ದ ಭಾರತವು ಈಗ ತನ್ನದೇ ನೆಲದಲ್ಲಿ ಪರದೇಶಗಳ ಉಪಗ್ರಹಗಳನ್ನು ಉಡಾವಣೆ ಮಾಡುವಷ್ಟರ ಮಟ್ಟಿಗೆ ಸ್ವಾವಲಂಬಿಯಾಗಿರುವುದು ಇದಕ್ಕೊಂದು ಪುರಾವೆ. ಪ್ರಸ್ತುತ ಡಸಾಲ್ಟ್ ಏವಿಯೇಷನ್ ಜತೆಗೆ ಆಗಿರುವ ಒಡಂಬಡಿಕೆಯ ರೀತಿಯಲ್ಲೇ ಮತ್ತಷ್ಟು ಸಹಯೋಗಗಳು ಏರ್ಪಟ್ಟರೆ, ಅದು ಭಾರತದ ಭವಿಷ್ಯವನ್ನು ಮತ್ತಷ್ಟು ಗಟ್ಟಿಗೊಳಿಸಬಲ್ಲದು.

ಸೊಂಪಾದಕೀಯ

ಇದು ಮದುವೆ ಹುಚ್ಚು

ಮದುವೆಗೂ ಮತ್ತು ಸುಳ್ಳಿಗೂ ಅದೇನೋ ಅವಿನಾಭಾವ ಸಂಬಂಧ ಅನ್ಸುತ್ತೆ. ತಮ್ಮ ಸಂಗಾತಿಯ ಬಳಿ, ಅದರಲ್ಲೂ ಗಂಡಸರು ಹೆಂಡತಿಯರ ಬಳಿ ಸುಳ್ಳು ಹೇಳೋದು ತುಂಬಾ ಕಾಮನ್ ವಿಚಾರ. ಎಂಥ ಸತ್ಯ ಹರಿಶ್ಚಂದ್ರ ಎನಿಸಿಕೊಂಡವರೂ ಕನಿಷ್ಠ ಪಕ್ಷ ತಮ್ಮ ಹೆಂಡತಿಯ ಬಳಿ ಅಂತೂ ಸುಳ್ಳು ಹೇಳಿಯೇ ಇರುತ್ತಾರೆ ಅನ್ನೋದು ಜಗತ್ತೇ ನಂಬುವ ವಿಷಯ. ಇದು ಮದುವೆ ಆದಮೇಲೆ ತಮ್ಮ ಸಂಗಾತಿಗಳ ಬಳಿ ಸುಳ್ಳು ಹೇಳುವವರ ವಿಷಯ ಆದರೆ, ಇನ್ನು ಕೆಲವು ಪಡಪೋಶಿಗಳು, ಜೋಡಿ ಹುಡುಕಿಕೊಂಡು, ವರಮಾಲೆ ಹಾಕುವ ಮುನ್ನ, ಮದುವೆ ಆಗೋಕೆ ಅಂತಲೇ ಸುಳ್ಳುಗಳ ಸರಮಾಲೆ ಜೋಡಿಸುತ್ತಾರೆ. ಇಂಥ ಮೋಸದ ಮದುವೆಗಳಿಗೆ, 'ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡು' ಅಂತ ಹೇಳಿದ ಹಿರಿಯರ ಪ್ರೋತ್ಸಾಹವೂ ಇದೆ. ಆದರೆ, ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡು ಎಂದವರು, ನಂತರ ಸುಳ್ಳು ಹೇಳಿದ್ದು ಗೊತ್ತಾಗಿ ಬೇರೆ ಆದವರನ್ನು ಒಂದು ಮಾಡು ಅಂತ ಎಲ್ಲೂ ಹೇಳಿಲ್ಲ. ಅದೇ ನಂಬಿಕೆಯ ಮೇಲೆ ಬೆಂಗಳೂರಿನ ಬನಶಂಕರಿಯಲ್ಲಿರುವ ಭೂಪನೊಬ್ಬ ಬರೋಬ್ಬರಿ 15 ಮದುವೆ ಆಗಿದ್ದಾನಂತೆ. ಅವನು 15 ಜನಕ್ಕೆ ಮೂರು ಗಂಟು ಹಾಕಿರೋದು ಸುಳ್ಳು ಹೇಳುವ ಮೂಲಕ ಎಂದು ಬಿಡಿಸಿ ಹೇಳಬೇಕಾಗಿಲ್ಲ ಬಿಡಿ. 5ನೇ ಕ್ಲಾಸ್ ಓದಿರುವ ಈತ, 'ನಂಬರ್ ಐದು ಎಕ್ಕ, ನಮಗೆಲ್ಲಾ ಒಂದೇ ಲೆಕ್ಕ' ಎನ್ನುವಂತೆ ಕಂಡಕಂಡವರನ್ನು ಮದುವೆ ಆಗಿ, ನಂತರ ಅವರ ಬಳಿ ಇದ್ದ ಹಣ, ಬಂಗಾರ ದೋಚಿಕೊಂಡು ಪರಾರಿ ಆಗುತ್ತಿದ್ದನಂತೆ. ಮದುವೆ ಆಗುವ ಹೆಣ್ಣುಮಕ್ಕಳಿಗೆ ತಾನು ಡಾಕ್ಟರ್, ಎಂಜಿನಿಯರ್, ಕಂಟ್ರಾಕ್ಟರ್ ಅಂತ ತರಹೇವಾರಿ ಸುಳ್ಳು ಹೇಳಿ ಯಾಮಾರಿಸಿದ್ದಾನೆ. ಆದರೂ 35ನೇ ವಯಸ್ಸಿಗೇ 15 ಮದುವೆ ಆಗಿರುವ ಈ ಕಿಲಾಡಿ ಕೃಷ್ಣ, ಇಷ್ಟು ದಿನ ಹೇಗೋ ಅಷ್ಟೂ ಮ್ಯಾರೇಜ್‌ಗಳನ್ನು ಮ್ಯಾನೇಜ್ ಮಾಡಿಕೊಂಡು ಹೋಗುತ್ತಿದ್ದರೂ, ಈಗ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದಾನೆ. ಹಾಗಾಗಿ, 15 ಮದುವೆ ಆಗಿದ್ದರೂ ಪಾಪ, ಅಷ್ಟೊಂದು ಜನ ಹೆಂಡತಿಯರ ಅಪ್ಪಂದಿರನ್ನು ನೆನಪಿಟ್ಟುಕೊಂಡು ಮಾವನ ಮನೆಗೆ ಹೋಗುವ ಅವಕಾಶ ಸಿಕ್ಕಿರದ ಈ ಲಗ್ನವಿನಾಶಕ ರಾಯರು ಈಗ ಮಾವನ ಮನೆಯಲ್ಲಿ ಅತಿಥಿ ಆಗಿದ್ದಾರೆ ಎಂದರೆ ತಪ್ಪಿಲ್ಲ ಬಿಡಿ.

ಸಂಪಾದಕರ ಸದ್ಯಶೋಧನೆ

ಆ ದೇಶವೇಕೆ ಹಾಗಿದೆ?

ಸಿಂಗಾಪುರದ ಪ್ರಥಮ ಪ್ರಧಾನಿಯಾಗಿದ್ದ ಲೀ ಕುಆನ್ ಯು ಬಗ್ಗೆ ಒಂದು ಆಪಾದನೆ ಇತ್ತು- ಅವರು ತಮ್ಮ ದೇಶದ ಜನರ ಖಾಸಗಿ ವ್ಯವಹಾರಗಳಲ್ಲಿ ಮೂಗು ತೂರಿಸುತ್ತಾರೆಂದು. ಅದು ನಿಜವೂ ಆಗಿತ್ತು. ಒಮ್ಮೆ ಈ ಬಗ್ಗೆ ಪತ್ರಕರ್ತರು ಅವರನ್ನು ಪ್ರಶ್ನಿಸಿದಾಗ ಯು ಸ್ವಲ್ಪವೂ ಬೇಸರಿಸಿಕೊಳ್ಳದೆ, ''ಯಾವುದು ಗೊತ್ತಿರುವುದಿಲ್ಲವೋ ಅದನ್ನು ಹೇಳಲೇಬೇಕಾಗುತ್ತದೆ. ಎಲ್ಲರಿಗೂ, ಎಲ್ಲವೂ ಗೊತ್ತಿರುವುದಿಲ್ಲ. ಗೊತ್ತಿದೆ ಎಂದು ಭಾವಿಸಲೂಬಾರದು. ಈ ಕಾರಣದಿಂದ ಕೆಲವು ಪ್ರಮುಖವಲ್ಲದ ವಿಷಯಗಳನ್ನು ಹೇಳಲೇಬೇಕಾಗುತ್ತದೆ. ಆಗ ಜನರಿಗೆ ಕಿರಿಕಿರಿಯಾಗುತ್ತದೆ. ಪ್ರಧಾನಿ ಹೀಗೆ ಮಾತಾಡಿದ್ದು ಸರಿಯಾ ಎಂದು ಚರ್ಚಿಸಲು ಆರಂಭಿಸುತ್ತಾರೆ. ನಾನು ಇಂಥ ವಿಷಯಗಳ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ನನಗೆ ವಿಷಯವನ್ನು ಮನದಟ್ಟು ಮಾಡಿಕೊಡುವುದಷ್ಟೇ ಮುಖ್ಯ'' ಎಂದು ಪ್ರತಿಕ್ರಿಯಿಸಿದ್ದರು. ಯು ಅವರಿಗೆ ಈ ವಿಷಯ ಗೊತ್ತಿಲ್ಲ ಎಂದಲ್ಲ, ಗೊತ್ತಿತ್ತು. ಆದರೆ ಯಾರಾದರೂ ಒಬ್ಬರು ಹೇಳದಿದ್ದರೆ ಅದು ಜನರಿಗೆ ಗೊತ್ತಾಗುವುದಿಲ್ಲ ಎಂಬುದು ಇನ್ನೂ ಚೆನ್ನಾಗಿ ಗೊತ್ತಿತ್ತು. ''ನಿಮಗೆ ಗೊತ್ತಿರಲಿ, ನಾನು ಸಣ್ಣ ಸಣ್ಣ ವಿಷಯಗಳನ್ನು ಹೇಳುತ್ತೇನೆ, ಅದಕ್ಕೆ ನನಗೆ ಯಾವುದೇ ಪಶ್ಚಾತ್ತಾಪ ಇಲ್ಲ. ಒಂದೊಮ್ಮೆ ಹಾಗೆ ಹೇಳದಿದ್ದಿದ್ದರೆ, ಸಿಂಗಾಪುರ ಈಗಿನಂತೆ ಇರುತ್ತಿರಲಿಲ್ಲ ಎಂಬುದನ್ನು ಮರೆಯಬಾರದು'' ಎಂದು ಅವರು ಹೇಳಿದ್ದರು. ಅದು ನಿಜವೂ ಆಗಿತ್ತು. ''ಸಾರ್ವಜನಿಕ ಸ್ಥಳಗಳಲ್ಲಿ ಎಂಜಲು ಉಗುಳಬಾರದು, ಬಬಲ್‌ಗಮ್ ಬಿಸಾಡಬಾರದು, ಸಾರ್ವಜನಿಕ ಆಸ್ತಿಪಾಸ್ತಿಗಳನ್ನು ಸುಂದರವಾಗಿಟ್ಟುಕೊಳ್ಳಬೇಕು, ಮನೆ ಮುಂದೆ ಉದ್ಯಾನ ಬೆಳೆಸಿ, ಮನೆಗೆ ಕನಿಷ್ಠ ಹತ್ತು ವರ್ಷಗಳಿಗೊಮ್ಮೆ ಸುಣ್ಣ-ಬಣ್ಣ ಬಳಿಯಿರಿ. ದೇಶವನ್ನು ಸುಂದರವಾಗಿಟ್ಟುಕೊಳ್ಳುವ ಮುನ್ನ ನಿಮ್ಮ ಮನೆ ಮತ್ತು ಬೀದಿಯನ್ನು ಸ್ವಚ್ಛ-ಸುಂದರವಾಗಿ ಇಟ್ಟುಕೊಳ್ಳಿ'' ಎಂದು ಅವರು ಆಗಾಗ ಕರೆ ಕೊಡುತ್ತಿದ್ದರು. ಅವರ ಇಂಥ ಮಾತು ಕೇಳಿ, ಯು ಅವರು ಪ್ರಮುಖವಲ್ಲದ ವಿಷಯಗಳಲ್ಲಿ ಮೂಗು ತೂರಿಸುತ್ತಾರೆ, ಖಾಸಗಿ ವಿಷಯಗಳಲ್ಲಿ ಮಧ್ಯಪ್ರವೇಶಿಸುತ್ತಾರೆ ಎಂಬ ಅಭಿಪ್ರಾಯ ಮೂಡಿತ್ತು. ಆದರೆ ಯು ತಾವು ಹೇಳಬೇಕಾದುದನ್ನು ಹೇಳದೇ ಬಿಡುತ್ತಿರಲಿಲ್ಲ. ಅದಕ್ಕಿಂತ ಮುಖ್ಯವಾಗಿ ಅಂಥ 'ಉಪದೇಶ' ನೀಡುವುದು ತಮ್ಮ ಕರ್ತವ್ಯ ಎಂದು ಭಾವಿಸಿದ್ದರು. ಈ ವಿಷಯದಲ್ಲಿ ಪ್ರಧಾನಿಯಾಗಿ ತಾವು ಹಾಗೆ ಹೇಳದಿದ್ದರೆ, ಮತ್ಯಾರು ಹೇಳುತ್ತಾರೆ ಎಂದು ಕೇಳುತ್ತಿದ್ದ ಅವರು, ಪ್ರಧಾನಿಯಾದವರು ಅಂತಾರಾಷ್ಟ್ರೀಯ ವಿಷಯಗಳನ್ನು ಮಾತ್ರ ಮಾತಾಡಬಾರದು, ತಮ್ಮ ದೇಶದ ಜನ ತಮ್ಮ ಮನೆ-ಪರಿಸರವನ್ನು ಹೇಗಿಟ್ಟುಕೊಳ್ಳಬೇಕು ಎಂಬುದನ್ನೂ ತಿಳಿಸಬೇಕು, ಈ ವಿಷಯದಲ್ಲಿ ನಾನು ತುಸು ಜಿಗುಟ ಎನ್ನುತ್ತಿದ್ದರು. ಈ ವಿಷಯದಲ್ಲಿನ ಅವರ ಅಭಿಪ್ರಾಯವನ್ನು ಅವರ ಮಾತಿನಲ್ಲೇ ಕೇಳೋಣ: If we had not intervened on very personal matters- who your neighbour is, how you live, the noise you make, how you spit, or what language you use. We decide what is right. Never mind what the people think. ಸಿಂಗಾಪುರದ ಜನತೆ ವಿದೇಶಿಯರ ಜತೆ ಹೇಗೆ ಮಾತಾಡಬೇಕು, ಭಾಷೆಯನ್ನು ಎಷ್ಟು ಸೌಜನ್ಯಯುತವಾಗಿ ಬಳಸಬೇಕು, ಹೆಚ್ಚು ಭಾಷೆಗಳನ್ನು ಕಲಿಯುವುದರ ಪ್ರಯೋಜನವೇನು ಎನ್ನುವುದರ ಬಗ್ಗೆ ಪ್ರಧಾನಿಯಾಗಿ ಯು ಮಾತಾಡುತ್ತಿದ್ದರು. ಯು ಅವರಂಥ ಪ್ರಧಾನಿ ಸಿಂಗಾಪುರಕ್ಕಲ್ಲ, ಭಾರತದಂಥ ದೇಶದಲ್ಲಿ ಇರಬೇಕಾಗಿತ್ತು ಎಂದು ಎಷ್ಟೋ ಸಲ ಅನಿಸಿದ್ದಿದೆ. ನಮ್ಮ ದೇಶದಲ್ಲಿ ಜನ ಹೇಗೇ ಇರಲಿ, ಅವರೇನೇ ಮಾಡಲಿ, ಅವರನ್ನು ತಿದ್ದುವ ಕೆಲಸಕ್ಕೆ ಪ್ರಧಾನಿಗಳಾಗಲಿ, ಮುಖ್ಯಮಂತ್ರಿಯಾಗಲಿ ಯಾರೂ ಹೋಗುವುದಿಲ್ಲ. ಈ ಕಾರಣದಿಂದ ನಮ್ಮ ದೇಶ ಹೀಗಿದೆ. ಆದರೆ ಈ ವಿಷಯದಲ್ಲಿ ಕೆಲವೊಮ್ಮೆ ಸಾರ್ವಜನಿಕ ನಿಂದನೆಗೆ ಗುರಿಯಾದರೂ ಯು ಮನಸ್ಸಿನ ಮಾತನ್ನು ಹೇಳದೇ ಬಿಡುತ್ತಿರಲಿಲ್ಲ. ಈ ಕಾರಣದಿಂದ ಆ ದೇಶ ಹಾಗಿದೆ.

ಗಡಿ ಪ್ರಮಾದಗಳ ಸರದಾರರು: ನೆಹರು ಮತ್ತು ಇಂದಿರಾ ಗಾಂಧಿ

ಅಖಂಡ ಭಾರತದ ಸಾವಿರಾರು ಕಿ.ಮೀ. ಭೂಭಾಗವನ್ನು ಕಾಂಗ್ರೆಸ್‌ನ ಅಧಿಕಾರಾವಧಿಯಲ್ಲಿ ಪಾಕಿಸ್ತಾನ ಮತ್ತು ಚೀನಾಕ್ಕೆ ಬಿಟ್ಟುಕೊಡಲಾಗಿದೆ. ಭಾರತವನ್ನು 7 ದಶಕಗಳ ಕಾಲ ಆಳಿದ ಕಾಂಗ್ರೆಸ್ ಪಕ್ಷವು, ಪಾಕಿಸ್ತಾನ ಮತ್ತು ಚೀನಾದ ವಿಷಯದಲ್ಲಿ ತೋರಿದ ಮೃದುಧೋರಣೆ ಇಷ್ಟಕ್ಕೆಲ್ಲ ಕಾರಣ. ಚೀನಾ ಎಂಬ ನಯವಂಚಕ ರಾಷ್ಟ್ರವನ್ನು ದೊಡ್ಡ ಶಕ್ತಿಯೆಂದು ದೇಶದೆದುರು ಬಿಂಬಿಸಿದ್ದು ಕಾಂಗ್ರೆಸ್ ಪಕ್ಷವೇ.

ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ
camohanbn@gmail.com

ಭಾರತೀಯ ಸೇನೆಯು 'ಆಪರೇಷನ್ ಸಿಂದೂರ್' ಕಾರ್ಯಾಚರಣೆಯ ಮೂಲಕ ಪಾಕಿಸ್ತಾನದ ಭಯೋತ್ಪಾದಕ ನೆಲೆಗಳ ಮೇಲೆ ಯಶಸ್ವಿಯಾಗಿ ದಾಳಿ ನಡೆಸಿ, 100ಕ್ಕೂ ಹೆಚ್ಚು ಉಗ್ರರನ್ನು ಸದೆಬಡಿದಿದೆ. ಪಾಕಿಸ್ತಾನದ ಅಷ್ಟ ದಿಕ್ಕುಗಳಿಗೆ ಭಾರತದ ಕ್ಷಿಪಣಿಗಳು ನುಗ್ಗಿ ಅಲ್ಲಿನ ವಾಯುನೆಲೆಗಳನ್ನು ನಾಶಗೊಳಿಸಿವೆ. ಭಾರತೀಯ ಸೇನಾಧಿಕಾರಿಗಳು ಪಾಕ್ ವಿರುದ್ಧದ ಈ ಕಾರ್ಯಾಚರಣೆಯ ಬಗ್ಗೆ ಸ್ಪಷ್ಟವಾಗಿ ವಿವರಿಸಿದ ನಂತರವೂ, ಈ ಕಾರ್ಯಾಚರಣೆಯ ಬಗ್ಗೆ ಕಾಂಗ್ರೆಸ್ ಪಕ್ಷದವರು ಮತ್ತೊಮ್ಮೆ ಅನುಮಾನ ವ್ಯಕ್ತಪಡಿಸಿ ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ. ''ಯುದ್ಧದಲ್ಲಿ ಭಾರತ ಕಳೆದುಕೊಂಡ ವಿಮಾನಗಳೆಷ್ಟು?'' ಎಂದು ಒಬ್ಬರು ಕೇಳಿದರೆ, ''ಸೇನೆಯು ಯಾವುದೋ ನಾಲ್ಕು ಕಡೆ ದಾಳಿ ನಡೆಸಿದೆ'' ಎಂದರು ಮತ್ತೊಬ್ಬರು. ''ಡೊನಾಲ್ಡ್ ಟ್ರಂಪ್ ಮಾತಿನಿಂದಾಗಿ ಭಾರತವು ಕದನವಿರಾಮಕ್ಕೆ ಒಪ್ಪಿತು'' ಎಂದು ರಾಹುಲ್ ಗಾಂಧಿ ಹೇಳಿಕೆ ನೀಡಿದರು.

ಇಷ್ಟು ಸಾಲದೆಂಬಂತೆ, ಕಾಂಗ್ರೆಸ್ಸಿಗರು 1971ರ ಯುದ್ಧವನ್ನು ಮುನ್ನೆಲೆಗೆ ತಂದು ಇಂದಿರಾ ಗಾಂಧಿಯವರ ಭಿತ್ತಿಚಿತ್ರಗಳನ್ನು ರಸ್ತೆ ರಸ್ತೆಗಳಲ್ಲಿ ಅಂಟಿಸಿದರು. ಭಾರತೀಯ ಸೇನೆಯ ಬಗ್ಗೆ ಇಷ್ಟೆಲ್ಲಾ ಮಾತನಾಡುವ ಕಾಂಗ್ರೆಸ್ಸಿಗರು ತಮ್ಮದೇ ಪಕ್ಷದ ನೆಹರು ಮತ್ತು ಇಂದಿರಾ ಗಾಂಧಿಯವರ ಅಧಿಕಾರಾವಧಿಯಲ್ಲಿ ಚೀನಾ ಹಾಗೂ ಪಾಕಿಸ್ತಾನದ ವಿಷಯದಲ್ಲಾದ ಪ್ರಮಾದಗಳ ಬಗ್ಗೆ ಯಾಕೆ ಮಾತನಾಡುವುದಿಲ್ಲ? ನೆಹರು ಅವರು ನೊಬೆಲ್ ಪ್ರಶಸ್ತಿಯ ಆಸೆಗಾಗಿ ಭಾರತೀಯ ಸೇನೆಯ ನಿಶ್ಶಸ್ತ್ರೀಕರಣ ಮಾಡಿದ್ದರು, 'ಇಂಡಿಯಾ-ಚೀನಾ ಭಾಯಿ ಭಾಯಿ' ಎಂದಿದ್ದರು. ಚೀನಾದ ಸಾಮ್ರಾಜ್ಯಶಾಹಿ ಮನಸ್ಥಿತಿಯ ಅರಿವಿದ್ದರೂ, ಭಾರತೀಯ ಸೇನೆಯನ್ನು ಬಲಪಡಿಸುವ ಕೆಲಸ ಮಾಡಿರಲಿಲ್ಲ. ನೆಹರು ಪ್ರಧಾನ ಮಂತ್ರಿಯಾಗಿದ್ದಾಗ ಸೇನೆಗಾಗಿರುವ ಬಜೆಟ್ ಹಂಚಿಕೆಯನ್ನು ಕಡಿಮೆ ಮಾಡಿದ್ದರು. ಭಾರತದ ವಿರುದ್ಧ ಚೀನಾ ಯುದ್ಧ ಮಾಡುವುದಿಲ್ಲವೆಂಬ ಅತಿಯಾದ ಆತ್ಮವಿಶ್ವಾಸ ಅವರಿಗಿತ್ತು. ಆದರೆ ಆಗಿದ್ದೇನು? 1962ರ ಭಾರತ ಮತ್ತು ಚೀನಾ ನಡುವಿನ ಯುದ್ಧದಲ್ಲಿ ಜಮ್ಮು ಮತ್ತು ಕಾಶ್ಮೀರದ ಪೂರ್ವಭಾಗದ ಅಕ್ಸಾಯ್ ಚಿನ್ ಪ್ರಾಂತ್ಯವನ್ನು ಚೀನಾ ವಶಪಡಿಸಿಕೊಂಡಿತು. ಈ ಭಾಗ ಸುಮಾರು 2,150 ಕಿ.ಮೀ. ಗಡಿಯನ್ನು ಹೊಂದಿದೆ. ಈ ಯುದ್ಧದಲ್ಲಿ ಭಾರತವು ದೊಡ್ಡದೊಂದು ಭೂಭಾಗವನ್ನು ಕಳೆದುಕೊಳ್ಳಬೇಕಾಯಿತು. ಇದನ್ನು ಕಳೆದುಕೊಂಡ ಮೇಲೆ, ''ಈ ಭಾಗದಲ್ಲಿ ಒಂದು ಹುಲ್ಲುಕಡ್ಡಿಯೂ ಬೆಳೆಯುವುದಿಲ್ಲ, ಆದ್ದರಿಂದ ನಮಗೆ ಯಾವ ನಷ್ಟವೂ ಇಲ್ಲ'' ಎಂಬ ಮಾತನ್ನು ನೆಹರು ಹೇಳಿದ್ದರು. ಆಪರೇಷನ್ ಸಿಂದೂರ್ ಬಗ್ಗೆ ಹಗುರವಾಗಿ ಮಾತನಾಡುವ ರಾಹುಲ್ ಗಾಂಧಿ ಮತ್ತು ಅವರ ಪಟಾಲಂನವರು, ನೆಹರು ಹೇಳಿದ್ದ ಈ ಮಾತಿಗೆ ಉತ್ತರ ಕೊಡಲು ಸಾಧ್ಯವೇ? ಭಾರತದ ದೊಡ್ಡದೊಂದು ಭೂಭಾಗವನ್ನು ಕಳೆದುಕೊಂಡ ನಂತರ ದೇಶದ ಪ್ರಧಾನಿಯೇ ಸ್ವತಃ ಹೀಗೆ ಹೇಳಿದರೆ ಚೀನಾಕ್ಕೆ ಭಯ ಎಲ್ಲಿಂದ ಬರಬೇಕು? ನೆಹರು ಅವರು ಭಾರತೀಯ ಸೇನೆಯ ನಿಶ್ಶಸ್ತ್ರೀಕರಣ ಮಾಡಿದ ಪರಿಣಾಮ ಭಾರತದ ಇತಿಹಾಸದಲ್ಲಿ ಹೀಗೆ ದೊಡ್ಡದೊಂದು ಪ್ರಮಾದ ನಡೆದುಹೋಯಿತು.

ಅಕ್ಸಾಯ್ ಚಿನ್ ವಿಚಾರದಲ್ಲಿ ಹೇಳುವುದಾದರೆ, ಡಬ್ಲ್ಯು. ಎಚ್.ಜಾನ್ಸನ್ ಎಂಬ ಬ್ರಿಟಿಷ್ ಕಂದಾಯ ಅಧಿಕಾರಿಯು 1865ರಲ್ಲಿ ಈ ಸಂಪೂರ್ಣ ಭೂಭಾಗವು ಭಾರತಕ್ಕೆ ಸೇರಬೇಕೆಂದು ಹೇಳಿದ್ದ. 1947ರಲ್ಲಿ ಅಖಂಡ ಭಾರತದ ವಿಭಜನೆಯಾದಾಗ ಈತನ ಸರ್ವೆಯ ಆಧಾರದ ಮೇಲೆ ಗಡಿಯನ್ನು ರಚಿಸಲಾಗಿತ್ತು. ಸಂಪೂರ್ಣ ಜಮ್ಮು ಮತ್ತು ಕಾಶ್ಮೀರದ ಭೂಪಟ ಈತನ ಸರ್ವೆಯ ಮೇಲೆ ರಚಿತವಾಗಿದೆ, ಆದರೆ ಈತನ ಸರ್ವೆಯ ಗಡಿಯನ್ನು ಒಪ್ಪಲು ಚೀನಾ ತಯಾರಿರಲಿಲ್ಲ. ನೆಹರು ಅವಧಿಯಲ್ಲಿ ಚೀನಾ ತನಗೆ ಬೇಕಾದ ಹಾಗೆ ತನ್ನ ಗಡಿಯನ್ನು ವಿಸ್ತರಿಸಿಕೊಂಡಿತ್ತು. ಆದರೆ ಕಾಂಗ್ರೆಸ್ ಪಕ್ಷ ಮಾತ್ರ ಭಾರತಕ್ಕೆ ಬೇಕಾದಂತೆ ಗಡಿಯನ್ನು ವಿಸ್ತರಿಸಿಕೊಳ್ಳಲಿಲ್ಲ. 1962ರ ಯುದ್ಧದಲ್ಲಿ ಅಕ್ಸಾಯ್ ಚಿನ್‌ನ ಇಡೀ ಪ್ರಾಂತ್ಯವನ್ನು ಚೀನಾ ವಶಪಡಿಸಿಕೊಂಡು 2,150 ಕಿ.ಮೀ. ಒಳಗೆ ಬಂದಿತ್ತು.

ಶಾಂತಿ ಮಾತುಕತೆಯಲ್ಲಿ ಚೀನಾವನ್ನು ಎಂದಿಗೂ ನಂಬಲಾಗುವುದಿಲ್ಲ. ತನ್ನ ಜತೆಗೆ ಗಡಿಯನ್ನು ಹಂಚಿಕೊಂಡಿರುವ ಎಲ್ಲಾ ದೇಶಗಳ ಜತೆಗೂ ಚೀನಾ ಗಡಿ ತಕರಾರನ್ನು ಹೊಂದಿದೆ. ವಿಯೆಟ್ನಾಂನಂಥ ಪುಟ್ಟ ದೇಶವು ಚೀನಾಕ್ಕೆ ಮಣ್ಣು ಮುಕ್ಕಿಸಿ ತನ್ನ ಭೂಭಾಗವನ್ನು ಉಳಿಸಿಕೊಂಡಿತು. ಆದರೆ ನೆಹರು ಮಾಡಿದ ಪ್ರಮಾದದಿಂದಾಗಿ ಭಾರತ ಮಾತ್ರ 1962ರಲ್ಲಿ ಬಹುದೊಡ್ಡ ಭೂಭಾಗವನ್ನು ಕಳೆದುಕೊಂಡಿತು. 'ಆಪರೇಷನ್ ಸಿಂದೂರ್' ಕಾರ್ಯಾಚರಣೆಯ ಭಾಗವಾಗಿ ನಡೆಸಿದ ವಾಯುದಾಳಿಯ ಬಗ್ಗೆ ಪ್ರಶ್ನೆ ಮಾಡುವ ಕಾಂಗ್ರೆಸ್ಸಿಗರು,

ಇಂಥ ಪ್ರಮಾದಗಳ ಬಗ್ಗೆ ಮಾತ್ರ ಚಕಾರವೆತ್ತುವುದಿಲ್ಲ; ಚೀನಾ ವಿರುದ್ಧದ 1962ರ ಯುದ್ಧದಲ್ಲಿ ಭಾರತೀಯ ವಾಯುಪಡೆಯನ್ನು ಬಳಸಿಕೊಳ್ಳಲು ಸೇನೆಗೆ ನೆಹರು ಅನುಮತಿ ನೀಡಿರಲಿಲ್ಲ, ಸೈನಿಕರಿಗೆ ಅವಶ್ಯವಾಗಿ ಬೇಕಿದ್ದಂಥ ಶಸ್ತ್ರಾಸ್ತ್ರಗಳನ್ನು ಒದಗಿಸಿರಲಿಲ್ಲ. ಕಾಂಗ್ರೆಸ್ ಪಕ್ಷವು ದೇಶದೊಳಗೆ ತನ್ನ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಕಮ್ಯುನಿಸ್ಟರಿಗೆ ನಿಷ್ಠೆಯನ್ನು ತೋರಿಸಿತ್ತು. ಭಾರತದ ಒಳಗಿದ್ದ ಕಮ್ಯುನಿಸ್ಟರು, ಭಾರತ ಮತ್ತು ಚೀನಾ ನಡುವಿನ ಯುದ್ಧದಲ್ಲಿ ನಮ್ಮ ಸೈನಿಕರೊಂದಿಗೆ ನಿಂತಿರಲಿಲ್ಲ, ಅವರು ಚೀನಾದ ಕಮ್ಯುನಿಸ್ಟರಿಗೆ ಪರೋಕ್ಷವಾಗಿ ಸಹಾಯ ಮಾಡಿದ ಅನೇಕ ಪ್ರಸಂಗಗಳಿವೆ. 'ಆಪರೇಷನ್ ಸಿಂದೂರ' ಕಾರ್ಯಾಚರಣೆಯ ಬಳಿಕ ಕಮ್ಯುನಿಸ್ಟರು ಕೋಲ್ಕತ್ತಾದ ಬೀದಿಗಳಲ್ಲಿ ಶಾಂತಿ ಪಥಣ ಮಾಡಿ, ಪಾಕಿಸ್ತಾನದ ಮೇಲೆ ದಾಳಿ ಮಾಡಿದ್ದು ತಪ್ಪೆಂದು ಪ್ರತಿಭಟನೆ ಮಾಡಿದ್ದರು. ಚೀನಾ ಹಾಗೂ ಪಾಕಿಸ್ತಾನದ ನಡುವೆ ದೊಡ್ಡದೊಂದು ಆರ್ಥಿಕ ಕಾರಿಡಾರ್ ನಿರ್ಮಾಣವಾಗುತ್ತಿದೆ. ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಸುಮಾರು 12 ಬಿಲಿಯನ್ ಡಾಲರ್, ಅಂದರೆ ಸುಮಾರು 1,00,000 ಕೋಟಿ ರುಪಾಯಿಯಷ್ಟು ಹಣವನ್ನು ಖರ್ಚು ಮಾಡಲಾಗಿದೆ. ಚೀನಾ ನಿರ್ಮಿಸುತ್ತಿರುವ ಈ ಕಾರಿಡಾರ್ ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಹಾದುಹೋಗುತ್ತದೆ. ನೆಹರು ಅವರು ಅಂದು ಮಾಡಿದ ಪ್ರಮಾದದಿಂದಾಗಿ ಭಾರತಕ್ಕೆ ಸೇರಿದ ಭೂಭಾಗದೊಳಗೆ ಚೀನಾದ ಆರ್ಥಿಕ ಕಾರಿಡಾರ್ ನಿರ್ಮಾಣವಾಗುವಂತಾಗಿದೆ. ಆಪರೇಷನ್ ಸಿಂದೂರ್ ಬಳಿಕ, 'ಪಾಕ್ ಆಕ್ರಮಿತ ಕಾಶ್ಮೀರ'ವನ್ನು ಹಿಂಪಡೆಯುವ ಬಗ್ಗೆ ಮಾತನಾಡುವ ಕಾಂಗ್ರೆಸ್ಸಿಗರು, ಹಿಂದೆ ತಮ್ಮ ಪಕ್ಷದವರೇ ಅಧಿಕಾರದಲ್ಲಿ ಇದ್ದಾಗ ಆದ ಪ್ರಮಾದದ ಬಗ್ಗೆ ಮಾತನಾಡುವುದಿಲ್ಲ.

ಭಾರತದ ವಿರುದ್ಧದ 1962ರ ಯುದ್ಧದ ನಂತರ 1963ರಲ್ಲಿ ಪಾಕಿಸ್ತಾನವು, ಪಾಕ್ ಆಕ್ರಮಿತ ಕಾಶ್ಮೀರದಲ್ಲಿರುವ (ಗಿಲ್ಗಿಟ್ ಬಾಲ್ಟಿಸ್ತಾನ್) ಶಕ್ಸ್‌ಗಮ್ ಕಣಿವೆಯನ್ನು ಚೀನಾ ದೇಶಕ್ಕೆ ಉಡುಗೊರೆಯಾಗಿ ನೀಡಿತು. ತನ್ನ ಅಪ್ಪನ ಮನೆಯ ಆಸ್ತಿಯೆಂಬಂತೆ ಈ ಭೂಭಾಗವನ್ನು ಪಾಕಿಸ್ತಾನ ಹೀಗೆ ನೀಡಿತು. ಆಗಲೂ ನೆಹರು ಅವರು ಪ್ರತಿಭಟಿಸಲಿಲ್ಲ. 'ಆಪರೇಷನ್ ಸಿಂದೂರ್' ಕಾರ್ಯಾಚರಣೆಯ ಬಗ್ಗೆ ಹಗುರವಾಗಿ ಮಾತನಾಡುವ ಕಾಂಗ್ರೆಸ್ಸಿನ ಬಾಲಂಗೋಚಿಗಳು, ನೆಹರು ಮಾಡಿದ ಈ ಪ್ರಮಾದದ ಬಗ್ಗೆಯೂ ಮಾತನಾಡಬೇಕು.

ಮತ್ತೊಂದೆಡೆ, ಡೋಕ್ಲಾಮ್ ಭಾರತಕ್ಕೆ ಅತ್ಯಂತ ಮಹತ್ವಪೂರ್ಣವಾದ ಭೂಭಾಗ. ಇದು ಭಾರತ, ಚೀನಾ ಹಾಗೂ ಭೂತಾನ್ ಗಡಿಗಳು ಸೇರುವ ತ್ರಿಸಂಧಿ ಸ್ಥಳದಲ್ಲಿದೆ. ಈ ಜಾಗದಲ್ಲಿ ರಸ್ತೆ ಮತ್ತು ಸೇತುವೆಗಳನ್ನು ನಿರ್ಮಿಸಿದರೆ ತನ್ನ ಶಸ್ತ್ರಾಸ್ತ್ರಗಳನ್ನು ಭಾರತದ ಗಡಿಯತ್ತ ಸಾಗಿಸಲು ಸುಲಭವಾಗುತ್ತದೆ ಎಂಬ ಭ್ರಮೆಯಲ್ಲಿತ್ತು ಚೀನಾ. ಇದನ್ನರಿತ ಭಾರತದ ಪ್ರಧಾನಿ ನರೇಂದ್ರ ಮೋದಿಯವರು ಕಾಮಗಾರಿಯನ್ನು ನಡೆಸದಂತೆ ಚೀನಾವನ್ನು ತಡೆದರು. ಜತೆಗೆ, ಚೀನಾದ ದುರಾಲೋಚನೆಯನ್ನು ಅರಿತಿದ್ದ ಅವರು ಭೂತಾನ್ ದೇಶಕ್ಕೆ ಆರ್ಥಿಕ ಸಹಾಯ ಮಾಡಿದರು. ಮಾತುಮಾತಿಗೂ 'ಮೋದಿಯವರು ಹೊರದೇಶಕ್ಕೆ ಪ್ರಯಾಣ ಮಾಡುತ್ತಾರೆ' ಎಂದು ಚೀರಾಡುವ ಕಾಂಗ್ರೆಸ್ಸಿಗರಿಗೆ ಈ ವಿಷಯದ ಅರಿವಿಲ್ಲ. ಈಶಾನ್ಯ ಭಾರತದ 7 ರಾಜ್ಯಗಳನ್ನು ತಲುಪಲು ಅತಿಮುಖ್ಯವಾದ ಜಾಗ ಸಿಲಿಗುರಿ ಕಾರಿಡಾರ್. ಈ ಸಣ್ಣ ಭೂಭಾಗವನ್ನು 'ಚಿಕನ್ ನೆಕ್' ಎಂದು ಕರೆಯುತ್ತಾರೆ. ಕೇವಲ 200 ಕಿ.ಮೀ. ಉದ್ದ ಹಾಗೂ 60 ಕಿ.ಮೀ. ಅಗಲವಿರುವ ಭೂಭಾಗವಿದು. ಈ ಕಾರಿಡಾರ್‌ನ ಅತ್ಯಂತ ಸಣ್ಣಭಾಗ ಕೇವಲ 17 ಕಿ.ಮೀ. ಇದೆ. ಈ ಕಿರಿದಾದ ಭೂಭಾಗದಿಂದ ಮಾತ್ರ ಈಶಾನ್ಯ ಭಾರತದ ರಾಜ್ಯಗಳಿಗೆ ಸಂಪರ್ಕ ಸಾಧ್ಯ. ಗೂಗಲ್ ಮ್ಯಾಪ್ ತೆರೆದಿಟ್ಟುಕೊಂಡು, ಈಶಾನ್ಯ ಭಾರತದ ರಾಜ್ಯಗಳಿಗೆ ಸಂಪರ್ಕಿಸುವ ಸಣ್ಣ ಭೂಭಾಗದೆಡೆಗೆ ಗಮನಹರಿಸಿದರೆ 'ಚಿಕನ್ ನೆಕ್' ಕಾಣಿಸುತ್ತದೆ. ದೇಶದ್ರೋಹಿ 'ಶಾರ್ಜೀಲ್ ಇಮಾಮ್' ಜೆಎನ್‌ಯುನಲ್ಲಿ ಪ್ರತಿಭಟನೆ ನಡೆಸುವಾಗ ಇಂಥ ಪ್ರಮುಖ ಭೂಭಾಗವನ್ನು ಬ್ಲಾಕ್ ಮಾಡುವುದಾಗಿ ಹೇಳಿದ್ದ.

ಈ ಭೂಭಾಗವು ಕಿರಿದಾಗಿರುವುದರ ಪರಿಣಾಮ ಭಾರತ ಯಾವಾಗಲೂ ಜಾಗರೂಕವಾಗಿರಬೇಕು. ಈ ಭೂಭಾಗ ಇಷ್ಟೊಂದು ಕಿರಿದಾಗಿರಲು ಕಾರಣವೇನು? ಈ ಸಮಸ್ಯೆಯನ್ನು ತಂದವರು ಯಾರು? ಮತ್ತದೇ ಕಾಂಗ್ರೆಸ್ಸಿನ ನೆಹರು. ಭಾರತ ವಿಭಜನೆಯಾದಾಗ ಪೂರ್ವ ಪಾಕಿಸ್ತಾನ ಹಾಗೂ ಪಶ್ಚಿಮ ಪಾಕಿಸ್ತಾನವೆಂದು ಎರಡು ಭಾಗಗಳಾದವು; ಕನಿಷ್ಠ ಸಾಮಾನ್ಯ ಜ್ಞಾನ ಇದ್ದಿದ್ದರೆ, ಚಿಕನ್ ನೆಕ್‌ನ ಕಿರಿದಾದ ಭೂಭಾಗದ ಅಪಾಯವನ್ನು ಅರಿತು ಪೂರ್ವ ಪಾಕಿಸ್ತಾನದ (ಇಂದಿನ ಬಾಂಗ್ಲಾದೇಶ) ಉತ್ತರದ ಭೂಭಾಗವನ್ನು ಭಾರತಕ್ಕೆ ಸೇರಿಸಬಹುದಿತ್ತು. ಅದನ್ನು ಬಿಟ್ಟು ಅವರು ಕೇಳಿದಷ್ಟು ಭೂಮಿಯನ್ನು ಕೊಟ್ಟು ಮತ್ತೊಂದು ಪ್ರಮಾದ ಸೃಷ್ಟಿಮಾಡಿದ್ದು ಕಾಂಗ್ರೆಸ್ ಪಕ್ಷ.

ಇಂದಿರಾ ಗಾಂಧಿಯವರ ಅಧಿಕಾರಾವಧಿಯಲ್ಲಿ ಪಾಕಿಸ್ತಾನದ ವಿರುದ್ಧ ನಡೆದ 1971ರ ಯುದ್ಧದ ಬಗ್ಗೆ ಮಾತನಾಡಿ, ಅದನ್ನು 'ಆಪರೇಷನ್ ಸಿಂದೂರ'ಕ್ಕೆ ಹೋಲಿಕೆ ಮಾಡುವ ಕಾಂಗ್ರೆಸ್ಸಿಗರಿಗೆ ಒಂದು ಪ್ರಶ್ನೆ- ನೆಹರು ಮಾಡಿದ್ದ 'ಚಿಕನ್ ನೆಕ್' ಪ್ರಮಾದವನ್ನು ಸರಿಪಡಿಸಲು ಇಂದಿರಾ ಗಾಂಧಿಯವರಿಗೆ ಒಂದು ಅವಕಾಶವಿತ್ತು. ಪೂರ್ವ ಪಾಕಿಸ್ತಾನವು ಸ್ವಾತಂತ್ರ್ಯವನ್ನು ಪಡೆಯಲು ಇಂದಿರಾ ಗಾಂಧಿಯವರು ಸಹಾಯ ಮಾಡಿದ್ದರು. ಅಂದು ಮಾಡಿದ ಸಹಾಯಕ್ಕೆ ಪ್ರತಿಫಲವಾಗಿ ಸ್ವಲ್ಪ ಭೂಭಾಗವನ್ನು ಭಾರತಕ್ಕೆ ಸೇರಿಸಿಕೊಳ್ಳಬಹುದಿತ್ತು. ಭಾರತದ ಸಹಾಯಕ್ಕೆ ಬಾಂಗ್ಲಾದೇಶ ಏನು ಬೇಕಾದರೂ ಮಾಡಲು ಸಿದ್ಧವಿತ್ತು. ಅಂಥ ಚಿನ್ನದಂಥ ಅವಕಾಶವನ್ನು ಕಳೆದುಕೊಂಡ ಇಂದಿರಾ ಗಾಂಧಿಯವರನ್ನು ಕಾಂಗ್ರೆಸ್ಸಿಗರು ಹೇಗೆ ಸಮರ್ಥಿಸಿಕೊಳ್ಳುತ್ತಾರೆ?

ಪಾಕಿಸ್ತಾನದ 54,000 ಸೈನಿಕರು ಭಾರತದ ವಶದಲ್ಲಿದ್ದರು. ತಮ್ಮ ತಂದೆ ಮಾಡಿದ್ದ ಪ್ರಮಾದವನ್ನು ಇಂದಿರಾ ಗಾಂಧಿಯವರು ಸರಿಪಡಿಸಬಹುದಿತ್ತು. ಆದರೆ ಸರಿಪಡಿಸಲಿಲ್ಲ, ಕಾರಣ ಚೀನಾ ಮೇಲಿನ ಮೃದುಧೋರಣೆ. ಭಾರತ, ಪಾಕಿಸ್ತಾನ ಹಾಗೂ ಚೀನಾ ದೇಶಗಳ ಗಡಿವಿಚಾರದಲ್ಲಿ ಸಂಭವಿಸಿರುವ ವಿವಾದಗಳನ್ನು ಸರಿಪಡಿಸುವ ಅನೇಕ ಅವಕಾಶಗಳಿದ್ದರೂ ಕಾಂಗ್ರೆಸ್ ಅಂಥ ಯತ್ನಕ್ಕೆ ಮುಂದಾಗಲಿಲ್ಲ. ಅಷ್ಟೇಕೆ, ನೆಹರು ಅವರಿಗೆ, ಸ್ವತಃ ತಾವು ಸೃಷ್ಟಿಸಿದ ಪ್ರಮಾದಗಳನ್ನು ಸರಿಪಡಿಸುವ ಅನೇಕ ಅವಕಾಶಗಳು ಸಿಕ್ಕಿದ್ದರೂ ಸರಿಪಡಿಸಲಿಲ್ಲ. ನಂತರ ಇಂದಿರಾ ಗಾಂಧಿಯವರು 1971ರಲ್ಲಿ ಇದ್ದಂಥ ಅವಕಾಶವನ್ನು ಬಳಸಿಕೊಳ್ಳಲಿಲ್ಲ.

ಅಖಂಡ ಭಾರತದ ಸಾವಿರಾರು ಕಿ.ಮೀ. ಭೂಭಾಗವನ್ನು ಕಾಂಗ್ರೆಸ್‌ನ ಅಧಿಕಾರಾವಧಿಯಲ್ಲಿ ಪಾಕಿಸ್ತಾನ ಮತ್ತು ಚೀನಾಕ್ಕೆ ಬಿಟ್ಟುಕೊಡಲಾಗಿದೆ. ಭಾರತವನ್ನು ಏಳು ದಶಕಗಳ ಕಾಲ ಆಳಿದ ಕಾಂಗ್ರೆಸ್ ಪಕ್ಷವು, ಪಾಕಿಸ್ತಾನ ಮತ್ತು ಚೀನಾದ ವಿಷಯದಲ್ಲಿ ತೋರಿದ ಮೃದುಧೋರಣೆ ಇಷ್ಟಕ್ಕೆಲ್ಲ ಕಾರಣ. ಚೀನಾ ಎಂಬ ನಯವಂಚಕ ರಾಷ್ಟ್ರವನ್ನು ದೊಡ್ಡದೊಂದು ಶಕ್ತಿಯೆಂದು ದೇಶದೆದುರು ಬಿಂಬಿಸಿದ್ದು ಕಾಂಗ್ರೆಸ್ ಪಕ್ಷವೇ. ಕಾಂಗ್ರೆಸ್‌ಗೆ ಜತೆಯಾದವರು ಕಮ್ಯುನಿಸ್ಟರು. ಇವರು, ತಮ್ಮ ಅಸ್ತಿತ್ವವು ಜಗತ್ತಿನಾದ್ಯಂತ ಹೇಳಹೆಸರಿಲ್ಲದಂತೆ ಸವೆದು ಹೋಗಿ, ಏನೂ ಮಾಡದ ಸ್ಥಿತಿಯಲ್ಲಿರುವಾಗ ಚೀನಾದ ಪರವಾಗಿ ನಿಲ್ಲುತ್ತಾರೆ.

ಭಾರತದ ನೆಲ, ಜಲ ಎಂಬ ಅಭಿಮಾನವಾಗಲೀ ದೇಶಭಕ್ತಿಯಾಗಲೀ ಇಲ್ಲದವರ ಬಾಯಲ್ಲಿ ಈಗ ದೇಶದ ಭದ್ರತೆಯ ಕುರಿತಾದ ಮಾತುಗಳನ್ನು ಕೇಳಬೇಕಾಗಿ ಬಂದಿದೆ. 1993, 1996 ಮತ್ತು 2008ರಲ್ಲಿ ಚೀನಾದೊಂದಿಗೆ ಗಡಿ ಒಪ್ಪಂದವನ್ನು ಮಾಡಿಕೊಂಡಾಗ ಅಧಿಕಾರದಲ್ಲಿ ಇದ್ದದ್ದು ಕಾಂಗ್ರೆಸ್ ಸರಕಾರ. ಕಾಂಗ್ರೆಸ್‌ನ ಆಡಳಿತಾವಧಿಯಲ್ಲಿ ನೆಹರು ಮತ್ತು ಇಂದಿರಾ ಗಾಂಧಿ ಮಾಡಿದ ಪ್ರಮಾದಗಳ ಪಟ್ಟಿ ದೊಡ್ಡದಿದೆ. ಆದರೆ, ಈ ಪ್ರಮಾದಗಳನ್ನು ಸರಿಪಡಿಸಿಕೊಳ್ಳುವ ಅವಕಾಶಗಳು ಸಿಕ್ಕರೂ ಆ ನಿಟ್ಟಿನಲ್ಲಿ ಅವರು ಮುಂದುವರಿಯಲಿಲ್ಲ ಎಂಬುದು ವಿಪರ್ಯಾಸ!

ಖುಷಿಯ ಹೊನಲಿನಲಿ ಕೊಚ್ಚಿ ಹೋಗುತಿದೆ ಅಳುವ ಹಾಯಿದೋಣಿ

ಯಾವುದೂ ಶಾಶ್ವತವಲ್ಲ ಅನ್ನೋದು ಕಳೆದ ಮೂರು ದಿನಗಳಲ್ಲಿ ಮೂರು ರೀತಿಯಲ್ಲಿ ನಿರೂಪಿತವಾಗಿಹೋಯ್ತು. ಹದಿನೆಂಟು ವರ್ಷಗಳ ನಂತರ ಕಪ್ ಗೆದ್ದ ಆರ್‌ಸಿಬಿ ತಂಡದ ಖುಷಿ ಇಪ್ಪತ್ನಾಲ್ಕು ಗಂಟೆಗಳಲ್ಲಿ ಶೋಕವಾಗಿ ಬದಲಾಯ್ತು. ಆರ್‌ಸಿಬಿ ಇನ್ನೂ ಹತ್ತು ಕಪ್ ಗೆಲ್ಲೋದನ್ನು ನೋಡುವಷ್ಟು ಆಯಸ್ಸಿದೆ ಎಂದುಕೊಂಡಿದ್ದ ಹನ್ನೊಂದು ಮಂದಿ, ಕೆಲವೇ ಗಂಟೆಗಳ ಹಿಂದೆ, ತಾವು ಸಾಯಬಹುದು ಎಂಬ ಸುಳುಹೂ ಇಲ್ಲದವರು ಇವತ್ತಿಗೆ ಪಂಚಭೂತಗಳಲ್ಲಿ ಲೀನ.

ಪದಸಾಗರ
ನವೀನ್ ಸಾಗರ್
vveditoped@gmail.com

ಅಂಥದ್ದೊಂದು ಸಾಲು ಹೇಳು... ಖುಷಿಯಲ್ಲಿ ರೋವ್ರಿಗೆ ದುಃಖ ತರಬಲ್ಲ.. ದುಃಖದಲ್ಲಿ ರೋವ್ರಿಗೆ ಸಮಾಧಾನ ನೀಡಬಲ್ಲ ಒಂದು ಸಾಲು ಹೇಳು'' ಎಂದು ಕೇಳಿದಾಗ ಶ್ರೀಕೃಷ್ಣ ಹೇಳಿದನಂತೆ- ''ಈ ಸಮಯವೂ ಕಳೆದುಹೋಗುತ್ತದೆ''!

ಹಿಂದಿಯಲ್ಲಿ.. ''ಯೆ ವಕ್ತ್ ಭಿ ಗುಜರ್ ಜಾಯೇಗಾ..'' ಇಂಗ್ಲಿಷಲ್ಲಿ "This too Shall pass..." ಎಂಬ ನುಡಿಗಳನ್ನು ನೀವು ಕೇಳಿಯೇ ಕೇಳಿರ್ತೀರಿ. ಖುಷಿಯಲ್ಲಿದ್ದಾಗ ಯಾರೂ ಈ ಮಾತನ್ನು ಹೇಳೋದಿಲ್ಲ. ಆದರೆ ದುಃಖದಲ್ಲಿ, ಕಷ್ಟದಲ್ಲಿ, ನೋವಿನಲ್ಲಿ ಇರುವವರನ್ನು ಸಮಾಧಾನಪಡಿಸೋದಕ್ಕೆ ಈ ಮಾತು ಬಳಕೆಯಾಗುತ್ತೆ. ಅಂದ್ರೆ, ಯಾವ ಭಾವಗಳೂ ಶಾಶ್ವತವಲ್ಲ. ನಿಮಿಷಗಳಲ್ಲಿ ಸಂತಸಗಳು ಸಂತಾಪವಾಗಿ, ಶೋಕಗಳು ಸಂಭ್ರಮವಾಗಿ ಬದಲಾಗಬಹುದು. ಈಗಂತೂ ಸೋಷಿಯಲ್ ಮೀಡಿಯಾದ ಸ್ಕ್ರೋಲಿಂಗ್ ಜಮಾನದಲ್ಲಿ ಪ್ರತಿಭಾವನೆಯ ಜೀವಿತಾವಧಿ ಒಂದು ಸೆಕೆಂಡಿಗಿಂತ ಕಮ್ಮಿ. ಯಾವುದೋ ಪೋಸ್ಟ್ ನೋಡ್ತೀರಿ. ತಂದೆಯ ಸಾವು ಅಂತ ಫೋಟೋ ಸಮೇತ ಹಾಕಿರ್ತಾರೆ. ನೋಡಿದಕೂಡಲೇ ನಮಗೇ ಗೊತ್ತಿಲ್ಲದ ಹಾಗೆ ಸ್ಯಾಡ್ ಎಮೋಜಿಯ ರಿಯಾಕ್ಷನ್ ಪ್ರೆಸ್ ಮಾಡುತ್ತೇವೆ. ಆರ್‌ಐಪಿ ಅಂತಲೋ ಓಂ ಶಾಂತಿ ಅಂತಲೋ ಕಮೆಂಟ್ ಹಾಕುತ್ತೇವೆ. ಆ ಪೋಸ್ಟ್ ನೋಡ್ತಾ ಇದ್ದಾಗ ಮನಸ್ಸು ಮತ್ತು ಮುಖ ಎರಡೂ ಬಾಡುತ್ತವೆ. ಹಾಗೆ ಮನಸ್ಸು ಕುಗ್ಗುತ್ತಾ ಇರೋ ಕ್ಷಣದಲ್ಲೇ ಬೆರಳು ಮೊಬೈಲ್ ಸ್ಕ್ರೀನನ್ನು ಒಂದಿಂಚು ಸ್ಕ್ರೋಲ್ ಮಾಡುತ್ತದೆ. ಕೆಳಗೊಂದು ಪೋಸ್ಟಲ್ಲಿ ಇನ್ಯಾರೋ ಒಬ್ರು ತಮ್ಮ ಮಗನ ಜನ್ಮದಿನ ಅಂತ ಕೇಕ್ ಕಟಿಂಗ್ ಫೋಟೋ ಹಾಕಿರುತ್ತಾರೆ. ನಮಗೆ ಅರಿವೇ ಇಲ್ಲದಂತೆ ಬೆರಳು ಹಾರ್ಟ್ ಎಮೋಜಿ ಒತ್ತುತ್ತದೆ. ಹ್ಯಾಪಿ ಬರ್ತಡೇ ಅನ್ನುತ್ತದೆ. ಹಾಗೇ ದಾಟ್ತಾ ಮರುಕ್ಷಣದಲ್ಲಿ ಅಲ್ಲೊಂದು ಜೋಕೋ, ಟ್ರೋಲೋ, ಕಾಮಿಡಿ ವಿಡಿಯೋನೋ ಸಿಗುತ್ತದೆ. ಅಯಾಚಿತವಾಗಿ ನಗು ಬರುತ್ತದೆ. ಲಾಫ್ ಎಮೋಜಿ ಕ್ಲಿಕ್ಕಿಸುತ್ತೇವೆ. ಎರಡೇ ಸೆಕೆಂಡಿನಲ್ಲಿ ಇನ್ಯಾವುದೋ ಪೋಸ್ಟ್ ಕಂಡು ಸಿಟ್ಟು ಬಂದು, ಕೆಂಗಣ್ಣಿನ ಕೆಂಪುಮುಖದ ಎಮೋಜಿ ಸಿಡಿಸುತ್ತೇವೆ. ಅಬ್ಬಾ... ನಿಮಿಷಾರ್ಧದಲ್ಲಿ ಐದಾರು ಭಾವನೆಗಳ ಮನ್ವಂತರ! ಹಾಗಂತ ಯಾವ ಭಾವವಾದರೂ ನಕಲಿಯಾ? ಖಂಡಿತ ಅಲ್ಲ. ಆದರೆ ಪ್ರತಿ ಭಾವನೆಯ ಆಯಸ್ಸು ಈಗ ಒಂದು ಸ್ಕ್ರೋಲ್ ಸೆಕೆಂಡಿನಷ್ಟು ಕಿರಿದಾಗಿ ಹೋಗಿದೆ. ಆದರೆ ಯಾವ ಭಾವನೆಗಳೂ, ಯಾವ ಸಂತಸ ದುಃಖಗಳೂ, ಗೆಲುವುಸೋಲುಗಳೂ, ಸ್ಥಾನಮಾನಗಳೂ ಸೇರಿದಂತೆ ಪ್ರಾಣಪಕ್ಷಿಯ ತನಕ ಎಲ್ಲವೂ ಬಹಳ ಟೆಂಪೊರರಿ.

ಯಾವುದೂ ಶಾಶ್ವತವಲ್ಲ ಅನ್ನೋದು ಕಳೆದ ಮೂರು ದಿನಗಳಲ್ಲಿ ಮೂರು ರೀತಿಯಲ್ಲಿ ನಿರೂಪಿತವಾಗಿಹೋಯ್ತು. ಹದಿನೆಂಟು ವರ್ಷಗಳ ನಂತರ ಕಪ್ ಗೆದ್ದ ಆರ್‌ಸಿಬಿ ತಂಡದ ಖುಷಿ ಇಪ್ಪತ್ನಾಲ್ಕು ಗಂಟೆಗಳಲ್ಲಿ ಶೋಕವಾಗಿ ಬದಲಾಯ್ತು. ಆರ್‌ಸಿಬಿ ಇನ್ನೂ ಹತ್ತು ಕಪ್ ಗೆಲ್ಲೋದನ್ನು ನೋಡುವಷ್ಟು ಆಯಸ್ಸಿದೆ ಎಂದುಕೊಂಡಿದ್ದ ಹನ್ನೊಂದು ಮಂದಿ, ಕೆಲವೇ ಗಂಟೆಗಳ ಹಿಂದೆ, ತಾವು ಸಾಯಬಹುದು ಎಂಬ ಸುಳುಹೂ ಇಲ್ಲದವರು ಇವತ್ತಿಗೆ ಪಂಚಭೂತಗಳಲ್ಲಿ ಲೀನ. ನಿನ್ನೆಯ ತನಕ ಪೊಲೀಸ್ ಆಯುಕ್ತರಾಗಿ ಇಡೀ ಬೆಂಗಳೂರು ನಗರವನ್ನು ಕಾಯುತ್ತಿದ್ದ ದಕ್ಷ ಅಧಿಕಾರಿ ದಿಢೀರ್ ಅಮಾನತ್ತಾಗಿ ಈ ಕ್ಷಣಕ್ಕೆ ಒಬ್ಬ ಜನಸಾಮಾನ್ಯ! ಆರ್‌ಸಿಬಿಯ ಮೇಲಿನ ಎಮೋಷನ್ ಬಳಸಿಕೊಂಡು ಜನರ ಪ್ರೀತಿಯನ್ನು ತಮ್ಮೆಡೆಗೆ ಸೆಳೆದುಕೊಂಡು ಇನ್ನಷ್ಟು ಇಮೇಜ್ ವೃದ್ಧಿಗೊಳಿಸಿಕೊಳ್ಳುವ ಕನಸು ಕಂಡಿದ್ದ ರಾಜಕಾರಣಿಗಳ ಕನಸು ಕೆಲವೇ ಗಂಟೆಗಳಲ್ಲಿ ಭಗ್ನವಾಗಿ, ಇದೇ ಸರಕಾರಕ್ಕೆ ಉರುಳಾದರೇನೆಂಬ ಆತಂಕ! ಹೂಂ. ಯಾವುದೂ ಶಾಶ್ವತವಲ್ಲ.

ವೈಯಕ್ತಿಕವಾಗಿ ನಂಗೆ ಆರ್‌ಸಿಬಿ ನೆಚ್ಚಿನ ತಂಡವಲ್ಲ. ಧೋನಿ ಮೇಲಿನ ಅಭಿಮಾನದಿಂದಾಗಿ ನಾನು ಸಿಎಸ್ಕೆ ತಂಡದ ಗೆಲುವಿಗೆ ಹಂಬಲಿಸೋ ಕ್ರಿಕೆಟ್ ಅಭಿಮಾನಿ. ಆದರೆ ಧೋನಿಯನ್ನು ಇಷ್ಟಪಡೋದಕ್ಕಿಂತ ಹೆಚ್ಚಾಗಿ ಕ್ರಿಕೆಟನ್ನು ಇಷ್ಟಪಟ್ಟವನು ನಾನು. ಹೀಗಾಗಿ ಅಂತಿಮವಾಗಿ ಉಭಯ ತಂಡಗಳ ನಡುವೆ ಅದ್ಭುತ ಹಣಾಹಣಿ ನಡೆದು ಬೆಟರ್ ಟೀಮ್ ಗೆದ್ದಿತೆಂದರೆ ನನ್ನಿಷ್ಟದ ತಂಡ ಸೋತರೂ, ಕ್ರಿಕೆಟ್ ಎಂಜಾಯ್ ಮಾಡಿರುತ್ತೇನೆ. ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಭಾರತಕ್ಕೆ ಸೋಲಾದರೆ ಮಾತ್ರ ಅದು ನೋವಾಗಿ ಕೊಂಚ ಬಾಧಿಸಿರುತ್ತದೆ. ನಂತರದಲ್ಲಿ ಆಫ್ಟರಾಲ್ ಆಟವಲ್ಲವೇ ಎಂಬ ಪ್ರಬುದ್ಧ ಯೋಚನೆ ಮಗುಚಿದ್ದ ಮನಸನ್ನು ಮತ್ತೆ ಎತ್ತಿ ಕೂರಿಸುತ್ತದೆ. ಕ್ರಿಕೆಟ್‌ನ ಮೊಮೆಂಟ್‌ಗಳು, ವೈಯಕ್ತಿಕ ಪ್ರದರ್ಶನಗಳು, ಅಂಕಿ-ಅಂಶಗಳು ಇವೆಲ್ಲವೂ ನನಗೆ ಖುಷಿ ಕೊಟ್ಟಿರುತ್ತವೆ. ಈ ಬಾರಿ ಧೋನಿ ಮತ್ತು ಚೆನ್ನೈ ಸೂಪರ್ ಕಿಂಗ್ಸ್ ತಂಡದ ನಿರಾಶಾದಾಯಕ ಪ್ರದರ್ಶನ ಸಹಜವಾಗಿಯೇ ನನ್ನನ್ನು ಬಹಳ ತಟಸ್ಥತೆಯಿಂದ ಐಪಿಎಲ್ ನೋಡುವಂತೆ ಮಾಡಿತ್ತು. ಹಾಗೆ ನೋಡುವಾಗ ಬಹಳ ಸ್ಪಷ್ಟವಾಗಿ ಅನಿಸಿದ್ದು ಏನೆಂದರೆ, ಈ ಸಲ ಗೆಲ್ಲುವ ಅರ್ಹತೆ ಅಂತ ಇದ್ರೆ, ಅದು ಆರ್‌ಸಿಬಿಗೆ ಮಾತ್ರ ಅಂತ. ಆರ್‌ಸಿಬಿಯ ಪ್ರದರ್ಶನದ ಮಟ್ಟ ಹಾಗಿತ್ತು. ಟಿಮ್ ಡೇವಿಡ್, ಜಿತೇಶ್ ಶರ್ಮ, ಪಾಟಿದಾರ್, ಪಡಿಕ್ಕಲ್, ಸಾಲ್ಟ್, ಕೃನಾಲ್ ಪಾಂಡ್ಯ, ಬೆತೆಲ್, ಭುವಿ, ಹ್ಯಾಜಲ್ ವುಡ್, ಸುಯೇಶ್ ಶರ್ಮ, ಯಶ್ ದಯಾಳ್ ಹೀಗೆ ಒಬ್ಬೊಬ್ಬರು ಒಂದೊಂದು ಪಂದ್ಯದಲ್ಲಿ ಹೀರೋ ಆಗಿ ಗೆಲುವು ತಂದುಕೊಡ್ತಾ ಇದ್ರು. ವಿರಾಟ್ ಕೊಹ್ಲಿಯ ಬ್ಯಾಟ್ ಪ್ರತಿ ಪಂದ್ಯದಲ್ಲೂ ಮಾತಾಡಿತು. ಕೊಹ್ಲಿಯ ಸುತ್ತ ಮಿಕ್ಕವರ ಆಟ ಅರಳಿದವು. ತಂಡ ಒಬ್ಬನ ಮೇಲೆ ಡಿಪೆಂಡ್ ಆಗಲಿಲ್ಲ, ಒಬ್ಬನ ಆಟವನ್ನು ಸ್ಫೂರ್ತಿಯಾಗಿಟ್ಟುಕೊಂಡು ತಂಡ ಕಪ್‌ಗೆ ಸನಿಹವಾಗತೊಡಗಿತು.

ಆರ್‌ಸಿಬಿಯಲ್ಲಿ ಈ ಹಿಂದೆ ಕ್ರಿಸ್ ಗೇಲ್, ಎಬಿಡಿ ಥರದ ಘಟಾನುಘಟಿಗಳಿದ್ದರು. ಆದರೆ ಈ ತಂಡ ಈ ಬಾರಿ ಕಪ್ ಗೆದ್ದೇ ಗೆಲ್ಲುವೆನೆಂಬ ಶಪಥ ಮಾಡಿ ಬಂದಂತಿತ್ತು. ಶಾಪವಿಮುಕ್ತನಾಗುವ ಹಟ ತೊಟ್ಟು ಬಂದಂತಿತ್ತು. ಸಚಿನ್‌ಗಾಗಿ ವಿಶ್ವಕಪ್ ಗೆದ್ದಂತೆ, ಕೊಹ್ಲಿಗಾಗಿ ಐಪಿಎಲ್ ಗೆಲ್ಲಬೇಕು ಎನ್ನುವ ರೀತಿಯಲ್ಲಿ ಆರ್‌ಸಿಬಿ ಆಡಿತ್ತು. ಅಭಿಮಾನಿಗಳ ಎಮೋಷನ್, ಅನ್‌ಕಂಡೀಷನಲ್ ಪ್ರೀತಿಯನ್ನು, ತಾಳ್ಮೆಯನ್ನು ಇನ್ನೂ ಇನ್ನೂ ಟೆಸ್ಟ್ ಮಾಡಬಾರದು.. ಹದಿನೆಂಟು ವರ್ಷಗಳ ಕಾಯುವಿಕೆಗೆ ಕೊನೆ ಹಾಡಬೇಕು, ಚೋಕರ್ಸ್ ಪಟ್ಟದಿಂದ ಹೊರಬರಬೇಕು, ಕಪ್ ಗೆಲ್ಲಲಾರದವರು ಅನ್ನೋ ಮೂದಲಿಕೆಗೆ ಅಂತ್ಯ ಹೇಳಬೇಕು, 'ಈ ಸಲ ಕಪ್ ನಮ್ದೇ' ಅನ್ನೋದನ್ನು ಈ ಬಾರಿಯಾದರೂ ನಿಜವಾಗಿಸಲೇಬೇಕು ಎಂದು ಇಡೀ ತಂಡ ಜೀವ ಅಡವಿಟ್ಟಂತೆ ಭಾಸವಾಗುತ್ತಿತ್ತು. ಆದರೂ ಐಪಿಎಲ್‌ನ ಸ್ಕ್ರಿಪ್ಟ್ ಎಲ್ಲಿ ಆರ್‌ಸಿಬಿಯನ್ನು ಗೆಲ್ಲಲು ಬಿಡದಂತೆ ಮಾಡಿಬಿಡುತ್ತದೋ, ಅಭಿಮಾನಿಗಳ ಎಮೋಷನ್ನನ್ನು ಬಂಡವಾಳವಾಗಿರಿಸಿಕೊಂಡು ಫೈನಲ್‌ನಲ್ಲಿ ಸೋಲಿಸಿಬಿಡುತ್ತೇನೋ ಎಂಬೆಲ್ಲ ಆತಂಕ ಅನುಮಾನಗಳೂ ಇದ್ದೇ ಇದ್ದವು. ಎಲ್ಲ ಸ್ಕ್ರಿಪ್ಟ್‌ಗಳನ್ನು ನಿವಾಳಿಸಿ ಒಗೆದು ಕಪ್ ಗೆದ್ದೇಬಿಡ್ತು ಆರ್‌ಸಿಬಿ.

ಐಪಿಎಲ್ ಫಿಕ್ಸಿಂಗ್ ಅಲ್ಲ, ಸ್ಕ್ರಿಪ್ಟೆಡ್ ಅಲ್ಲ ಅಂತ ಕೊನೆಗೂ ಆರ್‌ಸಿಬಿ ಅಭಿಮಾನಿಗಳಿಗೆ ನಂಬಿಕೆ ಬಂದಿತು. ಕೆಲಸದ ಒತ್ತಡದಲ್ಲಿ ಇದೇ ಮೊದಲ ಬಾರಿಗೆ ಐಪಿಎಲ್ ಫೈನಲ್ ಪಂದ್ಯವನ್ನು ನಾನು 'ಬಾಲ್-ಟು-ಬಾಲ್' ನೋಡೋದನ್ನು ಮಿಸ್ ಮಾಡಿಕೊಂಡಿದ್ದೆ. ಆದರೆ ನನ್ನ ಪ್ರಕಾರ ಅಸಲಿ ಸಿನಿಮಾ ಶುರು ಆಗಿದ್ದೇ ಕೊನೆಯ ಐದು ಬಾಲ್‌ಗಳಿದ್ದಾಗ. ಅಲ್ಲಿಂದ ಶುರುವಾಗಿದ್ದು ಅಕ್ಷರಶಃ ಭಾವನೆಗಳ ಸುನಾಮಿ. ಕಿಚ್ಚೆಬ್ಬಿಸೋ ಸೆಲೆಬ್ರೇಷನ್ ಮಾಡುವ ಎಂದಿನ ವಿರಾಟ್ ಕೊಹ್ಲಿಯ ಜಾಗದಲ್ಲಿ ಕಣ್ಣೀರು ತುಂಬಿದ, ಉಬ್ಬಿದ ಗಂಟಲಿನ,

ಅವುಡುಗಚ್ಚಿ ಅವುಡುಗಚ್ಚಿ ನಿರಾಳಗೊಳ್ಳುತ್ತಿದ್ದ ಹೊಸ ಕೊಹ್ಲಿ ಇದ್ದ. ಅವನ ಸುತ್ತ ಇದ್ದ ಮಿಕ್ಕ ಆಟಗಾರರ ಮುಖಭಾವಗಳೂ ವಿರಾಟನ ಭಾವವನ್ನೇ ಪ್ರತಿಬಿಂಬಿಸುತ್ತಿದ್ದವು. ಕಿಂಗ್ ಕೊಹ್ಲಿ ಕೂಲ್ ಕೊಹ್ಲಿಯಾಗಿ ಬದಲಾಗಿದ್ದ. ಅದೆಂಥ ಸಂತಸ, ನಿರಾಳತೆ ಮತ್ತು ಗೆದ್ದ ಖುಷಿಯ ನಿಟ್ಟುಸಿರು ಅದು.. ತಂಡದವರು ಕಪ್ ಮುಟ್ಟಿ, ನೋಡಿ ಮುತ್ತಿಟ್ಟು ನೋಡ್ತಾ ಇದ್ದ ದೃಶ್ಯಗಳು ಎಂಥವರಲ್ಲೂ ಒಂದು ಹನಿ ಕಣ್ಣೀರು ಜಿನುಗುವಂತೆ ಮಾಡುತ್ತಿತ್ತು. ಹೀಗಿತ್ತಾ ಈ ಕಪ್,.!? ಹದಿನೆಂಟು ವರ್ಷ ಇದನ್ನು ಮುಟ್ಟೋದಿರ್ಲಿ ಹತ್ತಿರದಿಂದ ನೋಡೋಕೂ ಅವಕಾಶವಾಗಲಿಲ್ಲವಲ್ಲ.. ನಿಜಕ್ಕೂ ನಾವು ಗೆದ್ದಿದೀವಾ? ನಿಜವಾಗ್ಲೂ ಕೈಯಲ್ಲಿ ಕಪ್ ಹಿಡಿದಿದ್ದೀವಾ ಅಂತ ಚಿವುಟಿಕೊಂಡು ಚಿವುಟಿಕೊಂಡು ಖಾತ್ರಿ ಮಾಡಿಕೊಳ್ಳುತ್ತಿದ್ದ ಬಗೆ, ದಿನೇಶ್ ಕಾರ್ತಿಕ್ ಎಂಬ ಅಪ್ರತಿಮ ನಿಸ್ವಾರ್ಥಿ ಆಟಗಾರನ ಆ ಹೆಮ್ಮೆಯ ಮುಖ, ವರ್ಣಿಸುತ್ತಾ ಹೋದರೆ ಪ್ರತಿಯೊಂದೂ ಕ್ಯಾರೆಕ್ಟರ್‌ಗಳದ್ದೂ ಒಂದು ಬಯೋಪಿಕ್ ಆದೀತೇನೋ! ಆರ್‌ಸಿಬಿಯ ಈ ಜರ್ನಿ ಮತ್ತು ಗೆಲುವು ಮಾತ್ರ ಖಂಡಿತವಾಗ್ಲೂ ಬಾಲಿವುಡ್‌ನ ಒಂದು ಸಿನಿಮಾ ಆಗಬಲ್ಲ ಸೂಪರ್‌ಹಿಟ್ ಸ್ಕ್ರಿಪ್ಟ್ ಅನ್ನೋದರಲ್ಲಿ ಅನುಮಾನವೇ ಬೇಡ.

ಆದರೆ ಅಷ್ಟು ವರ್ಷ ಕಾದು ಪಡೆದ ಗೆಲುವು.. ಗೆಲುವು ಕೊಟ್ಟ ಖುಷಿ ಎಲ್ಲವೂ ಇಷ್ಟು ಕ್ಷಣಿಕವಾಗಿ ಹೋಯಿತಲ್ಲ..! ಏನನ್ನಬೇಕು ಇದಕ್ಕೆ? ಆರ್‌ಸಿಬಿ ಆಗಲೀ ಕೊಹ್ಲಿಯಾಗಲೀ ಇಂಥ ದುರ್ಘಟನೆಗೆ ಸಾಕ್ಷಿಯಾಗಲು ಅರ್ಹರಲ್ಲ. ಈ ಕಪ್ ಗೆದ್ದ ಸಂತಸ ಕನಿಷ್ಠ ಒಂದು ತಿಂಗಳಾದರೂ ಜಾರಿಯಲ್ಲಿರಬೇಕಿತ್ತು. ಯಾಕಂದ್ರೆ ಇದು ಆರ್‌ಸಿಬಿಯ ಸಾಮಾನ್ಯ ಗೆಲುವಾಗಿರಲಿಲ್ಲ, ತಪಸ್ಸು ಮಾಡಿ ಪಡೆದ ವರವಾಗಿತ್ತು. ಅಳುವ ಕಡಲಿನಲಿ ತೇಲಿಬಂದಿದ್ದ ನಗೆಯ ಹಾಯಿದೋಣಿ ಇದು ಅನ್ನುವ ಹೊತ್ತಿಗೆ.., ನಗೆಯ ಹೊನಲಿನಲಿ ಕೊಚ್ಚಿಕೊಂಡು ಹೋದ ಅಳುವಿನ ಹಾಯಿದೋಣಿಯಾಗಿಬಿಡ್ತು ಐಪಿಎಲ್ ಗೆಲುವಿನ ಎಲ್ಲ ಸಂಭ್ರಮ. ಯಾರನ್ನು ದೂರೋದು? ಅಭಿಮಾನಿಗಳ ಅತಿರೇಕವನ್ನೋ? ಸರಕಾರವನ್ನೋ? ಐಪಿಎಲ್ ಕ್ರಿಕೆಟನ್ನೋ? ದುರ್ವಿಧಿಯನ್ನೋ? ಗೊತ್ತಾಗುತ್ತಿಲ್ಲ. ಜಡ್ಡುಗಟ್ಟಿದ ಮೈಗಳಿಗೆ ಛಡಿಯೇಟು ಕೊಟ್ಟರೆ ನಮ್ಮ ಕೈಗಳಿಗೆ ನೋವಷ್ಟೆ. ಹನ್ನೊಂದು ಸಾವು, ಅಧಿಕಾರಿಗಳ ಅಮಾನತು, ಆಳುವ ರಾಜಕಾರಣಿಗಳ ಡ್ರಾಮಾಗಳು, ಬೇಜವಾಬ್ದಾರಿ ಹೇಳಿಕೆಗಳು, ಅಭಿಮಾನಿಗಳ ಅಂಧವರ್ತನೆ ಇವೆಲ್ಲವನ್ನೂ ನೋಡಿದರೆ ಜುಗುಪ್ಸೆ ಹುಟ್ಟುತ್ತದೆ.

ಆರ್‌ಸಿಬಿಯ ಗೆಲುವು ಕ್ರಿಕೆಟ್ ವಿಭಾಗದಲ್ಲಿ ಐತಿಹಾಸಿಕ, ಭಾವುಕ ಘಟನೆ ನಿಜ. ಆದರೆ ಅದು ಅಭಿಮಾನಿಗಳ ಹುಚ್ಚುತನದಿಂದ ಅತಿರೇಕದ ಎಲ್ಲೆ ಮೀರಿದ್ದು, ಅಭಿಮಾನಿಗಳ ಈ ಹುಚ್ಚಾಟವನ್ನು ವೋಟ್ ಬ್ಯಾಂಕನ್ನಾಗಿ ಪರಿವರ್ತಿಸಿಕೊಳ್ಳಲು ಹಪಹಪಿಸಿದ್ದು ಇವೆಲ್ಲವೂ ಅಸಹ್ಯವಾಗಿಸಿತು. ಆರ್‌ಸಿಬಿ ಅಭಿಮಾನಿಗಳು, ರಾಜಕಾರಣಿಗಳು ಒಮ್ಮೆ ಅವಲೋಕಿಸಿಕೊಳ್ಳಬೇಕಿತ್ತು. ರಣಜಿ ಗೆದ್ದ ರಾಜ್ಯತಂಡವನ್ನು ಒಮ್ಮೆಯಾದರೂ ಹೀಗೆ ಮೆರೆಸಿದ್ದೀವಾ? ಸೈನಿಕರ ಗೆಲುವನ್ನು ಈ ರೀತಿ ಸೆಲೆಬ್ರೇಟ್ ಮಾಡಿದ್ದೇವಾ? ಪದ್ಮಭೂಷಣ ಪಡೆದ ಅನಂತ್ ನಾಗ್ ಅವರನ್ನು ರಾಜ್ಯದ ಜನರೆಲ್ಲ ಸೇರಿ ಗೌರವಿಸುವ ಮನಸು ಮಾಡಿದ್ದೇವಾ? ಕವಿ 'ಎಚ್‌ಎಸ್‌ವಿ' ನಿಧನಕ್ಕೆ ಒಕ್ಕೊರಲಿಂದ ಕಂಬನಿ ಮಿಡಿದೆವಾ? ಕ್ರಿಕೆಟ್ ಹೊರತಾದ ಕ್ರೀಡಾಕ್ಷೇತ್ರಗಳಲ್ಲಿನ ಹಲವಾರು ಆಟಗಾರರು, ವಿಜ್ಞಾನಿಗಳು, ಸೈನಿಕರು, ಸಂಶೋಧಕರು, ಗಾಯಕರು ಸಾಧನೆ ಮಾಡಿಲ್ಲವೇ?. ಕೃಷಿ, ಶಿಕ್ಷಣ, ಸಾಹಿತ್ಯ, ಫೋಟೋಗ್ರಫಿ, ಪತ್ರಿಕೋದ್ಯಮ ಎಷ್ಟೆಷ್ಟೋ ವಿಭಾಗದಲ್ಲಿ ರಾಜ್ಯಕ್ಕೆ ಕೊಡುಗೆ ಕೊಟ್ಟವರ ಸಮೂಹವೇ ಇದೆ. ಹದಿನೆಂಟು ವರ್ಷ ಅಲ್ಲ 50-60 ವರ್ಷಗಳ ಶ್ರಮ ಸಾಧನೆ ಇದೆ. ಅವರನ್ನು ಯಾವತ್ತಾದರೂ ರಾಜ್ಯದ ಜನ ಈ ಮಟ್ಟಿಗೆ ಸೆಲೆಬ್ರೇಟ್ ಮಾಡಬಹುದಾ? ಯಾಕೆ ನಾವು ಕ್ರಿಕೆಟ್ ಮತ್ತು ಸಿನಿಮಾ ಇವೆರಡನ್ನೇ ರಾಜ್ಯಾಭಿಮಾನ, ದೇಶಾಭಿಮಾನ, ಭಾಷಾಭಿಮಾನದ ಪ್ಯಾರಾಮೀಟರ್‌ಗಳನ್ನಾಗಿ ಮಾಡಿಕೊಂಡಿದ್ದೇವೆ? ಹೋದ ಹನ್ನೊಂದು ಜೀವಗಳದ್ದು ಘನತೆಯ ಸಾವೇ? ಖಂಡಿತ ಇಲ್ಲ. ಐಪಿಎಲ್ ಅಭಿಮಾನದ ಹುಚ್ಚುತನದಲ್ಲಿ ಪ್ರಾಣ ಕಳ್ಕೊಂಡವರು ಅಷ್ಟೆ. ಅವರ ಹೆಸರು ಇವತ್ತಿಗೆ ಅವರ ಬಳಗಕ್ಕೆ ಬಿಟ್ಟು ಯಾರಿಗೂ ಗೊತ್ತಿಲ್ಲ. ಬೇಕಾಗಿಲ್ಲ. ಕೊನೆಗೂ ಉಳಿಯೋ ಪ್ರಶ್ನೆ ಒಂದೇ- ಇಂಥ ಅತಿರೇಕದ ಅಭಿಮಾನ ಬೇಕಿತ್ತಾ?

ಭಟ್ಟರ್ ಸ್ಕಾಚ್

- **ನವೀನ ಕೆ., (ಇಮೇಲ್ ಮೂಲಕ)**
ಭಟ್ರೇ, ಅಡುಗೆ ಮಾಡುವವರಿಗೆ ಇರಬೇಕಾದ ಮುಖ್ಯ ಗುಣ ಯಾವುದು?
– **ಅಡುಗೆ ಮತ್ತು ಊಟ ಮಾಡುವವರ ಮೇಲೆ ಪ್ರೀತಿ!**

- **ಸುರೇಶ ಪಲ್ಯ, ಚಿಕ್ಕಬಳ್ಳಾಪುರ**
ಭಟ್ರೇ, ಕೇಕ್ ಇಲ್ಲದ ಪಾರ್ಟಿಯನ್ನು ಏನೆಂದು ಕರೆಯಬಹುದು?
– **ಮೀಟಿಂಗ್!**

- **ತಿಮ್ಮೇಶ್, (ಇಮೇಲ್ ಮೂಲಕ)**
ಭಟ್ರೇ, ನಿಮ್ಮ ದೃಷ್ಟಿಯಲ್ಲಿ ರಜಾದಿನ ಹೇಗಿರಬೇಕು?
– **ಏನೇ ತಿಂದರೂ ಕ್ಯಾಲೋರಿ ಏರಬಾರದು ಅಂತಿರಬೇಕು!**

- **ವಾಜರಹಳ್ಳಿ ಸತ್ಯ, ಬೆಂಗಳೂರು**
ಭಟ್ರೇ, ಮನಸ್ಸನ್ನು ಪ್ಯಾರಾಶೂಟ್‌ಗೆ ಹೋಲಿಸುತ್ತಾರಲ್ಲ?
– **ಕಾರಣ ಅವನ್ನು ಓಪನ್ ಮಾಡಿದಾಗ ಮಾತ್ರ ಕೆಲಸ ಮಾಡುತ್ತದಲ್ಲ?!**

- **ಕೆ.ಎಲ್.ಸಿಂಹ, ಹೊಸಕೆರೆಹಳ್ಳಿ**
ಸರ್, ನಿಮ್ಮ ದೃಷ್ಟಿಯಲ್ಲಿ ನಾಲ್ಕು ಜನರ ಮುಂದೆ ನಮಗೆ ಸಿಗಬಹುದಾದ ಸದವಕಾಶ ಅಂದ್ರೆ ಯಾವುದು?
– **ಬಾಯಿ ಮುಚ್ಚಿಕೊಂಡಿರುವ ಅವಕಾಶ!**

- **ಭರತ್ ಶೆಟ್ಟಿ, (ಇಮೇಲ್ ಮೂಲಕ)**
ಸರ್, ಸಂತೃಪ್ತ ಮತ್ತು ಸಂತಸ ಜೀವನ ಅನ್ನೋದು ಇಲ್ಲ ಅಂತಾರಲ್ಲ?
– **ಹೂಂ.. ಅದು ಇಲ್ಲ, ಆದರೆ ಅದನ್ನು ನಾವು ಸೃಷ್ಟಿಸಿಕೊಳ್ಳಬಹುದು!**

- **ಸತೀಶ್ ಎಲ್.ವಿ., (ಇಮೇಲ್ ಮೂಲಕ)**
ಸರ್, ನೀವು ಬಹಳ ಆರ್ಗ್ಯುಮೆಂಟ್ ಮಾಡ್ತೀರಿ ಅಂತ ಇಲ್ಲೊಬ್ಬಳು ಹೇಳ್ತಾಳಲ್ಲ?
– **ಅದು ಆರ್ಗ್ಯುಮೆಂಟ್ ಅಲ್ಲ, ನಾನು ಸರಿ ಹೇಗೆ ಎಂಬುದನ್ನು ಸರಳವಾಗಿ ಹೇಳುವ ಪರಿ!**

- **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ಹಾಲು ಉಕ್ಕುವುದಕ್ಕೂ, ಪ್ರೀತಿ ಉಕ್ಕುವುದಕ್ಕೂ ಸಾಮ್ಯತೆಯಿದೆಯಾ?
– **ಕೆಲವರು ಎರಡಕ್ಕೂ 'ಹುಕ್ಕುವುದು' ಅಂತಾರೆ!**

- **ವಿನೋದ ಪುರಾಣಿಕ್, ದಾವಣಗೆರೆ**
ಭಟ್ರೇ, ನಾವು ಒಂದೇ ಮನೆಯಲ್ಲಿ ಎಂಟು ಮಂದಿ ಇದ್ದೇವೆ, ಒಂದೇ ಬಾತರೂಮ್ ಇದೆ, ನಾನು ಏನಾಗಬಹುದು?
– **ಒಳ್ಳೆಯ ಡಾನ್ಸರ್!**

- **ಸಂಗೀತಾ ಕಾಡಿನಮನೆ, ಶಿವಮೊಗ್ಗ**
ಭಟ್ರೇ, ವಂಶವಾಹಿನಿ ಪೀಳಿಗೆಯಿಂದ ಪೀಳಿಗೆಗೆ ಹರಿಯುತ್ತದೆ ಅಂತಾರಲ್ಲ?
– **ಅಪ್ಪನಂತೆ ಮಗ ಹುಚ್ಚುಚ್ಚಾಗಿ ಆಡುವುದನ್ನು ನೋಡಿಯೂ ಈ ಪ್ರಶ್ನೆಯಾ?!**

ಮೂತ್ರಕೋಶದ ಕಲ್ಲು: ತಿಳಿದುಕೊಳ್ಳಿ ಆಯುರ್ವೇದದ ಸೊಲ್ಲು

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ

ಡಾ.ಸಾಧನಶ್ರೀ
vveditoped@gmail.com

ಎಂಥಾ ಕಲ್ಲು ಮನಸ್ಸೋ ನಿಂದು?'' ಎಂದು ಕೆಲವರು ಆಗಾಗ ಉದ್ಗರಿಸುವುದನ್ನು ನೀವು ಕೇಳಿರಬಹುದು. ಈ 'ಕಲ್ಲು'ತನದಿಂದ ಎಷ್ಟೋ ಸಂಸಾರಗಳು ಮಣ್ಣುಪಾಲಾಗಿರುವುದಿದೆ. ಇದೇ ರೀತಿಯಾಗಿ ಮತ್ತೊಂದು 'ಕಲ್ಲಿ'ನಿಂದ ಬಹಳಷ್ಟು ಜನ ನರಳುತ್ತಿದ್ದಾರೆ! ಅದ್ಯಾವುದು ಗೊತ್ತೇ– ಮೂತ್ರಕೋಶದ ಕಲ್ಲು/ಕಿಡ್ನಿ ಸ್ಟೋನ್! ಇದನ್ನು ಆಯುರ್ವೇದದಲ್ಲಿ 'ಅಶ್ಮರೀ ' ಎಂದು ಕರೆಯುತ್ತಾರೆ. ಭಾರತದಲ್ಲಿ ಸುಮಾರು 12 ಪ್ರತಿಶತ ಜನರ ಶತ್ರು ಈ ಅಶ್ಮರೀ! ಈ ಶತ್ರುವು ಸಹಿಸಲಾಗದ ನೋವು ಮತ್ತು ದುಃಖವನ್ನು ನೀಡುತ್ತದೆ. ನೋಡನೋಡುತ್ತಾ ಇದು ಇಷ್ಟು ಹೆಚ್ಚಾಗಲು ಕಾರಣ ಏನು ಗೊತ್ತೇ? ಬನ್ನಿ, ಮೂತ್ರಕೋಶದಲ್ಲಿ ಕಲ್ಲು ಬೆಳೆಯಲು ಆಯುರ್ವೇದದ ಶಾಸ್ತ್ರದಲ್ಲಿ ಹೇಳಿರುವ ಕೆಲವು ಪ್ರಮುಖ ಕಾರಣಗಳನ್ನು ತಿಳಿದು ಅದನ್ನು ತಿದ್ದಿಕೊಳ್ಳಲು ಪ್ರಯತ್ನ ಮಾಡೋಣ. ಅಶ್ಮರೀ ರೋಗವು ಈ ಕೆಳಕಂಡ ಕಾರಣಗಳಿಂದ ಉತ್ಪತ್ತಿಯಾಗುತ್ತದೆ:

1. ಹಸಿವಿಲ್ಲದೆ ಇದ್ದರೂ ತಿನ್ನುವುದು! ಇದನ್ನು ಆಯುರ್ವೇದದಲ್ಲಿ 'ಅಧ್ಯಶನ' ಎಂದು ಕರೆಯುತ್ತಾರೆ. ಅಂದರೆ, ಹಿಂದೆ ಸೇವಿಸಿದ ಆಹಾರವು ಜೀರ್ಣವಾದ ಮೇಲೆಯೇ ನಮಗೆ ಮತ್ತೆ ಹಸಿವು ಕಾಣಿಸಿಕೊಳ್ಳುತ್ತದೆ. ನಮಗೆ ಹಸಿವೆ ಇಲ್ಲ ಎಂದರೆ ಅರ್ಥ ನಾವು ಮುಂಚೆ ಸೇವಿಸಿದ ಆಹಾರವು ಇನ್ನೂ ನಮ್ಮ ಜಠರದಲ್ಲಿ ಜೀರ್ಣವಾಗುತ್ತಿದೆ ಅಂತ. ಹಸಿವೆ ಇಲ್ಲದಿದ್ದಾಗ ತಿನ್ನುವುದು ಅನಾರೋಗ್ಯಕರ. ಇದರಿಂದ ಆಹಾರವು ಸರಿಯಾಗಿ ಜೀರ್ಣವಾಗದೆ ಬೇರೆ ಬೇರೆ ರೀತಿಯ ತೊಂದರೆಗಳು ಉದ್ಭವಿಸುತ್ತವೆ.

2. ಅದೇ ರೀತಿ ಪದೇಪದೆ ತಿನ್ನುವುದು ಸಹ ಒಂದು ಮುಖ್ಯ ಕಾರಣ. ಆಯುರ್ವೇದದ ಪ್ರಕಾರ ನಾವು ಒಂದು ದಿನದಲ್ಲಿ 2 ಅಥವಾ 3 ಆಹಾರ ಕಾಲಗಳನ್ನು ನಿಗದಿಗೊಳಿಸಿ, ಆ ಸಮಯದಲ್ಲಿ ಮಾತ್ರವೇ ಆಹಾರವನ್ನು ಸ್ವೀಕರಿಸತಕ್ಕದ್ದು. ಎರಡು ಆಹಾರ ಕಾಲಗಳ ನಡುವೆ ತಿನ್ನುವುದನ್ನು ಮಾಡಬಾರದು! ಏನನ್ನೇ ಸೇವಿಸಬೇಕೆನಿಸಿದರೂ ಅದನ್ನು ನಿಗದಿತ ಆಹಾರ ಕಾಲದಲ್ಲಿಯೇ ಸಂಯೋಜಿಸಿಕೊಳ್ಳಬೇಕು. ಉದಾಹರಣೆಗೆ, ಇವತ್ತು ಸ್ವಲ್ಪ ಆಲೂಗಡ್ಡೆ ಚಿಪ್ಸ್ ತಿನ್ನುವ ಮನಸ್ಸಾಗಿದೆ ಎಂದರೆ, ಅದರ ಸ್ವಲ್ಪ ಪ್ರಮಾಣವನ್ನು ಊಟದ ಜತೆಯಲ್ಲೇ ಸೇರಿಸಿಕೊಂಡು ತಿನ್ನುವುದು ಹೆಚ್ಚಾಗಿ ತೊಂದರೆ ತರದು. ಅದರ ಬದಲಿಗೆ, ಆಹಾರಕಾಲದ ಮಧ್ಯೆ, ಯಾವುದೋ ಸಮಯದಲ್ಲಿ, ಇನ್ನೂ ಹಿಂದೆ ತಿಂದ ಆಹಾರವು ಜೀರ್ಣಗೊಳ್ಳುತ್ತಿರುವ ಸಮಯದಲ್ಲಿ ಆಲೂಗಡ್ಡೆ ಚಿಪ್ಸ್ ಅನ್ನು ಸೇವಿಸಿದರೆ, ಅದು ಖಂಡಿತ ಸ್ವಾಸ್ಥ್ಯವನ್ನು ಕೆಡಿಸುತ್ತದೆ. ಹಾಗಾಗಿ ಮಧ್ಯೆ ಮಧ್ಯೆ ತಿನ್ನುವುದನ್ನು ವರ್ಜಿಸಲೇಬೇಕು.

3. ಅಂತೆಯೇ, ಬಾಯಾರಿಕೆ ಇಲ್ಲದಿದ್ದಾಗಲೂ ಪದೇಪದೆ ನೀರನ್ನು ಕುಡಿಯುತ್ತಿರುವುದು ಅಶ್ಮರಿಯ ಅತ್ಯಂತ ಮುಖ್ಯ ಕಾರಣ. ಇಂದಿನ ಕಾಲದಲ್ಲಿ ಈ ಅಭ್ಯಾಸವು ಸರ್ವೇಸಾಮಾನ್ಯವಾಗಿಬಿಟ್ಟಿದೆ. ಯಾರನ್ನು ಕೇಳಿದರೂ ''ಬೆಳಗ್ಗೆ ಎದ್ದ ಕೂಡಲೇ ಲೀಟರ್‌ಗಟ್ಟಲೆ ನೀರು ಕುಡಿದೆ'' ಎಂದು ಹೇಳುವವರೇ! ಇಂಥವರನ್ನು ನಾವು ಕ್ಲಿನಿಕ್‌ನಲ್ಲಿ ಸಾಮಾನ್ಯವಾಗಿ ಕಾಣಬಹುದು. ಆಯುರ್ವೇದದ ಪ್ರಕಾರ ಬಾಯಾರಿಕೆ ಇಲ್ಲದಿದ್ದಾಗ ಸೇವಿಸುವ ಅತಿಯಾದ ನೀರು ಹಲವಾರು ರೋಗಗಳಿಗೆ ಕಾರಣವಾಗುತ್ತದೆ. ಇದಕ್ಕೆ ಚಿಕ್ಕದಾದ ಒಂದು ಅಲರ್ಜಿಯಿಂದ ಹಿಡಿದು ಮಧುಮೇಹದಂಥ ಭಯಂಕರ ವ್ಯಾಧಿಗಳನ್ನು ಸೃಷ್ಟಿಸುವ ಶಕ್ತಿಯಿದೆ. ಈ ದುರಭ್ಯಾಸವನ್ನು ಪಾಲಿಸಲು ಇಡೀ ದಿನ ಅಲಾರ್ಮ್‌ಗಳನ್ನು ಇಟ್ಟುಕೊಂಡು, ನೆನಪಿಸಿಕೊಂಡು ನೀರು ಕೊಡುವ ಅವಶ್ಯಕತೆ ಇಲ್ಲ. ದೇಹಕ್ಕೆ ಬೇಕಾದಾಗ, ಬಾಯಾರಿಕೆಯ ಮೂಲಕ ದೇಹವೇ ನಿಮಗೆ ನೀರಿನ ಅವಶ್ಯಕತೆಯನ್ನು ತಿಳಿಸುತ್ತದೆ. ಅದರಂತೆ ನಡೆದರೆ ಸಾಕು.

4. ಮೀನಿನಂಥ ಜಲೀಯ ಪ್ರಾಣಿಗಳ ಮಾಂಸವನ್ನು ಅತಿಯಾಗಿ ಸೇವಿಸುವುದು ಸಹ ಮೂತ್ರಕೋಶದ ಕಲ್ಲನ್ನು ಉತ್ಪಾದನೆ ಮಾಡುತ್ತದೆ. ಮಾಂಸವನ್ನು ಸೇವಿಸುವಾಗಲು ಬಹಳ ಎಚ್ಚರಿಕೆ ವಹಿಸುವ ಅವಶ್ಯಕತೆ ಇದೆ. ಹಸಿವೆಯನ್ನು ಗಮನಿಸಿ, ಜೀರ್ಣಶಕ್ತಿಗೆ ತಕ್ಕಂತೆ ಸೇವಿಸುವುದು ಉತ್ತಮ. ಮಾಂಸ ಸೇವನೆಯು ವಾರಕ್ಕೆ ಒಂದು ಬಾರಿಗಿಂತ ಜಾಸ್ತಿ ಇರದಿರಲಿ. ರಾತ್ರಿ ಅಂತೂ ಬೇಡವೇಬೇಡ. ವ್ಯಾಯಾಮ ಮಾಡುವ, ಜೀರ್ಣಶಕ್ತಿ ಚೆನ್ನಾಗಿ ಇರುವ ವ್ಯಕ್ತಿಗಳು ಮಾತ್ರ ಮಾಂಸ ಸೇವನೆಗೆ ಅರ್ಹರು!

5. ಕಫವನ್ನು ಹೆಚ್ಚು ಮಾಡುವಂಥ ಆಹಾರವನ್ನು ಅತಿಯಾಗಿ ಸೇವಿಸುವುದು ಸಹ ಅಶ್ಮರಿಗೆ ಒಂದು ಮುಖ್ಯ ಕಾರಣ. ಉದಾಹರಣೆಗೆ, ಮೊಸರಿನ ಅತಿಯಾದ ಸೇವನೆ. ಕೇಳಿ ಆಶ್ಚರ್ಯವಾಯಿತೆ? ಆಯುರ್ವೇದದ ಪ್ರಕಾರ ಮೊಸರನ್ನು ಬಹಳ ಜಾಗರೂಕತೆಯಿಂದ ಬಳಸ ತಕ್ಕದ್ದು. ಮೊಸರಿನ ಸೇವನೆಗೆ ಹಲವಾರು ನಿಷೇಧಗಳಿವೆ. ಉದಾಹರಣೆಗೆ, ಇದನ್ನು ವಸಂತ, ಗ್ರೀಷ್ಮ ಮತ್ತು ಶರತ್ ಋತುಗಳಲ್ಲಿ ಬಳಸಬಾರದು. ರಾತ್ರಿಯ ಆಹಾರದ ಜತೆ ಮೊಸರು ಸುತರಾಂ ವರ್ಜ್ಯ. ದೇಹದಲ್ಲಿ ಕಫ ಮತ್ತು ಪಿತ್ತಗಳ ವಿಕೃತಿ ಇರುವವರಿಗೂ ಮೊಸರು ನಿಷಿದ್ಧ. ಶೋಥ, ಪ್ರಮೇಹ, ಕುಷ್ಠ, ವಿಸರ್ಪ, ಜ್ವರ ಮುಂತಾದ ವ್ಯಾಧಿಗಳಲ್ಲಿ ಮೊಸರನ್ನು ಸೇವಿಸಲೇಬಾರದು. ಅಂತೆಯೇ, ಅಶ್ಮರಿ ರೋಗದಲ್ಲೂ ಮೊಸರಿನ ಅನಿಯಮಿತ ಬಳಕೆಯಿಂದ ತೊಂದರೆ ಹೆಚ್ಚಾಗುವುದರ ಜತೆಗೆ ಸಮಸ್ಯೆ ಮರುಕಳಿಸುವ ಸಾಧ್ಯತೆಯೂ ಹೆಚ್ಚಾಗುತ್ತದೆ. ಮೊಸರನ್ನು ಸೇವಿಸುವ ಸರಿಯಾದ ಕ್ರಮವೆಂದರೆ– ಇದನ್ನು ಕೇವಲ ಮಳೆಗಾಲ ಮತ್ತು ಚಳಿಗಾಲಗಳಲ್ಲಿ, ಮಧ್ಯಾಹ್ನ ಊಟದೊಂದಿಗೆ ಬಳಸಬಹುದು. ಬಳಸುವಾಗ ಸ್ವಲ್ಪ ಹೆಸರುಬೇಳೆ ಕಟ್ಟು , ಕಲ್ಲುಸಕ್ಕರೆ, ಜೇನುತುಪ್ಪ ಅಥವಾ ನೆಲ್ಲಿಪುಡಿಗಳನ್ನು ಸೇರಿಸಿ ಬಳಸಬೇಕು. ಅಯ್ಯೋ ಇಷ್ಟೊಂದೆಲ್ಲ ತಲೆಬಿಸಿ ಯಾಕಪ್ಪ?! ಅಂದರೆ, ಮೊಸರಿಗೆ ಅರ್ಧ ಅಂಶದಷ್ಟು ನೀರನ್ನು ಹಾಕಿ, ಚೆನ್ನಾಗಿ ಕಡೆದು, ಮಜ್ಜಿಗೆ ಮಾಡಿಕೊಂಡು, ಸ್ವಲ್ಪ ಒಗ್ಗರಣೆ ಹಾಕಿ ಅದನ್ನು ನಿತ್ಯವೂ ಏನೂ ತೊಂದರೆ ಇಲ್ಲದೆ ಬಳಸಬಹುದು.

6. ಇನ್ನು, ನಿದ್ದೆಯ ವಿಷಯವನ್ನು ಹೇಳಬೇಕಾದರೆ ಪ್ರಾಕೃತವಾಗಿ ರಾತ್ರಿ ಬೇಗ ಮಲಗಿ, ಬೆಳಗ್ಗೆ ಸೂರ್ಯೋದಯದ ಮುನ್ನ ಏಳುವುದು ಸ್ವಾಸ್ಥ್ಯಕರ. ಆದರೆ, ರಾತ್ರಿ ಜಾಗರಣೆ ಮಾಡಿ ಹಗಲು ನಿದ್ದೆ ಮಾಡುವುದು ಅಥವಾ ರಾತ್ರಿಯೂ ನಿದ್ದೆ ಮಾಡಿ ದಿನದಲ್ಲಿಯೂ ಆಹಾರದ ನಂತರ ಮಲಗುವುದು– ಈ ರೀತಿಯ ಅಭ್ಯಾಸಗಳಿಂದ ಮೂತ್ರಕೋಶದಲ್ಲಿ ಕಲ್ಲು ಆಗುವ ಸಾಧ್ಯತೆಗಳು ಹೆಚ್ಚುತ್ತವೆ.

7. ಆಹಾರದಲ್ಲಿ ಸದಾ ಷಡ್ರಸಗಳ ಸಂತುಲನ ಇರಬೇಕು. ಮಧುರ–ಆಮ್ಲ–ಲವಣ–ಕಟು–ತಿಕ್ತ ಮತ್ತು ಕಷಾಯ ರಸಗಳು ನಿಮ್ಮ ಭೋಜನದಲ್ಲಿ ಹಿತಮಿತವಾಗಿ ಸಂಯೋಜನೆಗೊಂಡಿರಬೇಕು. ಮಧುರ ರಸವು ಅತಿ ಹೆಚ್ಚು ಪ್ರಮಾಣದಲ್ಲಿ ಮತ್ತು ಕಷಾಯ ರಸವು ಅತಿ ಕಡಿಮೆ ಪ್ರಮಾಣದಲ್ಲಿ ಮಿಳಿತವಾಗಿರಬೇಕು. ಆದರೆ, ಯಾವುದೋ ಒಂದೇ ರಸವನ್ನು ಹೆಚ್ಚು ಪ್ರಮಾಣದಲ್ಲಿ ಸೇವಿಸುವುದು ಅದರಲ್ಲೂ ಅತಿಯಾಗಿ ಕೇವಲ ಖಾರ ಮತ್ತು ಹುಳಿ ಪ್ರಧಾನವಾದ ಆಹಾರವನ್ನು ಹೆಚ್ಚಾಗಿ ಸೇವಿಸುವುದರಿಂದ ಅಶ್ಮರಿಯ ಸಮಸ್ಯೆಯು ಪ್ರಾರಂಭವಾಗುತ್ತದೆ.

8. ಅತಿಯಾದ ವ್ಯಾಯಾಮವೂ ಆರೋಗ್ಯಕ್ಕೆ ಹಾನಿಕರ. ಮೂತ್ರಕೋಶದ ಕಲ್ಲಿನ ಉಗಮಕ್ಕೆ ಇದು ನೇರ ಕಾರಣ ಎಂದರೆ ತಪ್ಪಾಗದು. ಆಯುರ್ವೇದದ ಪ್ರಕಾರ ನಮ್ಮ ಅರ್ಧ ಶಕ್ತಿಯಷ್ಟೇ ವ್ಯಾಯಾಮವನ್ನು ಮಾಡತಕ್ಕದ್ದು. ಅದರಲ್ಲೂ ಗ್ರೀಷ್ಮ ಋತು ಮತ್ತು ವರ್ಷ ಋತುವಿನಲ್ಲಿ– ಅಂದರೆ ಬೇಸಗೆಕಾಲ ಮತ್ತು ಮಳೆಗಾಲದಲ್ಲಿ ನಮ್ಮ ದೇಹಶಕ್ತಿಯು ಅತ್ಯಂತ ಕಡಿಮೆ ಇರುವ ಸಂದರ್ಭದಲ್ಲಿ ವ್ಯಾಯಾಮವನ್ನು ಅತಿ ಮೃದುವಾಗಿ ಮಾಡತಕ್ಕದ್ದು. ಇದನ್ನು ಪಾಲಿಸದೆ ಮನ ಬಂದಂತೆ ನಮ್ಮ ದೇಹದ ಬಲವನ್ನು ಗಮನಿಸದೆ ಮಾಡುವ ವ್ಯಾಯಾಮದಿಂದ ಅಶ್ಮರಿಯಷ್ಟೇ ಅಲ್ಲದೆ ಅನೇಕ ವ್ಯಾಧಿಗಳು ಚಿಗುರೊಡೆಯುತ್ತವೆ.

9. ಜಿಡ್ಡಿನ ಅಂಶ ಇಲ್ಲದ ಒಣ ಆಹಾರದ ಸೇವನೆಯೂ ಈ ರೋಗಕ್ಕೆ ಮುಖ್ಯ ಕಾರಣ. ತುಪ್ಪ ತಿಂದರೆ ತೊಂದರೆಯಾಗುತ್ತದೆ ಎಂದು ನಂಬಿ ನಾವೆಲ್ಲರೂ ಅಮೃತಸಮನಾದ ಈ ಒಳ್ಳೆಯ ಜಿಡ್ಡನ್ನು ಮರೆತುಬಿಟ್ಟಿದ್ದೇವೆ. ಒಳ್ಳೆಯ ಜಿಡ್ಡಿನಂಶವಿರದ ಆಹಾರವು ಎಂದಿಗೂ ತೊಂದರೆದಾಯಕ. ಹಸಿವನ್ನು ಗಮನಿಸಿ, ಜೀರ್ಣಶಕ್ತಿ ಚೆನ್ನಾಗಿದ್ದಾಗ, ಬಿಸಿ ಆಹಾರದಲ್ಲಿ ಕನಿಷ್ಠ ಒಂದು ಚಮಚ ಹಸುವಿನ ತುಪ್ಪವನ್ನು ಸೇರಿಸಿಕೊಂಡರೆ ಅದು ಸದಾ ರಕ್ಷಾಕವಚವಾಗಿ ನಮ್ಮನ್ನು ಕಾಪಾಡುತ್ತದೆ. ಇನ್‌ಸ್ಟಂಟ್ ಆಹಾರಗಳು, ಟಿನ್ಡ್/ಕ್ಯಾನ್ಡ್ ಆಹಾರ ಮತ್ತು ಡೀಹೈಡ್ರೇಟೆಡ್ (ಒಣಗಿಸಿದ) ಆಹಾರಗಳು ಸಹ ಇದೇ ಗುಂಪಿಗೆ ಸೇರಿದ್ದು, ಇವು ಆರೋಗ್ಯವನ್ನು ಹಾಳುಮಾಡುವುದರಲ್ಲಿ ಸಂಶಯವಿಲ್ಲ.



10. ಮತ್ತೊಂದು ಮುಖ್ಯವಾದ ಕಾರಣವೆಂದರೆ ಮಲ ಮತ್ತು ಮೂತ್ರ ವೇಗಗಳನ್ನು ಬಲವಂತವಾಗಿ ತಡೆಯುವುದು ಅಥವಾ ಪ್ರಯತ್ನಪೂರ್ವಕವಾಗಿ ಹೊರಹಾಕುವುದರಿಂದಲೂ ಅಶ್ಮರೀ ರೋಗವು ಕಾಣಿಸಿಕೊಳ್ಳುತ್ತದೆ. ಕೆಲಸದ ಒತ್ತಡ/ಪ್ರಯಾಣ/ಆಲಸ್ಯ ಅಥವಾ ಪರಿಸ್ಥಿತಿಗಳಿಂದ ನಾವು ಸುಮಾರು ಬಾರಿ ಮಲ ಮತ್ತು ಮೂತ್ರದ ವೇಗಗಳನ್ನು ತಡೆಯುತ್ತೇವೆ. ಆಯುರ್ವೇದದ ಪ್ರಕಾರ ಇದು ಹಲವಾರು ರೋಗಗಳಿಗೆ ನಾಂದಿ. ಹಾಗಾಗಿ ವೇಗಧಾರಣೆ ಇರಲಿ ಅಥವಾ ಬಲವಂತವಾಗಿ ಇಲ್ಲದ ವೇಗವನ್ನು ಉದೀರಣೆ ಮಾಡುವುದು ಸಹ ಸ್ವಾಸ್ಥ್ಯ ನಾಶಕ.

11. ಅತಿಯಾದ ಮದ್ಯಪಾನ ಮತ್ತು ತೀಕ್ಷ್ಣ ಔಷಧಿಗಳ ಅನಿಯಮಿತ ಸೇವನೆಯೂ ಅಶ್ಮರಿ ರೋಗಕ್ಕೆ ಕಾರಣವಾಗಬಹುದು. ತಲೆನೋವಿಗೊಂದು ಮಾತ್ರೆ, ಹೊಟ್ಟೆ ನೋವಿಗೊಂದು, ವಾಂತಿಗೊಂದು, ಬೇಧಿಗೊಂದು ಮಾತ್ರೆ– ಹೀಗೆ ಸಣ್ಣ ಸಣ್ಣ ವಿಷಯಗಳಿಗೂ ಮಾತ್ರೆಗಳನ್ನು ನುಂಗುವ ಜನರಿಗೆ ಅಶ್ಮರಿ ರೋಗವು ಕಟ್ಟಿಟ್ಟಬುತ್ತಿ ಆಗುತ್ತದೆ.

12. ಕಾಲಕಾಲಕ್ಕೆ ಪಂಚಕರ್ಮದ ಶೋಧನ– ಅಂದರೆ ಚಿಕಿತ್ಸೋಪಾಯ ವಾಂತಿ/ಬೇಧಿ ಇತ್ಯಾದಿಗಳನ್ನು ಮಾಡಿಸುವ ಮೂಲಕ ಶರೀರವನ್ನು ಶುದ್ಧಿಗೊಳಿಸುವ ಕ್ರಿಯೆ– ಇದನ್ನು ಮಾಡದೇ ಇರುವುದರಿಂದಲೂ ಶರೀರದಲ್ಲಿ ಕಫ ಪ್ರಧಾನವಾದ ದೋಷಗಳು ಹೆಚ್ಚಾಗಿ ಅಶ್ಮರೀ ರೋಗವನ್ನು ಉಂಟುಮಾಡುತ್ತವೆ.

13. 'ಉಷ್ಣಂ ಅಶ್ನೀಯಾತ್' ಅನ್ನುವುದು ಆಯುರ್ವೇದದ ಸೂತ್ರ. ಸದಾ ಉಷ್ಣವಿರುವ ಅಂದರೆ ಬಿಸಿ ಇರುವ ಆಹಾರವು ಆರೋಗ್ಯವನ್ನು ಕಾಪಾಡುತ್ತದೆ. ಇದಕ್ಕೆ ವಿರುದ್ಧವಾದ ಐಸ್ ಕ್ರೀಮ್, ಜ್ಯೂಸ್, ಮಿಲ್ಕ್ ಶೇಕ್, ಸ್ಮೂದೀಸ್ ಅಥವಾ ಫ್ರಿಜ್‌ನಲ್ಲಿ ಶೇಖರಿಸಿ ಸೇವಿಸುವ ಆಹಾರಗಳು ಸಹ ಮೂತ್ರಪಿಂಡದ ಕಲ್ಲುಗಳನ್ನು ಹೆಚ್ಚು ಮಾಡುತ್ತವೆ. ಅಂತೆಯೇ ತಂಪಾದ ಪಾನೀಯಗಳ ಅನಿಯಮಿತ ಸೇವನೆಯೂ ಇದಕ್ಕೆ ಮುಖ್ಯ ಕಾರಣ.

14. ಮಧುರ ರಸ ಪ್ರಧಾನವಾದ ಆಹಾರವನ್ನು ಹೆಚ್ಚಾಗಿ ಸೇವಿಸುವುದು. ಉದಾಹರಣೆಗೆ, ಕಬ್ಬಿನ ಹಾಲು, ಮೊಸರು, ಎಳ್ಳಿನ ಸಿಹಿ ಪದಾರ್ಥಗಳು ಇವು ಸಹ ಮುಖ್ಯ ಕಾರಣವಾಗುತ್ತವೆ.

15. ಹುಳಿಬಂದ ಹಿಟ್ಟಿನಿಂದ ತಯಾರಿಸಿದ ಆಹಾರ ಪದಾರ್ಥಗಳನ್ನು ಹೆಚ್ಚಾಗಿ ಸೇವಿಸುವುದು ಅದರಲ್ಲೂ ವಿಶೇಷವಾಗಿ ರಾತ್ರಿ ಸಮಯದಲ್ಲಿ, ಜೀರ್ಣಶಕ್ತಿ ಕಡಿಮೆ ಇದ್ದಾಗ ಸೇವಿಸುವುದು ಒಳ್ಳೆಯದಲ್ಲ. ಉದಾಹರಣೆಗೆ, ನಿತ್ಯವೂ ತಿಂಡಿಗೆ ಇಡ್ಲಿ/ದೋಸೆಗಳನ್ನು ಸೇವಿಸುವುದು ಅಥವಾ ರಾತ್ರಿ ಪುನಃ ಚಪಾತಿ/ದೋಸೆ/ಇಡ್ಲಿಗಳನ್ನು ಸೇವಿಸುವ ಅಭ್ಯಾಸವು ಹಲವರಿಗೆ ತೊಂದರೆ ಮಾಡಬಹುದು.

16. ವಿರುದ್ಧ ಆಹಾರಗಳನ್ನು ಸೇವಿಸುವುದೂ ರೋಗೋತ್ಪತ್ತಿಗೆ ಒಂದು ಕಾರಣ. ಉದಾಹರಣೆಗೆ, ಮೊಸರಿನ ಜತೆಗೆ ಕರಿದ ಪದಾರ್ಥಗಳನ್ನು ಸೇವಿಸುವುದು. ಬಾಳೆಹಣ್ಣಿನೊಂದಿಗೆ ಹಾಲನ್ನು ಸೇವಿಸುವುದು, ಮೊಸರನ್ನಕ್ಕೆ ಹಾಲನ್ನು ಬೆರೆಸುವುದು, ಮೊಸರನ್ನು ಬಿಸಿ ಮಾಡುವುದು ಅಥವಾ ಬಿಸಿ ಅಡುಗೆಗೆ ಬಳಸುವುದು, ಜೇನುತುಪ್ಪವನ್ನು ಬಿಸಿನೀರಿನಲ್ಲಿ ಸೇವಿಸುವುದು, ಹಾಲಿನ ಜತೆ ಉಪ್ಪು ಅಥವಾ ಖಾರದ ಖಾದ್ಯಗಳನ್ನು ಸೇವಿಸುವುದು– ಈ ರೀತಿಯ ಪರಸ್ಪರ ಒಂದಕ್ಕೊಂದು ಹೊಂದದ ಪದಾರ್ಥಗಳನ್ನು ಒಮ್ಮೆಗೆ ಸೇವಿಸುವುದರಿಂದಲೂ ಕಲ್ಲಿನ ಸಮಸ್ಯೆ ಹೆಚ್ಚಾಗುತ್ತದೆ.

17. ಅತಿಯಾದ ಪ್ರಯಾಣ/ರಾತ್ರಿ ಪ್ರಯಾಣ ಮತ್ತು ಹಾಳಾದ ರಸ್ತೆಗಳಲ್ಲಿ ಅನಿಯಮಿತ ಪ್ರಯಾಣದಿಂದಲೂ ಅಶ್ಮರಿ ರೋಗ ಕಾಣಿಸಿಕೊಳ್ಳಬಹುದು.

ಮೇಲೆ ಹೇಳಿದ ಕಾರಣಗಳಿಂದ ದೇಹದಲ್ಲಿ ಅದರಲ್ಲೂ ವಿಶೇಷವಾಗಿ ಮೂತ್ರಕೋಶದಲ್ಲಿ ಕಲ್ಲು ಹೇಗೆ ಉತ್ಪತ್ತಿಯಾಗುತ್ತದೆ ಎಂಬ ವಿಶೇಷ ವಿಷಯವನ್ನು ಈಗ ತಿಳಿದುಕೊಳ್ಳೋಣ.

ಮೇಲೆ ಹೇಳಿದ ಕೆಲವು ಕಾರಣಗಳಿಂದ ಜಠರದಲ್ಲಿ ಕಫ ಪ್ರಧಾನವಾದ ದೋಷಗಳು ಸ್ವಲ್ಪ ಸ್ವಲ್ಪವೇ ಶೇಖರಣೆಗೊಳ್ಳಲು ಪ್ರಾರಂಭವಾಗುತ್ತದೆ. ಇನ್ನುಳಿದ ಕೆಲವು ಕಾರಣಗಳಿಂದ ಜಠರದಲ್ಲಿರುವ ಈ ತ್ರಿದೋಷಗಳು ಮೂತ್ರಕೋಶವನ್ನು ತಲುಪುತ್ತವೆ. ಉದಾಹರಣೆಗೆ, ಅತಿಯಾದ ನೀರು ಸೇವನೆ, ಅತಿಯಾದ ವ್ಯಾಯಾಮ, ಅತಿಯಾದ ಪ್ರಯಾಣಗಳು ಮೂತ್ರಕೋಶಕ್ಕೆ ದೋಷಗಳನ್ನು ತಂದುಬಿಡುತ್ತವೆ. ಯಾವ ರೀತಿ ಬೇಸಗೆಯಲ್ಲಿ ಕೆಸರುಮಿಶ್ರಿತ ನೀರಿನಿಂದ, ಬಿಸಿಲು ಮತ್ತು ಗಾಳಿಗೆ ಅದರಲ್ಲಿರುವ ನೀರು ಆವಿಯಾಗಿ ಕೆಸರು ಗಟ್ಟಿಯಾಗುತ್ತದೆಯೋ, ಅದೇ ರೀತಿ ಬಹಳ ಸಮಯದಿಂದ ಮೂತ್ರಕೋಶದಲ್ಲಿ ಶೇಖರಣೆಯಾಗಿದ್ದ ದೋಷಗಳು ವಾತದೋಷದಿಂದ ಒಣಗಿ, ಪಿತ್ತ ದೋಷದ ಶಾಖದಿಂದ ಮತ್ತಷ್ಟು ಗಟ್ಟಿಯಾಗಿ ಕಲ್ಲಿನ ಸ್ವರೂಪವನ್ನು ತಳೆಯುತ್ತವೆ.

ಇಲ್ಲಿ ನಿಮಗೊಂದು ಪ್ರಶ್ನೆ ಬರಬಹುದು– ಹೆಚ್ಚಾಗಿ ನೀರು ಕುಡಿದರೆ ಬಾಡಿ ಕ್ಲೀನಾಗಿ, ಕಲ್ಲಿನ ಸಮಸ್ಯೆ ನಿವಾರಣೆಯಾಗಬೇಕಲ್ಲವೇ? ಅಂತ. ನೋಡಿ ಸ್ನೇಹಿತರೆ, ಮಳೆಗಾಲದಲ್ಲಿ ಮಾತ್ರ ನದಿಯ ನೀರು ಕೆಂಪಾಗಿ ಕಾಣಲು ಕಾರಣವೇನು? ಮಳೆಗಾಲದಲ್ಲಿ ಅತಿಯಾದ ನೀರು ಮತ್ತು ರಭಸದಿಂದ ಅದು ಹರಿಯುವಾಗ ಅಕ್ಕ ಪಕ್ಕದ ಮಣ್ಣನ್ನೆಲ್ಲಾ ಕೊಚ್ಚಿಕೊಂಡು ಹೋಗುವುದರಿಂದ ಮಳೆಗಾಲದಲ್ಲಿ ನೀರು ಕೆಂಪಾಗಿ ಕಾಣುತ್ತದೆ. ಅಲ್ಲವೇ? ಇದೇ ರೀತಿ ನಮ್ಮ ಶರೀರದಲ್ಲಿಯೂ ಆಗುತ್ತದೆ. ಶರೀರಕ್ಕೆ ನೀರು ಎಷ್ಟು ಬೇಕು ಅಷ್ಟು ಮಾತ್ರ ಕುಡಿಯತಕ್ಕದ್ದು. ಆದರೆ, ಅಜ್ಞಾನದಿಂದ ಅತಿಯಾದ ನೀರನ್ನು ಸೇವಿಸಲು ನಾವು ಪ್ರಾರಂಭಿಸಿದರೆ ಈ ಹೆಚ್ಚಾದ ನೀರು ಮೂತ್ರದ ರೂಪದಲ್ಲಿ ದೇಹದಿಂದ ಹೊರಗೆ ಹೋಗಲೇಬೇಕು. ಜಠರದ ಮೂಲಕವೇ ಈ ಅತಿಯಾದ ನೀರು ಹರಿಯುತ್ತದೆ. ಜಠರದ ಕೊನೆಯ ಭಾಗದಲ್ಲಿ ಆಹಾರದ ಪಚನಾನಂತರ ಅಧಿಕವಿರುವ ನೀರಿನಂಶವು ಅಲ್ಲಿಂದ ಸಣ್ಣ ಸಣ್ಣ ರಂಧ್ರಗಳಿಂದ ಹೀರಿಕೊಂಡು, ಮೂತ್ರಕೋಶಕ್ಕೆ ಹೋಗುತ್ತದೆ. ಹೀಗೆ ಹೋಗುವಾಗ ಜಠರದಲ್ಲಿ, ನಾನು ಮೇಲೆ ಹೇಳಿದ ಕಾರಣಗಳಿಂದ ಶೇಖರಣೆಗೊಂಡ ದೋಷಗಳು ಕೂಡ ಅದರ ಜತೆ ಹೋಗಿ ಮೂತ್ರಕೋಶದಲ್ಲಿ ಸೇರಿಕೊಂಡು ಮುಂದೊಂದು ದಿನ ಕಲ್ಲಾಗಿ ಪರಿವರ್ತನೆಗೊಳ್ಳುತ್ತದೆ.

ಮೂತ್ರದಲ್ಲಿ ಕಲ್ಲಿನ ಉತ್ಪತ್ತಿ ಆಗುವ ಸಮಯದಲ್ಲಿ ಅಥವಾ ಕಲ್ಲು ಪೂರ್ಣವಾಗಿ ಉತ್ಪತ್ತಿಯಾದ ನಂತರ ಕೆಲವು ಲಕ್ಷಣಗಳನ್ನು ನಾವು ಗಮನಿಸಬಹುದು:

- ಕೆಳ ಹೊಟ್ಟೆಯಲ್ಲಿ ನೋವು
- ಮೂತ್ರ ಪ್ರವೃತ್ತಿಯಾಗುವಾಗ ಉರಿ
- ಆಹಾರ ರುಚಿಸದೇ ಇರುವುದು
- ಕಷ್ಟದಿಂದ ಮೂತ್ರ ಪ್ರವೃತ್ತಿಯಾಗುವುದು
- ಮೂತ್ರದಲ್ಲಿ ವಾಸನೆ
- ಒಮ್ಮೆ ಕಲ್ಲು ಉಂಟಾದ ನಂತರ, ಮೂತ್ರ ವಿಸರ್ಜಿಸುವಾಗ ಹೊಕ್ಕಳಿನಲ್ಲಿ ಮತ್ತು ಮೂತ್ರಮಾರ್ಗದಲ್ಲಿ ತೀವ್ರವಾದ ನೋವು
- ಕೆಲವೊಮ್ಮೆ ರಕ್ತಯುಕ್ತ ಮೂತ್ರ ಪ್ರವೃತ್ತಿ
- ಮೂತ್ರವು ಸಣ್ಣ ಸಣ್ಣ ಕಣಗಳಿಂದ ಕೂಡಿರುವುದು
- ಓಡಿದಾಗ, ನಡೆದಾಗ, ಬಿಸಿಲಿಗೆ ಹೋದಾಗ ಇತ್ಯಾದಿ ಸಂದರ್ಭಗಳಲ್ಲಿ ನೋವು ಹೆಚ್ಚಾಗುವುದು
- ದೇಹದ ಉಷ್ಣಾಂಶ ಹೆಚ್ಚಾದ ಅನುಭವ.

ಈ ರೀತಿಯ ಲಕ್ಷಣಗಳು ಕಾಣಿಸಿಕೊಂಡರೆ ತಕ್ಷಣವೇ ವೈದ್ಯರ ಸಲಹೆಯನ್ನು ಪಡೆಯುವುದು ಮುಖ್ಯ. ಜತೆಗೆ, ಮೇಲೆ ಹೇಳಿದಂಥ ಎಲ್ಲಾ ಕಾರಣಗಳನ್ನು ತ್ಯಜಿಸತಕ್ಕದ್ದು. ಕಾಲಕಾಲಕ್ಕೆ ಹಸಿವೆ ಇದ್ದಾಗ ಮಾತ್ರ ಆಹಾರವನ್ನು ಸೇವಿಸಬೇಕು. ನಿಯಮಿತವಾದ ವ್ಯಾಯಾಮ ಮಾಡಬೇಕು. ಪ್ರತಿದಿನವೂ ಸ್ನಾನದ ಮೊದಲು ಮೈಗೆ ಎಣ್ಣೆ ಹಚ್ಚಿ ನಂತರ ಸ್ನಾನ ಮಾಡಬೇಕು. ವೈದ್ಯರ ಸಲಹೆಯ ಮೇರೆಗೆ ಆಹಾರದಲ್ಲಿ ಸೌತೆಕಾಯಿ, ಹುರುಳಿ, ಬಾಳೆದಿಂಡು, ಬೂದುಗುಂಬಳ, ನುಗ್ಗೆ ಸೊಪ್ಪು, ನೆಗ್ಗಿಲ ಮುಳ್ಳು, ಪಡವಲಕಾಯಿ, ಮಜ್ಜಿಗೆ, ಎಳನೀರು, ಒಣದ್ರಾಕ್ಷಿ, ದಾಳಿಂಬೆ, ಬಾರ್ಲಿ ಮುಂತಾದವುಗಳನ್ನು ಸಮಯೋಚಿತವಾಗಿ ಬಳಸತಕ್ಕದ್ದು. ಹೀಗೆ ಮಾಡಿದ್ದೇ ಆದರೆ ದೇಹದಲ್ಲಿ ಕಲುಷಿತಗೊಂಡ ನೀರು ನಿಧಾನವಾಗಿ ತಿಳಿಯಾಗಿ, ಜಠರ ಮತ್ತು ಮೂತ್ರಾಶಯಗಳು ಸ್ವಚ್ಛಗೊಂಡು ತನ್ಮೂಲಕ ಮೂತ್ರಕೋಶದಲ್ಲಿ ಸಂಭವಿಸಬಹುದಾದ ಕಲ್ಲನ್ನು ತಡೆಯುವುದರ ಜತೆಗೆ, ಈಗಾಗಲೇ ಉಂಟಾದ ಕಲ್ಲನ್ನು ಕೂಡ ಸುಲಭವಾಗಿ ಕರಗಿಸಬಹುದು. ಬನ್ನಿ ಆಯುರ್ವೇದೋಕ್ತ ಶಿಸ್ತಿನ ಜೀವನವನ್ನು ನಮ್ಮದಾಗಿಸಿಕೊಳ್ಳೋಣ.

ಪಂಪ: ಮನುಷ್ಯಜಾತಿಯೊಂದೇ? ಅಥವಾ ಅಸ್ಪೃಶ್ಯತೆಯೂ ಇದೆಯೇ?

ಜಾತಿ ಜಿಜ್ಞಾಸೆ

ಅಜಕ್ಕಳ ಗಿರೀಶ ಭಟ್
vveditoped@gmail.com

ಆದಿಕವಿ ಪಂಪನು ಜನ್ಮದಿಂದ ಬಂದ ಕುಲವನ್ನು ಧಿಕ್ಕರಿಸಿದ್ದಾನೆ'' ಎನ್ನುವುದು ಕನ್ನಡದಲ್ಲಿ ಒಂದು ಅತ್ಯಂತ ಪ್ರಸಿದ್ಧವೂ ಜನಪ್ರಿಯವೂ ಆದ ಕಥನ. ಇದಕ್ಕೆ ಕಾರಣವಾದ ಸಾಲುಗಳ ಪೈಕಿ ಮುಖ್ಯವಾದುದು 'ಆದಿಪುರಾಣ'ದಲ್ಲಿ ಬರುವ ''ಮನುಷ್ಯಜಾತಿ ತಾನೊಂದೆವಲಂ'' ಎಂಬುದು. ಅಲ್ಲದೆ ಪಂಪಭಾರತದಲ್ಲಿ ದ್ರೋಣ, ಭೀಷ್ಮ ಮೊದಲಾದವರ ಮಾತುಗಳಿಗೆ ಎದುರಾಗಿ ಕರ್ಣನು ಕುಲದ ಬಗ್ಗೆ ಆಡುವ ಮಾತುಗಳೂ ಇವೆ.

ಆದರೆ ಆದಿಪುರಾಣವನ್ನು ಓದುವಾಗ, ಕುಲದ ಬಗ್ಗೆ ಪಂಪನ ನಿಲುವು ಏನಾಗಿತ್ತು ಎಂಬ ಹೊಸ ಪ್ರಶ್ನೆ ಬರುತ್ತದೆ. ಪಂಪನ ಆದಿಪುರಾಣದಲ್ಲಿ ಇರುವ ''ಮನುಷ್ಯಜಾತಿ ತಾನೊಂದೆವಲಂ'' ಎನ್ನುವ ಸಾಲನ್ನು ''ಮನುಷ್ಯರ ನಡುವಿನ ಸಮಾನತೆಯನ್ನು ಸಾರಿದ ಸಾಲು'' ಎಂದು ಪರಿಗಣಿಸಿ ದಿನನಿತ್ಯವೆಂಬಂತೆ ಗೋಷ್ಠಿಗಳಲ್ಲಿ, ಸಮ್ಮೇಳನಗಳಲ್ಲಿ, ಬರವಣಿಗೆಗಳಲ್ಲಿ ಉಲ್ಲೇಖಿಸಲಾಗುತ್ತದೆ. ಜಾತಿಭೇದ ನಿರಾಕರಣೆಯ ಆಶಯವುಳ್ಳ ಅದೇ ಹೆಸರಿನ ನಾಟಕವನ್ನೂ ಮಾಡಲಾಗಿದೆ. ಕನ್ನಡ ಸಾಹಿತ್ಯ ಪರಿಷತ್ತು ಅದನ್ನು ಧ್ಯೇಯವಾಕ್ಯವಾಗಿ ಬಳಸಿಕೊಳ್ಳುತ್ತದೆ. ಆ ಸಾಲನ್ನು ಸಂದರ್ಭದಿಂದ ಪ್ರತ್ಯೇಕಿಸಿ ಅದನ್ನೊಂದು ಧ್ಯೇಯವಾಕ್ಯವಾಗಿ ಇಟ್ಟುಕೊಂಡರೆ ತಪ್ಪೇನಿಲ್ಲ. ಆದರ್ಶವಾಕ್ಯವೇ ಹೌದು ಅದು.

ಆದರೆ, ಪಂಪನು ಮನುಷ್ಯ ಸಮಾನತೆಯನ್ನು ಸಾರಲು ಈ ವಾಕ್ಯವನ್ನು ಹೇಳಿದನೇ? ಸ್ಪಷ್ಟ ಉತ್ತರ 'ಇಲ್ಲ' ಎನ್ನುವುದೇ. ವಸ್ತುತಃ ಮನುಷ್ಯರೆಲ್ಲ ಒಂದೇ ಅಲ್ಲ ಎನ್ನುವುದನ್ನು ಸೂಚಿಸುವ ಪದ್ಯದಲ್ಲಿ ಬರುವ ಸಾಲು ಅದು. ಈ ಬಗ್ಗೆ ಕಳೆದ ಹತ್ತಿಪ್ಪತ್ತು ವರ್ಷಗಳಲ್ಲಿ ಬಿ.ಆರ್. ವೆಂಕಟರಮಣ ಐತಾಳ್, ಕೆ.ವಿ. ಅಕ್ಷರ, ರಾಜಾರಾಮ ಹೆಗ್ಡೆ ಮುಂತಾದವರೆಲ್ಲ ಬರೆದಿದ್ದಾರೆ. ಅವುಗಳ ಬೆಳಕಿನಲ್ಲಿ, ಪಂಪಭಾರತದ ಕೆಲವಂಶಗಳನ್ನೂ ಇಟ್ಟುಕೊಂಡು ಮತ್ತಷ್ಟು ವಿಸ್ತರಿಸಿ ನಾನೂ ಬರೆದಿದ್ದೇನೆ. ನನ್ನದೇ ಹೆಸರಿನ ಯುಟ್ಯೂಬ್ ವಾಹಿನಿಯಲ್ಲೂ ಮೂರು ವರ್ಷಗಳ ಹಿಂದೆ ಈ ಬಗ್ಗೆ ವಿಸ್ತಾರವಾಗಿ ಚರ್ಚಿಸಿದ್ದೆ. ಒಂದೆರಡು ವರ್ಷಗಳ ಹಿಂದೆ ಸಾಮಾಜಿಕ ಮಾಧ್ಯಮದಲ್ಲಿ ಮಂಜುನಾಥ ಕೊಳ್ಳೇಗಾಲ ಅವರೂ ''ಮನುಷ್ಯಜಾತಿ ತಾನೊಂದೆವಲಂ..'' ಎಂಬ ಸಾಲು ಇರುವ ಪದ್ಯದ ಸರಿಯಾದ ಅರ್ಥ ವಿವರಿಸಿ ಸುದೀರ್ಘ ಲೇಖನವನ್ನು ಬರೆದಿದ್ದಾರೆ.

ಪಂಪಭಾರತದಲ್ಲಿ ಪಂಪ ಕರ್ಣನನ್ನು ಹೊಗಳುತ್ತಾನೆ ನಿಜ. ಆದರೆ ಅಲ್ಲಿ ಕುಲದ ವ್ಯಾಖ್ಯಾನ ಮುಖ್ಯವಾಗಿ ಆಗುವುದು ಪಾತ್ರಗಳ ಮೂಲಕ. ಪಂಪನ ನೇರ ನಿರೂಪಣೆಯ ಮೂಲಕ ಅಲ್ಲ. ಹೀಗೆ, ಪಾತ್ರದ ಮೂಲಕ ಹೇಳುವುದು ಮತ್ತು ಕವಿ ತನ್ನದೇ ಮಾತುಗಳಾಗಿ ಹೇಳುವುದರ ನಡುವೆ ಅಗಾಧ ವ್ಯತ್ಯಾಸವಿದೆ. ಸಾಹಿತ್ಯಾಭ್ಯಾಸಿಗಳಿಗೆಲ್ಲ ಗೊತ್ತಿರುವ ಸಂಗತಿ ಇದು.

ಪಾತ್ರದ ಬಾಯಿಯಲ್ಲಿ ಕೃತಿಕಾರನೊಬ್ಬ ಹೇಳಿಸಿದ ಮಾತುಗಳೆಲ್ಲ ಆ ಕೃತಿಕಾರನ ಮಾತುಗಳೇ ಆಗಬೇಕಿಲ್ಲ; ಅಥವಾ ಅವು ಕೃತಿಕಾರನ ಅಭಿಪ್ರಾಯಗಳೇ ಆಗಬೇಕಿಲ್ಲ. ಉದಾಹರಣೆಗೆ ಭೀಮ–ದುರ್ಯೋಧನರ ನಡುವಿನ 'ಗದಾಯುದ್ಧ'ದ ಬಗ್ಗೆ ನಾಟಕ ಬರೆದರೆ ಅದರಲ್ಲಿ ಭೀಮನ ಮೂಲಕ ನಾಟಕಕಾರ ಹೇಳಿಸುವ ಮಾತುಗಳು ಮತ್ತು ದುರ್ಯೋಧನನ ಮೂಲಕ ಹೇಳಿಸುವ ಮಾತುಗಳು ಪರಸ್ಪರ ವಿರುದ್ಧವಿರಬಹುದು. ಓದುಗರು ಅಥವಾ ವಿಮರ್ಶಕರು ಅವರವರಿಗೆ ಬೇಕಾದಂತೆ ಇದು ನಾಟಕಕಾರನ ನಿಲುವು ಎಂದು ಹೇಳಿದರೆ ಅರ್ಥವುಂಟೇ? ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯನ್ನು ನೋಡಿದರೆ ಹಲವು ಪಾತ್ರಗಳ ಮಾತುಗಳು ಬರುತ್ತವೆ. ಅವೆಲ್ಲವೂ ಕುವೆಂಪು ಅವರ ನಿಲುವನ್ನು ಹೇಳುತ್ತವೆ ಎನ್ನಲಾದೀತೆ?

ಒಂದು ಕೃತಿಯಲ್ಲಿ ಬರುವ ಪಾತ್ರದ ಮಾತಿನಲ್ಲಿ ವ್ಯಕ್ತವಾದುದು ಕೃತಿಕಾರನ ಅಭಿಪ್ರಾಯ ಆಗಿರಲೂಬಹುದು; ಆಗಿಲ್ಲದೆಯೂ ಇರಬಹುದು. ನಿರ್ಣಾಯಕವಾಗಿ ಹೇಳಲು ಕಷ್ಟ. ಸಾಂದರ್ಭಿಕವಾದ ಇತರ ಮಾತುಗಳ ಮೂಲಕ ಮತ್ತು ಕೃತಿಕಾರ ನಿರ್ಮಿಸುವ ಸನ್ನಿವೇಶಗಳ ಮೂಲಕ ನಾವು ಕೆಲವು ಸಲ ಒಂದು ನಿರ್ಣಯಕ್ಕೆ ಬರಬಹುದು ಅಷ್ಟೆ. ಆದರೆ ಕೃತಿಯ ನಿರೂಪಕನ ಮಾತುಗಳಲ್ಲಿಯೇ ಬಂದ ಅಭಿಪ್ರಾಯವನ್ನು ಅಥವಾ ವ್ಯಕ್ತವಾದ ನಿಲುವನ್ನು ಕೃತಿಕಾರನ ಮಾತು, ಅಭಿಪ್ರಾಯ ಮತ್ತು ನಿಲುವು ಎಂಬುದಾಗಿ ಸ್ಪಷ್ಟವಾಗಿಯೇ ಹೇಳಬಹುದು.

ಆದಿಪುರಾಣದಲ್ಲಿ ಬರುವ ''ಮನುಷ್ಯಜಾತಿ ತಾನೊಂದೆವಲಂ'' ಎಂಬುದು ಆದಿದೇವನ ಮಗನಾದ ಭರತ ಚಕ್ರವರ್ತಿಯ ಮಾತು. ಇದು ಪಾತ್ರದ ಮಾತಿರಲಿ ಅಥವಾ ಕಾವ್ಯದ ನಿರೂಪಕನಾದ ಪಂಪನ ಮಾತೇ ಇರಲಿ, ಒಟ್ಟಿನಲ್ಲಿ ಪದ್ಯದ ಸಂದರ್ಭವನ್ನು ನೋಡಿದರೆ ಗೊತ್ತಾಗುವಂತೆ ಇದು ಮನುಷ್ಯರೆಲ್ಲ ಸಮಾನರು ಎಂದು ಹೇಳುವ ಮಾತಲ್ಲ; ಬದಲಾಗಿ ಹೆಚ್ಚುಕಡಿಮೆ ಅದಕ್ಕೆ ವಿರುದ್ಧವಾದುದನ್ನು ಹೇಳುವ ಸಾಲು ಎನ್ನುವುದು ಸ್ಪಷ್ಟವಾಗಿದೆ. ಹೀಗಾಗಿ ''ಪಂಪ ಹುಟ್ಟನ್ನು ಆಧರಿಸಿದ ಕುಲದ ಕಲ್ಪನೆಯನ್ನು ಧಿಕ್ಕರಿಸಿದ್ದಾನೆ'' ಎನ್ನಲು ಇದು ಆಧಾರವಾಗುವುದಿಲ್ಲ.

★★★

ಇದೀಗ ಆದಿಪುರಾಣದಲ್ಲಿ ಪಂಪ ಏನು ಹೇಳುತ್ತಾನೆ ಎಂದು ನೋಡೋಣ. ಆದಿಪುರಾಣದ 'ಕರ್ಮಭೂಮಿ ನಿಯೋಗ' ಎನ್ನುವ ಎಂಟನೆಯ ಆಶ್ವಾಸದಲ್ಲಿ ಪ್ರಜಾಪತಿಯು ಪ್ರಜೋಪಜೀವನ ನಿಮಿತ್ತವಾಗಿ, ವರ್ಣಗಳನ್ನು ವಿಭಾಗಿಸಿದ ಅಥವಾ ಪಡೆದ/ಸೃಷ್ಟಿಸಿದ ಬಗ್ಗೆ ಬರುತ್ತದೆ. ಅಲ್ಲಿ ಹೇಳಲಾದ ಈ ಮುಂದಿನ ಸಾಲುಗಳನ್ನು ನೋಡಿ: ''..ತನ್ನ ಪಡೆದ ಸಕಲ ಕ್ಷತ್ರಿಯ ವಣಿಕ್ ಶೂದ್ರರೆಂಬ ಮೂರುಂ ವರ್ಣಂಗಳೊಳಂ– ಕ್ಷತ್ರತ್ರಾಣಾದಿ ಗುಣೋಪೇತಮಪ್ಪ ನಿಖಿಳ ಕ್ಷತ್ರಿಯ ಸಮೂಹಕ್ಕೆ ಶಸ್ತ್ರಕರ್ಮಮುಮಂ, ವಣಿಗ್ವಂಶಕ್ಕೆ ಪಾಶುಪಾಲ್ಯ– ಕೃಷಿ–ಪಣ್ಯ ಕರ್ಮಂಗಳುಮಂ, ಸ್ಪೃಶ್ಯಾಸ್ಪೃಶ್ಯರುಗಳುಮೆಂದಿರ್ತೆರದ ಶೂದ್ರ ಸಂತತಿಗೆ ಶುಶ್ರೂಷಾ ನಿಯೋಗಂಗಳುಮಂ ಯಥಾಯೋಗ್ಯ ಉಪದೇಶಂಗೆಯ್ದು, ವರ್ಣಸಂಕರಮಾಗಲೀಯದೆ ತಮ್ಮ ತಮ್ಮ ಜಾತಿಗೊಳ್ ನಣ್ಪುಮಂ ಕೊಳ್–ಕೊಡೆಯುಮಂ ನಿಯೋಜಿಸಿ..''

ಅಂದರೆ, ವರ್ಣಗಳನ್ನು ವಿಭಾಗಿಸಿದ್ದು ಮಾತ್ರವಲ್ಲ, ಶೂದ್ರ ವರ್ಣದಲ್ಲಿ ಸ್ಪೃಶ್ಯ ಮತ್ತು ಅಸ್ಪೃಶ್ಯರೆಂಬ ಎರಡು ವಿಭಾಗಗಳನ್ನೂ ಮಾಡಲಾಯಿತು. ಅಲ್ಲದೆ, ಯಾವ ಬಗೆಯಲ್ಲೂ ವರ್ಣಸಂಕರವಾಗದಂತೆ, ಎಲ್ಲ ವರ್ಣದವರೂ ತಮ್ಮ ತಮ್ಮ ವರ್ಣ/ಜಾತಿಗಳ ಒಳಗೆಯೇ ವಿವಾಹವಾಗತಕ್ಕದ್ದು ಎಂಬ ನಿಯಮ ಮಾಡಲಾಯಿತು. ಅಷ್ಟೇ ಅಲ್ಲ, ಮುಂದೆ ಅದೇ ಆಶ್ವಾಸದಲ್ಲಿ, ವೃಷಭದೇವನು ವರ್ಣಗಳನ್ನು ಮತ್ತಷ್ಟು ವ್ಯವಸ್ಥೆಗೊಳಿಸಿದ ಬಗ್ಗೆ ಪಂಪ ಹೇಳುತ್ತಾನೆ. ದ್ವಿಜ ವರ್ಣಕ್ಕೆ ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹ, ಯಜನ, ಯಾಜನ ಎಂಬ ವೃತ್ತಿಗಳನ್ನು ಹಾಗೂ ಕ್ಷತ್ರಿಯರಿಗೆ ಸತ್ಯ, ತ್ಯಾಗ, ಪ್ರಜಾಪಾಲನ, ಶರಣಾಗತರಕ್ಷಣ, ಪ್ರಹರಣಕ್ಷಮ ಇತ್ಯಾದಿ ಗುಣಾಚರಣೆಗಳನ್ನು ನಿಯಮಿಸಲಾಯಿತು. ವೈಶ್ಯ ಅಥವಾ ವಣಿಗ್ ವಂಶಕ್ಕೆ ವರ್ತನೆ–ವ್ಯಾಪಾರ ಹಾಗೂ ಶೂದ್ರರಿಗೆ ಇತರ ವರ್ಣಗಳ ಶುಶ್ರೂಷೆಯ ಕಾರ್ಯ ನಿಗದಿಪಡಿಸಿದ ಬಗ್ಗೆ ಪಂಪ ಹೇಳುತ್ತಾನೆ.

ಇನ್ನು ಹೀಗೆ ರೂಪಿಸಲಾದ ನಿಯಮಗಳನ್ನು ಮೀರಿದವರಿಗೆ 'ಧಿಕ್ಕಾರ' ಹಾಕಬೇಕು ಮತ್ತು ಅಂಥವರನ್ನು ದಂಡದಿಂದ ದಂಡಿಸುವುದೆಂದೂ ವೃಷಭದೇವ ಪ್ರಕಟಿಸಿದ. ದಂಡಿಸುವ ದಂಡಧರರು ಇಲ್ಲದಿದ್ದರೆ ಜನರು ತಮ್ಮ ವೃತ್ತಿಗಳನ್ನು ಅತಿಕ್ರಮಿಸಬಹುದು; ಮತ್ಸ್ಯನ್ಯಾಯವಾದೀತು ಎಂಬ ಕಾರಣದಿಂದ ದಂಡಧರರನ್ನು ಕೂಡ ವೃಷಭದೇವ ನೇಮಿಸಿದ ಬಗ್ಗೆ ಉಲ್ಲೇಖ ಬರುತ್ತದೆ. ಅಂದರೆ ವರ್ಣಸಂಕರ ಆಗದಂತೆ ನೋಡಿಕೊಳ್ಳುವುದು ಕೂಡ ದಂಡಧರರ ಕೆಲಸವಾಗುತ್ತದೆ. ಒಟ್ಟಿನಲ್ಲಿ ಪಂಪ ಹೇಳುವಂತೆ, ಆಯಾ ವರ್ಣದವರು ತಮಗೆ ನಿಯಮಿಸಿದ ವೃತ್ತಿಗಳನ್ನು ಮಾತ್ರ ಮಾಡತಕ್ಕದ್ದು ಮತ್ತು ಯಾವುದೇ ಕಾರಣಕ್ಕೂ ಪ್ರತ್ಯೇಕ ವರ್ಣಗಳ ನಡುವೆ ವಿವಾಹ ಸಂಬಂಧವಾಗಬಾರದು, ವರ್ಣಸಂಕರವಾಗಬಾರದು ಎನ್ನುವ ನಿಯಮವನ್ನು ಮಾಡಲಾಯಿತು.

★★★

ಇದೀಗ ನಮ್ಮೆದುರು ಬರುವ ಅತಿಮುಖ್ಯ ಪ್ರಶ್ನೆಯನ್ನು ಎತ್ತಿಕೊಳ್ಳುವ: ಪಂಪ ನಿಷ್ಠಾವಂತ ಜೈನನಾಗಿದ್ದನೆ?

ಕನ್ನಡದ ಅನೇಕ ವಿದ್ವಾಂಸರು ಪಂಪನು ಜೈನ ತತ್ತ್ವಗಳನ್ನು ನಂಬಿದ್ದ ಬಗ್ಗೆ ಮಾತ್ರವಲ್ಲ, ಆತ ವೈದಿಕರಿಗೆ ವಿರುದ್ಧವಾಗಿದ್ದ ಎಂಬ ಅಭಿಪ್ರಾಯವನ್ನೂ ನೀಡಿದ್ದಾರೆ. ವೈದಿಕರು ಪ್ರತಿಪಾದಿಸುತ್ತಿದ್ದ 'ಅಸಮಾನತೆ'ಗೆ ವಿರುದ್ಧವಾಗಿ ಪಂಪನ ''ಮನುಷ್ಯಜಾತಿ ಒಂದೇ'' ಎನ್ನುವ ಸಾಲು ಹಾಗೂ ಪಂಪಭಾರತದಲ್ಲಿ ಬರುವ ಕುಲದ ಕುರಿತಾದ ಸಾಲುಗಳು ಬಂದಿವೆ ಎಂಬುದಾಗಿ ವ್ಯಾಖ್ಯಾನಿಸಿ ಅಂಥ ಸಾಲುಗಳನ್ನು ಪದೇಪದೆ ಉಲ್ಲೇಖಿಸುತ್ತಾರೆ. ಅಲ್ಲದೆ ತನ್ನ ಹಿರಿಯರ ಹೋಮಧೂಮದ ಬಗ್ಗೆ ಪಂಪ ಹೇಳಿದ ಸಾಲುಗಳನ್ನು ನಮ್ಮ ವಿದ್ವಾಂಸರು ಅಪವ್ಯಾಖ್ಯಾನ ಮಾಡುವ ಮೂಲಕ, ಆತ ಶುದ್ಧ ಜೈನನಾಗಿದ್ದುದರಿಂದ ವೈದಿಕರ ಯಜ್ಞವನ್ನು ವಿರೋಧಿಸಿದ್ದಾನೆಂಬ ಕಥನವನ್ನು ಕೂಡ ಜನಪ್ರಿಯಗೊಳಿಸಿದ್ದಾರೆ. ಪಂಪಭಾರತದಲ್ಲಿ ಕೃಷ್ಣನ ಪಾತ್ರವನ್ನು ಗೌಣಗೊಳಿಸಲು ಕೂಡ ಆತ ಜೈನನಾಗಿದ್ದುದು ಮತ್ತು ವೈದಿಕತೆಯ ಬಗ್ಗೆ ಅವನಿಗೆ ಒಲವು ಇಲ್ಲದೆ ಇದ್ದುದು ಕಾರಣ ಎಂಬ ವ್ಯಾಖ್ಯಾನವಿದೆ.

ಎಂ.ಎಂ. ಕಲ್ಬುರ್ಗಿಯವರ ಸಹಿತ ಕೆಲವು ವಿದ್ವಾಂಸರು ಪಂಪನು ತನ್ನ ಜೈನನಿಷ್ಠೆಯನ್ನು ಎತ್ತಿಹಿಡಿದುದಕ್ಕಾಗಿ ವೈದಿಕರ ಸಿಟ್ಟಿಗೆ ಒಳಗಾಗಿದ್ದ ಎಂದು ಮುಂತಾಗಿ ಊಹೆಗಳನ್ನು ಕೂಡ ಹರಿಬಿಟ್ಟಿದ್ದಾರೆ. ನಲವತ್ತು–ನಲವತ್ತೊಂದರ ಪ್ರಾಯದೊಳಗೆ ಎರಡು ಮಹಾಕಾವ್ಯಗಳನ್ನು ಬರೆದ ಬಳಿಕ ಆತ ಬರೆದುದು ಸಿಗದೆ ಇರಲು ಕೂಡ ಪಂಪ–ವೈದಿಕ ಸಂಘರ್ಷವೇ ಕಾರಣವಿರಬೇಕು ಎಂಬಲ್ಲಿಯವರೆಗೆ ಊಹೆಯನ್ನು ಬೆಳೆಸಿದ್ದಾರೆ.

ಪಂಪನು ಯಜ್ಞವಿರೋಧಿಯಾಗಿದ್ದ ಎಂಬುದು ಚರ್ಚಾರ್ಹ. ಅದು ಪ್ರತ್ಯೇಕ ಸಂಗತಿ. ಆ ವಿಚಾರದ ಚರ್ಚೆ ಸದ್ಯಕ್ಕೆ ಅಗತ್ಯವಿಲ್ಲ. ಈಗ ಕನ್ನಡದ ಹೆಚ್ಚಿನ ಎಲ್ಲಾ ವಿದ್ವಾಂಸರು ಹೇಳುವಂತೆ ''ಪಂಪ ವೇದಪಾರಮ್ಯವನ್ನು ಒಪ್ಪಿರಲಿಲ್ಲ, ಆತ ನಿಷ್ಠಾವಂತ ಜೈನನಾಗಿದ್ದ'' ಎಂಬುದನ್ನು ನಾವು ಒಪ್ಪಿಕೊಳ್ಳಬೇಕು. ಹೀಗೆ, ಒಂದು ವೇಳೆ ಆತ ನಿಷ್ಠಾವಂತ ಜೈನನಾಗಿದ್ದರೆ, ಜೈನ ಪುರಾಣಗಳಲ್ಲಿ ವೃಷಭದೇವನು ವರ್ಣಗಳನ್ನು ಸೃಷ್ಟಿಸಿದ್ದನ್ನು, ಶೂದ್ರರೊಳಗೆ ಸ್ಪೃಶ್ಯ, ಅಸ್ಪೃಶ್ಯರೆಂಬ ವಿಭಾಗಗಳನ್ನು ಮಾಡಿದುದನ್ನು, ವರ್ಣಸಂಕರವಾಗದಂತೆ ನೋಡಿಕೊಳ್ಳುವ ನಿಯಮವನ್ನು, ಅತಿಕ್ರಮಿಸಿದವರನ್ನು ದಂಡಧರರು ಶಿಕ್ಷಿಸಬೇಕೆಂಬುದನ್ನು– ಹೀಗೆ ವೃಷಭದೇವನ ಎಲ್ಲ ನಿಯಮಗಳನ್ನೂ ಒಪ್ಪಿದ್ದಾನೆಂದಾಗುತ್ತದೆ.

ಅಂದರೆ, 'ಹುಟ್ಟಿನಿಂದ ಬರುವ' ವರ್ಣವನ್ನೇ, 'ಸ್ಪೃಶ್ಯಾಸ್ಪೃಶ್ಯತೆ'ಯನ್ನೇ ಪಂಪನೂ ಎತ್ತಿಹಿಡಿದಂತಾಯಿತು. ಹಾಗಿದ್ದರೆ ಪಂಪ ಯಾವ ಮನುಷ್ಯಜಾತಿಯನ್ನು 'ತಾನೊಂದೆವಲಂ' ಎಂದು ಹೇಳಿದುದು?! ಹಾಗೆ ನೋಡಿದರೆ ಹೀಗೆ ವರ್ಣವಿಭಾಗ ಮತ್ತು ಅಸ್ಪೃಶ್ಯತೆಯ ಕುರಿತಾದ ಮಾತುಗಳು ಕಾವ್ಯದೊಳಗಿನ ಪಾತ್ರಗಳ ಬಾಯಲ್ಲಿ ಬರುವ ಮಾತುಗಳೂ ಅಲ್ಲ! ಕಾವ್ಯವನ್ನು ನಿರೂಪಿಸುವ ಪಂಪನ ಬಾಯಲ್ಲೇ ಬಂದ ಮಾತುಗಳು. ''ಇಲ್ಲ, ಪಂಪ ಪೂರ್ತಿ ಜೈನನಾಗಿರಲಿಲ್ಲ, ವೈದಿಕತೆ ಅವನಲ್ಲಿ ಉಳಿದಿತ್ತು; ಆದ್ದರಿಂದ ವರ್ಣಗಳು ಮತ್ತು ಸ್ಪೃಶ್ಯ–ಅಸ್ಪೃಶ್ಯ ಎಂಬ ವಿಭಾಗಗಳ ಬಗ್ಗೆ ಹೇಳುತ್ತಾನೆ'' ಎಂದು ವಾದಿಸಲು ಅವಕಾಶವಿಲ್ಲ. ಯಾಕೆಂದರೆ, ಇಲ್ಲಿ ಪಂಪ ಹೇಳುವುದು 'ವೈದಿಕ' ತಾತ್ತ್ವಿಕತೆಯನ್ನಲ್ಲ. ಅವನಿಗಿಂತ ಪೂರ್ವದಲ್ಲಿ ಜಿನಸೇನರೂ ಹೇಳಿದ್ದ ಜೈನ ತಾತ್ತ್ವಿಕತೆಯನ್ನು.

ವರ್ಣ ಮತ್ತು ಅಸ್ಪೃಶ್ಯತೆ ಬಗ್ಗೆ ಆದಿಪುರಾಣದಲ್ಲಿ ಹೇಳಲಾದ ಮಾತುಗಳು ಪೂರ್ವಪುರಾಣದಲ್ಲಿ ಜಿನಸೇನರು ಹೇಳಿದ್ದೇ ಹೌದು. ಆದರೆ, ಅದೇರೀತಿ ''ಮನುಷ್ಯಜಾತಿ ತಾನೊಂದೆವಲಂ'' ಎಂಬುದು ಕೂಡ ಜಿನಸೇನರ ಸಾಲಿನ ಅನುವಾದವೇ ಆಗಿದೆಯಲ್ಲ? ಅದು ಒಂದುವೇಳೆ ಕನ್ನಡ ವಿದ್ವಾಂಸರು ಭಾವಿಸುವಂತೆ ಸಮಾನತೆಯ ತತ್ತ್ವವೇ ಆಗಿದ್ದರೆ, ಅದರ ಕೀರ್ತಿ ಕೂಡ ಜಿನಸೇನರಿಗೇ ಹೋಗಬೇಕಲ್ಲ?! ಅಲ್ಲಿ ಆ ಕೀರ್ತಿಯನ್ನು ನಮ್ಮ ಪ್ರಗತಿಪರರು ಪಂಪನಿಗೇ ಕೊಟ್ಟಿದ್ದಾರೆ, ಜಿನಸೇನರಿಗಲ್ಲ!

ಪಂಪನು ಸಮಾನತೆಯ ಹರಿಕಾರ ಎಂಬ, ಕನ್ನಡ ವಿದ್ವಾಂಸರ ತರ್ಕವನ್ನು ಸಂಪೂರ್ಣವಾಗಿ ಹೊಡೆದುಹಾಕುವ ಬಹುಮುಖ್ಯವಾದ ಅಂಶವನ್ನು ಇದೀಗ ನೋಡಿ. ವೃಷಭದೇವನು ವರ್ಣವ್ಯವಸ್ಥೆ ಮಾಡಿದ ಬಗ್ಗೆ ಹೇಳುವ ಸಂದರ್ಭದ ಒಂದು ಪದ್ಯದಲ್ಲಿ ಪಂಪನು ''ವರ್ಣಗಳು ಮುಖ, ತೋಳು, ತೊಡೆ ಮತ್ತು ಪಾದದಲ್ಲಿ ಹುಟ್ಟಿದವು'' ಎನ್ನುವ ವೈದಿಕ ಮಂತ್ರವನ್ನು ಲೇವಡಿ ಮಾಡುತ್ತಾನೆ. ಇಂಥ ಹುಸಿಯನ್ನು ಹೇಳುವವರು ಅಥವಾ ನಂಬುವವರು ಕುಮತಿಗಳು ಎನ್ನುತ್ತಾನೆ. ಅಂದರೆ, ವರ್ಣಗಳು ಹೇಗೆ ಹುಟ್ಟಿದವು ಎನ್ನುವ ಬಗ್ಗೆ ವೈದಿಕರು ಹೇಳುವುದನ್ನು ಲೇವಡಿ ಮಾಡುತ್ತಾನೆ. ಈ ಬಗ್ಗೆ ಆದಿಪುರಾಣವನ್ನು ಸಂಪಾದಿಸಿದ ಎಲ್. ಬಸವರಾಜು ಅವರ ಟಿಪ್ಪಣಿ ಗಮನಾರ್ಹವಾಗಿದೆ. ಈ ಪದ್ಯ ''ಧೋರಣೆಯಿಂದ ಪಂಪನದೇ ಆಗಿದೆ'' ಎಂದು ಅವರು ಹೇಳುತ್ತಾರೆ. ''ಅಲ್ಲಿ ವೈದಿಕರನ್ನು ಅವನು 'ಕುಮತಿಗಳ್' ಎಂದೇ ಜರಿಯುತ್ತಿರುವನು. (ಜಿನಸೇನರ) ಪೂರ್ವಪುರಾಣದಲ್ಲಿ ಈ ಮಾತುಗಳಿಲ್ಲ...''. ಇದನ್ನು ಗಮನಿಸಿದ ನಂತರ ನೀವು ವರ್ಣವ್ಯವಸ್ಥೆ ಮತ್ತು ಅಸ್ಪೃಶ್ಯತೆಯ ಹೊಣೆಯನ್ನು ಜಿನಸೇನರ ಮೇಲೆ ಹೊರಿಸಲೂ ಸಾಧ್ಯವಿಲ್ಲ! ಪಂಪನ ಮೇಲೆಯೇ ಹೊರಿಸಬೇಕಾಗುತ್ತದೆ.

ಪಂಪ ಹೀಗೆ ವೈದಿಕರನ್ನು ಲೇವಡಿ ಮಾಡಿದ್ದು ಯಾಕೆ? ಯಾಕೆಂದರೆ, ವೈದಿಕರು ಹೇಳಿದ ರೀತಿಯಲ್ಲಿ ವರ್ಣಗಳು ನಿರ್ಮಾಣವಾದುದಲ್ಲ; ಬದಲಾಗಿ ವರ್ಣಗಳು ವೃಷಭದೇವನಿಂದ ನಿರ್ಮಾಣವಾದುದು ಎಂಬುದನ್ನು ಮತ್ತಷ್ಟು ದೃಢಪಡಿಸಲು ವೈದಿಕರನ್ನು ಲೇವಡಿ ಮಾಡುತ್ತಿದ್ದಾನೆ. ಅಂದರೆ, ವರ್ಣಗಳನ್ನು ವ್ಯವಸ್ಥೆಗೊಳಿಸಿದ ಜೈನ ತಾತ್ತ್ವಿಕತೆಯನ್ನು ಅವನು ದೃಢವಾಗಿ ಸಮರ್ಥಿಸುತ್ತಿದ್ದಾನೆ. ಹೀಗಾಗಿ, ಜೈನತತ್ತ್ವವಾಗಿ ವರ್ಣಗಳ ವಿಭಾಗ, ಶೂದ್ರರಲ್ಲಿ ಸ್ಪೃಶ್ಯ–ಅಸ್ಪೃಶ್ಯವೆಂಬ ಒಳವಿಭಾಗ ಹಾಗೂ ವರ್ಣಸಂಕರವಾಗಬಾರದು ಎಂಬ ನಿಯಮ ಇವೆಲ್ಲವನ್ನೂ ಪಂಪನು ಸಂಪೂರ್ಣವಾಗಿ ಒಪ್ಪಿದ್ದಾನೆಂದಾಯಿತು.

ಈ ಲೇಖನದಲ್ಲಿ ಈವರೆಗೆ ಹೇಳಿದುದನ್ನು ಹೀಗೆ ಸಂಗ್ರಹಿಸಬಹುದು: ಮೊದಲನೆಯದಾಗಿ, ''ಮನುಷ್ಯಜಾತಿ ತಾನೊಂದೆವಲಂ'' ಎಂಬ ಸಾಲು ಮನುಷ್ಯರ ಸಮಾನತೆಯ ಬಗ್ಗೆ ಹೇಳುವ ಸಾಲು ಅಲ್ಲ. ಎರಡನೆಯದಾಗಿ, ಪಂಪಭಾರತದಲ್ಲಿ ಕರ್ಣನ ಪಾತ್ರವನ್ನು ಎತ್ತಿಹಿಡಿದಿದ್ದಾನಾದರೂ, ''ಕುಲದ ಮಾತನ್ನು ಯಾಕೆ ಉಗ್ಗಡಿಸುತ್ತೀರಿ? ಛಲವೇ ಕುಲ, ಅಭಿಮಾನವೇ ಕುಲ'' ಎಂದು ಮುಂತಾಗಿ ಬರುವ ಮಾತುಗಳು ಪಂಪನು ಪಾತ್ರಗಳ ಬಾಯಲ್ಲಿ ಹೇಳಿಸುವ ಮಾತುಗಳೇ ಹೊರತು ಅವು ನೇರವಾಗಿ ಕವಿ ಹೇಳುವ ಮಾತುಗಳಲ್ಲ. ಅಲ್ಲಿ ಕರ್ಣನ ಮಾತಿಗೆ ವಿರುದ್ಧವಾದ ರೀತಿಯ ಮಾತುಗಳನ್ನು ದ್ರೋಣ, ಅಶ್ವತ್ಥಾಮ ಮುಂತಾದ ಪಾತ್ರಗಳು ಹೇಳುತ್ತವೆ ಎನ್ನುವುದನ್ನೂ ಗಮನಿಸಬೇಕು. ಮೂರನೆಯದಾಗಿ, ಪಂಪನು ನಿಷ್ಠಾವಂತ ಜೈನನಾಗಿದ್ದ ಎಂಬುದನ್ನು ಪರಿಗಣಿಸಿದರೆ ಜೈನಪುರಾಣ ಹೇಳುವ ವರ್ಣವ್ಯವಸ್ಥೆಯನ್ನು ಒಪ್ಪಿದ್ದ ಎನ್ನಬೇಕಾಗುತ್ತದೆ. ನಾಲ್ಕನೆಯದಾಗಿ, ಪಂಪನು ತನ್ನ ಪಾತ್ರಗಳ ಮೂಲಕ ಅಲ್ಲ, ಜಿನಸೇನರ ಮಾತುಗಳ ಅನುವಾದದ ಮೂಲಕ ಅಲ್ಲ, ಬದಲಾಗಿ ತಾನು ಹೊಸದಾಗಿ ಸೇರಿಸಿದ ತನ್ನ ಮಾತುಗಳಲ್ಲೇ, 'ವೈದಿಕರು ಮಾಡಿದ ವರ್ಣವ್ಯವಸ್ಥೆ'ಯನ್ನು ಲೇವಡಿ ಮಾಡುವ ಮೂಲಕ, ವೃಷಭದೇವನು ಮಾಡಿದ ವರ್ಣವ್ಯವಸ್ಥೆಯನ್ನು ಮತ್ತಷ್ಟು ಸ್ಪಷ್ಟವಾಗಿ ಸಮರ್ಥಿಸಿದ್ದಾನೆ. ವೃಷಭದೇವನ ವರ್ಣವ್ಯವಸ್ಥೆಯನ್ನು ಸಮರ್ಥಿಸಿದ್ದಾನೆ ಎಂದರೆ ಅದಕ್ಕೆ ಸಂಬಂಧಿಸಿದ ನಿಯಮಗಳನ್ನು, ಸ್ಪೃಶ್ಯ–ಅಸ್ಪೃಶ್ಯ ಎಂಬ ವಿಭಾಗವನ್ನು ಹಾಗೂ ವರ್ಣಸಂಕರವಾಗದಂತೆ ನೋಡಿಕೊಳ್ಳಬೇಕು ಎನ್ನುವುದನ್ನು ಸಮರ್ಥಿಸಿದ್ದಾನೆ ಎಂದು ಸ್ಪಷ್ಟವಾಗುತ್ತದೆ. ಹೀಗಿರುವಾಗ ''ಪಂಪನು ಮನುಷ್ಯಸಮಾನತೆಯನ್ನು ಸಾರಿದವನು'' ಎಂದು ಹೇಳಲು ಹೇಗೆ ಸಾಧ್ಯ?

ಈ ಮೇಲೆ ವಿವರಿಸಲಾದ ವಾಸ್ತವ ಸಂಗತಿಗಳನ್ನು ಈಚಿನ ಸುಮಾರು ಎಂಬತ್ತು ತೊಂಬತ್ತು ವರ್ಷಗಳ ಅವಧಿಯ 'ಪಂಪವಿದ್ವಾಂಸರು' ಕಡೆಗಣಿಸಿದ್ದಾರೆ ಅಥವಾ ಮರೆಮಾಚಿದ್ದಾರೆ. ಹಾಗೆ ಮರೆಮಾಚಿ, ಪಂಪನು ಹುಟ್ಟನ್ನು ಆಧರಿಸಿದ ಕುಲವನ್ನು ಧಿಕ್ಕರಿಸಿದ್ದಾನೆ ಎಂದು ಹೇಳುತ್ತ ಬಂದಿದ್ದಾರೆ. ಯಾಕೆಂದರೆ, ''ತನ್ನ ಪೂರ್ವಜರಂತೆಯೇ ಪಂಪನೂ ಬ್ರಾಹ್ಮಣ ಜಾತಿಯನ್ನು ತ್ಯಜಿಸಿ 'ಪ್ರಗತಿಪರ'ನಾಗಿದ್ದನು'' ಎಂದು ಈ ವಿದ್ವಾಂಸರು ನಿರಂತರವಾಗಿ ಮಂಡಿಸುತ್ತಿರುವ ಪ್ರಗತಿಪರ ಕಥನಕ್ಕೆ ಈ ವಾಸ್ತವ ಸಂಗತಿಗಳು ಹೊಂದುವುದಿಲ್ಲ.

(ಲೇಖಕರು ಹಿರಿಯ ಸಾಹಿತಿ)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:144

ಸಮಾಚಾರ ಸಣ್ಣದಲ್ಲ

ಮ.ಪ್ರ: ವೈದ್ಯಕೀಯ ವಿದ್ಯಾರ್ಥಿ ಆತ್ಮಹತ್ಯೆ

ಭೋಪಾಲ್: ಮಧ್ಯಪ್ರದೇಶ ರಾಜ್ಯದ ಜಬಲ್‌ಪುರ ಜಿಲ್ಲೆಯಲ್ಲಿನ ನೇತಾಜಿ ಸುಭಾಷ್ ಚಂದ್ರ ಬೋಸ್ ಸರಕಾರಿ ವೈದ್ಯಕೀಯ ಕಾಲೇಜಿನ ಪ್ರಥಮ ವರ್ಷದ ವಿದ್ಯಾರ್ಥಿ ಶಿವಾಂಶ್ ಗುಪ್ತಾ ಗುರುವಾರ ಮಧ್ಯಾಹ್ನ 12.30ರಲ್ಲಿ ಹಾಸ್ಟೆಲ್ ಕಟ್ಟಡದ 4ನೇ ಮಹಡಿಯಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಶಿವಾಂಶ್ ಮಧ್ಯಪ್ರದೇಶದ ರೇವಾ ಜಿಲ್ಲೆಯವನು. ತಂದೆ ಗುರುಗ್ರಾಮ್‌ನಲ್ಲಿ ಉದ್ಯೋಗಿ. ಶಿವಾಂಶ್ ಆತ್ಮಹತ್ಯೆಗೂ ಮುನ್ನ ಸ್ನೇಹಿತರಿಗೆ ಸಂದೇಶ ಕಳುಹಿಸಿದ್ದು, ಪೊಲೀಸರು ವಿಶ್ಲೇಷಣೆ ನಡೆಸಿದ್ದಾರೆ. ಶಿವಾಂಶ್ 15 ದಿನಗಳಿಂದ ತೀವ್ರ ಖಿನ್ನತೆಗೆ ಒಳಗಾಗಿದ್ದ. ಯಾರೊಂದಿಗೂ ಸಮಸ್ಯೆ ಹಂಚಿಕೊಂಡಿರಲಿಲ್ಲ ಎಂದು ಸಹಪಾಠಿಗಳು ಪೊಲೀಸರಿಗೆ ತಿಳಿಸಿದ್ದಾರೆ. ಜಬಲ್‌ಪುರ ಪೊಲೀಸರು ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ವಿಜಯ್ ವರ್ಗೀಯ ತುಂಡುಡುಗೆ ವಿವಾದ

ಭೋಪಾಲ್: ಸಣ್ಣ ಭಾಷಣಗಳು ಮತ್ತು ಸಣ್ಣ ಉಡುಪುಗಳ ನಡುವೆ ಹೋಲಿಕೆ ಮಾಡಿದ ರಾಜ್ಯದ ನಗರಾಭಿವೃದ್ಧಿ ಮತ್ತು ವಸತಿ ಸಚಿವರು, ಆದರೆ, ಪಾಶ್ಚಿಮಾತ್ಯ ದೇಶಗಳಲ್ಲಿ ತುಂಡು ಉಡುಗೆ ಬಟ್ಟೆ ಧರಿಸುವ ಮಹಿಳೆಯರನ್ನೇ ಸುಂದರಿ ಎನ್ನುತ್ತಾರೆ. ಆದರೆ, ತುಂಡು ಉಡುಗೆ ಧರಿಸುವ ಮಹಿಳೆಯರು ನನಗೆ ಇಷ್ಟವಾಗುವುದಿಲ್ಲ ಎಂದು ಮಧ್ಯಪ್ರದೇಶದ ಸಚಿವ ಕೈಲಾಶ್ ವಿಜಯವರ್ಗೀಯ ಹೇಳಿರುವುದನ್ನು ಜಾಲತಾಣದಲ್ಲಿ ನಕಾರಾತ್ಮಕವಾಗಿ ಬಿಂಬಿಸಿ ಟ್ರೋಲ್ ಮಾಡಲಾಗುತ್ತಿದೆ. ಇಂದೋರ್‌ನಲ್ಲಿನ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಬಿಜೆಪಿ ನಾಯಕ ವಿಜಯವರ್ಗೀಯ, ಇದೇ ಬಗೆಯಲ್ಲಿ ಕಡಿಮೆ ಮಾತನಾಡುವ ನಾಯಕರನ್ನೂ ಒಳ್ಳೆಯ ನಾಯಕ ಎನ್ನಲಾಗುತ್ತದೆ. ಆದರೆ, ನಾನು ಅದನ್ನು ನಂಬುವುದಿಲ್ಲ ಎಂದು ವಿಶ್ಲೇಷಿಸಿದರು.

ಅಕ್ರಮ ವಲಸೆ: 71 ಮಂದಿ ಗಡಿಪಾರು

ದೆಹಲಿ: ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿ ನಕಲಿ ದಾಖಲೆಗಳೊಂದಿಗೆ ನೆಲೆಸಿದ್ದ ಬಾಂಗ್ಲಾದೇಶದ ಪ್ರಜೆಗಳು, ಮ್ಯಾನ್ಮಾರ್ ಮೂಲದ ರೊಹಿಂಗ್ಯಾಗಳು, ನೈಜೀರಿಯ ದೇಶದ ಪ್ರಜೆಗಳನ್ನು ದೆಹಲಿ ಪೊಲೀಸರು ಗಡಿಪಾರು ಮಾಡಿ ಅವರವರ ದೇಶಗಳಿಗೆ ಕಳುಹಿಸಿಕೊಟ್ಟಿದ್ದಾರೆ. ದ್ವಾರಕಾ ಪ್ರದೇಶದ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿದ್ದ 47 ಮಂದಿ ಬಾಂಗ್ಲಾದೇಶಿಯರು, 17 ರೊಹಿಂಗ್ಯಾಗಳು, ನೈಜೀರಿಯದ 7 ಜನರನ್ನು ಬಂಧಿಸಿ ಪ್ರಾದೇಶಿಕ ನೋಂದಣಿ ಕಚೇರಿಗೆ ಹಾಜರುಪಡಿಸಿ ಗಡಿಪಾರು ಕ್ರಮ ಕೈಗೊಳ್ಳಲಾಗಿದೆ.

ಟೆಸ್ಲಾ ಷೇರು ಮೌಲ್ಯ ಶೇ.14ರಷ್ಟು ಕುಸಿತ

ವಾಷಿಂಗ್ಟನ್: ವಿಶ್ವದ ಶ್ರೀಮಂತ ಉದ್ಯಮಿ ಎಲಾನ್ ಮಸ್ಕ್ ಒಡೆತನದ ಜನಪ್ರಿಯ ಕಾರು ಕಂಪನಿ 'ಟೆಸ್ಲಾ'ದ ಷೇರುಗಳ ಮೌಲ್ಯ ಅಮೆರಿಕ ಷೇರುಪೇಟೆಯಲ್ಲಿ ದಿಢೀರ್ ಕುಸಿತ ಕಂಡಿದ್ದು, ಹೂಡಿಕೆದಾರರು ಕಂಗಾಲಾಗುವಂತೆ ಮಾಡಿದೆ. ಟೆಸ್ಲಾ ಕಂಪನಿ ಷೇರು ಬೆಲೆ ವಾಲ್‌ಸ್ಟ್ರೀಟ್ ಷೇರು ಮಾರುಕಟ್ಟೆಯಲ್ಲಿ ಶುಕ್ರವಾರ ಶೇ.14ರಷ್ಟು ಕುಸಿತ ಕಂಡಿದೆ. ಪರಿಣಾಮ ಟೆಸ್ಲಾ ಕಂಪನಿಯ ಷೇರುಗಳ ಮಾರುಕಟ್ಟೆ ಬಂಡವಾಳದಲ್ಲಿ 15300 ಕೋಟಿ ಡಾಲರ್‌ಗಳಷ್ಟು(ಭಾರತದ ಕರೆನ್ಸಿ ಲೆಕ್ಕದಲ್ಲಿ 13,12,434 ಕೋಟಿ ರು.ಗಳು) ಷೇರುಮೌಲ್ಯ ನಷ್ಟವಾಗಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಉದ್ಯಮಿ ಎಲಾನ್ ಮಸ್ಕ್ ನಡುವಿನ ಸ್ನೇಹ ಕೊನೆಗೊಂಡು ಇಬ್ಬರೂ ದಿಗ್ಗಜರು ಸಾಮಾಜಿಕ ಜಾಲತಾಣದಲ್ಲಿ ಕಿತ್ತಾಟ ಶುರು ಮಾಡಿರುವುದರ ಪರಿಣಾಮವೇ ಟೆಸ್ಲಾ ವಿದ್ಯುತ್ ಚಾಲಿತ ಕಾರು ಕಂಪನಿಯ ಷೇರುಗಳ ಮೌಲ್ಯ ಕುಸಿತಕ್ಕೆ ಕಾರಣ ಎಂದು ವಿಶ್ಲೇಷಿಸಲಾಗಿದೆ.

ಕಾಶ್ಮೀರ: ಎನ್‌ಐಎ 32 ಕಡೆ ದಾಳಿ, ಶಸ್ತ್ರಾಸ್ತ್ರ ವಶ

ಶ್ರೀನಗರ: ಪಾಕಿಸ್ತಾನ ಮೂಲದ ಉಗ್ರ ಸಂಘಟನೆಗಳಿಂದ ಜಮ್ಮು-ಕಾಶ್ಮೀರದಲ್ಲಿ ಭಯೋತ್ಪಾದಕ ಚಟುವಟಿಕೆಗಳನ್ನು ನಡೆಸುವುದಕ್ಕೆ ಪಿತೂರಿ ನಡೆಯುತ್ತಿರುವುದು ಮತ್ತು ಅದಕ್ಕೆ ಸ್ಥಳೀಯರ ಸಹಕಾರ ಸಿಗುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ಕೇಂದ್ರ ಸರಕಾರದ ತನಿಖಾ ಸಂಸ್ಥೆಗಳು, ಕಾಶ್ಮೀರದ ವಿವಿಧೆಡೆ ಸರಣಿಯೋಪಾದಿ ಶೋಧ ಕಾರ್ಯಾಚರಣೆ ನಡೆಸುತ್ತಿವೆ. ಇದರ ಭಾಗವಾಗಿ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಕಾಶ್ಮೀರದ 32 ಸ್ಥಳಗಳಲ್ಲಿ ಗುರುವಾರ ಶೋಧ ನಡೆಸಿ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡು, ಸ್ಫೋಟಕಗಳನ್ನು ವಶಪಡಿಸಿಕೊಂಡಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಕಾಶ್ಮೀರದ ಕತ್ರಾ ರೈಲು ನಿಲ್ದಾಣಕ್ಕೆ ಭೇಟಿ ನೀಡಲಿದ್ದ ಹಿನ್ನೆಲೆ ಮುಂಜಾಗ್ರತೆ ಕ್ರಮವಾಗಿಯೂ ಎನ್‌ಐಎ ಶೋಧ ಕಾರ್ಯಾಚರಣೆ ಹಮ್ಮಿಕೊಂಡಿತ್ತು ಎನ್ನಲಾಗಿದೆ.

{ ರಾಹುಲ್ ಗಾಂಧಿ } ಕಾಂಗ್ರೆಸ್ ನಾಯಕ

ಒಂದು ಕಾಲದಲ್ಲಿ ಶಾಂತಿ-ಸುವ್ಯವಸ್ಥೆ ನಾಡಾಗಿದ್ದು, ಜ್ಞಾನದ ಬೀಡಾಗಿದ್ದ ಬಿಹಾರ ರಾಜ್ಯ ಈಗ ಭಾರತದ ಅಪರಾಧಗಳ ರಾಜಧಾನಿಯಾಗಿ ಬದಲಾಗಿದೆ. ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ದುರಾಳಿತದಿಂದಾಗಿ ಬಿಹಾರ ರಾಜ್ಯದಲ್ಲಿ ಕಾನೂನು-ಸುವ್ಯವಸ್ಥೆ ಪೂರ್ಣ ಹದಗೆಟ್ಟಿದೆ. ಎಲ್ಲೆಲ್ಲೂ ಅಪರಾಧ ಸುದ್ದಿಗಳೇ ಕೇಳಿಬರುತ್ತಿವೆ.



ಮಸ್ಕ್ ಕಂಪನಿಗಳ ಆದಾಯಕ್ಕೆ ಕತ್ತರಿ ಹಾಕುವೆ: ಟ್ರಂಪ್ ಕಿಡಿ | ನಾಸಾಗೆ 'ಸ್ಪೇಸ್ ಎಕ್ಸ್' ಗಗನನೌಕೆ ಸೇವೆ ಕೊಡಲ್ಲ: ಮಸ್ಕ್ ಗುದ್ದು

ಮುರಿದು ಬಿದ್ದ ಮಸ್ಕ್-ಟ್ರಂಪ್ ಸ್ನೇಹ: ಜಾಲತಾಣದಲ್ಲಿ ಶರಂಪರ ಕಿತ್ತಾಟ

ವಾಷಿಂಗ್ಟನ್: ಅಧ್ಯಕ್ಷೀಯ ಚುನಾವಣೆ-2025ರ ಸಂದರ್ಭ ಪರಸ್ಪರ ಅಪ್ಪಿಕೊಂಡು ಭಾರೀ ಸ್ನೇಹ-ವಿಶ್ವಾಸ ಪ್ರದರ್ಶಿಸಿದ್ದ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ವಿಶ್ವದ ಸಿರಿವಂತ ಉದ್ಯಮಿ ಎಲಾನ್ ಮಸ್ಕ್ ಸಂಬಂಧ ಈಗ ಪೂರ್ಣ ಹಳಸಿದೆ. ಇಬ್ಬರೂ ಸಾಮಾಜಿಕ ಮಾಧ್ಯಮಗಳಲ್ಲಿ ಪರಸ್ಪರ ಟೀಕೆಗಳು ಸುರಿ ಮಳೆ ನಡೆಸಿದ್ದಾರೆ. ಎದುರಾಳಿಗೆ 'ಸರಿಯಾದ ಪಾಠ ಕಲಿಸುವು ದಾಗಿ' ಹೇಳಿಕೊಳ್ಳುತ್ತಾ ಕದನಕ್ಕಿಳಿದಿದ್ದಾರೆ. ಟ್ರಂಪ್-ಮಸ್ಕ್ ನಡುವಿನ ಜಗಳ ಶುರುವಾಗಿದ್ದ ಶ್ವೇತಭವನದಲ್ಲಿ, ಜರ್ಮನಿ ನಾಯಕನ ಜತೆಗಿನ ಸಭೆಯಲ್ಲಿ, ಟ್ರಂಪ್ ಆಡಳಿತ ವೈಖರಿ ಮತ್ತು ತೆರಿಗೆ ನೀತಿಗಳನ್ನು ಮಸ್ಕ್ ನೇರವಾಗಿ ಟೀಕಿಸಿದಾಗ. ಬಳಿಕ ಇಬ್ಬರ ಸ್ನೇಹ ಮುರಿದುಬಿತ್ತು, ಕಿತ್ತಾಟ ಶುರುವಾಯಿತು.

ಅಲ್ಪಾವಧಿ ಸ್ನೇಹ: ಟ್ರಂಪ್ 2ನೇ ಅವಧಿಗೆ ಅಧ್ಯಕ್ಷ ಪದವಿಗೆ ಸ್ಪರ್ಧೆ ಮಾಡಿದಾಗ ಮಸ್ಕ್ ಪ್ರಚಾರ ನಡೆಸಿದ್ದರು. ಚುನಾವಣಾ ವೆಚ್ಚಕ್ಕೆ ದೊಡ್ಡ ಮೊತ್ತದ ದೇಣಿಗೆಯನ್ನೂ ನೀಡಿದ್ದರು. ಟ್ರಂಪ್ ಜ.20 ರಂದು ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಬಳಿಕ ರಚಿಸಿದ್ದ 'ಡಿಪಾರ್ಟ್‌ಮೆಂಟ್ ಆಫ್ ಗವರ್ನೆನ್ಸ್ ಎಫಿಷಿಯನ್ಸಿ'(ಡಿಒಜಿಇ) ಸಮಿತಿಗೆ ಮಸ್ಕ್ ಅವರನ್ನು ಮುಖ್ಯಸ್ಥರಾಗಿ ನೇಮಿಸಿದ್ದರು. ನಾಲ್ಕೂವರೆ ತಿಂಗಳು ಕಳೆಯುವಷ್ಟರಲ್ಲೇ ಮಸ್ಕ್ 'ಡೋಜ್'ನಿಂದ ನಿರ್ಗಮಿಸಿದರು.

'ಡೋಜ್'ನಿಂದ ಮಸ್ಕ್ ನಿರ್ಗಮನ ಬಳಿಕ ಟ್ರಂಪ್ ಜಗಳಕ್ಕಿಳಿದಿದ್ದಾರೆ. ಮಸ್ಕ್ ಒಡೆತನದ ಇಂಟರ್ನೆಟ್ ಸೇವಾ ಕಂಪನಿ 'ಸ್ಟಾರ್ ಲಿಂಕ್' ಮತ್ತು ಬಾಹ್ಯಾಕಾಶ ಸಂಚಾರ ನಡೆಸುವ ರಾಕೆಟ್ ಕಂಪನಿ 'ಸ್ಪೇಸ್ ಎಕ್ಸ್'ನ ಆದಾಯ ಕಡಿತವಾಗುವಂತೆ ಮಾಡುವುದಾಗಿ, ಅದಕ್ಕಾಗಿ ಸರಕಾರದ ಅಧಿಕಾರ ಬಳಸುವುದಾಗಿ ಟ್ರಂಪ್ ಬೆದರಿಕೆ ಹಾಕಿದ್ದಾರೆ. ನಂತರ ಮಸ್ಕ್ ಕೂಡಾ ಜಾಲತಾಣದಲ್ಲಿ ಟ್ರಂಪ್ ವಿರುದ್ಧ ಟೀಕೆ ಮಾಡಲಾರಂಭಿಸಿದ್ದಾರೆ. ಇಬ್ಬರೂ ದಿಗ್ಗಜರ ನಡುವಿನ ಜಾಲತಾಣ ಕದನ ತಾರಕಕ್ಕೇರಿದೆ.

ಜಟಾಪಟಿ ಶುರು: ಉದ್ಯಮಿ ಮಸ್ಕ್‌ಗೆ ಆರ್ಥಿಕವಾಗಿ ಪೆಟ್ಟು ಕೊಡಲು ಮುಂದಾಗಿರುವ ಮಸ್ಕ್, ಸರಕಾರದ ಜತೆ ಮಸ್ಕ್ ಕಂಪನಿಗಳು ಮಾಡಿಕೊಂಡಿದ್ದ ಒಪ್ಪಂದಗಳನ್ನು ರದ್ದು ಪಡಿಸಲು ಸಿದ್ಧತೆ ನಡೆಸಿದ್ದಾರೆ.

ತಿರುಗೇಟು ನೀಡುವಂತೆ ಮಸ್ಕ್, 'ಜೆಫ್ರಿ ಎಪ್‌ಸ್ಟೀನ್ ದಾಖಲೆಗಳ ಕುರಿತು ಮಾತನಾಡಿದ್ದಾರೆ. ಟ್ರಂಪ್ ಸರಕಾರ ಲೈಂಗಿಕ ಕಾರ್ಯಕರ್ತೆಯರ ಸಾಗಣೆದಾರ ಜೆಫ್ರಿ ಎಪ್‌ಸ್ಟೀನ್‌ಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಬಿಡುಗಡೆ ಮಾಡಿಲ್ಲ ಏಕೆ? ಅವುಗಳಲ್ಲಿ ಟ್ರಂಪ್ ಹೆಸರನ್ನು ಉಲ್ಲೇಖಿಸಲಾಗಿದೆ, ಅದಕ್ಕೆ!' ಎಂದು ಮಸ್ಕ್ ಟೀಕಿಸಿದ್ದಾರೆ. ಮಸ್ಕ್ ನಡೆಯಿಂದ ತುಂಬಾ ನಿರಾಶೆಗೊಂಡಿರುವೆ ಎಂದು ಟ್ರಂಪ್ ಓವಲ್ ಕಚೇರಿಯಲ್ಲಿ ಗುರುವಾರ ವಿಷಾದ ವ್ಯಕ್ತಪಡಿಸುವ ಮೂಲಕ ಮಸ್ಕ್ ಜತೆಗಿನ ಸಂಬಂಧ ಹಳಸಿದ ಬಗ್ಗೆ ಸುಳಿವು ನೀಡಿದರು. ಬಜೆಟ್ ವೆಚ್ಚ ತಗ್ಗಿಸಲು ಸುಲಭದ ಮಾರ್ಗವೆಂದರೆ ಮಸ್ಕ್ ಕಂಪನಿಗಳಿಗೆ ಸರಕಾರದ ಸಬ್ಸಿಡಿಗಳ ಕಡಿತ ಮತ್ತು ಒಪ್ಪಂದಗಳ ರದ್ದು ಎಂದು ಟ್ರಂಪ್ 'ಟ್ರೂಥ್' ಖಾತೆಯಲ್ಲಿ ಬರೆದಿದ್ದಾರೆ. 'ಹಾಗಿದ್ದರೆ ಮುಂದುವರಿಯಿರಿ, ಮೇಕ್ ಮೈ ಡೇ' ಎಂದು ಮಸ್ಕ್ 'ಎಕ್ಸ್' ಸಂದೇಶದಲ್ಲಿ ತಿರುಗೇಟು ನೀಡಿದ್ದಾರೆ.

'ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಗಗನಯಾತ್ರಿಗಳು ಮತ್ತು ಸರಕುಗಳನ್ನು ಸಾಗಿಸಲು ನಾಸಾ ಬಳಸಿಕೊಳ್ಳುತ್ತಿರುವ 'ಸ್ಪೇಸ್‌ಎಕ್ಸ್'ನ ಡ್ರ್ಯಾಗನ್ ಗಗನನೌಕೆಯ ಸೇವೆಯನ್ನು ಸ್ಥಗಿತಗೊಳಿಸಲಾಗುವುದು' ಎಂದು ಮಸ್ಕ್ ಘೋಷಿಸಿದ್ದಾರೆ.

'ದೊಡ್ಡ ಬಾಂಬ್ ಹಾಕಲು ಇದೇ ಸರಿಯಾದ ಸಮಯ: ಡೊನಾಲ್ಡ್ ಟ್ರಂಪ್ ಹೆಸರು ಸೆಕ್ಸ್ ದಂಧೆಕೋರ 'ಎಪ್‌ಸ್ಟೀನ್ ಫೈಲ್ಸ್'ಗಳಲ್ಲಿದೆ. ಹಾಗಾಗಿಯೇ ಆ ಕಡತಗಳನ್ನು ಪೂರ್ಣ ಪ್ರಮಾಣದಲ್ಲಿ ಬಹಿರಂಗ ಪಡಿಸಿಲ್ಲ. ಹ್ಯಾವ್ ಎ ನೈಸ್ ಡೇ ಡೊನಾಲ್ಡ್ ಟ್ರಂಪ್!' ಎಂದು ಮಸ್ಕ್ ಮತ್ತೊಂದು ಸಂದೇಶದಲ್ಲಿ ಬರೆದಿದ್ದಾರೆ.ಟ್ರಂಪ್-ಮಸ್ಕ್ ಕದನಕ್ಕೆ ಪೆಟ್ರೋಲ್ ಸುರಿಯುವ ಕೆಲಸವೂ ಜಾಲತಾಣದಲ್ಲಿ ನಡೆದಿದೆ. ಇಯಾನ್ ಮೈಲ್ಸ್ ಛಿಯಾಂಬ್ ಎಂಬ 'ಎಕ್ಸ್' ಖಾತೆದಾರ, 'ಅಧ್ಯಕ್ಷ ಟ್ರಂಪ್-ಎಲಾನ್, ಇಬ್ಬರ ಜಗಳದಲ್ಲಿ ಗೆಲುವು ಯಾರಿಗೆ? ನಾನು ಎಲಾನ್ ಮೇಲೆ ಬಾಜಿ ಕಟ್ಟುವೆ' ಎಂದು ಸಂದೇಶ ಬರೆದಿದ್ದಾರೆ.

ನೀಲಿಗಟ್ಟಿದ ಬಲಗಣ್ಣು

ಬೀಳ್ಕೊಡುಗೆ ಸಮಾರಂಭದಲ್ಲಿ ಮಸ್ಕ್ ಬಲಗಣ್ಣಿನ ಬಳಿ ಗುದ್ದಿದ ಗಾಯವಾಗಿ ನೀಲಿಗಟ್ಟಿತ್ತು. ಆಗಲೇ ಅನುಮಾನಗೊಂಡ ಸುದ್ದಿಗಾರರ ಗಾಯ ಹೇಗಾಯಿತು ಎಂದು ಕೇಳಿದ್ದರು. 5 ವರ್ಷದ ಮಗ 'ಎಕ್ಸ್' ಗುದ್ದಿದ ಎಂದು ಮಸ್ಕ್ ಸಮಜಾಯಿಷಿ ನೀಡಿದ್ದರು. ಅದನ್ನು ಮಾಧ್ಯಮ ಪ್ರತಿನಿಧಿಗಳು ನಂಬಿರಲಿಲ್ಲ. ಸಿಟ್ಟಿನ ಮನುಷ್ಯ ಟ್ರಂಪ್ ಅವರೇ ಪೆಟ್ಟುಕೊಟ್ಟಿರಬಹುದೆಂಬ ಊಹಾಪೋಹ ಕೇಳಿಬಂದಿದ್ದವು.



ಜಮ್ಮು-ಕಾಶ್ಮೀರದ ಚೆನಾಬ್, ಅಂಜಿ ರೈಲು ಸೇತುವೆ ಉದ್ಘಾಟಿಸಿದ ಪ್ರಧಾನಿ ಮೋದಿ

ಕಾಶ್ಮೀರದಿಂದ ಕನ್ಯಾಕುಮಾರಿ ವಾಸ್ತವಕ್ಕಿಳಿದ ನುಡಿ: ಮೋದಿ

ಶ್ರೀನಗರ: ಚೆನಾಬ್ ರೈಲ್ವೆ ಸೇತುವೆ ನಿರ್ಮಾಣ ಪೂರ್ಣಗೊಂಡು ಜಮ್ಮು-ಕಾಶ್ಮೀರದ ಲಕ್ಷಾಂತರ ಜನರ ಕನಸು ಕಡೆಗೂ ನನಸಾಗಿದೆ. ಅಲ್ಲದೇ ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಎಂಬ ಕವಿಗಳ ಮಾತು ಈ ರೈಲು ಸಂಪರ್ಕ ಜಾಲದಿಂದ ವಾಸ್ತವಕ್ಕಿಳಿದಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ರಾಜ್ಯದ ಕತ್ರಾ ರೈಲು ನಿಲ್ದಾಣದಲ್ಲಿ ಹೇಳಿದರು.

ಚೆನಾಬ್ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿರುವ ವಿಶ್ವದಲ್ಲೇ ಅತ್ಯಂತ ಎತ್ತರದ ಸ್ಥಳದಲ್ಲಿನ ರೈಲು ಮಾರ್ಗದ ಸೇತುವೆಯನ್ನು ಉದ್ಘಾಟಿಸಿ, ಕತ್ರಾ-ಶ್ರೀನಗರ ನಡುವೆ ವಂದೇಭಾರತ್ ಎಕ್ಸ್‌ಪ್ರೆಸ್ ರೈಲಿಗೆ ಹಸಿರು ನಿಶಾನೆ ತೋರಿದ ಬಳಿಕ ನಡೆದ ಸಾರ್ವಜನಿಕ ಸಮಾರಂಭದಲ್ಲಿ ಮಾತನಾಡಿದ ಪ್ರಧಾನಿ ಮೋದಿ, ದೇಶದ ಪ್ರಗತಿಗೆ ಬೇಕಾದ ಒಳ್ಳೆಯ ಕೆಲಸಗಳನ್ನು ಪೂರ್ಣಗೊಳಿಸುವ ಕಾರ್ಯ ನನ್ನ ಪಾಲಿಗೆ ಬಂದಿರುವುದು ಸುಕೃತ. ನಮ್ಮ ಸರಕಾರದ ಅವಧಿಯಲ್ಲಿ 'ಚೆನಾಬ್ ರೈಲ್ವೆ ಸೇತುವೆ' ಯೋಜನೆ ವೇಗ ಪಡೆದುಕೊಂಡಿದೆ. ನಮ್ಮ ಸರಕಾರವೇ ಅದನ್ನು ಪೂರ್ಣಗೊಳಿಸಿದೆ ಎಂದು ಹೇಳಲು ಹೆಮ್ಮೆ ಎನಿಸುತ್ತದೆ ಎಂದರು.

ಚೆನಾಬ್ ಸೇತುವೆ ಸೇರಿದಂತೆ ಕತ್ರಾ-ಶ್ರೀನಗರ ನಡುವಿನ ರೈಲು ಮಾರ್ಗ ಪೂರ್ಣಗೊಳಿಸುವುದೇ ಸವಾಲಿನ ಕೆಲಸವಾಗಿತ್ತು. ಆದರೆ, ನಮ್ಮ ಎನ್‌ಡಿಎ ಸರಕಾರ ಯಾವಾಗಲೂ ಸವಾಲುಗಳನ್ನು ಸ್ವೀಕರಿಸಿ ಅದನ್ನು ಪರಿಹಾರ ಮಾರ್ಗವಾಗಿ ಬದಲಾಯಿಸಬಲ್ಲದಾಗಿದೆ. ಜಮ್ಮು- ಕಾಶ್ಮೀರದಲ್ಲಿನ ಸರ್ವ ಋತು ಯೋಜನೆಗಳೇ ಇದಕ್ಕೆ ಉದಾಹರಣೆಯಾಗಿವೆ ಎಂದು ಮೋದಿ ಹೇಳಿದರು. ಸೇತುವೆಗಳ ಉದ್ಘಾಟನೆ ನಂತರ ಕತ್ರಾದಲ್ಲಿ ನಡೆದ ಸಾರ್ವಜನಿಕ ಸಮಾರಂಭದಲ್ಲಿ ಪ್ರಧಾನಿ ಮೋದಿ, ರಾಜ್ಯದ ಅಭಿವೃದ್ಧಿಗೆ ಕಾರಣವಾಗುವ ಬೃಹತ್ ಮೂಲಸೌಕರ್ಯ ಯೋಜನೆಗಳಿಗೆ ಚಾಲನೆ ನೀಡಿದರು. ಜಮ್ಮು- ಕಾಶ್ಮೀರದ ಅಭಿವೃದ್ಧಿ ಪ್ರಯಾಣದಲ್ಲಿ ಇದು ಮಹತ್ವದ ತಿರುವು ಎಂದು ಮೋದಿ ಹೇಳಿದರು. ಅತ್ಯಾಧುನಿಕ ಚೆನಾಬ್ ಸೇತುವೆ ಜಮ್ಮು-ಶ್ರೀನಗರ ನಡುವಿನ ಸಂಪರ್ಕವನ್ನು ಸುಧಾರಿಸುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈ ಸಂದರ್ಭ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ಜಮ್ಮು-ಕಾಶ್ಮೀರ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಮತ್ತು ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಉಪಸ್ಥಿತರಿದ್ದರು. ಚೆನಾಬ್ ನದಿಗೆ ಅಡ್ಡಲಾಗಿ ವಿಶ್ವದ ಅತಿ ಎತ್ತರ ಪ್ರದೇಶದ ರೈಲ್ವೆ ಸೇತುವೆಯನ್ನು 1,486 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. 2 ದಶಕಗಳ ಹಿಂದೆ ಆರಂಭಗೊಂಡ ಚೆನಾಬ್ ಸೇತುವೆ ಕಾಮಗಾರಿ ಮಧ್ಯೆ ಕಾಂಗ್ರೆಸ್ ಆಡಳಿತ ಕಾಲದಲ್ಲಿ ಹಲವು ವರ್ಷಗಳ ಕಾಲ ಸ್ಥಗಿತಗೊಂಡಿತು. ಪ್ರಧಾನಿ ಮೋದಿ ಅವರ 11 ವರ್ಷಗಳ ಆಡಳಿತ ಕಾಲದಲ್ಲಿ ಕಾಮಗಾರಿ ಪುನಾರಂಭಗೊಂಡು ವೇಗವಾಗಿ ನಡೆದು ಎಂಟು ವರ್ಷಗಳಲ್ಲಿ ಪೂರ್ಣಗೊಂಡಿತು.

ಪ್ರಧಾನಿ ನರೇಂದ್ರ ಮೋದಿ ಜಮ್ಮು-ಕಾಶ್ಮೀರದಲ್ಲಿ ಚೆನಾಬ್ ಸೇತುವೆ ಉದ್ಘಾಟಿಸಿದ ಬಳಿಕ ಸೇತುವೆ ಮೇಲೆ 'ತ್ರಿವರ್ಣ ಧ್ವಜ' ಹಿಡಿದು ಸಂಚರಿಸಿ ಖುಷಿ ಪಟ್ಟರು.

ತ್ರಿವರ್ಣ ಧ್ವಜ ಬೀಸಿದ ಮೋದಿ!

ಕೇಬಲ್‌ಗಳ ಆಧಾರದಲ್ಲಿ ನಿರ್ಮಿಸಲಾದ ಅಂಜಿ ನದಿ ಮೇಲಿನ ರೈಲು ಸೇತುವೆ ಮತ್ತು ಚೆನಾಬ್ ಸೇತುವೆಯ ಉದ್ಘಾಟನೆ ನಂತರ ಪ್ರಧಾನಿ ಮೋದಿ ತ್ರಿವರ್ಣ ಧ್ವಜವನ್ನು ಹಿಡಿದು ಚೆನಾಬ್ ಸೇತುವೆ ಮೇಲೆ ನಡೆದಾಡಿದರು. ಸೇತುವೆಗಳ ಉದ್ಘಾಟನೆಗೂ ಮುನ್ನ ಮೋದಿ ರೈಲು ಎಂಜಿನ್ ಕೋಚ್‌ನಲ್ಲಿ ರೈಲು ಮಾರ್ಗದಲ್ಲಿ ಪ್ರಯಾಣಿಸಿ ಕಾಮಗಾರಿ ಗುಣಮಟ್ಟ ಪರಿಶೀಲಿಸಿದರು. ಚೆನಾಬ್ ಮತ್ತು ಅಂಜಿ ಸೇತುವೆಗಳು ಜಮ್ಮು-ಕಾಶ್ಮೀರದ ಸಮೃದ್ಧಿಯ ದ್ವಾರಗಳಾಗಿ ಕಾರ್ಯನಿರ್ವಹಿಸುತ್ತವೆ ಎಂದು ಮೋದಿ ಬಣ್ಣಿಸಿದರು. ಉಧಂಪುರ-ಶ್ರೀನಗರ -ಬಾರಾ ಮುಲ್ಲಾ ರೈಲು ಮಾರ್ಗ ಪೂರ್ಣಗೊಂಡಿರುವುದು ಸಬಲ ಜಮ್ಮು-ಕಾಶ್ಮೀರದ ಸಂಕೇತವಾಗಿದೆ. ಭಾರತದ ಬೆಳೆಯುತ್ತಿರುವ ಶಕ್ತಿಯ ಪ್ರತಿಧ್ವನಿಯಾಗಿದೆ ಎಂದರು.

ಚೆನಾಬ್ ರೈಲು ಸೇತುವೆ ಉದ್ಘಾಟನೆ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಜತೆಗೆ ಜಮ್ಮು-ಕಾಶ್ಮೀರ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ.

ಮೋದಿ ರಾಜ್ಯ ಸ್ಥಾನಮಾನ ನೀಡುವರು: ಸಿಎಂ ಒಮರ್

ಕತ್ರಾ: ಕೇಂದ್ರಾಡಳಿತ ಪ್ರದೇಶವಾಗಿರುವ ಜಮ್ಮು-ಕಾಶ್ಮೀರಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಮರಳಿ ರಾಜ್ಯದ ಸ್ಥಾನಮಾನ ನೀಡಲಿದ್ದಾರೆ ಎಂದು ಮುಖ್ಯ ಮಂತ್ರಿ ಒಮರ್ ಅಬ್ದುಲ್ಲಾ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಕತ್ರಾ ರೈಲು ನಿಲ್ದಾಣದಿಂದ ಪ್ರಧಾನಿ ಮೋದಿ ಅವರು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿಗೆ ಹಸಿರು ನಿಶಾನೆ ತೋರಿದ ಬಳಿಕ ನಡೆದ ಸಾರ್ವಜನಿಕ ಕಾರ್ಯಕ್ರಮದಲ್ಲಿ ಮಾತನಾಡಿದ ಸಿಎಂ ಒಮರ್ ಅಬ್ದುಲ್ಲಾ, ರೈಲ್ವೆಯ ದೊಡ್ಡ ಕಾರ್ಯಕ್ರಮಗಳು ಜಮ್ಮು-ಕಾಶ್ಮೀರದಲ್ಲಿ ನಡೆದಾಗಲೆಲ್ಲಾ ನಾನು ಅದರ ಭಾಗವಾಗಿದ್ದೇನೆ. ಅದುವೇ ನನ್ನ ಅದೃಷ್ಟ ಎಂದು ಒಮರ್ ಹೇಳಿದರು. ಮೊದಲ ಬಾರಿ ಅನಂತನಾಗ್ ರೈಲು ನಿಲ್ದಾಣ ಉದ್ಘಾಟಿಸಿದಾಗ, ಬನಿಹಾಲ್ ರೈಲು ಸುರಂಗ ಉದ್ಘಾಟಿಸಿದಾಗ ನಾನು ಹಾಜರಿದ್ದೆ. 2014ರಲ್ಲಿ ನನ್ನ ಮೊದಲ ಅಧಿಕಾರವಧಿಯ ಕೊನೆಯ ಕಾರ್ಯಕ್ರಮ ಇಲ್ಲೇ ನಡೆದಿತ್ತು. ಆಗ ಮೊದಲ ಬಾರಿ ಪ್ರಧಾನಿಯಾಗಿ ಇಲ್ಲಿಗೆ ಆಗಮಿಸಿದ ಮೋದಿ ಅವರು ಕತ್ರಾ ರೈಲು ನಿಲ್ದಾಣ ಉದ್ಘಾಟಿಸಿದ್ದರು. ಈಗ 3ನೇ ಬಾರಿ ಪ್ರಧಾನಿಯಾಗಿ ಬಂದಿದ್ದಾರೆ ಎಂದು ಒಮರ್ ಹೇಳಿದರು. ಆಗ ಹಾಜರಿದ್ದವರಲ್ಲಿ ನಾಲ್ವರು ಈಗಲೂ ಇದ್ದಾರೆ. ಆಗ ರೈಲ್ವೆ ಖಾತೆ ಸಹಾಯಕ ಸಚಿವರಾಗಿದ್ದ ಮನೋಜ್ ಸಿನ್ಹಾ ಈಗ ಜಮ್ಮು-ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಆಗಿದ್ದಾರೆ. ರಾಜ್ಯದ ಮುಖ್ಯಮಂತ್ರಿಯಾಗಿದ್ದ ನಾನು ಈಗ ಕೇಂದ್ರಾಡಳಿತ ಪ್ರದೇಶದ ಮುಖ್ಯಮಂತ್ರಿಯಾಗಿದ್ದೇನೆ ಎಂದು ಒಮರ್ ಹಳೆಯ ದಿನಗಳನ್ನು ಮೆಲುಕು ಹಾಕಿದರು.

'ಸೇನೆ' ಟೀಕೆ: ಕಾಂಗ್ರೆಸ್ ನಾಯಕ ಸೆರೆ

ಅಹಮದಾಬಾದ್: ಪಾಕಿಸ್ತಾನ ವಿರುದ್ಧ ಭಾರತೀಯ ಸೇನಾಪಡೆಗಳು ನಡೆಸಿದ ಆಪರೇಷನ್ ಸಿಂಧೂರ್ ಕಾರ್ಯಾಚರಣೆ ಬಗ್ಗೆ ಸಾಮಾಜಿಕ ಮಾಧ್ಯಮದಲ್ಲಿ ವಿವಾದಾತ್ಮಕ ಹೇಳಿಕೆ ಪ್ರಕಟಿಸಿದ ಕಾಂಗ್ರೆಸ್‌ನ ಗುಜರಾತ್ ಘಟಕದ ಪ್ರಧಾನ ಕಾರ್ಯದರ್ಶಿ ರಾಜೇಶ್ ಸೋನಿ ಅವರನ್ನು ಗಾಂಧಿನಗರದ ಸೈಬರ್ ಕ್ರೈಮ್ ಬ್ರಾಂಚ್ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಆಪರೇಷನ್ ಸಿಂಧೂರ್, ರಫೇಲ್ ಒಪ್ಪಂದ ಮತ್ತು ದೇಶಕ್ಕೆ ಸಂಬಂಧಿಸಿದ ಇತರ ಸೂಕ್ಷ್ಮ ವಿಷಯಗಳನ್ನು ಟೀಕಿಸುವಂ ವಿಡಿಯೋಗಳು ಮತ್ತು ಚಿತ್ರಗಳನ್ನು ಸೋನಿ ಫೇಸ್‌ಬುಕ್ ಪುಟದಲ್ಲಿ ಹಂಚಿಕೊಂಡಿದ್ದಾರೆ ಸೈಬರ್ ಅಪರಾಧ ವಿಭಾಗದ ಸಬ್-ಇನ್‌ಸ್ಪೆಕ್ಟರ್ ದೂರಿದ್ದಾರೆ. ಈ ಫೇಸ್‌ಬುಕ್ ಪ್ರಕಟಣೆ ಭಾರತೀಯ ಸೇನೆಯ ನೈತಿಕತೆ ಕುಗ್ಗಿಸುವ, ಸೇನೆ ಬಗ್ಗೆ ಅನುಮಾನ ಮೂಡಿಸುವ, ದೇಶ ಭದ್ರತೆ ಬಗ್ಗೆ ಶತ್ರು ದೇಶಕ್ಕೆ ಮಾಹಿತಿ ನೀಡುವ ಉದ್ದೇಶವನ್ನು ಹೊಂದಿವೆ ಎಂದು ಆರೋಪಿಸಿ ಎಫ್‌ಐಆರ್ ದಾಖಲಿಸಲಾಗಿದೆ. ಸೋನಿ ಅವರ ಬಂಧನ ರಾಜಕೀಯ ಆರೋಪ, ಪ್ರತ್ಯಾರೋಪಗಳಿಗೆ ಕಾರಣವಾಗಿದೆ.

ಆ.3ಕ್ಕೆ ನೀಟ್ ಪಿಜಿ 2025 ಪರೀಕ್ಷೆಗೆ ಸುಪ್ರೀಂ ಸಮ್ಮತಿ

ದೆಹಲಿ: ವೈದ್ಯಕೀಯ ಸ್ನಾತಕೋತ್ತರ(ನೀಟ್ ಪಿಜಿ) ಪ್ರವೇಶ ಪರೀಕ್ಷೆ ನಡೆಸಲು 'ರಾಷ್ಟ್ರೀಯ ಪರೀಕ್ಷಾ ಮಂಡಳಿ'(ಎನ್‌ಟಿಎ) 2 ತಿಂಗಳಿಗಿಂತ ಹೆಚ್ಚು ಸಮಯ ಕೋರಿದ್ದನ್ನು ಆರಂಭದಲ್ಲಿ ಪ್ರಶ್ನಿಸಿದ್ದ ಸುಪ್ರೀಂ ಕೋರ್ಟ್, ಬಳಿಕ ಆ.3ರಂದು ಪರೀಕ್ಷೆ ನಡೆಸುವುದಕ್ಕೆ ಸಮ್ಮತಿ ಸೂಚಿಸಿದೆ.

ನೀಟ್ ಪಿಜಿ ಪರೀಕ್ಷೆಯನ್ನು ನಡೆಸುವುದಕ್ಕೆ ಹೆಚ್ಚಿನ ಸಮಯ ನೀಡಲಾಗುವುದಿಲ್ಲ ಎಂದ ನ್ಯಾಯಮೂರ್ತಿ ಪ್ರಶಾಂತ್ ಕುಮಾರ್ ಮಿಶ್ರಾ ಮತ್ತು ನ್ಯಾ. ಆಗಸ್ಟೀನ್ ಜಾರ್ಜ್ ಮಸಿಹ್ ಅವರ ದ್ವಿಸದಸ್ಯ ಪೀಠ, ಬಳಿಕ ಆಗಸ್ಟ್ 3ರಂದು ನೀಟ್-ಪಿಜಿ 2025 ಪರೀಕ್ಷೆಯನ್ನು ಒಂದೇ ಪಾಳಿಯಲ್ಲಿ ನಡೆಸಲು ಶುಕ್ರವಾರ ಒಪ್ಪಿಗೆ ನೀಡಿದೆ. ನೀಟ್ ಪಿಜಿ ಪ್ರವೇಶ ಪರೀಕ್ಷೆಯನ್ನು ಒಂದೇ ಪಾಳಿಯಲ್ಲಿ ನಡೆಸಲು 1 ಸಾವಿರಕ್ಕೂ ಅಧಿಕ ಪರೀಕ್ಷಾ ಕೇಂದ್ರಗಳು ಬೇಕಾಗುತ್ತವೆ. ಅದನ್ನೆಲ್ಲಾ ಹೊಂದಿಸಿಕೊಳ್ಳುವುದಕ್ಕೆ ಹೆಚ್ಚಿನ ಸಮಯ ಬೇಕಾಗುತ್ತದೆ ಎಂದು ಮೊದಲಿಗೆ 'ಎನ್‌ಟಿಎ' ವಾದಿಸಿತ್ತು. ಬಳಿಕ, ಜೂ.15ಕ್ಕೆ ನಿಗದಿಯಾಗಿದ್ದ ಪ್ರವೇಶ ಪರೀಕ್ಷೆಯನ್ನು ಆ.3ರ ಬೆಳಗ್ಗೆ 9ರಿಂದ ಮಧ್ಯಾಹ್ನ 12.30 ರವರೆಗೆ ಒಂದೇ ಹಂತದಲ್ಲಿ ನಡೆಸುವುದಾಗಿ ಎನ್‌ಟಿಎ ಪ್ರಮಾಣಪತ್ರ ಸಲ್ಲಿಸಿತು. ಪೀಠ ಅದಕ್ಕೆ ಸಮ್ಮತಿಸಿತು.

ಕಳೆದ ವರ್ಷ, ಅಂದರೆ 2024ರ ಆ.11ರಂದು ಬೆಳಗ್ಗೆ 9ರಿಂದ ಮಧ್ಯಾಹ್ನ 12.30 ಮತ್ತು ಮಧ್ಯಾಹ್ನ 3.30ರಿಂದ ಸಂಜೆ 7ರವರೆಗೆ ಎರಡು ಹಂತಗಳಲ್ಲಿ ನೀಟ್ ಪಿಜಿ ಪ್ರವೇಶ ಪರೀಕ್ಷೆ ನಡೆಸಲಾಗಿತ್ತು.

ವಿಯೆಟ್ನಾಂ ಅಪಘಾತ: ಭಾರತೀಯ ಮೃತ

ಹೈದರಾಬಾದ್: ವಿಯೆಟ್ನಾಂನ ಕ್ಯಾನ್ ಥೋ ನಗರದಲ್ಲಿ ಬುಧವಾರ ನಡೆದ ರಸ್ತೆ ಅಪಘಾತದಲ್ಲಿ ಭಾರತ ಮೂಲದ ವೈದ್ಯಕೀಯ ವಿದ್ಯಾರ್ಥಿ ದುರ್ಮರಣಕ್ಕೀಡಾಗಿದ್ದಾನೆ.

ತೆಲಂಗಾಣ ರಾಜ್ಯದ ಕುಮುರಂ ಭೀಮ್ ಆಸಿಫಾಬಾದ್ ಜಿಲ್ಲೆಯ ಕಾಗಜ್ ನಗರದ ನಿವಾಸಿ 3ನೇ ವರ್ಷದ ಎಂಬಿಬಿಎಸ್ ವಿದ್ಯಾರ್ಥಿ ಅರ್ಷಿದ್ ಅಶ್ರಿತ್(21) ಮೃತ. ಮಳೆ ಸುರಿದ ಪರಿಣಾಮ ನೀರು ನಿಂತಿದ್ದ ರಸ್ತೆಯಲ್ಲಿ ಅರ್ಷಿದ್ ವೇಗವಾಗಿ ಬೈಕ್ ಚಲಾಯಿಸಿದ್ದ. ಒಂದೆಡೆ ನಿಯಂತ್ರಣ ತಪ್ಪಿ ತಡೆಗೋಡೆಗೆ ಡಿಕ್ಕಿ ಹೊಡೆದ. ಹಿಂದಿನ ಸೀಟಿನಲ್ಲಿದ್ದ ಅರ್ಷಿದ್ ಸ್ನೇಹಿತ ಗಂಭೀರವಾಗಿ ಗಾಯಗೊಂಡಿದ್ದಾನೆ. ಸಿಸಿಟಿವಿ ಕ್ಯಾಮೆರಾದಲ್ಲಿ ಅಪಘಾತದ ದೃಶ್ಯಗಳು ದಾಖಲಾಗಿದ್ದು, ಬಲು ಆಘಾತಕಾರಿಯಾಗಿವೆ. ಕೇಂದ್ರ ಸಚಿವ ಜಿ.ಕಿಶನ್ ರೆಡ್ಡಿ ಅರ್ಷಿದ್ ಪೋಷಕರಿಗೆ ಕರೆ ಮಾಡಿ ಮಾತನಾಡಿ ಸಾಂತ್ವನ ಹೇಳಿದ್ದಾರೆ. ಅರ್ಷಿದ್ ಮೃತದೇಹವನ್ನು ಭಾರತಕ್ಕೆ ತರುವುದಕ್ಕೆ ನೆರವಾಗುವುದಾಗಿ ಭರವಸೆ ನೀಡಿದ್ದಾರೆ.

5000 ದಾಟಿದ ಕರೋನಾ: ಕೇರಳದಲ್ಲಿ ಹೈ ಅಲರ್ಟ್

ದೆಹಲಿ: ದೇಶದಲ್ಲಿ ಶುಕ್ರವಾರ ಬೆಳಗ್ಗೆ 8ರ ವೇಳೆ ಕೋವಿಡ್-19 ಸೋಂಕಿನ ಪ್ರಕರಣಗಳ ಸಂಖ್ಯೆ 5000ದ ಗಡಿ ದಾಟಿ ಮುನ್ನಡೆದಿದೆ. ಕೇರಳ ರಾಜ್ಯ ಮಾತ್ರ 1600ಕ್ಕೂ ಅಧಿಕ ಸಕ್ರಿಯ ಪ್ರಕರಣಗಳೊಂದಿಗೆ ಮೊದಲ ಸಾಲಿನಲ್ಲೇ ಮುಂದುವರಿದಿದೆ.

ಶುಕ್ರವಾರ ಬೆಳಗ್ಗೆ 8 ಗಂಟೆಗೂ ಮುಂಚಿನ 24 ಗಂಟೆಗಳ ಅವಧಿಯಲ್ಲಿ ದೇಶದಲ್ಲಿ ಹೊಸದಾಗಿ 498 ಕೋವಿಡ್ ಸಕ್ರಿಯ ಪ್ರಕರಣಗಳು ವರದಿಯಾಗಿವೆ. ಇದರೊಂದಿಗೆ ಭಾರತದಲ್ಲಿ ಕೋವಿಡ್-19 ಸಕ್ರಿಯ ಪ್ರಕರಣಗಳ ಸಂಖ್ಯೆ 5364ಕ್ಕೆ ಮುಟ್ಟಿದೆ. ಇದೇ ಅವಧಿಯಲ್ಲಿ 64 ರೋಗಿಗಳು ಗುಣಮುಖರಾಗಿ ಆಸ್ಪತ್ರೆಯಿಂದ ಮನೆಗೆ ಮರಳಿದ್ದಾರೆ. ಸೋಂಕಿತರಲ್ಲಿ ನಾಲ್ವರು ಸಾವಿಗೀಡಾಗಿದ್ದಾರೆ. ಭಾರತದಲ್ಲಿ ಕೊವಿಡ್ ಪ್ರಕರಣಗಳು (Covid Cases) 5000 ದಾಟಿದ್ದು, ಕೇಂದ್ರ ಆರೋಗ್ಯ ಸಚಿವಾಲಯ ಇಂದು ಬಿಡುಗಡೆ ಮಾಡಿದ ಅಂಕಿ-ಅಂಶಗಳ ಪ್ರಕಾರ, ಕೇರಳವು ಅತಿ ಹೆಚ್ಚು ಸೋಂಕು ಪೀಡಿತ ರಾಜ್ಯವಾಗಿದೆ. ಕಳೆದ 24 ಗಂಟೆಗಳಲ್ಲಿ

ಅತ್ಯಧಿಕ ಸೋಂಕಿತರು ಇರುವ ಕೇರಳದಲ್ಲಿ ಸಕ್ರಿಯ ಪ್ರಕರಣಗಳು 1679ಕ್ಕೆ ತಲುಪಿವೆ. ನಂತರದ ಸ್ಥಾನಗಳಲ್ಲಿ ಗುಜರಾತ್-615, ಪಶ್ಚಿಮ ಬಂಗಾಳ -596 ಮತ್ತು ದೆಹಲಿ -592 ಇವೆ. ಕೇರಳದಲ್ಲಿ ಗುರುವಾರ ಇಬ್ಬರು ಸಾವಿಗೀಡಾದರು. ಕರ್ನಾಟಕ ಮತ್ತು ಪಂಜಾಬ್‌ನಲ್ಲಿ ತಲಾ ಒಂದು ಸಾವು ಸಂಭವಿಸಿದೆ. ಕೊವಿಡ್ ಪ್ರಕರಣ ಹೆಚ್ಚುತ್ತಿರುವುದರಿಂದ ಕೇಂದ್ರ ಆರೋಗ್ಯ ಸಚಿವಾಲಯ ಎಲ್ಲಾ ರಾಜ್ಯಗಳಿಗೆ ಆಮ್ಲಜನಕ, ಐಸೋಲೇಷನ್ ಹಾಸಿಗೆಗಳು, ವೆಂಟಿಲೇಟರ್ ಮತ್ತು ಅಗತ್ಯ ಔಷಧಗಳ ಲಭ್ಯತೆ ಖಚಿತಪಡಿಸಿಕೊಳ್ಳಲು ನಿರ್ದೇಶನ ನೀಡಿದೆ.

ಕಾಶ್ಮೀರದ ಜನರ ರೊಟ್ಟಿ ಉದ್ಯೋಗ ಕಸಿದ ಪಾಕ್

ಕತ್ರಾ: ಜಮ್ಮು-ಕಾಶ್ಮೀರದ ಅನಂತನಾಗ್ ಜಿಲ್ಲೆಯ ಜನಪ್ರಿಯ ಪ್ರವಾಸಿ ತಾಣ ಪಹಲ್ಗಾಮ್‌ನ ಬೈಸನ್ ಹುಲ್ಲುಗಾವಲಿನಲ್ಲಿ ವಿಹರಿಸುತ್ತಿದ್ದ 25 ಪ್ರವಾಸಿಗರು ಸೇರಿ 26 ಜನರನ್ನು 'ಅವರ ಧರ್ಮ ಯಾವುದೆಂದು ಕೇಳಿ ತಿಳಿದು' ಹತ್ಯೆ ಮಾಡಿರುವ ಪಾಕಿಸ್ತಾನ ಮೂಲದ ಉಗ್ರರ ಉದ್ದೇಶ 'ಭಾರತದಲ್ಲಿ ಕೋಮು ಗಲಭೆ ಉಂಟು ಮಾಡುವುದೇ ಆಗಿತ್ತು' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಜಮ್ಮು-ಕಾಶ್ಮೀರದ ಜನರಿಗೆ ಪ್ರವಾಸೋದ್ಯಮವೇ ಬದುಕಾಗಿದೆ.

ಇಲ್ಲಿಗೆ ಪ್ರವಾಸ ಬಂದವರಿಗೆ ಬಗೆಬಗೆಯ ಸೇವೆ ಸಲ್ಲಿಸಿ ಬರುವ ಸಂಪಾದನೆಯಲ್ಲಿ ಕಾಶ್ಮೀರಿ ಜನರು ಜೀವನ ಸಾಗಿಸುತ್ತಿದ್ದಾರೆ. ಆದರೆ, ಕಾಶ್ಮೀರದಲ್ಲಿ ಭಯೋತ್ಪಾದನೆ ಮಾಡಿ ಪ್ರವಾಸಿಗರೇ ಇಲ್ಲಿಗೆ ಬರದಂತೆ ಮಾಡುವ ಮೂಲಕ ಜಮ್ಮು-ಕಾಶ್ಮೀರದ ಜನರ ಕಸುಬು ಮತ್ತು ರೊಟ್ಟಿ ಕಿತ್ತುಕೊಳ್ಳುವುದೇ ಪಾಕಿಸ್ತಾನದ ದೊಡ್ಡ ಸಂಚಾಗಿದೆ ಎಂದು ಮೋದಿ ಹೇಳಿದರು. ಪ್ರವಾಸಿ ಮಾರ್ಗದರ್ಶಿ, ಕುದುರೆ ಸವಾರಿ, ಅತಿಥಿ ಗೃಹ, ದೋಣಿ ಸಂಚಾರ, ಕಾಶ್ಮೀರ ಸ್ಮರಣಿಕೆಗಳು-ವಸ್ತ್ರಗಳ ಮಾರಾಟ, ರಸ್ತೆ ಸಂಚಾರ ಸೇವೆ ಮೊದಲಾದ ಉದ್ಯೋಗಗಳು ಪ್ರವಾಸಿಗರನ್ನೇ ಆಶ್ರಯಿಸಿವೆ. ಆದರೆ, ಪಾಕ್ ಉಗ್ರರು ಕಾಶ್ಮೀರದ ಸಾವಿರಾರು ಜನರ ಕೆಲಸ ಕಸಿಯುತ್ತಿದ್ದಾರೆ ಎಂದು ಟೀಕಿಸಿದರು. ಭಾರತದ ವಿವಿಧೆಡೆಯ ಜನರ ಜತೆಗಿನ ಸಂಬಂಧವನ್ನೂ ಕಾಶ್ಮೀರ ಜನತೆಗೆ ದೊರಕಿಸಿಕೊಡುತ್ತಿದೆ. ಪ್ರವಾಸೋದ್ಯಮ ಉತ್ತರ ದಕ್ಷಿಣ-ಪೂರ್ವ ಪಶ್ಚಿಮವನ್ನು ಬೆಸೆಯುತ್ತಿದೆ. ಆದರೆ, ನೆರೆಯ ಶತ್ರು ದೇಶಕ್ಕೆ ಅದನ್ನೆಲ್ಲಾ ಸಹಿಸಲಾಗುತ್ತಿಲ್ಲ. ಅದಕ್ಕೇ ಕಾಶ್ಮೀರದ ಪ್ರವಾಸೋದ್ಯಮದ ಮೇಲೆಯೇ ದಾಳಿ ನಡೆಸುತ್ತಿದೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಭಾರತಕ್ಕೆ ವಾಪಸಾಗಲು ಸಿದ್ಧ: ವಿಜಯ್ ಮಲ್ಯ

ಲಂಡನ್: ಭಾರತದ ಕೋರ್ಟ್‌ನಲ್ಲಿ ನ್ಯಾಯಯುತ ವಿಚಾರಣೆಯ ಭರವಸೆ ನೀಡಿದರೆ ಭಾರತಕ್ಕೆ ಮರಳಲು ಸಿದ್ಧನಿರುವೆ ಎಂದು ಸಾವಿರಾರು ಕೋಟಿ ಸಾಲ ಮಾಡಿ ಬ್ಯಾಂಕ್‌ಗಳಿಗೆ ವಂಚಿಸಿ ದೇಶ ಬಿಟ್ಟು ಓಡಿಹೋಗಿರುವ ಕರ್ನಾಟಕ ಮೂಲದ ಮದ್ಯ ಉದ್ಯಮಿ, ಕಿಂಗ್ ಫಿಶರ್ ಏರ್‌ಲೈನ್ಸ್ ಮಾಜಿ ಮುಖ್ಯಸ್ಥ ವಿಜಯ್ ಮಲ್ಯ ಹೇಳಿದ್ದಾರೆ. 'ಕಿಂಗ್‌ಫಿಷರ್ ಏರ್‌ಲೈನ್ಸ್‌ಗಾಗಿ ತೆಗೆದುಕೊಂಡ ಬ್ಯಾಂಕ್‌ಗಳ ಸಾಲವನ್ನು ಮರು ಪಾವತಿ ಮಾಡುವುದೇ ನನ್ನ ಉದ್ದೇಶವಾಗಿದೆ' ಎಂದೂ ರಾಜ್ ಶಾಮಾನಿ ಅವರ 'ಪಾಡ್‌ಕಾಸ್ಟ್ ಸಂದರ್ಶನ'ದಲ್ಲಿ ಹೇಳಿದ್ದಾರೆ. 4 ಗಂಟೆಗಳ ಮಲ್ಯ ಸಂದರ್ಶನ ಇತ್ತೀಚೆಗೆ ಬಿತ್ತರವಾಗಿದೆ.



ಮಾಧ್ಯಮಗಳ ವಿರುದ್ಧ ಕಿಡಿಕಾರಿರುವ ಮಲ್ಯ, ನನ್ನನ್ನು ಬಗೆಬಗೆಯ ಹೆಸರುಗಳಿಂದ ಕರೆದು ಮಾಧ್ಯಮಗಳು ನಿಂದಿಸುತ್ತಿವೆ. ಭಾರತದ ಜನರಲ್ಲಿ ನನ್ನ ಬಗ್ಗೆ ಕೋಪ ಹೆಚ್ಚುವಂತೆ ಮಾಡುತ್ತಿವೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. 6,203 ಕೋಟಿ ರು. ಸಾಲ ವಸೂಲಿಗಾಗಿ ಹೂಡಿದ್ದ ಮೊಕದ್ದಮೆ ಸಂಬಂಧ ನ್ಯಾಯಾಲಯ ತೀರ್ಪಿಗಿಂತ 2 ಪಟ್ಟು ಸಾಲವನ್ನು ಬ್ಯಾಂಕ್‌ಗಳು ವಸೂಲಿ ಮಾಡಿವೆ. ನನ್ನ ಆಸ್ತಿಗಳನ್ನು ಹರಾಜು ಹಾಕಿ 14,100 ಕೋಟಿ ರು.ವರೆಗೂ ಜಮಾ ಮಾಡಿಕೊಂಡಿವೆ. ನಾನು ನಿಜವಾಗಿ ಬ್ಯಾಂಕ್‌ಗಳಿಗೆ ಅಷ್ಟೊಂದು ವಂಚನೆ ಮಾಡಿಲ್ಲ. ಆದರೆ ಸರಕಾರ ದುಪ್ಪಟ್ಟು ಹಣವನ್ನು ಹೇಗೆ ವಸೂಲಿ ಮಾಡಿತು? ಮಲ್ಯ ಪ್ರಶ್ನೆ ಮಾಡಿದ್ದಾರೆ. ದೇಶದಲ್ಲಿ ಹಲವು ಹೊಸ ವಿಮಾನಯಾನ ಮಾರ್ಗಗಳನ್ನು ತೆರೆದು ತೋರಿಸಿದ್ದೇ ಕಿಂಗ್‌ಫಿಷರ್ ಏರ್‌ಲೈನ್ಸ್. ಭಾರತದ ವಿಮಾನಯಾನ ಕ್ಷೇತ್ರಕ್ಕೆ ದೊಡ್ಡ ಕೊಡುಗೆ ಎಂದಿದ್ದಾರೆ.

ನಟ ಕಮಲಹಾಸನ್ ರಾಜ್ಯಸಭೆ ನಾಮಪತ್ರ

ಚೆನ್ನೈ: ಬಹುಭಾಷಾ ನಟ-ನಿರ್ಮಾಪಕ, ತಮಿಳುನಾಡಿನ ಅರೆಕಾಲಿಕ ರಾಜಕಾರಣಿ ಕಮಲಹಾಸನ್ ಸಂಸತ್ತಿನ ಮೇಲ್ಮನೆ ಪ್ರವೇಶಿಸಲು ಸಜ್ಜಾಗಿದ್ದು, ಜೂ.19ರಂದು ರಾಜ್ಯಸಭೆಯ 8 ಸ್ಥಾನಗಳಿಗೆ ನಡೆಯಲಿರುವ ಚುನಾವಣೆಗೆ ಸ್ಪರ್ಧಿಸಲು ಶುಕ್ರವಾರ ನಾಮಪತ್ರ ಸಲ್ಲಿಸಿದ್ದಾರೆ. ತಮಿಳುನಾಡಿನ ಆಡಳಿತಾರೂಢ ಪಕ್ಷವಾದ ಡಿಎಂಕೆ ತಾನು ಗೆಲ್ಲಬಹುದಾದ 4 ರಾಜ್ಯಸಭಾ ಸ್ಥಾನಗಳಲ್ಲಿ ಒಂದು ಸ್ಥಾನವನ್ನು ಕಮಲಹಾಸನ್ ಅವರ ಮಕ್ಕಳ್ ನೀಧಿ ಮಯ್ಯಂ(ಎಂಎನ್‌ಎಂ) ಪಕ್ಷಕ್ಕೆ ಬಿಟ್ಟುಕೊಟ್ಟಿದೆ. ದ್ರಾವಿಡ ಮುನ್ನೇತ್ರ ಕಳಗಂ(ಡಿಎಂಕೆ) ಪಕ್ಷ ಉಳಿದ ಮೂರು ಸ್ಥಾನಗಳಿಗೆ ಅಭ್ಯರ್ಥಿಗಳನ್ನು ಈಗಾಗಲೇ ಪ್ರಕಟಿಸಿದ್ದು, ಹಿರಿಯ ವಕೀಲ ಪಿ.ವಿಲ್ಸನ್, ಕವಿ ಮತ್ತು ಬರಹಗಾರ್ತಿ ಸಲ್ಮಾ ಮತ್ತು ಮಾಜಿ ಸಚಿವ ಎಸ್. ಆರ್.ಶಿವಲಿಂಗಂ ಸದ್ಯದಲ್ಲೇ ನಾಮಪತ್ರ ಸಲ್ಲಿಸಲಿದ್ದಾರೆ. ರಾಜ್ಯಸಭಾ ಚುನಾವಣೆಗೆ ನಾಮಪತ್ರ ಸಲ್ಲಿಸುವುದಕ್ಕೆ ಜೂ.9ರವರೆಗೂ ಅವಕಾಶವಿದೆ. ಜೂ.10 ನಾಮಪತ್ರ ಪರಿಶೀಲನೆ. ಜೂನ್ 19 ರಂದು ಮತದಾನ ನಡೆದು ಸಂಜೆ ಫಲಿತಾಂಶ ಪ್ರಕಟವಾಗಲಿದೆ. 2018ರಲ್ಲಿ ರಾಜಕೀಯ ಪ್ರವೇಶಿಸಿದ ಕಮಲಹಾಸನ್ ಎಂಎನ್‌ಎಂ ಪಕ್ಷ ಸ್ಥಾಪಿಸಿದ್ದಾರೆ. 2024ರ ಲೋಕಸಭಾ ಚುನಾವಣೆಗೂ ಮುನ್ನ ಡಿಎಂಕೆ ಮತ್ತು ಎಂಎನ್‌ಎಂ ಒಪ್ಪಂದ ಮಾಡಿಕೊಂಡಿದ್ದವು. ಅದರಂತೆ ಈಗ ಡಿಎಂಕೆ ಕಮಲ ಹಾಸನ್ ಅವರ ಪಕ್ಷಕ್ಕೆ ರಾಜ್ಯಸಭೆಯಲ್ಲಿನ ಒಂದು ಸ್ಥಾನವನ್ನು ಬಿಟ್ಟುಕೊಟ್ಟಿದೆ.

ಸಮಾಚಾರ ಸಣ್ಣದಲ್ಲ

ಕೆನಡಾ ಶೃಂಗಸಭೆಯಲ್ಲಿ ಪ್ರಧಾನಿ ಮೋದಿ ಭಾಗಿ

ದೆಹಲಿ: ಈ ತಿಂಗಳ ಅಂತ್ಯದಲ್ಲಿ ಕೆನಡಾದಲ್ಲಿ ನಡೆಯಲಿರುವ ಜಿ7 ಶೃಂಗಸಭೆಯಲ್ಲಿ ಭಾಗವಹಿಸುವುದಾಗಿ ಮತ್ತು ಹೊಸದಾಗಿ ಆಯ್ಕೆಯಾದ ಕೆನಡಾದ ಪ್ರತಿರೂಪ ಮಾರ್ಕ್ ಕಾರ್ನಿ ಅವರನ್ನು ಭೇಟಿ ಮಾಡಲು ಎದುರು ನೋಡುತ್ತಿರುವುದಾಗಿ ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಹೇಳಿದ್ದಾರೆ. ಜೂನ್ 15-17ರ ನಡುವೆ ಕೆನಡಾದ ಪ್ರಧಾನಿ ಅವರಿಂದ ಬಂದ ದೂರವಾಣಿ

ಕರೆಯಲ್ಲಿ ಕನನಸ್ಕಿಸ್‌ನಲ್ಲಿ ನಡೆಯಲಿರುವ ಶೃಂಗಸಭೆಗೆ ಆಹ್ವಾನ ನೀಡಿದ್ದಕ್ಕಾಗಿ ಪ್ರಧಾನಿ ಮೋದಿ ಹೇಳಿದ್ದು, ಕೆನಡಾ ಪ್ರಧಾನಿಗೆ ಧನ್ಯವಾದವನ್ನೂ ಸಮರ್ಪಿಸಿದ್ದಾರೆ. ಕೆನಡಾದ ಪ್ರಧಾನಿ ಮಾರ್ಕ್ ಕಾರ್ನಿ ಅವರಿಂದ ಕರೆ ಸ್ವೀಕರಿಸಲು ಸಂತೋಷವಾಗಿದೆ. ಅವರ ಇತ್ತೀಚಿನ ಚುನಾವಣಾ ವಿಜಯಕ್ಕಾಗಿ ಅವರನ್ನು ಅಭಿನಂದನೆ ಸಲ್ಲಿಸಲಾಗಿದೆ. ಈ ತಿಂಗಳ ಅಂತ್ಯದಲ್ಲಿ ಕನನಸ್ಕಿಸ್‌ನಲ್ಲಿ ನಡೆಯಲಿ ರುವ ಜಿ7 ಶೃಂಗಸಭೆಗೆ ಆಹ್ವಾನ ನೀಡಿದ್ದಕ್ಕಾಗಿ ಅವರಿಗೆ ಧನ್ಯವಾದ ಅರ್ಪಿಸಲಾಗಿದೆ ಎಂದು ಪ್ರಧಾನಿ ಹೇಳಿದ್ದಾರೆ. ಪ್ರಜಾಪ್ರಭುತ್ವ ರಾಷ್ಟ್ರಗಳಾಗಿ ಭಾರತ ಮತ್ತು ಕೆನಡಾ ಪರಸ್ಪರ ಗೌರವ ಮತ್ತು ಸಮಾನ ಆಸಕ್ತಿಗಳನ್ನು ಹೊಂದಿದ್ದು, ನವೀಕೃತ ಚೈತನ್ಯದೊಂದಿಗೆ ಒಟ್ಟಾಗಿ ಕೆಲಸ ಮಾಡುತ್ತವೆ. ಶೃಂಗಸಭೆಯಲ್ಲಿ ಕಾರ್ನಿ ಭೇಟಿಯನ್ನು ಎದುರು ನೋಡುತ್ತಿದ್ದೇನೆ ಎಂದು ಅವರು ತಮ್ಮ ಎಕ್ಸ್ ತಾಣದಲ್ಲಿ ಹೇಳಿದ್ದಾರೆ.

ಸ್ಟಾರ್‌ಲಿಂಕ್‌ಗೆ ಪರವಾನಗಿ

ಹೈದರಾಬಾದ್: ಅಮೆರಿಕದ ಖ್ಯಾತ ಉದ್ಯಮಿ ಹಾಗೂ ಟೆಸ್ಲಾ ಸಿಇಒ ಎಲಾನ್ ಮಸ್ಕ್ ಅವರ ಸ್ಟಾರ್ ಲಿಂಕ್ ಕಂಪನಿಯು ಭಾರತದಲ್ಲಿ ಉಪಗ್ರಹ ಆಧಾರಿತ ಇಂಟರ್ನೆಟ್ ಸೇವೆಗಳನ್ನು ನೀಡಲು ಅಧಿಕೃತವಾಗಿ ಪರವಾನಗಿ ಪಡೆದಿದೆ. ಭಾರತದಲ್ಲಿ ತ್ವರಿತ ವೇಗದ

ಇಂಟರ್‌ನೆಟ್ ನೀಡುವ ಯೋಜನೆ ಇದಾಗಿದ್ದು, ಸ್ಯಾಟ್‌ಕಾಮ್ ಪರವಾನಗಿ ಪಡೆದ ಮೂರನೇ ಕಂಪನಿ ಇದಾಗಿದೆ. ಇದಕ್ಕೂ ಮುನ್ನ ಜಿಯೋ ಸ್ಯಾಟಲೈಟ್ ಕಮ್ಯುನಿಕೇಷನ್ಸ್ ಮತ್ತು ಭಾರ್ತಿ ಏರ್‌ಟೆಲ್ ಬೆಂಬಲಿತ ಯುಟೆಲ್‌ಸ್ಯಾಟ್ ಒನ್‌ವೆಬ್ ಸ್ಯಾಟ್‌ಕಾಮ್ ಪರವಾನಗಿ ಪಡೆದಿದ್ದವು. ಈ ಪಟ್ಟಿಗೆ ಸ್ಟಾರ್‌ಲಿಂಕ್ ಕಂಪನಿ ಕೂಡ ಸೇರಿಕೊಂಡಿತು. ಮೂರು ವರ್ಷಗಳ ಬಳಿಕ ಟೆಲಿಕಾಂ ಇಲಾಖೆ ಅಂತಿಮವಾಗಿ ಸ್ಟಾರ್‌ಲಿಂಕ್ ಕಂಪನಿಗೆ ಭಾರತದಲ್ಲಿ ತನ್ನ ಸ್ಯಾಟ್‌ಕಾಮ್ ಸೇವೆಯನ್ನು ಪ್ರಾರಂಭಿಸಲು ಗ್ಲೋಬಲ್ ಮೊಬೈಲ್ ಪರ್ಸನಲ್ ಕಮ್ಯುನಿಕೇಷನ್ ಬೈ ಸ್ಯಾಟಲೈಟ್ ಪರವಾನಗಿಯನ್ನು ನೀಡಿದೆ.

ಭಾರತಕ್ಕೆ 4 ಬಾರಿ ಪಾಕ್ ಪತ್ರ

ಪಹಲ್ಗಾಮ್: ಸಿಂಧೂ ಜಲ ಒಪ್ಪಂದವನ್ನು ಅಮಾನತುಗೊಳಿಸಿರುವ ಬಗ್ಗೆ ಕಳವಳ ವ್ಯಕ್ತಪಡಿಸಿ ಪಾಕಿಸ್ತಾನ ಇದುವರೆಗೆ ಭಾರತಕ್ಕೆ 4 ಪತ್ರಗಳನ್ನು ಕಳುಹಿಸಿದ್ದು , ಭಾರತವು ತನ್ನ ನಿರ್ಧಾರವನ್ನು ಮರುಪರಿಶೀಲಿಸುವಂತೆ ಪಾಕ್ ಒತ್ತಾಯಿಸಿದೆ. ಏಪ್ರಿಲ್ 22ರಂದು ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯ ನಂತರ ಭಾರತದ ಜಲಶಕ್ತಿ ಸಚಿವಾಲಯದ ಕಾರ್ಯದರ್ಶಿ ದೇಬಶ್ರೀ ಮುಖರ್ಜಿ ಅವರು ಪಾಕಿಸ್ತಾನದ ಜಲ ಸಚಿವಾಲಯದ ಕಾರ್ಯದರ್ಶಿ ಸೈಯದ್ ಅಲಿ ಮುರ್ತಾಜಾ ಅವರಿಗೆ ಪತ್ರ ಬರೆದು ಭಾರತದ ನಿಲುವನ್ನು ಸ್ಪಷ್ಟಪಡಿಸಿದ್ದರು. ಪಾಕಿಸ್ತಾನದಿಂದ ಹೊರಹೊಮ್ಮುತ್ತಿರುವ ಗಡಿಯಾಚೆಗಿನ ಭಯೋತ್ಪಾದನೆಯ ಬಲಿಪಶು ಭಾರತ ಎಂದು ಪತ್ರದಲ್ಲಿ ಸ್ಪಷ್ಟವಾಗಿ ಹೇಳಲಾಗಿತ್ತು.ಭಾರತವು ಸಿಂಧೂ ನದಿ ವ್ಯವಸ್ಥೆಗೆ ಸಂಬಂಧಿಸಿದ ಕಾರ್ಯತಂತ್ರದ ನೀರಿನ ಮೂಲಸೌಕರ್ಯ ಯೋಜನೆಗಳ ಕೆಲಸವನ್ನು ಚುರುಕುಗೊಳಿಸಿದೆ. ಬಿಯಾಸ್ ನದಿಯನ್ನು ಗಂಗಾ ಕಾಲುವೆಗೆ ಸಂಪರ್ಕಿಸಲು ವಿನ್ಯಾಸಗೊಳಿಸಲಾದ 130 ಕಿಲೋಮೀಟರ್ ಕಾಲುವೆಯು ಒಂದು ಪ್ರಮುಖ ಉಪಕ್ರಮವಾಗಿದ್ದು, ಸುಮಾರು 200 ಕಿಲೋಮೀಟರ್ ಯೋಜನೆಯು 12 ಕಿಲೋಮೀಟರ್ ಸುರಂಗವನ್ನು ಒಳಗೊಂಡಿದೆ. ಇದು ಯಮುನಾ ನೀರನ್ನು ಗಂಗಾಸಾಗರ್ ತಲುಪಲು ಅನುವು ಮಾಡಿಕೊಡುತ್ತದೆ.

ಮುಂದಿನ ಏಪ್ರಿಲ್‌ಗೆ ಬಾಂಗ್ಲಾ ಚುನಾವಣೆ

ಢಾಕಾ: ಬಾಂಗ್ಲಾದೇಶದಲ್ಲಿ ಮುಂದಿನ ರಾಷ್ಟ್ರೀಯ ಚುನಾವಣೆಯನ್ನು ಏಪ್ರಿಲ್ 2026ರ ಮೊದಲಾರ್ಧ ದಲ್ಲಿ ನಡೆಸಲಾಗುವುದು ಎಂದು ಬಾಂಗ್ಲಾದೇಶದ ಮುಖ್ಯ



ಸಲಹೆಗಾರ ಮುಹಮ್ಮದ್ ಯೂನಸ್ ಘೋಷಿಸಿದರು. ಬಕ್ರೀದ್ ಮುನ್ನಾದಿನದಂದು ರಾಷ್ಟ್ರೀಯ ದೂರದರ್ಶನದಲ್ಲಿ ಭಾಷಣ ಮಾಡಿದ ಮುಹಮ್ಮದ್ ಯೂನಸ್, ಚುನಾವಣಾ ಆಯೋಗವು ಶೀಘ್ರದಲ್ಲೇ ವಿವರವಾದ ಮಾರ್ಗಸೂಚಿಯನ್ನು ಅನಾವರಣಗೊಳಿಸಲಿದೆ ಎಂದಿದ್ದಾರೆ. ಮುಂಬರುವ ಚುನಾವಣೆಯು ದೇಶದ ಇತಿಹಾಸದಲ್ಲಿ ಅತ್ಯಂತ ಮುಕ್ತ, ನ್ಯಾಯಯುತ, ಸ್ಪರ್ಧಾತ್ಮಕ ಮತ್ತು ಸ್ವೀಕಾ ರಾರ್ಹ ಎಂದು ಖಚಿತಪಡಿಸಿಕೊಳ್ಳಲು ಸರಕಾರವು ಎಲ್ಲಾ ರಾಜಕೀಯ ಪಕ್ಷಗಳೊಂದಿಗೆ ಸಮಾಲೋಚಿಸಿದೆ ಎಂದು ಮುಹಮ್ಮದ್ ಯೂನಸ್ ಹೇಳಿದರು.

{ ಸುಪ್ರಿಯಾ ಶ್ರೀನೇಶ್ } ಕಾಂಗ್ರೆಸ್ ವಕ್ತಾರೆ

ಕೇಂದ್ರ ಸರಕಾರದ ವಿದೇಶಾಂಗ ನೀತಿಯು ಭಾರಿ ವೈಫಲ್ಯ ಕಂಡಿದೆ. ಸರ್ವಪಕ್ಷಗಳ ನಿಯೋಗಗಳನ್ನು ವಿವಿಧ ದೇಶಗಳಿಗೆ ಕಳುಹಿಸುವ ಮೂಲಕ ಕೇಂದ್ರ ಸರಕಾರ ಸಾಧಿಸಿದ್ದಾದರು ಏನು? ಈ ನಡೆಯಿಂದ ದೇಶಕ್ಕಾಗಿರುವ ಲಾಭವೇನು? ಮೋದಿ ನೇತೃತ್ವದ ಸರಕಾರ ಅನುಸರಿಸುತ್ತಿರುವ ವಿಫಲ ವಿದೇಶಾಂಗ ನೀತಿಯ ಫಲವಾಗಿ ಜಾಗತಿಕ ಮಟ್ಟದಲ್ಲಿ ಭಾರತ ಅವಮಾನಕ್ಕೆ ಒಳಗಾಗಿದೆ.

ಸಾರ್ವಜನಿಕರಿಂದ ಸಾಮಾಜಿಕ ಜಾಲತಾಣಗಳಲ್ಲಿ ರಾಜ್ಯ ಸರಕಾರದ ವಿರುದ್ಧ ಆಕ್ರೋಶ

ಕಾಲ್ತುಳಿತ ಪ್ರಕರಣ: ದಯಾನಂದ ಅಮಾನತಿಗೆ ತೀವ್ರ ವಿರೋಧ

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ವಿಜಯೋತ್ಸವ ವೇಳೆ ನಡೆದ ದುರಂತ ನಾನಾ ಮಜಲು ಪಡೆದುಕೊಳ್ಳುತ್ತಿದೆ. ನಗರ ಪೊಲೀಸ್ ಆಯುಕ್ತರಾಗಿದ್ದ ಬಿ.ದಯಾನಂದ್ ಸೇರಿದಂತೆ ಐವರು ಅಧಿಕಾರಿಗಳನ್ನು ಅಮಾನತು ಮಾಡಿರುವುದಕ್ಕೆ ಸಾರ್ವಜನಿಕ ವಲಯದಲ್ಲಿ ತೀವ್ರ ವಿರೋಧ ವ್ಯಕ್ತವಾಗುತ್ತಿದೆ.

ತಮ್ಮ ವೈಫಲ್ಯ ಮರೆ ಮಾಚಲು ಅಧಿಕಾರಿಗಳನ್ನು ಅಮಾನತು ಮಾಡಿರುವ ಕ್ರಮ ಸರಿಯಲ್ಲ ಎಂದು ಸಾರ್ವಜನಿಕರು ಸಾಮಾಜಿಕ ಜಾಲತಾಣಗಳಲ್ಲಿ ರಾಜ್ಯ ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ದಯಾನಂದ್ ಅವರ ಅಮಾನತು ಆದೇಶ ಹಿಂಪಡೆಯುವಂತೆ ಒತ್ತಾಯ ಕೇಳಿ ಬರುತ್ತಿದೆ. ಕಮಿಷನರ್ ಆಗಿದ್ದಾಗ ಅವರ ದಕ್ಷತೆ, ಸಮಯ ಪ್ರಜ್ಞೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿರುವ ಸಾರ್ವಜನಿಕರು ದಯಾನಂದ್ ಅವರನ್ನು ಬೆಂಬಲಿಸಿ ಪೋಸ್ಟ್ ಮಾಡಿದ್ದಾರೆ.

ಸರಕಾರ ವಿರುದ್ಧ ಪ್ರತಿಪಕ್ಷಗಳ ಟೀಕಾಪ್ರಹಾರ ಸೇರಿದಂತೆ ಸ್ವಪಕ್ಷೀಯರಿಂದಲೇ ಟೀಕೆ ವ್ಯಕ್ತವಾಗಲಾರಂಭಿಸಿತು. ಇದರ ಜತೆಗೆ ಕಾಂಗ್ರೆಸ್ ಹೈಕಮಾಂಡ್‌ನಿಂದಲೂ ಸರಕಾರ ನಡೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ ಎನ್ನಲಾಗಿದೆ. ಅಭಿನಂದನಾ ಸಮಾರಂಭದ ಆತುರ ನಿರ್ಧಾರಕ್ಕೆ ವ್ಯಾಪಕ ವಾಗ್ದಾಳಿಗಳು ಆರಂಭಗೊಂಡವು. ಎಲ್ಲೆಡೆ ಆಕ್ರೋಶ ವ್ಯಕ್ತವಾಗುತ್ತಿದ್ದಂತೆ ತನ್ನ ರಕ್ಷಣೆಗಾಗಿ ಸರಕಾರವು ನಿರೀಕ್ಷೆಯಂತೆ ಪೊಲೀಸ್ ಇಲಾಖೆಯನ್ನು ಹೊಣೆಗಾರಿಕೆಯನ್ನಾಗಿ ಮಾಡಿದೆ. ಆದರೆ, ನಗರ ಪೊಲೀಸ್ ಆಯುಕ್ತರನ್ನೇ ಅಮಾನತುಗೊಳಿಸಿರುವುದು ಸಾರ್ವಜನಿಕ ವಲಯದಲ್ಲಿ ಮಾತ್ರವಲ್ಲದೇ, ಪೊಲೀಸ್ ಇಲಾಖೆಯಲ್ಲಿಯೂ ಸರಕಾರದ ಕ್ರಮಕ್ಕೆ ತೀವ್ರ ಅಸಮಾಧಾನ ವ್ಯಕ್ತವಾಗಿದೆ. ಕಠಿಣ ಕ್ರಮದ ಹೆಸರಲ್ಲಿ ನಗರ ಪೊಲೀಸ್ ಆಯುಕ್ತ ಬಿ.ದಯಾನಂದ ಸೇರಿದಂತೆ ಐವರು ಅಧಿಕಾರಿಗಳ ತಲೆದಂಡ ಮಾಡಿರುವುದು ಸರಕಾರವು ಪೊಲೀಸ್ ಸಿಬ್ಬಂದಿಯಿಂದ ಟೀಕಾಸ್ತ್ರ ಎದುರಿಸುವಂತಾಗಿದೆ.

ಬೆಂಗಳೂರು ನಗರ ಪೊಲೀಸ್ ಆಯುಕ್ತ ಬಿ.ದಯಾನಂದ್, ಕೇಂದ್ರ ವಲಯ ಡಿಸಿಪಿ ಟಿ. ಶೇಖರ್, ಎಸಿಪಿ ಬಾಲಕೃಷ್ಣ, ಕಬ್ಬನ್ ಪಾರ್ಕ್ ಪೊಲೀಸ್ ಇನ್‌ಸ್ಪೆಕ್ಟರ್ ಗಿರೀಶ್ ಕಠಿಣ ಕ್ರಮ ಹೆಸರಲ್ಲಿ ಅಮಾನತುಗೊಳಿಸಿದೆ. ಪೊಲೀಸ್ ಇಲಾಖೆಯಲ್ಲಿ ದಕ್ಷ ಅಧಿಕಾರಿ ಎನ್ನಿಸಿಕೊಂಡಿದ್ದ ಪೊಲೀಸ್ ಆಯುಕ್ತ ಬಿ.ದಯಾನಂದ ಅವರನ್ನು ಅಮಾನತುಗೊಳಿಸಿರುವುದು ಪೊಲೀಸ್ ಇಲಾಖೆಯಲ್ಲಿ ಹಲವರಿಗೆ ಬೇಸರ ತರಿಸಿದೆ. ಸರಕಾರ ಆತುರದ ತೀರ್ಮಾನ ಕೈಗೊಳ್ಳುವ ಮೂಲಕ ತಪ್ಪು ನಿರ್ಧಾರ ಕೈಗೊಂಡಿದ್ದರಿಂದ ಅನಾಹುತ ಸಂಭವಿಸಿದೆ. ಇದಕ್ಕೆ ಪೊಲೀಸ್ ಅಧಿಕಾರಿಗಳ ತಲೆದಂಡ ಸರಿಯಲ್ಲ. ಅದರಲ್ಲಿಯೂ ಬಿ.ದಯಾನಂದ ಅವರನ್ನು ಅಮಾನತು ಮಾಡಿರುವುದು ಸರಕಾರದ ಹೊಣಗೇಡಿತನ ಎಂಬ ಅಭಿಪ್ರಾಯಗಳು ವ್ಯಕ್ತವಾಗಿವೆ.

ಕರ್ನಾಟಕ ಪೊಲೀಸ್ ಇತಿಹಾಸದಲ್ಲೇ ಅತ್ಯಂತ ಕರಾಳ ದಿನವಾಗಿದೆ. ಸತ್ಯ ಹೇಳಿದ್ದಕ್ಕೆ ಇದು ಬಹುಮಾನ ರೂಪದಲ್ಲಿ ಅಮಾನತು ಮಾಡಿದ್ದಾರೆ. ದಯಾನಂದ್ ಮತ್ತು ಅವರ ತಂಡವು ಬೆಂಗಳೂರನ್ನು ಸುರಕ್ಷಿತವಾಗಿಡಲು ಇಡೀ ರಾತ್ರಿ ಶ್ರಮಿಸಿದ್ದರು. ಡೆತ್ ಮಾರ್ಚ್ ಅನ್ನು ಆಯೋಜಿಸಿ, ನಿಯಂತ್ರಿಸಲಾಗದ ಉಪಮುಖ್ಯಮಂತ್ರಿಯೇ ಪ್ರಮುಖ ಅಪರಾಧಿ. ಇದು ಕರ್ನಾಟಕದ ಎಲ್ಲರಿಗೂ ತಿಳಿದಿದೆ.

-ಭಾಸ್ಕರ್ ರಾವ್, ಮಾಜಿ ಪೊಲೀಸ್ ಆಯುಕ್ತ

ವಿಜಯೋತ್ಸವ ಬೇಡ ಎಂದಿದ್ದ ದಯಾನಂದ

ಬಿ.ದಯಾನಂದ ಅವರ ಅಮಾನತಿಗೆ ರಾಜ್ಯ ಸರಕಾರ ಸಮಜಾಯಿಷಿ ನೀಡಿದೆ. ಜೂನ್ 3ರಂದು ಬೆಂಗಳೂರಿನಲ್ಲಿ ಆರ್‌ಸಿಬಿ ವಿಜಯಯಾತ್ರೆ ಮತ್ತು ಸಂಭ್ರಮಾಚರಣೆ ಆಯೋಜಿಸುತ್ತೇವೆ ಎಂದು ಆರ್‌ಸಿಬಿಯ ಸಿಇಒ ತಿಳಿಸಿದ್ದರು. ಆದರೆ, ಆರಂಭದಲ್ಲಿ ದಯಾನಂದ್ ಅವರು ಅನುಮತಿ ನೀಡಿರಲಿಲ್ಲ. ಆದರೆ ಬಳಿಕ 'ಮೇಲಿನಿಂದ' ಬಂದ ಒತ್ತಡಕ್ಕೆ ಮಣಿದು ಅನುಮತಿ ನೀಡಿದ್ದರು. ಆದ್ದರಿಂದ ಒತ್ತಡ ಹೇರಿದವರ ವಿರುದ್ಧ ಕ್ರಮವಾಗುವ ಬದಲು, ದಯಾನಂದ್ ವಿರುದ್ಧ ಕ್ರಮವಹಿಸುವುದು ಸರಿಯಲ್ಲ ಎನ್ನುವ ಮಾತುಗಳು ಕೇಳಿಬರುತ್ತಿದೆ.

ಹಿರಿಯ ಪೊಲೀಸ್ ಅಧಿಕಾರಿಗಳಿಗೆ ತಲೆದಂಡ ಸರಿಯೇ?

ಆರ್‌ಸಿಬಿ ಸಂಭ್ರಮಾಚರಣೆಗಾಗಿ ಎರಡು ಪ್ರತ್ಯೇಕ ಕಾರ್ಯಕ್ರಮಗಳನ್ನು ಆಯೋಜನೆ ಮಾಡಲಾಗಿತ್ತು. ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮೇಲೆ ಅಭಿನಂದನಾ ಕಾರ್ಯಕ್ರಮ ಆಯೋಜಿಸಿದರೆ, ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ವಿಜಯೋತ್ಸವ ಹಮ್ಮಿಕೊಳ್ಳಲಾಗಿತ್ತು. ಅಭಿನಂದನಾ ಸಮಾರಂಭಕ್ಕೆ ಕಿಕ್ಕಿರಿದು ಜನರು ಆಗಮಿಸಿದ್ದರೂ ಸಹ ಸುಗಮವಾಗಿ ನಡೆಯಿತು. ಆದರೆ, ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಹಮ್ಮಿಕೊಂಡಿದ್ದ ವಿಜಯೋತ್ಸವ ಕಾರ್ಯಕ್ರಮಕ್ಕೂ ಲಕ್ಷಾಂತರ ಜನ ಆಗಮಿಸಿದ್ದರು. ಉಚಿತ ಪ್ರವೇಶ ಎಂಬ ಗೊಂದಲದಿಂದಾಗಿ ನೂಕುನುಗ್ಗಲು ಉಂಟಾಗಿ ಕಾಲ್ತುಳಿತ ಸಂಭವಿಸಿ 11 ಮಂದಿ ಸಾವನ್ನಪ್ಪಿದ್ದರು. ಇದು ದೇಶ-ವಿದೇಶದಲ್ಲಿ ಸುದ್ದಿಯಾಗಿ ತೀವ್ರ ಟೀಕೆಗಳು ವ್ಯಕ್ತವಾದವು. ಈ ಕಾರಣಕ್ಕಾಗಿ ಸರಕಾರವು ತನ್ನ ತಪ್ಪಿಂದ ರಕ್ಷಿಸಿಕೊಳ್ಳಲು ಹಿರಿಯ ಪೊಲೀಸ್ ಅಧಿಕಾರಿಗಳ ತಲೆದಂಡ ಮಾಡಿದೆ ಎಂಬ ಟೀಕೆಗಳು ವ್ಯಕ್ತವಾಗಿವೆ.

ಚಿಕ್ಕಮಗಳೂರು ಜನಪ್ರತಿನಿಧಿಗಳ ಸಭೆಯಲ್ಲಿ ಈಶ್ವರ್ ಖಂಡ್ರೆ ಭರವಸೆ

ಡೀಮ್ಡ್ ಅರಣ್ಯ ಬಿಕ್ಕಟ್ಟು ಇತ್ಯರ್ಥ: ಸುಪ್ರೀಂಗೆ ಮನವಿ

ವಿಕಾಸಸೌಧದಲ್ಲಿ ಶುಕ್ರವಾರ ಚಿಕ್ಕಮಗಳೂರು ಜಿಲ್ಲೆಯ ಶಾಸಕರುಗಳು ಮತ್ತು ಅರಣ್ಯ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಅರಣ್ಯ ಸಚಿವ ಈಶ್ವರ್ ಖಂಡ್ರೆ ಮಾತನಾಡಿದರು.

ಬೆಂಗಳೂರು: ಪರಿಭಾವಿತ ಅರಣ್ಯ ಹಾಗೂ ಸೆಕ್ಷನ್ 4 ಅಧಿಸೂಚನೆ ಬಿಕ್ಕಟ್ಟು ಪರಿಹರಿಸುವಂತೆ ಸುಪ್ರೀಂಕೋರ್ಟ್ ಮತ್ತು ಕೇಂದ್ರಕ್ಕೆ ಮನವಿ ಸಲ್ಲಿಸಲಾಗುವುದು ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಹೇಳಿದರು.

ವಿಕಾಸಸೌಧದಲ್ಲಿ ಶುಕ್ರವಾರ ಚಿಕ್ಕಮಗಳೂರು ಜಿಲ್ಲೆಯ ಶಾಸಕರುಗಳು ಮತ್ತು ಅರಣ್ಯ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಅರಣ್ಯ ಕಾಯಿದೆ 1963ರ ಸೆಕ್ಷನ್ 4ರಡಿ ಅಧಿಸೂಚನೆ ಆಗುವ ಮುನ್ನ ಮಂಜೂರಾಗಿರುವ ಭೂಮಿಯನ್ನು ಅರಣ್ಯದಿಂದ ಕೈಬಿಡಲು ಸರಕಾರಕ್ಕೆ ಅವಕಾಶವಿದೆ. ಹಲವು ಪ್ರಕರಣಗಳಲ್ಲಿ ಸೆಕ್ಷನ್ 4 ಅಧಿಸೂಚನೆ ಆಗಿ 60-70 ವರ್ಷವಾಗಿದ್ದರೂ ಸೆಕ್ಷನ್ 17 ಆಗಿರುವುದಿಲ್ಲ. 1980ರ ಅರಣ್ಯ ಸಂರಕ್ಷಣಾ ಕಾಯಿದೆ ಜಾರಿ ಬಳಿಕ ಈಗ ಅಂತಹ ಅರಣ್ಯ ಕೈಬಿಡುವುದು ಕಷ್ಟಸಾಧ್ಯವಾಗಿದೆ. ಅಧಿಸೂಚನೆಯ ನಂತರ 30-40 ವರ್ಷಗಳಿಂದ ಮನೆಕಟ್ಟಿರುವ, ಉಳಿಮೆ ಮಾಡುತ್ತಿರುವ ಜನರಿಗೆ ನ್ಯಾಯ ಕೊಡಿಸಲು ಕೇಂದ್ರ ಹಾಗೂ ಸುಪ್ರೀಂಕೋರ್ಟ್‌ಗೆ ವಿಶೇಷ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಪರಿಭಾವಿತ ಅರಣ್ಯ ಎಂದು ಸುಪ್ರೀಂಕೋರ್ಟ್‌ಗೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿರುವ ಸರ್ವೆ ನಂಬರ್‌ನಲ್ಲಿ ಕೂಡ ಮನೆಗಳು, ಸರಕಾರಿ ಶಾಲೆಗಳು, ಸರಕಾರಿ ಕಟ್ಟಡ, ಪಟ್ಟಾಭೂಮಿ ಇದೆ. ಜಿಲ್ಲೆಯಲ್ಲಿ ಒಂದೇ ಸರ್ವೆ ನಂಬರ್‌ನಲ್ಲಿ 300-400 ಎಕರೆ ಜಮೀನಿದ್ದು, ಜಂಟಿ ಸರ್ವೆ ಆಗದ ಕಾರಣ ಗೊಂದಲ ಉಂಟಾಗಿದೆ. ಈ ಹಿನ್ನೆಲೆಯಲ್ಲಿ ಅರಣ್ಯ ಮತ್ತು ಕಂದಾಯ ಜಮೀನಿನ ಜಂಟಿ ಸರ್ವೆ ಮಾಡಿ ಸಮಸ್ಯೆ ಶೀಘ್ರ ಇತ್ಯರ್ಥ ಪಡಿಸಲು ಅಧಿಕಾರಿಗಳು ಪ್ರಯತ್ನಿಸಬೇಕು. ಈಗಾಗಲೇ 2022ರಲ್ಲಿ ಸುಪ್ರೀಂಕೋರ್ಟ್‌ಗೆ ಸಲ್ಲಿಸಲಾಗಿರುವ ಡೀಮ್ಡ್ ಅರಣ್ಯ ಕುರಿತ ಪ್ರಮಾಣಪತ್ರ ಸಾರ್ವಜನಿಕರಿಗೆ ಲಭ್ಯವಾಗುವಂತೆ ಇಲಾಖೆಯ ಅಧಿಕೃತ ಅಂತರ್ಜಾಲ ತಾಣದಲ್ಲಿ ಅಪ್ ಲೋಡ್ ಮಾಡುವಂತೆ ಸಚಿವರು ಸೂಚನೆ ನೀಡಿದರು.

ಬಫರ್ ವಲಯ ವ್ಯಾಪ್ತಿ ಇಳಿಕೆ

ಹಾಸನ ಜಿಲ್ಲೆಯ ಅರಸೀಕೆರೆ ವ್ಯಾಪ್ತಿಯಲ್ಲಿನ ಕರಡಿ ಧಾಮದ ಸುತ್ತ ಪ್ರಸ್ತುತ 10 ಕಿಮೀ ಬಫರ್ ವಲಯ ಎಂದು ಘೋಷಿಸಲಾಗಿರುವ ಕಾರಣ ಗಡಿ ಭಾಗದ ರೈತರು ಸಂಕಷ್ಟ ಎದುರಿಸುವಂತಾಗಿದೆ. ಈ ವಲಯದ ಮಿತಿ ಇಳಿಕೆ ಮಾಡುವಂತೆ ಶಾಸಕರು ಸಭೆಯಲ್ಲಿ ಮನವಿ ಮಾಡಿದರು. ಶಾಸಕರ ಮನವಿಗೆ ಸ್ಪಂದಿಸಿದ ಸಚಿವರು, ಈ ಮಿತಿಯನ್ನು 1 ಕಿಮೀಗೆ ಇಳಿಕೆ ಮಾಡಲು ಪ್ರಸ್ತಾವನೆ ಸಲ್ಲಿಸಲಾಗಿದೆ, ಶೀಘ್ರವೇ ಸಮಸ್ಯೆ ಬಗೆಹರಿಸುತ್ತೇವೆ ಎಂದು ಭರವಸೆ ನೀಡಿದರು.

ಬೆಂಗಳೂರು ನೂತನ ಪೊಲೀಸ್ ಆಯುಕ್ತ ಸೀಮಂತ್‌ಕುಮಾರ್ ಸಿಂಗ್ ಸೂಚನೆ

ಸರಿಯಾಗಿ ಕೆಲಸ ಮಾಡಿದರೆ ಸಮಸ್ಯೆಯಿಲ್ಲ

ಬೆಂಗಳೂರು: ಬೆಂಗಳೂರು ಪೊಲೀಸ್ ಆಯುಕ್ತ ಬಿ.ದಯಾನಂದ ಅವರ ಅಮಾನತಿಗೆ ತೀವ್ರ ವಿರೋಧದ ನಡುವೆಯೇ ಬೆಂಗಳೂರು ನೂತನ ಪೊಲೀಸ್ ಆಯುಕ್ತರಾಗಿ ಸೀಮಂತ್‌ಕುಮಾರ್ ಸಿಂಗ್ ಅಧಿಕಾರ ವಹಿಸಿಕೊಂಡಿದ್ದಾರೆ.

ಗುರುವಾರ ರಾತ್ರಿಯೇ ಅಧಿಕಾರವಹಿಸಿಕೊಂಡ ಅವರು, ಶುಕ್ರವಾರ ಬೆಳಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಗೃಹ ಸಚಿವ ಡಾ.ಜಿ. ಪರಮೇಶ್ವರ ಅವರನ್ನು ಭೇಟಿಯಾಗಿ ಚರ್ಚೆ ನಡೆಸಿದ್ದಾರೆ.

ಬೆಂಗಳೂರಿನ 39ನೇ ಪೊಲೀಸ್ ಆಯುಕ್ತರಾಗಿ ತಡರಾತ್ರಿ 12.15ಕ್ಕೆ ಸಹಿ ಮಾಡುವ ಮೂಲಕ ಅಧಿಕಾರ ಸ್ವೀಕರಿಸಿದರು. ನೂತನ ಕಮಿಷನರ್ ಸೀಮಂತ್ ಕುಮಾರ್ ಅವರನ್ನು ಹಿರಿಯ ಅಧಿಕಾರಿಗಳು, ಡಿಸಿಪಿಗಳು ಸ್ವಾಗತಿಸಿದ್ದಾರೆ. ಅಧಿಕಾರ ಸ್ವೀಕರಿಸಿದ ಬಳಿಕ ನಗರದ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು. ಶುಕ್ರವಾರ ಬೆಳಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರಿಯಾಗಿ ಕೆಲಸ ಮಾಡಿದರೆ ನಿಮಗೆ ತೊಂದರೆಯಾಗುವುದಿಲ್ಲ. ಗುರುವಾರ ನಗರ ಪೊಲೀಸ್ ಆಯುಕ್ತನಾಗಿ ಅಧಿಕಾರ ಸ್ವೀಕರಿಸಿದ ಬಳಿಕ ನೈಟ್ ರೌಂಡ್ಸ್ ಹೋಗಿ ಪರಿಶೀಲನೆ ನಡೆಸಿದ್ದೇನೆ. ಚಾರ್ಜ್ ತೆಗೆದುಕೊಳ್ಳುವ ಮುನ್ನವೇ ನಮ್ಮ ಅಧಿಕಾರಿಗಳು ಕೆಲಸ ಮಾಡಿದ್ದಾರೆ. ಪ್ರಕರಣ ದಾಖಲಿಸಿ ಕೆಲವರನ್ನು ಬಂಧಿಸಿ ವಿಚಾರಣೆ ನಡೆಸುತ್ತಿದ್ದಾರೆ. ಪ್ರಕರಣದ ಹೆಚ್ಚಿನ ವಿವರಗಳು ಇಷ್ಟು ಬೇಗ ನೀಡುವುದು ಸರಿಯಲ್ಲ, ಸಮಗ್ರ ವಿಚಾರಣೆ ನಡೆಸಿದ ಬಳಿಕ ಮಾಹಿತಿ ನೀಡಲಾಗುವುದು ಎಂದರು.

ಈ ಹಿಂದೆ ಬೆಂಗಳೂರು ನಗರ ಪೊಲೀಸರು ಒಳ್ಳೆಯ ಕೆಲಸ ಮಾಡಿದ್ದಾರೆ. ನನ್ನ ನೇತೃತ್ವದಲ್ಲಿ ಒಳ್ಳೆಯ ಕೆಲಸ ಮಾಡಲಿದ್ದಾರೆ ಎಂಬ ನಂಬಿಕೆಯಿದೆ. ಹಿಂದಿನಿಂದಲೂ ಪದ್ಧತಿಯಾಗಿ ನಗರ ಪೊಲೀಸ್ ಇಲಾಖೆಯಲ್ಲಿ ಕೆಲಸ ನಡೆಯುತ್ತಿದೆ. ಕೆಲವೊಮ್ಮೆ ಸವಾಲಿನ ಸ್ಥಿತಿ ಎದುರಾದಾಗ ಅದನ್ನು ಸ್ವೀಕರಿಸಿ ಕೆಲಸ ಮಾಡಬೇಕಿದೆ. ಜನಸ್ನೇಹಿ ರೀತಿ ಕೆಲಸ ಮಾಡಿದರೆ ನಿಮಗೆ ಏನು ಆಗುವುದಿಲ್ಲ ಎಂದು ಅಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದು ತಿಳಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಬೆಂಗಳೂರು ನೂತನ ಪೊಲೀಸ್ ಆಯುಕ್ತ ಸೀಮಂತ್‌ಕುಮಾರ್ ಸಿಂಗ್ ಭೇಟಿಯಾಗಿ ಚರ್ಚೆ ನಡೆಸಿದರು.

ಹಲವು ಐಪಿಎಸ್ ಅಧಿಕಾರಿಗಳ ವರ್ಗಾವಣೆ

ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಗುಪ್ತಚರ ಇಲಾಖೆ ಮುಖ್ಯಸ್ಥರಾಗಿದ್ದ ಹೇಮಂತ್ ನಿಂಬಾಳ್ಕರ್ ಅವರನ್ನು ಆ ಹುದ್ದೆಯಿಂದ ಹೊರಗಿಟ್ಟು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತರಾಗಿ ಮಾತ್ರ ಮುಂದುವರಿಸಲು ಸರಕಾರ ತೀರ್ಮಾನಿಸಿದೆ. ನಿಂಬಾಳ್ಕರ್ ಸ್ಥಾನಕ್ಕೆ ಸರಕಾರದ ಗೃಹ ಇಲಾಖೆ ಪ್ರಧಾನ ಕಾರ್ಯದರ್ಶಿಯಾಗಿದ್ದ ಎಡಿಜಿಪಿ ರವಿ ಎಸ್. ಅವರನ್ನು ವರ್ಗಾಯಿಸಲಾಗಿದೆ. ಇನ್ನು ಎಡಿಜಿಪಿ ಶರತ್‌ಚಂದ್ರ ಅವರನ್ನು ಗೃಹ ಇಲಾಖೆ ಪ್ರಧಾನ ಕಾರ್ಯದರ್ಶಿಯನ್ನಾಗಿ ವರ್ಗಾಯಿಸಲಾಗಿದೆ. ಕಾನೂನು ಸುವ್ಯವಸ್ಥೆ ಎಡಿಜಿಪಿಯಾಗಿದ್ದ ಹಿತೇಂದ್ರ ಅವರನ್ನು ಸಂಚಾರ ವಿಭಾಗಕ್ಕೆ, ಎಡಿಜಿಪಿ ಮುರುಗನ್ ಅವರನ್ನು ನೇಮಕ ವಿಭಾಗಕ್ಕೆ ವರ್ಗಾಯಿಸಿ ಆದೇಶ ಹೊರಡಿಸಲಾಗಿದೆ.

ಮಳೆ ಹಾನಿ ಪ್ರದೇಶಕ್ಕೆ ಲಿಂಬಾವಳಿ ಭೇಟಿ

ಮಹದೇವಪುರ: ಕ್ಷೇತ್ರದ ಮಳೆ ಹಾನಿ ಪ್ರದೇಶಗಳಿಗೆ ಮಾಜಿ ಸಚಿವ ಅರವಿಂದ ಲಿಂಬಾವಳಿ ಹಾಗೂ ಶಾಸಕಿ ಮಂಜುಳಾ ಅರವಿಂದ ಲಿಂಬಾವಳಿ ಅವರು ವಿವಿಧ ಇಲಾಖೆಯ ಅಧಿಕಾರಿಗಳೊಂದಿಗೆ ಪರಿವೀಕ್ಷಣೆ ಮಾಡಿದರು.

ಕ್ಷೇತ್ರದ ಎಲ್ಲಾ ಮಳೆ ಹಾನಿ ಪ್ರದೇಶಗಳಿಗೆ ಅಧಿಕಾರಿಗಳೊಂದಿ ಭೇಟಿ ನೀಡಿ ಪರೀಶೀಲಿಸಿದ ನಂತರ, ಕಿತ್ತಗನೂರು-ಬಿದರಹಳ್ಳಿ ಹದಗೆಟ್ಟಿರುವ ಕಾಲುವೆ ಸರಿಪಡಿಸಿ ಹೂಳೆತ್ತಲು ಮತ್ತು ಕಣ್ಣೂರು-ಬಾಗಲೂರು ರಸ್ತೆಯಲ್ಲಿ ಗ್ಯಾಸ್ ಪೈಪ್, ನೀರಿನ ಪೈಪ್ ಸೇರಿದಂತೆ ರಸ್ತೆ ಮೂಲಕ ಹಾದು ಹೋಗಿರುವ ಇತರ ಪೈಪ್‌ಲೈನ್‌ಗಳನ್ನು ಒಂದೂವರೆ ಅಡಿ ಒಳಭಾಗಕ್ಕೆ ಅಳವಡಿಸಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು. ನಂತರ ಪಣತ್ತೂರು ರೈಲ್ವೆ ಮೇಲ್ಸೇತುವೆಯ ಬಳಿ ಭೇಟಿ ನೀಡಿ ಗುಂಜೂರಿಗೆ ತೆರಳುವ ರೈಲ್ವೇ ಸಮಾನಾಂತರ ರಸ್ತೆ ಮತ್ತು ಚರಂಡಿಯ ನಿರ್ಮಾಣ ಕಾಮಗಾರಿ ಶೀಘ್ರ ಆರಂಭವಾಗಬೇಕು. ಬಳಗೆರೆ ರಸ್ತೆಯ ದಿಶಾ ಅಪಾರ್ಟ್ಮೆಂಟ್ ಬಳಿ ಮಳೆ ಮಳೆ ನೀರು ಕಾಲುವೆ ಹಾಗೂ ಗುಂಜೂರು ಮುಖ್ಯರಸ್ತೆಗೆ 150 ಅಡಿ ರಸ್ತೆ ಸೇರುವ ಜಂಕ್ಷನ್ ಕೆಆರ್‌ಡಿಸಿಎಲ್ ರಸ್ತೆ ಮತ್ತು ಚರಂಡಿ ಕಾಮಗಾರಿಗೆ ಬೇಕಾಗಿರುವ ಭೂಸ್ವಾಧೀನ ಪ್ರಕ್ರಿಯೆಗೆ ಆಸ್ತಿ ಮಾಲೀಕರೊಂದಿಗೆ ಮಾತುಕತೆ ನಡೆಸಿ, ಶೀಘ್ರ ಕಾಮಗಾರಿ ಪ್ರಾರಂಭಿಸುವಂತೆ ಬಿಬಿಎಂಪಿ ಮುಖ್ಯ ರಸ್ತೆ ಕಾರ್ಯನಿರ್ವಾಹಕ ಅಭಿಯಂತರರಿಗೆ ಲಿಂಬಾವಳಿ ಸೂಚನೆ ನೀಡದರು.

ಭೇಟಿ ವೇಳೆ ಗ್ರಾಮಾಂತರ ಮಂಡಲದ ಅಧ್ಯಕ್ಷ ಎಚ್.ಎಸ್.ಪಿಳ್ಳಪ್ಪ, ಶ್ರೀಧರ್ ರೆಡ್ಡಿ, ಮಾಜಿ ಅಧ್ಯಕ್ಷ ಮನೋಹರ ರೆಡ್ಡಿ, ಬಿ.ಎನ್.ನಟರಾಜ್, ಕಣ್ಣೂರು ಪಂಚಾಯತ್ ಅಧ್ಯಕ್ಷ ಅಶೋಕ್ ಉಪಸ್ಥಿತರಿದ್ದರು.



ಮಹದೇವಪುರ ಕ್ಷೇತ್ರದ ಮಳೆ ಹಾನಿ ಪ್ರದೇಶಗಳಿಗೆ ಮಾಜಿ ಸಚಿವ ಅರವಿಂದ ಲಿಂಬಾವಳಿ ಹಾಗೂ ಶಾಸಕಿ ಮಂಜುಳಾ ಅರವಿಂದ ಲಿಂಬಾವಳಿ ವಿವಿಧ ಇಲಾಖೆಯ ಅಧಿಕಾರಿಗಳೊಂದಿಗೆ ಪರಿವೀಕ್ಷಣೆ ನಡೆಸಿ, ಸ್ಥಳೀಯರ ಸಮಸ್ಯೆ ಆಲಿಸಿದರು.

ಡಿಎಂ ಚಾರಿಟೇಬಲ್ ಟ್ರಸ್ಟ್ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಶಿಲ್ಪಾನಾಗ್ ವಿಶ್ವಾಸ

ಯುವ ಜನತೆಯಿಂದ ಚಾಮರಾಜನಗರಕ್ಕೆ ಅಗ್ರಸ್ಥಾನ: ಜಿಲ್ಲಾಧಿಕಾರಿ ಶಿಲ್ಪಾನಾಗ್

ಚಾಮರಾಜನಗರ: ಜಿಲ್ಲೆಯ ನೈಸರ್ಗಿಕ ಸಂಪತ್ತನ್ನು ಸಕಾರಾತ್ಮಕ ರೀತಿಯಲ್ಲಿ ಸದ್ಬಳಕೆ ಮಾಡಿದರೆ ಹಿಂದುಳಿದ ಚಾಮರಾಜನಗರ ಜಿಲ್ಲೆಯನ್ನು ಅಗ್ರಸ್ಥಾನಕ್ಕೆ ಕೊಂಡೊಯ್ಯಬಹುದು ಎಂದು ಜಿಲ್ಲಾಧಿಕಾರಿ ಶಿಲ್ಪಾನಾಗ್ ವಿಶ್ವಾಸ ವ್ಯಕ್ತಪಡಿಸಿದರು.

ಸಂತೇಮರಹಳ್ಳಿಯಲ್ಲಿ ಡಿ ಎಂ ಚಾರಿಟಬಲ್ ಟ್ರಸ್ಟ್ ಶುಕ್ರವಾರ ಏರ್ಪಡಿಸಿದ್ದ ವಿವಿಧ ಕೌಶಲ್ಯ ತರಬೇತಿ ಪಡೆದವರಿಗೆ ಪ್ರಮಾಣ ಪತ್ರ ವಿತರಿಸಿ ಅವರು ಮಾತನಾಡಿ, ಚಾಮರಾಜನಗರ ಜಿಲ್ಲೆಯನ್ನು ಅಗ್ರಸ್ಥಾನಕ್ಕೆ ಕೊಂಡೊಯ್ಯುವ ಅವಕಾಶ ಇಂದಿನ ಯುವಜನತೆ ಕೈಯಲ್ಲಿದೆ ಎಂದು ಅವರು ಹೇಳಿದರು.

ಜಿಲ್ಲೆಯಲ್ಲಿ ಅರಣ್ಯ, ಖನಿಜ, ಫಲವತ್ತಾದ ಮಣ್ಣು ಸೇರಿದಂತೆ ಅಪಾರ ಪ್ರಮಾಣದ ನೈಸರ್ಗಿಕ ಸಂಪತ್ತು ಇದೆ. ಇದನ್ನು ಉತ್ತಮ ರೀತಿಯಲ್ಲಿ ಸದ್ಬಳಕೆ ಮಾಡಿಕೊಂಡರೆ ಜಿಲ್ಲೆಯನ್ನು ರಾಜ್ಯದಲ್ಲೇ ಉನ್ನತ ಸ್ಥಾನಕ್ಕೆ ಏರುವಂತ ಮಾಡಬಹುದು. ಆದರೆ ಇದಕ್ಕೆ ಯುವಜನತೆ ಮನಸ್ಸು ಮಾಡಬೇಕು ಅವರು ತಮ್ಮಲ್ಲಿರುವ ನಕಾರಾತ್ಮಕ ಚಿಂತನೆಗಳನ್ನು ಬಿಟ್ಟು ಸಕಾರಾತ್ಮಕ ಚಿಂತನೆ ಬೆಳೆಸಿಕೊಳ್ಳಬೇಕು. ಸರಕಾರದಿಂದ ಸಮಾಜದಿಂದ ನನಗೇನು ಸಿಗುತ್ತದೆ ಎನ್ನುವ ಬದಲು, ಸಮಾಜಕ್ಕೆ ನಾನು ಏನು ಕೊಡಬೇಕು ಎನ್ನುವ ನಿಟ್ಟಿನಲ್ಲಿ ಕೆಲಸ ಮಾಡಿದರೆ ನಿಜಕ್ಕೂ ಜಿಲ್ಲೆ ಅಭಿವೃದ್ಧಿ ಸಾಧ್ಯವಿದೆ ಎಂದು ಅಭಿಪ್ರಾಯಪಟ್ಟರು.

ನಾನು ಅನೇಕ ಕಡೆ ಸೇವೆ ಸಲ್ಲಿಸಿದ್ದೇನೆ. ಆದರೆ ಚಾಮರಾಜನಗರದಲ್ಲಿ ಜಿಲ್ಲಾಧಿಕಾರಿಯಾಗಿ ಸೇವೆ ಮಾಡುತ್ತಿರುವುದು ನಿಜಕ್ಕೂ ಸಂತಸವಾಗಿದೆ. ಜಿಲ್ಲೆಯಲ್ಲಿ ಸಾಕಷ್ಟು ಗಮನಾರ್ಹ ಕೆಲಸಗಳು ಆಗಿವೆ. ಹಾಗೆಯೇ ಇನ್ನು ಅನೇಕ ಅಭಿವೃದ್ಧಿ ಕೆಲಸಗಳು ಆಗಬೇಕಿದೆ. ಇದೆಲ್ಲದಕ್ಕೂ ಜಿಲ್ಲೆಯ ಯುವ ಜನತೆ ಸಹಕಾರ ಅತ್ಯಗತ್ಯ ಎಂದು ಶಿಲ್ಪಾನಾಗ್ ಅವರು ನುಡಿದರು.

ಶಿಕ್ಷಣ ಇಲಾಖೆ ಉಪ ನಿರ್ದೇಶಕರಾದ ರಾಮಚಂದ್ರ ರಾಜೇ ಅರಸ್ ಹಾಗೂ ರಾಜ್ಯ ಶಿಕ್ಷಕರ ಸಂಘದ ಸಂಘಟನಾ ಕಾರ್ಯದರ್ಶಿ ಕೆ ನಾಗರಾಜು ಮಾತನಾಡಿದರು. ಇದೇವೇಳೆ ಜಿಲ್ಲಾಧಿಕಾರಿಗಳ ಆಪ್ತ ಸಹಾಯಕರಾದ ಭರತ್ ಭೂಷಣ್, ಗ್ರಾಮ ಅಭಿವೃದ್ಧಿ ಅಧಿಕಾರಿ ನಾಗೇಶ್ ಮೂರ್ತಿ, ನೃತ್ಯ ಸಂಯೋಜಕ ಅವಿನಾಶ್ ಅವರನ್ನು ಜಿಲ್ಲಾಧಿಕಾರಿ ಅವರು ಸನ್ಮಾನಿಸಿದರು.

ಇದಕ್ಕೂ ಮುನ್ನ ಶಿಲ್ಪಾನಾಗ್ ಅವರು, ಎಸ್ ಎಸ್ ಎಲ್ ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕಗಳಿಸಿದ ಸಾಧಕ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ವಿತರಿಸಿದರು. ಡಿಎಂ ಚಾರಿಟೇಬಲ್ ಟ್ರಸ್ಟ್ ನ ಗೌರವ ಸಲಹೆಗಾರರಾದ ಜೈ ಶಂಕರ್, ಪೋಷಕ ಎಂ. ರಾಜು ಹಾಜರಿದ್ದರು.

ಸಂತೇಮರಹಳ್ಳಿಯಲ್ಲಿ ಡಿ ಎಂ ಚಾರಿಟಬಲ್ ಟ್ರಸ್ಟ್ ಶುಕ್ರವಾರ ಏರ್ಪಡಿಸಿದ್ದ ವಿವಿಧ ಕೌಶಲ್ಯ ತರಬೇತಿ ಕಾರ್ಯಕ್ರಮವನ್ನುಜಿಲ್ಲಾಧಿಕಾರಿ ಶಿಲ್ಪಾನಾಗ್ ಉದ್ಘಾಟಿಸಿದರು.

ಡಿ. ಎಂ. ಚಾರಿಟಬಲ್ ಟ್ರಸ್ಟ್ ಗ್ರಾಮೀಣ ಹಾಗೂ ಬಡ ವಿದ್ಯಾರ್ಥಿಗಳಲ್ಲಿ ಹಾಗೂ ಯುವ ಜನತೆಯಲ್ಲಿ ಕೌಶಲ್ಯ ಅಭಿವೃದ್ಧಿ ಮಾಡುವ ಕೆಲಸವನ್ನು ಬಹಳ ಅಚ್ಚುಕಟ್ಟಾಗಿ ಹಾಗೂ ಸಾಮಾಜಿಕ ಬದ್ಧತೆಯೊಂದಿಗೆ ನಡೆಸುತ್ತಿದ್ದು ಇದಕ್ಕೆ ಕೌಶಲ್ಯಾಭಿವೃದ್ಧಿ ಇಲಾಖೆಯಿಂದ ಅನೇಕ ಸವಲತ್ತುಗಳು ಸಿಗಬೇಕಾಗಿದೆ. ಆ ನಿಟ್ಟಿನಲ್ಲಿ ಜಿಲ್ಲಾಡಳಿತ ಎಲ್ಲಾ ರೀತಿಯ ಸಹಕಾರ ನೀಡಲಿದೆ.

-ಶಿಲ್ಪಾನಾಗ್, ಜಿಲ್ಲಾಧಿಕಾರಿ



ಬಿ.ವಿ.ಮಹೇಶ್ ಚಂದ್ರ

1947ರಲ್ಲಿ ದೇಶ ವಿಭಜನೆ ಆದಾಗಿನಿಂದಲೂ ಜಮ್ಮು-ಕಾಶ್ಮೀರ ಭಾರತದ ಉಳಿದ ಭಾಗಗಳ ಜತೆ ನಿರಂತರವಾಗಿ ಜೋಡಿಸಿಕೊಂಡಿದ್ದೇ ಇಲ್ಲ. ಸಂವಿಧಾನದ ವಿಧಿ 370ರ ಅನ್ವಯ ಕಣಿವೆ ರಾಜ್ಯಕ್ಕೆ ವಿಶೇಷ ಸ್ಥಾನಮಾನ ಸಿಕ್ಕಿದ್ದು ಕೂಡಾ ಸೇಬು ಹಣ್ಣು, ಕೇಸರಿ ಬೆಳೆಗೆ, ಪಸ್ಮಿನಾ ಶಾಲ್‌ಗೆ, ಪ್ರವಾಸೋದ್ಯಕ್ಕೆ, ಚಲನ ಚಿತ್ರಗಳ ಚಿತ್ರೀಕರಣಕ್ಕೆ ಪ್ರಖ್ಯಾತವಾದ ಈ ನೆಲ, ಹಿಂದೂಸ್ತಾನದ ಜತೆಗೆ ಸೇರಿಕೊಂಡಿದ್ದಕ್ಕಿಂತಲೂ ಪ್ರತ್ಯೇಕವಾಗಿ ಗುರುತಿಸಿಕೊಂಡಿದ್ದೇ ಅಧಿಕ.

43 ಸಾವಿರ ಕೋಟಿ ರು. ವೆಚ್ಚ

ವಿಶ್ವದ ಅತ್ಯಂತ ಎತ್ತರ ಪ್ರದೇಶದ ರೈಲು ಮಾರ್ಗದ ಸೇತುವೆ ಎನಿಸಿಕೊಂಡಿರುವ ಚೆನಾಬ್ ಸೇತುವೆ ಒಳಗೊಂಡಂತೆ 'ಯುಎಸ್‌ಬಿಆರ್‌ಎಲ್'ನ ಈ ರೈಲು ಮಾರ್ಗದ ನಿರ್ಮಾಣಕ್ಕೆ 43 ಸಾವಿರ ಕೋಟಿ ರು.ಗೂ ಅಧಿಕ ಮೊತ್ತ ವೆಚ್ಚ ಮಾಡಲಾಗಿದೆ. ಈ ರೈಲು ಮಾರ್ಗದಲ್ಲಿ ಅತ್ಯಂತ ಎತ್ತರದ ಚೆನಾಬ್ ಸೇತುವೆಯಷ್ಟೇ ಅಲ್ಲ, ಆಳವಾದ ಸುರಂಗಗಳು, ಮೇಲು ಸೇತುವೆಗಳೂ ನಿರ್ಮಾಣಗೊಂಡಿವೆ. ಈ ರೈಲು ಮಾರ್ಗದಲ್ಲಿನ ಶೇ.90 ಭಾಗ 943 ಸೇತುವೆಗಳ ಮೇಲೆಯೇ ಸಾಗುತ್ತದೆ. 36 ಸುರಂಗಗಳ ಒಳಗೇ ಸಾಗುತ್ತದೆ. ಈ ರೈಲು ಮಾರ್ಗದಲ್ಲಿನ ಅತ್ಯಂತ ದೊಡ್ಡದಾದ 'ಟಿ-50' ಸುರಂಗದ ಉದ್ದವೇ 12.7 ಕಿಮೀಗಳಷ್ಟು ದೀರ್ಘವಾಗಿದೆ. ಈ ರೈಲು ಮಾರ್ಗದಲ್ಲಿನ ಮತ್ತೊಂದು ವಿಶೇಷ ವೆಂದರೆ ಅಂಜಿ ಖಾದ್ ಸೇತುವೆ. 725 ಮೀಟರ್‌ಗಳಷ್ಟು ಉದ್ದವಾದ ಈ ತೂಗು ಸೇತುವೆಯು ವಿಶ್ವದಲ್ಲೇ ಅತ್ಯಂತ ಎತ್ತರದ ಪ್ರದೇಶದಲ್ಲಿ ಉಕ್ಕಿನ ರೈಲ್ವೆ ಸೇತುವೆ ಜಮ್ಮು-ಕಾಶ್ಮೀರದಲ್ಲಿ ನಿರ್ಮಾಣ ಗೊಂಡು ಜನಮೆಚ್ಚುಗೆ ಗಳಿಸಿದೆ. ಇಂಜಿನಿಯರಿಂಗ್ ಕ್ಷೇತ್ರಕ್ಕೆ ಸವಾಲೆನಿಸುವಂತೆ ಇರುವ 'ಚೆನಾಬ್ ಸೇತುವೆ' ಮಾನವ ಶಕ್ತಿ ಮತ್ತು ಪ್ರಯತ್ನಕ್ಕೆ ಉತ್ತಮ ಉದಾಹರಣೆಯಾಗಿಯೂ ಇದೆ. ಈ ನೆಲದ ಮತ್ತೊಂದು ವಿಸ್ಮಯವೂ ಆಗಿದೆ.

ಮೋದಿ ಜಮ್ಮು-ಕಾಶ್ಮೀರದ ಕತ್ರಾದಿಂದ ಶ್ರೀನಗರಕ್ಕೆ ವಂದೇ ಭಾರತ್ ರೈಲಿನ ಮೊದಲ ಸಂಚಾರಕ್ಕೆ ಶುಕ್ರ ವಾರ ಹಸಿರು ನಿಶಾನೆಗೆ ಬದಲಾಗಿ 'ತ್ರಿವರ್ಣ ಧ್ವಜ' ತೋರಿದರು.

ವಂದೇ ಭಾರತ್ ಎಂದ ಪ್ರೇಮ ಕಾಶ್ಮೀರ!

- ದೇಶದ ಪ್ರಮುಖ ನಗರಗಳನ್ನು ಜಮ್ಮು- ಕಾಶ್ಮೀರಕ್ಕೆ ಜೋಡಿಸುವ ವಂದೇ ಭಾರತ್ ರೈಲು ಸಂಚಾರ ಆರಂಭ
- ಪ್ರಧಾನಿ ನರೇಂದ್ರ ಮೋದಿ ಅವರಿಂದ ಜಮ್ಮು-ಕಾಶ್ಮೀರದ ಮೊದಲ ವಂದೇ ಬಾರತ್ ರೈಲಿಗೆ ಹಸಿರು ನಿಶಾನೆ

ಈಗ 'ಚೆನಾಬ್ ಉಕ್ಕಿನ ಸೇತುವೆ' ನಿರ್ಮಾಣ ಆಗಿರುವುದರಿಂದ ದೇಶದ ದಕ್ಷಿಣದ ತುದಿಯ ಕನ್ಯಾಕುಮಾರಿಯಿಂದ ಉತ್ತರದ ತುದಿಯ ಕಾಶ್ಮೀರದ ವರೆಗೂ ನೇರ ರೈಲು ಸಂಚಾರಕ್ಕೆ ಅವಕಾಶವಾಗಿದೆ. ಅಲ್ಲದೇ, ಪೂರ್ವದ ಬಂಗಾಳ ಕೊಲ್ಲಿ ಸಮೀಪದ ನಗರದಿಂದ, ಪಶ್ಚಿಮದ ಗುಜರಾತ್‌ನ ಬಂದರು ನಗರ ದಿಂದಲೂ ಹಿಮಾಲಯದ ತಪ್ಪಲಿನ ಜಮ್ಮು-ಕಾಶ್ಮೀರದ ರಾಜಧಾನಿ ಶ್ರೀನಗರ ಸೇರಿದಂತೆ ವಿವಿಧ ನಗರಗಳಿಗೆ ನೇರ ರೈಲು ಸಂಪರ್ಕ ಸಾಧ್ಯವಾಗಿದೆ.

ಜಮ್ಮು-ಕಾಶ್ಮೀರದ ಕತ್ರಾ ರೈಲು ನಿಲ್ದಾಣದಿಂದ ಶ್ರೀನಗರಕ್ಕೆ ಸಂಚರಿಸಿದ ಮೊದಲ ವಂದೇ ಭಾರತ್ ರೈಲಿನ ಪ್ರಯಾಣಿಕರಿಗೆ ಪ್ರಧಾನಿ ಮೋದಿ ಕೈಬೀಸಿ ಶುಭ ಹಾರೈಸಿದರು. ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಜತೆಗಿದ್ದರು.

ಭಾರತೀಯ ರೈಲ್ವೆಯ ಅತಿ ವೇಗದ ರೈಲು 'ವಂದೇ ಭಾರತ್' ಜಮ್ಮು-ಕಾಶ್ಮೀರವನ್ನು ದೇಶದ ಹಲವು ಪ್ರಮುಖ ನಗರಗಳ ಜತೆಗೆ ಜೋಡಿಸುತ್ತಿದೆ. ಭಾರತದ ಪದತಳದ ನಗರಿ ತಮಿಳುನಾಡಿನ ಕನ್ಯಾಕುಮಾರಿಯಿಂದ ಕಾಶ್ಮೀರದ ಶ್ರೀನಗರಕ್ಕೆ ನೇರ ರೈಲು ಸಂಪರ್ಕ ಈಗ ಸಾಧ್ಯವಾಗಿದೆ. ಶುಕ್ರವಾರ ಜಮ್ಮು-ಕಾಶ್ಮೀರದ ಕತ್ರಾ, ರೈಲು ನಿಲ್ದಾಣದಿಂದ ಶ್ರೀನಗರಕ್ಕೆ ಮೊದಲ ಸಂಚಾರ ನಡೆಸಿದ ವಂದೇ ಭಾರತ್ ರೈಲಿಗೆ ಪ್ರಧಾನಿ ನರೇಂದ್ರ ಮೋದಿ ಹಸಿರು ನಿಶಾನೆ ತೋರಿದರು. ಈ ಸಂದರ್ಭ ಜಮ್ಮು-ಕಾಶ್ಮೀರ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಹಾಜರಿದ್ದರು.

2022ರ ಆಗಸ್ಟ್‌ನಲ್ಲಿ ಚೆನಾಬ್ ಲೋಹದ ಸೇತುವೆಯ ಕಾಮಗಾರಿ ಪೂರ್ಣಗೊಂಡಿತು. ನಂತರದಲ್ಲಿ ರೈಲು ಮಾರ್ಗದ ನಿರ್ಮಾಣ ನಡೆಯಿತು. 2025ರ ಏಪ್ರಿಲ್ 19ರಂದು ಚೆನಾಬ್ ರೈಲ್ವೆ ಸೇತುವೆ ಪೂರ್ಣ ಪ್ರಮಾಣದ ಬಳಕೆಗೆ ಸಜ್ಜುಗೊಂಡಿತು. ಇದೀಗ ಜೂನ್ 6ರಂದು ವಂದೇ ಭಾರತ್ ಶರವೇಗದ ರೈಲು ಸಂಚಾರವೂ ಆರಂಭಗೊಂಡಿದೆ. ಭಾರತದ ಉಳಿದ ನಗರಗಳು ಜಮ್ಮು-ಕಾಶ್ಮೀರಕ್ಕೆ ಭಾರತೀಯ ರೈಲ್ವೆಯ ವಿವಿಧ ರೈಲುಗಾಡಿಗಳ ಮೂಲಕ ಕಡಿಮೆ ವೆಚ್ಚದಲ್ಲಿ ಸರಾಗ ಸಂಚಾರ ಮಾಡಬಹುದಾಗಿದೆ.

ಚೆನಾಬ್ ಸೇತುವೆ ಆಯುಷ್ಯ 120 ವರ್ಷ !

ಜಮ್ಮು-ಕಾಶ್ಮೀರದಲ್ಲಿ ಆಳವಾದ ಕಣಿವೆಗಳಲ್ಲಿ ಹರಿಯುವ ಚೆನಾಬ್ ನದಿಯಿಂದ 359 ಮೀಟರ್ (1178 ಅಡಿಗಳು) ಎತ್ತರದಲ್ಲಿ ಚೆನಾಬ್ ಸೇತುವೆ ನಿರ್ಮಾಣವಾಗಿದೆ. ಉಕ್ಕು ಮತ್ತು ಕಾಂಕ್ರೀಟ್ ಬಳಸಿ ನಿರ್ಮಿಸಲಾಗಿರುವ ಚೆನಾಬ್ ಸೇತುವೆಯ ಆಕರ್ಷಣೆಯೆಂದರೆ ಸೇತುವೆ ನಡುಮಧ್ಯ ಭಾಗದಲ್ಲಿ ವಿನ್ಯಾಸಗೊಂಡಿರುವ 'ಕಾಮನ ಬಿಲ್ಲಿನ' ಆಕಾರದ ಉಕ್ಕಿನ ಜೋಡಣೆ. ಇದುವೇ ಭಾರತೀಯ ಇಂಜಿನಿಯರುಗಳ ಕೌಶಲ ಮತ್ತು ಚಾಣಾಕ್ಷತೆಗೆ ಸಾಕ್ಷಿಯಾಗಿದೆ. ಈ ಸೇತುವೆ ಒಟ್ಟಾರೆ 1315 ಮೀಟರ್(4314 ಅಡಿ)ಗಳಷ್ಟು ಉದ್ದವಿದೆ. 17 ಉಕ್ಕಿನ ಕಂಬಗಳ ಮೇಲೆ ಈ ಸೇತುವೆಯನ್ನು ಜೋಡಿಸಲಾಗಿದೆ. ಸೇತುವೆ ಅದೆಷ್ಟು ಬಲಿಷ್ಠವಾಗಿದೆ ಎಂದರೆ ಗಂಟೆಗೆ 266 ಕಿಮೀಗಳಷ್ಟು ವೇಗದಲ್ಲಿ ಬಿರುಗಾಳಿ ಬೀಸಿದರೂ ಸೇತುವೆ ಅಲುಗಾಡದು. ಅಲ್ಲದೇ, ರಿಕ್ಟರ್ ಮಾಪಕದಲ್ಲಿ 8 ಮ್ಯಾಗ್ನಿಟ್ಯೂಡ್‌ಗಳಷ್ಟು ತೀವ್ರ ಸ್ವರೂಪದ ಭೂಕಂಪನವಾದರೂ ಸೇತುವೆಗೆ ಯಾವುದೇ ಹಾನಿ ಯಾಗದು. ಯಾವುದೇ ಕಂಪನ, ಸ್ಫೋಟಗಳಿಗೂ ಅಲುಗಾಡದಂತೆ ಬಲವಾಗಿ ಜೋಡಣೆ ಮಾಡಲಾಗಿದೆ. ಅಷ್ಟೊಂದು ಗರಿಷ್ಠ ಮಟ್ಟದ ಸಾಮರ್ಥ್ಯವನ್ನು ಈ ಉಕ್ಕಿನ ಸೇತುವೆಗೆ ನೀಡಲಾಗಿದೆ. ಹಾಗಾಗಿಯೇ 'ಈ ಸೇತುವೆಯ ಆಯುಷ್ಯ 120 ವರ್ಷಗಳಷ್ಟು ಸುದೀರ್ಘ' ಎಂದು ಇಂಜಿನಿಯರ್‌ಗಳು ಬಲು ವಿಶ್ವಾಸದಿಂದ ಹೇಳಿದ್ದಾರೆ.

ನೆಲ ಮಟ್ಟದಿಂದ 331 ಮೀಟರ್‌ಗಳಷ್ಟು ಎತ್ತರದಲ್ಲಿದೆ. ಈ ತೂಗು ಸೇತುವೆಯನ್ನು 96 ಬಲಿಷ್ಠವಾದ ಕೇಬಲ್‌ಗಳು ಎತ್ತಿ ಹಿಡಿದುಕೊಂಡಿವೆ.

ಅಸಾಧ್ಯವೆನಿಸಿದ್ದು ಸಾಧ್ಯವಾಗಿದೆ!

ರೈಲ್ವೆ ಸಂಪರ್ಕವೇ ಅಸಾಧ್ಯ ಎನ್ನುವಂತಹ ಭೂ ವಿನ್ಯಾಸವನ್ನು ಹೊಂದಿರುವ ಈ ಪ್ರದೇಶದಲ್ಲಿ ಎತ್ತರವಾದ ಪರ್ವತಗಳು, ಆಳವಾದ ಕಣಿವೆಗಳೇ ಎಲ್ಲೆಲ್ಲೂ ಇವೆ. ಹಾಗಾಗಿ ರಸ್ತೆ ಸಂಪರ್ಕ ಕಷ್ಟಸಾಧ್ಯವಾಗಿದೆ. ರೈಲ್ವೆ ಸಂಪರ್ಕವಂತೂ ವಿರಳವಾಗಿಯಷ್ಟೇ ಇದೆ. ಜಮ್ಮು-ಕಾಶ್ಮೀರಕ್ಕೆ ದೇಶದ ವಿವಿಧೆಡೆಯ ಜನರು ತೆರಳಬೇಕೆಂದರೆ ಒಂದೋ ವಾಯುಮಾರ್ಗ ಆಶ್ರಯಿಸಬೇಕು, ಇಲ್ಲವೇ ರಸ್ತೆ ಮಾರ್ಗದಲ್ಲೇ ಏರಿಳಿತ ಹಾದಿಗಳಲ್ಲಿ ದೀರ್ಘ ಪಯಣ ಮಾಡಬೇಕು. ನೇರವಾದ ರೈಲು ಸಂಚಾರಕ್ಕೆ ಬಹಳ ಕಡಿಮೆ ಅವಕಾಶ. ಇತ್ತೀಚೆಗೆ



ಕನ್ಯಾಕುಮಾರಿಯಿಂದ ಕಾಶ್ಮೀರವನ್ನು ಸಂಪರ್ಕಿಸುವ ರೈಲು ಮಾರ್ಗದ ನಕ್ಷೆ

15 ವರ್ಷಕ್ಕೊಮ್ಮೆ ಬಣ್ಣ!

ಈ ಸೇತುವೆಯ ಉಕ್ಕಿನ ಭಾಗಗಳಿಗೆ ಬಳಿಯಲಾಗಿರುವ ಬಣ್ಣಗಳು ಶ್ರೇಷ್ಠ ದರ್ಜೆಯವಾಗಿದ್ದು, 15 ವರ್ಷಗಳವರೆಗೂ ಬಾಳಿಕೆ ಬರುತ್ತವೆ. ಸೇತುವೆಯಲ್ಲಿನ ಉಕ್ಕಿನ ಜೋಡಣೆಗಳು, ನಟ್-ಬೋಲ್ಟ್‌ಗಳು 15 ವರ್ಷಗಳವರೆಗೂ ತುಕ್ಕು ಹಿಡಿಯದಂತೆ ಕಾಪಾಡುತ್ತವೆ. ಗಾಳಿ-ಮಳೆ-ಹಿಮದಿಂದ ಸೇತುವೆ ಹಾಳಾಗದಂತೆ ರಕ್ಷಿಸಬಲ್ಲವಾಗಿವೆ. ಹಿಮಾಲಯದ ತಪ್ಪಲಿನ ಹಿಮಪಾತ, ಶೀತಲ ಗಾಳಿ, ಮಳೆ, ನಿರಂತರ ತೇವಾಂಶದ ವಾತಾವರಣದಲ್ಲಿ ಸೇತುವೆಯ ಉಕ್ಕಿನ ಜೋಡಣೆಗಳು ಹಾನಿಗೀಡಾದಂತೆ ಕಾಪಾಡಲು ಪ್ರತಿ 15 ವರ್ಷಗಳಿಗೊಮ್ಮೆ ಬಣ್ಣ ಹೊಡೆಯಬೇಕಿದೆ. ಹಾಗೆ ಮಾಡುತ್ತಾ ಸರಿಯಾದ ರೀತಿ ಯಲ್ಲಿ ನಿರ್ವಹಣೆ ಮಾಡಿದರೆ ಒಂದೂ ಕಾಲು ಶತಮಾನದವರೆಗೂ ಚೆನಾಬ್ ಸೇತುವೆ ಬಾಳಿಕೆ ಬರಲಿದೆ ಎಂದು ನಿರ್ಮಾತೃಗಳು ಹೇಳಿದ್ದಾರೆ.

ಜಮ್ಮು-ಕಾಶ್ಮೀರದಲ್ಲಿ ಭುವಿಯ ಮೇಲಿನ ಅತ್ಯಂತ ಎತ್ತರದ ಪ್ರದೇಶದಲ್ಲಿನ ಉಕ್ಕಿನ ರೈಲ್ವೆ ಸೇತುವೆಯನ್ನು ಉದ್ಘಾಟಿಸಲು, ರೈಲು ಸಂಚಾರಕ್ಕೆ ತೆರೆಯಲು ಬಹಳ ಸಂತೋಷವಾಗುತ್ತಿದೆ. ದಕ್ಷಿಣದ ತುದಿಯ ಕನ್ಯಾಕುಮಾರಿ-ಉತ್ತರದ ಕಾಶ್ಮೀರ ನಗರಗಳೆರಡೂ ಈಗ ಒಂದೇ ಸಂಪರ್ಕ ಕೊಂಡಿಯಲ್ಲಿ ಬೆಸೆದುಕೊಂಡಿವೆ. ತಾಯಿ ಭಾರತಿಯನ್ನು ಉದ್ದೇಶಿಸಿ ಹೇಳುವಾಗಲೆಲ್ಲಾ, 'ಕಾಶ್ಮೀರದಿಂದ ಕನ್ಯಾಕುಮಾರಿಯ ವರೆಗೆ...' ಎಂದು ಉದ್ಧರಿಸುತ್ತಿದ್ದೆವು. ಈಗ ಚೆನಾಬ್ ಸೇತುವೆ ದೇಶದ ಉತ್ತರ-ದಕ್ಷಿಣದ ತುದಿಗಳನ್ನು ರೈಲ್ವೆ ಮಾರ್ಗದ ಮೂಲಕ ಜೋಡಿಸಿಬಿಟ್ಟಿದೆ. ಒಂದು ಕಾಲದಲ್ಲಿ ಕನಸು ಎನಿಸಿಕೊಂಡಿದ್ದ ಸಂಗತಿ ಈಗ ನನಸಾಗಿದೆ. ನಮ್ಮ ಭಾರತೀಯ ರೈಲ್ವೆ ಈ ಕನಸನ್ನು ನನಸಾಗಿಸಿದೆ. ಸಾರ್ಥಕತೆಗೆ ಕಾರಣವಾಗಿದೆ.

-ನರೇಂದ್ರ ಮೋದಿ, ಪ್ರಧಾನ ಮಂತ್ರಿ

ಫ್ರಾನ್ಸ್‌ನ ಐಫೆಲ್ ಟವರ್‌ಗಿಂತಲೂ ಎತ್ತರ!

ಫ್ರಾನ್ಸ್ ದೇಶದ ರಾಜಧಾನಿ ಪ್ಯಾರಿಸ್‌ನಲ್ಲಿರುವ 'ಐಫೆಲ್ ಟವರ್' ಪ್ರವಾಸಿಗರ ಆಕರ್ಷಣೆಯ ಕೇಂದ್ರ ಬಿಂದುವಾಗಿದೆ. 1887-89ರ ನಡುವೆ ನಿರ್ಮಾಣ ವಾಗಿರುವ, ಉಕ್ಕಿನ ತೊಲೆಗಳು, ಸರಳುಗಳು, ನಟ್- ಬೋಲ್ಟ್‌ಗಳಿಂದಷ್ಟೇ ಜೋಡಣೆಗೊಂಡಿರುವ ಈ ಲೋಹದ ಗೋಪುರ ನೆಲದಿಂದ ತುತ್ತ ತುದಿ (ಮೊನಚು ತುದಿ)ವರೆಗೆ 330 ಮೀಟರ್‌ಗಳಷ್ಟು ಎತ್ತರವಾಗಿದೆ. ಜಮ್ಮು-ಕಾಶ್ಮೀರದ ಚೆನಾಬ್ ನದಿಯ ಎರಡು ತುದಿಗಳನ್ನು ಜೋಡಿಸುವ ಚೆನಾಬ್ ಸೇತುವೆ ಪ್ಯಾರಿಸ್‌ನ ಐಫೆಲ್ ಟವರ್ ಗಿಂತಲೂ ಎತ್ತರವಾಗಿದೆ. ನದಿ ಮಟ್ಟದಿಂದ 359 ಮೀಟರ್‌ಗಳಷ್ಟು ಎತ್ತರದಲ್ಲಿ ಚೆನಾಬ್ ಸೇತುವೆ ನಿರ್ಮಾಣಗೊಂಡಿದೆ.

2 ದಶಕಗಳ ಪರಿಶ್ರಮ

ಚೆನಾಬ್ ಸೇತುವೆಯ ನಿರ್ಮಾಣ 2004ರಲ್ಲಿ ಶುರು ವಾಗಿದ್ದು, ಸುರಕ್ಷತೆಯ ಸಮಸ್ಯೆಗಳು ಎದುರಾಗಿದ್ದ ರಿಂದ ವರ್ಷಗಳ ಕಾಲ ಕಾಮಗಾರಿ ಸ್ಥಗಿತಗೊಂಡಿತ್ತು. ಬಳಿಕ 2010ರಲ್ಲಿ ಕಾಮಗಾರಿ ಪುನಾರಂಭಗೊಂಡಿತು. 2021ರ ಏಪ್ರಿಲ್‌ನಲ್ಲಿ ಉಕ್ಕಿನ ಕಮಾನಿನ ಭಾಗಕ್ಕೆ ಡೆಕ್ ಭಾಗವನ್ನು ಯಶಸ್ವಿಯಾಗಿ ಜೋಡಿಸುವ ಕಾರ್ಯ ಆರಂಭಗೊಂಡು 2022ರ ಆಗಸ್ಟ್‌ನಲ್ಲಿ ಸಮಾಪನ ಗೊಂಡಿತು. ಒಟ್ಟಾರೆ ಸೇತುವೆಯ ನಿರ್ಮಾಣ ಕಾರ್ಯ 2024ರಲ್ಲಿ ಪೂರ್ಣಗೊಂಡಿತು.

ನಾನು 7ನೇ ತರಗತಿಯಲ್ಲಿದ್ದಾಗ ಈ ವಿಶ್ವದ ಅತಿ ಎತ್ತರದ ಸ್ಥಳದಲ್ಲಿನ ರೈಲ್ವೆ ಸೇತುವೆಯ ನಿರ್ಮಾಣ ಕಾಮಗಾರಿ ಆರಂಭಗೊಂಡಿತು. ನನ್ನ ಮಕ್ಕಳು ಕಾಲೇಜು ಓದು ಪೂರ್ಣಗೊಳಿಸುವ ಸಂದರ್ಭದಲ್ಲಿ ಪೂರ್ಣಗೊಂಡಿದೆ. ನಾನು ಮುಖ್ಯಮಂತ್ರಿ ಆಗಿರುವ ಸಂದರ್ಭದಲ್ಲಿ ಲೋಕಾರ್ಪಣೆ ಗೊಳ್ಳುತ್ತಿದೆ. ಈಗ ನಮ್ಮ ಜಮ್ಮು-ಕಾಶ್ಮೀರ ಭಾರತ ದೇಶದ ಎಲ್ಲಾ ಭಾಗಗಳ ಜತೆಗೂ ಭಾರತೀಯ ರೈಲ್ವೆಯ ಮೂಲಕ ಸರಾಗವಾದ ಸಂಪರ್ಕ ಸಾಧ್ಯವಾಗುವಂತಾಗಿದೆ. ವಂದೇ ಭಾರತ್ ರೈಲು ದೇಶದ ಪ್ರಮುಖ ನಗರಗಳನ್ನು ಜಮ್ಮು-ಕಾಶ್ಮೀರದ ಜತೆಗೆ ಜೋಡಿಸಲಿದೆ. ಜನರು 15-20 ಸಾವಿರ ರು. ವೆಚ್ಚ ಮಾಡಿ ವಿಮಾನದಲ್ಲಿ ಜಮ್ಮು-ಕಾಶ್ಮೀರಕ್ಕೆ ಬರುತ್ತಿದ್ದರು. ಈಗ ಕಡಿಮೆ ವೆಚ್ಚದಲ್ಲಿ ರೈಲಿನಲ್ಲಿ ಬರಬಹುದಾಗಿದೆ. ಶ್ರೀನಗರದಿಂದ ಕತ್ರಾ ಪ್ರದೇಶಕ್ಕೆ ರೈಲಿನಲ್ಲಿ ಕೇವಲ 4 ಗಂಟೆಗಳಲ್ಲಿ ಪ್ರಯಾಣಿಸಬಹುದಾಗಿದೆ. ಈ ರೈಲು ಮಾರ್ಗದ ಕಾರಣದಿಂದಾಗಿ ಅಮರನಾಥ ಯಾತ್ರೆಯೂ ಸರಾಗವಾಗಲಿದೆ. ಜಮ್ಮು-ಕಾಶ್ಮೀರದ ಪ್ರವಾಸೋದ್ಯಮಕ್ಕೆ ಈ ಚೆನಾಬ್ ಸೇತುವೆ ಮಹತ್ವದ ಕೊಡುಗೆ ನೀಡಲಿದೆ. ನಾನು ಇಂಥದೊಂದು ಸುದಿನಕ್ಕಾಗಿಯೇ ಎಷ್ಟೊಂದು ಸಮಯದಿಂದ ಕಾಯುತ್ತಿದ್ದೆ. ನನ್ನ ಕಾಯುವಿಕೆ ಕೊನೆಗೊಂಡಿದೆ. ಬಹಳ ಸಂತಸವಾಗುತ್ತಿದೆ.

-ಒಮರ್ ಅಬ್ದುಲ್ಲಾ, ಜಮ್ಮು-ಕಾಶ್ಮೀರ ಸಿಎಂ

- ದೀಪಾ ಮನೆ ಮಂದೆ ಓದುಗರ ಜಂಗುಳಿ
- ಅಭಿಮಾನಿಗಳ ಅಭಿನಂದನೆ ಮಹಾಪೂರ

ಮಿನುಗು ತಾರೆ ಮನೆಯ ದೀಪಾ ಕನ್ನಡಕ್ಕೆ ಬುಕರ್ ಪ್ರಶಸ್ತಿಯ ಬೆಳಕು

ಜಿಲ್ಲಾ ನೋಟ

ಅನಿಲ್ ಎಚ್.ಟಿ. ಮಡಿಕೇರಿ

'ಮಿನುಗು ತಾರೆ; ಎಂಬ ಹೆಸರಿನ ಮಡಿಕೇರಿಯ ಗುಡ್ಡದಮೇಲಿನ ಆ ಮನೆಯಲ್ಲಿ ನಿಜಕ್ಕೂ ಈಗ ತಾರಾ ಮೆರುಗಿದೆ. ಮಂಜಿನ ನಗರಿ ಮಡಿಕೇರಿ ಯಲ್ಲಿ ಸಾಹಿತ್ಯದ ಹೊಳಪು ಹೊಳೆಯುತ್ತಿದೆ. ದೀಪಾಭಾಸ್ತಿ ಎಂಬ ಮಡಿಕೇರಿ ಲೇಖಕಿಯ ಇಂಗ್ಲೀಷ್ ಬಾಷಾಂತರದ ಕೃತಿ 'ಹಾರ್ಟ್ ಲ್ಯಾಂಪ್'ಗಾಗಿ ವಿಶ್ವದ ಪ್ರತಿಷ್ಠಿತ ಪ್ರಶಸ್ತಿ ಇಂಗ್ಲಿಷ್ ಅನುವಾದಕ್ಕಾಗಿ ಸಲ್ಲುವ 'ಬುಕರ್ ಪ್ರಶಸ್ತಿ' ಲಭಿಸಿದಾಕ್ಷಣ ವಿಶ್ವವ್ಯಾಪಿ ಮಡಿಕೇರಿಯ ಹೆಸರೂ ಪ್ರಶಸ್ತಿಯೊಂದಿಗೆ ತಳುಕು ಹಾಕಿಕೊಂಡಿತ್ತು. ಪ್ರಶಸ್ತಿ ಘೋಷಣೆಯಾಗುವವರೆಗೂ ದೀಪಾಭಾಸ್ತಿಯ ಬಗ್ಗೆ ತಿಳಿದಿದ್ದವರು ಕಡಿಮೆ. ಬಹುತೇಕರಿಗೆ ಆಕೆ ಮಡಿಕೇರಿ ಮೂಲದವರು ಎಂದೇ ಗೊತ್ತಿರಲಿಲ್ಲ. ದೀಪಾ ಭಾಸ್ತಿ ಎಂಬ 42 ವರ್ಷದ ಲೇಖಕಿ ಪಾಲಿಗೆ ತವರಿನ ಮಡಿಕೇರಿ ಜಿಲ್ಲೆಯಲ್ಲಿ ಕಳೆದೊಂದು ವಾರದಿಂದ ಎಲ್ಲವೂ ಬದಲಾಗಿದೆ. ಬಾನುಮುಷ್ತಾಕ್ ಅವರ 6 ಕಥಾ ಸಂಕಲನಗಳಿಂದ 12 ಕತೆಗಳನ್ನು ಆರಿಸಿ ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ.

ಶಾಸಕ ಅಭಿನಂದನೆ

ದೀಪಾ ಭಾಸ್ತಿ ಮನೆಗೆ ಮರಳಿದ್ದಾರೆ. ಮಡಿಕೇರಿಗೆ ಬಂದಿಳಿದಿದ್ದಾರೆ. ಮಂಜು, ಗಾಳಿಯ ಆಹ್ಲಾದಕರ ಸ್ವಾಗತ ದೊರಕಿದೆ. ಮಡಿಕೇರಿ ಶಾಸಕ ಡಾ.ಮಂಥರ್ ಗೌಡ, ಸರಕಾರದ ಪರವಾಗಿ ದೀಪಾರನ್ನು ಗೌರವಿಸಿ ಆಕೆ ಮನೆಗೆ ತೆರಳುವ ಮಣ್ಣಿನ ರಸ್ತೆಯನ್ನು ಕಾಂಕ್ರೀಟ್ ರಸ್ತೆಯನ್ನಾಗಿಸಿ ಕೊಡುವ ಭರವಸೆ ನೀಡಿದ್ದಾರೆ.

ಮಾತಾಡದ ಮಹಾಮೌನಿ

ಹಾಗೆ ನೋಡಿದರೆ, ದೀಪಾಭಾಸ್ತಿ ಮಡಿಕೇರಿಯಲ್ಲಿಯೇ ಹುಟ್ಟಿ ಇಲ್ಲಿನ ಕೊಡಗು ವಿದ್ಯಾಲಯದಲ್ಲಿ, ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜಿನಲ್ಲಿ ಶಿಕ್ಷಣ ಪಡೆದಿದ್ದರೂ ಬಹುತೇಕರಿಗೆ ದೀಪಾಳ ಅಗಾಧ ಪ್ರತಿಭೆಯ ಅರಿವಿರಲಿಲ್ಲ. ತನ್ನ ಪಾಡಿಗೆ ತಾನಿದ್ದು ಬಿಡುವ ಜಾಯಮಾನದ ದೀಪಾ, ಹೊರಗೆ ಹೆಚ್ಚಾಗಿ ಕಾಣಿಸಿ ಕೊಂಡವಳಲ್ಲ. ಸಮಾರಂಭಗಳಿಗೆ ಬಂದರೂ ಮೌನವನ್ನೇ ಆಭರಣವಾಗಿಸಿಕೊಂಡು ಇದ್ದು ಬಿಡುತ್ತಿದ್ದರು. ಯಾವಾಗ ಬೂಕರ್ ಪ್ರಶಸ್ತಿ ಈ ಮಹಾ ಮೌನಿಗೆ ಪ್ರಕಟವಾಯಿತೋ ಮಡಿಕೇರಿಯ ದೀಪಾ ಎಲ್ಲ ಕಡೆ ಮಿನುಗಿದಳು.

'ದೀಪಾ.. ಸಾರ್.. ಈಕೆ ನಮ್ ಶಾಪ್‌ಗೆ ಬರ್ತಾ ಇದ್ದರು. ದೀಪಾ ಇವರೇನಾ.. ಅಯ್ಯೋ ನಮ್ಮ ಏರಿಯಾದಲ್ಲಿಯೇ ಇದ್ದಾರಲ್ವ? ದೀಪಾ? ರೈಟರ್ ಅಂತಾನೇ ಗೊತ್ತಿರಲಿಲ್ಲ' ಎಂಬ ಉದ್ಗಾರಗಳು ಕೇಳಿ ಬರತೊಡಗಿವೆ. ದೀಪಾ ಅತ್ಯುತ್ತಮ ಇಂಗ್ಲೀಷ್ ಲೇಖಕಿ ಎಂದು ಗೊತ್ತಾಗಲು ಆಕೆಗೆ ಬೂಕರ್ ಬರಬೇಕಾಯಿತು...!



ದೀಪಾಭಾಸ್ತಿ ಅವರ ಶಾಸಕ ಡಾ.ಮಂಥರ್ ಗೌಡ ಜತೆ ಸಾಹಿತ್ಯ ಮಾತುಕತೆ.

ಪರಿಸರ ಸ್ನೇಹಿ ಕುಟೀರ

ಚೆಟ್ಟೀರ ನಾಣಯ್ಯ ಅವರ ಜತೆ ದಾಂಪತ್ಯ ಜೀವನ ನಡೆಸುತ್ತಿರುವ ದೀಪಾಳ ಮಡಿಕೇರಿಯ ಮನೆ ನೋಡುವುದೇ ಒಂದು ಚೆಂದ. ಗುಡ್ಡದ ಮೇಲೆ ಹಸಿರಿನ ಸುತ್ತ ಇಟ್ಟಿಗೆ ಬಳಸಿ ಪರಿಸರ ಸ್ನೇಹಿ ಕುಟೀರ ಕಟ್ಟಿಕೊಂಡು ಸಾಹಿತ್ಯದ ಬೆಚ್ಚನೆ ಸುಖ ಅನುಭವಿಸುತ್ತಿದ್ದಾರೆ. ಪುಟ್ಟ ಕೋಣೆಯಲ್ಲಿ ಕುಳಿತು 'ಹಾರ್ಟ್ ಲ್ಯಾಂಪ್' ಕೃತಿ ಅನುವಾದಿಸಿದ ದೀಪಾಳ ಶ್ರಮ ಸಾರ್ಥಕವಾಗಿದೆ. ಯಾರೂ ನಿರೀಕ್ಷಿಸಿರದ ರೀತಿ ದೀಪಾ ಭಾರತದ ಸಾಹಿತ್ಯ ಕೀರ್ತಿ ವಿಶ್ವವ್ಯಾಪಿ ಸಾರಿದ್ದಾರೆ. ಅನುದಾದಿತ ಕೃತಿಯ ನಿಜವಾದ ಶಕ್ತಿ ಏನೆಂಬುದನ್ನು ಜಗತ್ತಿನ ಮುಂದೆ ಬೆಳಗಿದ್ದಾರೆ.

ಬುಕರ್‌ನ ಅಹಂ ಇಲ್ಲ

ಮಡಿಕೇರಿಯ ದೀಪಾಳ ಮನೆ ಮಂದೆ ಜಂಗುಳಿಯಿದೆ. ಗೊತ್ತಿದ್ದವರು, ಗೊತ್ತಿಲ್ಲದವರು ಎಲ್ಲರೂ ಶಾಲು, ಹಾರ ಹಿಡಿದು, ಹಣ್ಣಿನ ಬುಟ್ಟಿಯೊಂದಿಗೆ ತೆರಳಿ ದೀಪಾಳಿಗೆ ನೀಡಿ ಫೋಟೋ, ಸೆಲ್ಫಿ ತೆಗೆದುಕೊಂಡು ಸಂಭ್ರಮಿಸುತ್ತಿರುವ ದೃಶ್ಯ ಸಾಮಾನ್ಯವಾಗಿದೆ. ಮೊದಲು ಹೇಗಿದ್ದಳೋ ಹಾಗೇ, ಒಂದಿನಿತು ಬದಲಾಗದಂತೆ, ಬುಕರ್ ಬಂದದ್ದು ತನಗೆ ಅಲ್ಲವೇ ಅಲ್ಲ ಎಂಬಂತೆ ಸ್ಥಿತಪ್ರಜ್ಞೆ ಕಾಯ್ದುಕೊಂಡಿದ್ದಾರೆ.

ಮತ್ತೆ ಲಂಡನ್‌ಗೆ

ಈ ತಿಂಗಳ ಎರಡನೇ ವಾರ ದೀಪಾ ಲಂಡನ್‌ಗೆ ಮತ್ತೆ ಹಾರಿ ಹೋಗಲಿದ್ದಾರೆ. ಕೃತಿ ಕುರಿತ ವಿಚಾರಗೋಷ್ಠಿಗಳಲ್ಲಿ ಪಾಲ್ಗೊಳ್ಳಲಿದ್ದಾರೆ. ಮಡಿಕೇರಿಯ ಜ್ಞಾನದೀಪ ಬೆಳಗಲಿದ್ದಾರೆ. ಇನ್ನು ಅವರ ಮುಂದಿರುವ ಸಾಹಿತ್ಯದ ಸಾಹಸಗಳೇನು ಎಂಬ ಪ್ರಶ್ನೆ ಎಲ್ಲರಲ್ಲಿಯೂ ಇದೆ. ಹೆಗ್ಗೋಡಿನ ಸಮುದ್ಯತಾ ವೆಂಕಟರಾಮು ಅವರ 'ಇದೇ ಅಂದರೆ ಇದೆ, ಇಲ್ಲ ಅಂದರೆ ಇಲ್ಲ' ಎಂಬ ಕೃತಿಯನ್ನು ಇಂಗ್ಲೀಷ್‌ಗೆ ಅನುವಾದ ಮಾಡುತ್ತಿದ್ದಾರೆ. ಜೊತೆಗೆ ತನ್ನದೇ ಇಂಗ್ಲೀಷ್ ಕೃತಿ ಬರವಣಿಗೆಯಲ್ಲಿ ಸಕ್ರಿಯರಾಗಿದ್ದಾರೆ. ಸದ್ಯ ಬರೆದದ್ದನ್ನೂ ಓದಲಾಗದಷ್ಟು ಸಮಯ ವಿಲ್ಲದಂತೆ ಮನೆಗೆ ಆಗಮಿಸುವ ಸಾಹಿತ್ಯ ಪ್ರೇಮಿಗಳ, ಹಿತೈಷಿಗಳ ಅಭಿನಂದನೆಯ ಸಡಗರದಲ್ಲಿ ಮುಳುಗಿದ್ದಾರೆ.

ಮಿನುಗು ತಾರೆ ಮನೆ

ದೀಪಾ ಅವರ ಅಜ್ಜ ಅಂದಿನ ಕಾಲದಲ್ಲಿ ಮಡಿಕೇರಿಯ ಖ್ಯಾತ ವೈದ್ಯರಾಗಿದ್ದ ಡಾ. ನಂಜುಂಡೇಶ್ವರ . ಅವರು 1963 ರಲ್ಲಿ ಗುಡ್ಡದ ಮೇಲೊಂದು ಮನೆ ಕಟ್ಟಿಸಿದ್ದರು. ಆಗಿನ ಕಾಲದಲ್ಲಿ ಒಂಟಿ ಮನೆಯದು. ಈಗಿನ ಆರ್ಮಿ ಕ್ಯಾಂಟಿನ್ ನಿಂದ ಬರುವಾಗಲೇ ಈ ಮನೆಯಲ್ಲಿ ದೀಪ ಬೆಳಗುವುದು ಕಾಣುತ್ತಿತ್ತಂತೆ. ಹೀಗಾಗಿ ಡಾ. ನಂಜುಂಡೇಶ್ವರ ತನ್ನ ಮನೆಗೆ 'ಮಿನುಗು ತಾರೆ' ಎಂದು ಹೆಸರಿಟ್ಟರು. ಯಾರಿಗೆ ಗೊತ್ತಿತ್ತು.. ಮಿನುಗು ತಾರೆಯಲ್ಲಿ ಬೆಳೆದ ಮಗುವೊಂದು ಭವಿಷ್ಯ ದಲ್ಲಿ ಜಗತ್ತಿನ ಸಾಹಿತ್ಯ ಲೋಕವನ್ನೇ ಬೆಳಗುವ ದೀಪವಾಗುತ್ತದೆ ಎಂದು..!

ಗಾಮನಗಟ್ಟಿ ಬಳಿ 46.5 ಎಕರೆ ಜಾಗ | 180 ಮನೆಗಳಿರುವ ಅಪಾರ್ಟ್‌ಮೆಂಟ್

ಕೆಐಎಡಿಬಿ ಅಧಿಕಾರಿಗಳ ಯಡವಟ್ಟು ಮೂಲ ಸೌಲಭ್ಯಗಳಿಲ್ಲದ ಮನೆಗಳು

ಜಿಲ್ಲಾ ನೋಟ

ವಸೀಮ ಭಾವಿಮನಿ, ಧಾರವಾಡ

'ಮನೆ ಕಟ್ಟಿ ನೋಡಿ ಮದುವೆ ಮಾಡಿ ನೋಡು' ಎನ್ನುವ ಗಾದೆ ಮಾತು ಎಲ್ಲರಿಗೂ ಗೊತ್ತು. ಆದ್ರೆ ಈ ಗಾದೆ ಧಾರವಾಡ ಜಿಲ್ಲೆಗೆ ಅನ್ವಯ. ಕೆಐಎಡಿಬಿಯ ಸರಕಾರಿ ಜಾಗದಲ್ಲಿ , ಹರಾಜಿನಲ್ಲಿ ಮನೆ ಖರೀದಿ ಮಾಡಿದ ಜನರಿಗೆ ಇ - ಸ್ವತ್ತು ಮಾಡಿಕೊಳ್ಳಲಾಗದೆ ಮನೆಗಳಿಗೆ ಕರೆಂಟ್ ಹಾಗೂ ನೀರಿಲ್ಲದೇ ಪರದಾಡುವಂತಾಗಿದೆ.

ದೇವರು ಕೊಟ್ಟರೂ ಪೂಜಾರಿ ಕೊಡಲಿಲ್ಲ ಎನ್ನುವ ಹಾಗೆ ಆಗಿದೆ ಧಾರವಾಡ ಜಿಲ್ಲೆ ಪರಿಸ್ಥಿತಿ. ಒಂದೊಳ್ಳೆ ಮನೆ ಖರೀದಿ ಮಾಡಬೇಕು ಎನ್ನುವ ಕನಸು ಕಂಡಿದ್ದ ಜನರಿಗೆ ಇದೀಗ ಕೆಐಎಡಿಬಿ ಅಧಿಕಾರಿಗಳು, ಮೂಲಭೂತ ಸೌಲಭ್ಯವನ್ನು ಕೊಡದೇ ಸತಾಯಿಸುತ್ತಿದ್ದು, ಹರಾಜಿನಲ್ಲಿ ಮನೆ ಖರೀದಿ ಮಾಡಿರುವ ಜನರಿಗೆ ವಾಸಿಸುವ ಮುಂಚೆ ಯೋಚಿಸುವ ನಿರ್ಧಾರಕ್ಕೆ ಬಂದಿದ್ದಾರೆ.

180 ವಸತಿಗುಚ್ಛ

ಹುಬ್ಬಳ್ಳಿ ಧಾರವಾಡ ರಾಷ್ಟ್ರೀಯ ಹೆದ್ದಾರಿ 4ರಲ್ಲಿ ಕೇವಲ ಹೈವೆಯಿಂದ 400 ಮೀಟರ್ ಅಂತರದಲ್ಲಿ ಹುಬ್ಬಳ್ಳಿ ತಾಲೂಕಿನ ಗಾಮನಗಟ್ಟಿ ಪ್ರದೇಶದಲ್ಲಿ 46.5 ಎಕರೆ ಕೆಐಎಡಿಬಿ ಜಾಗದಲ್ಲಿ ಅಧಿಕಾರಿಗಳು, ಸುಮಾರು 180 ಮನೆಗಳನ್ನು ಅಪಾರ್ಟಮೆಂಟ್ ನಿರ್ಮಿಸಿ, ಹರಾಜಿ ಇಟ್ಟಿದ್ದಾರೆ. ಇದರಲ್ಲಿ ಬಹುತೇಕ 45 ಮನೆಗಳು ಈಗಾಗಲೇ ಹರಾಜಿನಲ್ಲಿ ಮಾರಾಟವಾಗಿವೆ.

ಸೌಲಭ್ಯಗಳಿಲ್ಲ

ಕೆಐಎಡಿಬಿ ಅಧಿಕಾರಿಗಳ ಯಡವಟನಿಂದ ಮನೆ ಸಿಕ್ಕರೂ ಸೌಲಭ್ಯಗಳಿಲ್ಲದೇ ನಿವಾಸಿಗಳು ಪರದಾಡುವಂತಾಗಿದೆ. ಎ,ಬಿ,ಸಿ,ಡಿ,ಇ,ಯಂತೆ 3 ಅಂತಸ್ತಿನ ಕಟ್ಟಡದ ಒಂದು ಅಪಾರ್ಟ್‌ಮೆಂಟಿನಲ್ಲಿ 12 ಮನೆಗಳಿದ್ದು, ಡಬಲ್ ಬೆಡ್ ರೂಮ್, ಸಿಂಗಲ್ ಬೆಡ್ ರೂಮ್ ಮನೆಗಳಿವೆ. ಇದರಂತೆ ಒಟ್ಟು 15 ಅಪಾರ್ಟ್‌ಮೆಂಟ್‌ಗಳಿವೆ. ಇದ್ಯಾವುದಕ್ಕೂ ಕರೆಂಟ್ ಹಾಗೂ ನೀರಿನ ಸೌಲಭ್ಯ ಹಾಗೂ ಇ-ಸ್ವತ್ತಿನ ಸೌಲಭ್ಯವಿಲ್ಲ.

ನೀರಿನ ಸೌಲಭ್ಯ ಮಾಡಲು ಬೋರ್ ವ್ಯವಸ್ಥೆ ಮಾಡಲಾಗುತ್ತಿದೆ. ಜೊತೆಗೆ ಕರೆಂಟ್ ವ್ಯವಸ್ಥೆ ಮಾಡಲಾಗುತ್ತಿದೆ. ಕೆಐಎಡಿಬಿಯಲ್ಲಿ ಹರಾಜಾದ ಮನೆಗಳಿಗೆ, ಇ-ಸ್ವತ್ತು ಮಾಡಿಸಿಕೊಳ್ಳುವುದು ಧಾರವಾಡವಷ್ಟೇ ಅಲ್ಲ, ರಾಜ್ಯವ್ಯಾಪಿ ಸಮಸ್ಯೆ ಇದೆ. ಈಗಾಗಲೇ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾದ ಸಂತೋಷ್‌ಲಾಡ್, ಕೆಐಎಡಿಬಿಯ ಈ ಸಮಸ್ಯೆ ಕುರಿತಾಗಿ ಅಧಿಕಾರಿಗಳೊಂದಿಗೆ ಮಾತನಾಡಿದ್ದಾರೆ. ಸಮಸ್ಯೆ ಬಗೆಹರಿಯಲಿದೆ ಎನ್ನುವ ವಿಶ್ವಾಸವಿದೆ.

-ಬಸವನಗೌಡ ಪಾಟೀಲ್
ಇಇ, ಕೆಐಎಡಿಬಿ, ಧಾರವಾಡ

2023ರಲ್ಲಿ ಹರಾಜು

'ನಾವು ಮನೆ ಖರೀದಿ ಮಾಡಬೇಕೆಂಬ ಉದ್ದೇಶದಿಂದ 2023 ರಲ್ಲಿ ಹರಾಜಿನಲ್ಲಿ ಕೆಐಎಡಿಬಿ ಅಧಿಕಾರಿಗಳು ಕರೆದಿದ್ದ ಹರಾಜಿನಲ್ಲಿ ಭಾಗವಹಿಸಿ, ಮನೆ ಖರೀದಿ ಮಾಡಿದೇವು. ಆದರೆ ಕಳೆದ 2 ವರ್ಷದಿಂದ ನಿರಂತರವಾಗಿ ತಿರುಗಾಡಿದರೂ, ಇ-ಸ್ವತ್ತು ಆಗುತ್ತಿಲ್ಲ. ಮೂಲ ಸೌಲಭ್ಯಗಳ ಸಮಸ್ಯೆ ಬಹಳಷ್ಟು ಇದೆ' ಎನ್ನುತ್ತಾರೆ ಹರಾಜಿನಲ್ಲಿ ಮನೆ ಖರೀದಿಸಿರುವ ಲಕ್ಷ್ಮೀ ಬಡಿಗೇರ.

ಕೊಂಡವರ ಅಳಲು

ನಮಗೆ ರೆಡಿಮೇಡ್ ಮನೆ ಖರೀದಿ ಮಾಡುವ ಕನಸು ಇತ್ತು. ಅದರಂತೆ ಕೆಐಎಡಿಬಿಯಲ್ಲಿ ಹರಾಜಿನಲ್ಲಿ ಮನೆ ಖರೀದಿ ಮಾಡಿದೇವು. ಆದ್ರೆ ಮನೆಗಳು ವಾಸ ಮಾಡಲು ಯೋಗ್ಯವಿಲ್ಲಾ. ನೀರಿಲ್ಲಾ. ಕರೆಂಟ್ ಇಲ್ಲಾ. ಜೋತೆಗೆ ಇ ಸ್ವತ್ತು ಕೂಡ ಇಲ್ಲಾ. ಹೀಗಾಗಿ ಸಮಸ್ಯೆಯನ್ನು ಬಗೆಹರಿಸಿಕೊಡಬೇಕೆಂದು ನಮ್ಮ ಮನವಿಯಾಗಿದೆ ಎಂದು ಅಳಲು ತೋಡಿಕೊಂಡವರು ಮನೆ ಕೊಂಡಿರುವ ಪ್ರವೀಣ ಪೋಳ.

ಹರಾಜು ಪ್ರಕ್ರಿಯೆ

ಕೆಐಎಡಿಬಿ ಅಧಿಕಾರಿಗಳು ಪತ್ರಿಕೆಯಲ್ಲಿ ಮೊದಲು ಹರಾಜು ಪ್ರಕಟಣೆ ಕೊಡುತ್ತಾರೆ. ಇದರಲ್ಲಿ ಪ್ರಾರಂಭಿಕ 8.5 ಲಕ್ಷದಿಂದ 11 ಲಕ್ಷದವರೆಗೂ ಇರುತ್ತೆ. ಇಲ್ಲಿ ಬಿಡ್ ಹೆಚ್ಚಿಗೆ ಆದಂತೆ, ಮನೆಗಳ ಹರಾಜಿನ ಬೆಲೆ ಜಾಸ್ತಿಯಾಗುತ್ತಿದೆ. ಈ ರೀತಿ 2023 ರಿಂದ 2025 ರವರೆಗೂ ಮನೆಗಳ ಹರಾಜು ಪ್ರಕ್ರಿಯೆಯನ್ನು ನಿರಂತರವಾಗಿ ಕರೆಯಲಾಗುತ್ತಿದೆ.

ಶುರುವಾಗಿದೆ ನೋಂದಣಿ

ಕೆಐಎಡಿಬಿ ಮನೆಗಳ ಹರಾಜಿಗಾಗಿ ಈಗಾಗಲೆ ನೋಂದಣಿ ಶುರುವಾಗಿದೆ. ನೋಂದಣಿ ಪ್ರಾರಂಭದ ದಿನ 6ನೇ ಜೂನ್ 2025 ರಿಂದ ಇದ್ದು, ಕೊನೆಯ ದಿನ ಜುಲೈ 9 ರವರೆಗೆ ಇದೆ. ಲೈವ್ ಬಿಡ್ಡಿಂಗ್ ಪ್ರಾರಂಭ 11 ನೇ ಜುಲೈ 2025 ರಿಂದ ಜುಲೈ 14 ರವರೆಗೆ ಇದೆ.

ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ್‌ಲಾಡ್ ಅವರು, ನುಡಿದಂತೆ ನಡೆಯುವ ನಾಯಕ ಎಂಬೆಲ್ಲ ಮಾತುಗಳಿವೆ. ಆದರೆ ನಿಜವಾಗಿಯೂ ಸಚಿವರು ಕೆಐ ಯಡವಟ್ಟನ್ನು ಯಾವ ರೀತಿ ಬಗೆಹರಿಸಿ ಕೊಡುತ್ತಾರೆ ಎನ್ನುವುದು ಸದಕ್ಕಿರುವ ಪ್ರಶ್ನೆ.

ವಿಶ್ವವಾಣಿ @vishwavaninews ಬೆಂಗಳೂರು 07-06-2025, ಶನಿವಾರ

ಆರಾಮ

ಕೊಡಚಾದ್ರಿ ಪರ್ವತ ಶ್ರೇಣಿಯ ನೆರಳಿನಲ್ಲಿರುವ ಬೈಂದೂರು ಪ್ರದೇಶವು, ಕಡಿಮೆ ಮೂಲಭೂತ ಸೌಕರ್ಯಗಳನ್ನು ಹೊಂದಿರುವ ಪ್ರದೇಶ. ಕಾಡು, ಬೆಟ್ಟ, ಗುಡ್ಡ, ಹಳ್ಳ ಕೊಳ್ಳಗಳೇ ಪ್ರಧಾನವಾಗಿರುವ ಈ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಗೊಂಡ ಸುಕುಮಾರ ಶೆಟ್ಟಿ ಅವರು, ಅಲ್ಲಿನ ಹಳ್ಳಿಗಳ ಅಭಿವೃದ್ಧಿಗೆ ವಿಶೇಷ ಗಮನ ನೀಡಿದರು; ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುವು ಮಾಡಿಕೊಟ್ಟರು. ಜತೆಗೆ, ಕೊಲ್ಲೂರು ದೇಗುಲದ ಆಡಳಿತ ಧರ್ಮದರ್ಶಿಯಾಗಿ ಯಾತ್ರಿಕರಿಗೆ, ಪ್ರವಾಸಿಗರಿಗೆ ಹಲವು ಅನುಕೂಲ ಮಾಡಿಕೊಟ್ಟರು. ಅವರು 'ವಿಶ್ವವಾಣಿ ಗ್ಲೋಬಲ್ ಅಚೀವರ್ಸ್' ಪ್ರಶಸ್ತಿಗೆ ಭಾಜನರಾಗಿದ್ದು, ಜಾರ್ಜಿಯಾ ದೇಶದಲ್ಲಿ ನಡೆದ ಸಮಾರಂಭದಲ್ಲಿ ಪ್ರಶಸ್ತಿಯನ್ನು ಸ್ವೀಕರಿಸಿದ್ದಾರೆ.

ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ

ಶಿಕ್ಷಣ ಮತ್ತು ಧಾರ್ಮಿಕ ಕ್ಷೇತ್ರದಲ್ಲಿ ಬಿ.ಎಂ.ಸುಕುಮಾರ ಶೆಟ್ಟಿಯವರು ಸಲ್ಲಿಸಿದ ಸೇವೆಯನ್ನು ಗುರುತಿಸಿ, ಅವರನ್ನು 'ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ'ಗೆ ಆಯ್ಕೆ ಮಾಡಲಾಗಿದೆ. ಇತ್ತೀಚೆಗೆ ಜಾರ್ಜಿಯಾ ದೇಶದಲ್ಲಿ ನಡೆದ ವಿಶೇಷ ಸಮಾರಂಭದಲ್ಲಿ, ಹಲವ ಗಣ್ಯರ ಸಮ್ಮುಖದಲ್ಲಿ, ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗಿದೆ.

ನವ ಬೈಂದೂರಿನ ಹರಿಕಾರ ಬಿ.ಎಂ. ಸುಕುಮಾರ ಶೆಟ್ಟಿ

● ರಾಮಚಂದ್ರ ಬರೆಪ್ಪಾಡಿ

ಕರಾವಳಿ ಪ್ರದೇಶದ ಬೈಂದೂರು ಕ್ಷೇತ್ರದ ಶಾಸಕರಾಗಿ ಹಲವು ಅಭಿವೃದ್ಧಿ ಕೆಲಸಗಳನ್ನು ಮಾಡಿ, ಜನರಲ್ಲಿ ಅಪೂರ್ವ ವಿಶ್ವಾಸ ಗಳಿಸಿದವರು ಬಿ.ಎಂ.ಸುಕುಮಾರ ಶೆಟ್ಟಿ. ಇವರ ಸಮಾಜಸೇವೆಯ ವೈಶಿಷ್ಟ್ಯವೆಂದರೆ, ಇವರು ಶಾಸಕರಾಗಿ ಕಾರ್ಯನಿರ್ವಹಿಸಿದ್ದರೂ ಶೈಕ್ಷಣಿಕ, ಧಾರ್ಮಿಕ ಕ್ಷೇತ್ರಕ್ಕೆ ಅವರು ನೀಡಿದ ಕೊಡುಗೆಯಿಂದಲೇ ಪ್ರಸಿದ್ಧಿ ಪಡೆದವರು. ನವ ಬೈಂದೂರಿನ ಕನಸು ಕಂಡು ಆ ದಿಸೆಯಲ್ಲಿ ಸಾಕಷ್ಟು ಪರಿಶ್ರಮ ಪಟ್ಟವರು ಸುಕುಮಾರ ಶೆಟ್ಟಿ ಅವರು. ಶೈಕ್ಷಣಿಕ ರಂಗಕ್ಕೆ ನೀಡಿದ ಕೊಡುಗೆ ಅನುಪಮ. ಧಾರ್ಮಿಕ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆ ಅನನ್ಯ.

ಕುಂದಾಪುರ ತಾಲೂಕಿನ ಬೆಳ್ವಾ ಮೂಡುಮುಂದಲ್ಲಿನ ಕೆ. ಎಲ್. ಮಂಜಯ್ಯ ಶೆಟ್ಟಿ ಹಾಗೂ ಸಾದಮ್ಮ ಶೆಡ್ತಿಯವರ ಮಗನಾಗಿ 1952 ಆ. 13ರಲ್ಲಿ ಜನಿಸಿದ ಅವರು ಕುಂದಾಪುರ ಬೋರ್ಡ್ ಹೈಸ್ಕೂಲ್ ಹಾಗೂ ಭಂಡಾರ್‌ಕಾರ್ಸ್ ಕಾಲೇಜಿನಲ್ಲಿ ಶಿಕ್ಷಣ ಪೂರೈಸಿದರು. ಕಾಲೇಜು ಶಿಕ್ಷಣ ಮುಗಿಸಿದ ಅನಂತರ ಉದ್ಯಮದತ್ತ ಚಿತ್ತ ಹರಿಸಿದ ಸುಕುಮಾರ ಶೆಟ್ಟಿ ಅವರು ಕ್ಯಾಶ್ಯೂ ಫ್ಯಾಕ್ಟರಿ ಪ್ರಾರಂಭಿಸಿದರು; ಕರಾವಳಿಯಲ್ಲಿ ಲಭ್ಯವಿರುವ ಗೋಡಂಬಿಯನ್ನು ಖರೀದಿಸಿ, ಸಂಸ್ಕರಿಸಿ, ಹೊರದೇಶಗಳಿಗೆ ರಫ್ತು ಮಾಡುವ ಉದ್ಯಮದ ಮೂಲಕ, ಸ್ಥಳೀಯರಿಗೆ ಉದ್ಯೋಗ ಸೃಷ್ಟಿಸಿದರು. ಬಳಿಕ ಹೆಂಚು ಫ್ಯಾಕ್ಟರಿ ಸ್ಥಾಪಿಸಿ ಸಾವಿರಾರು ಮಂದಿಗೆ ಉದ್ಯೋಗದಾತರಾದರು. ಈ ರೀತಿ ಅವರು ಸ್ವಪರಿಶ್ರಮದಿಂದ ಓರ್ವ ಯಶಸ್ವಿ ಉದ್ಯಮಿಯಾಗಿ ಬೆಳೆದರು.

ಶಿಕ್ಷಣಕ್ಕೆ ಪ್ರೋತ್ಸಾಹ

ಸುಕುಮಾರ ಶೆಟ್ಟಿ ಅವರು ಶೈಕ್ಷಣಿಕ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ಎಂದೆಂದಿಗೂ ಸ್ಮರಣೀಯ. ಅವರು ಸಹಾಯ ಮಾಡಲೆಂದು ಕೈ ಹಾಕಿದ ಪ್ರದೇಶವೆಲ್ಲವೂ, ಗುಡ್ಡ ಬೆಟ್ಟಗಳಿಂದ ತುಂಬಿದ, ಸಾಕಷ್ಟು ಹಿಂದುಳಿದ ಪ್ರದೇಶ. ಕಾಡಿನ ದಾರಿಯಲ್ಲಿ ನಡೆದು, ಗದ್ದೆಯ ಬದುವಿನಲ್ಲಿ ನಡೆದು, ಅಲ್ಲಿನ ವಿದ್ಯಾರ್ಥಿಗಳು

ಮನೆಯಿಂದ ಶಾಲೆಗೆ ಬರುವುದೇ ಒಂದು ಸಾಹಸ. ಕೆರಾಡಿ, ಹೊಸೂರು, ಆಜ್ರಿ, ಚಿತ್ತೂರು, ಇಡೂರು ಕುಂಜಾಡಿ ಹೀಗೆ ಅನೇಕ ಭಾಗಗಳಿಂದ ಕಾಲೇಜು ಶಿಕ್ಷಣ ಪಡೆಯಲು ದೂರದ ವಂಡ್ಸೆಯ ನೆಂಪುವಿಗೆ ಬರಬೇಕಿತ್ತು. ದೂರದೂರಿನಿಂದ ಬರುವ ವಿದ್ಯಾರ್ಥಿಗಳ ಕಷ್ಟ ಅರಿತ ಸುಕುಮಾರ ಶೆಟ್ಟಿ ಅವರು 1986 ರಿಂದ 1996ರ ವರೆಗೆ ಸುಮಾರು 700 ವಿದ್ಯಾರ್ಥಿಗಳಿಗೆ ತಮ್ಮ ಮನೆಯ ಪಕ್ಕದಲ್ಲೇ ಹಾಸ್ಟೆಲ್ ಸ್ಥಾಪಿಸಿ, ವಿದ್ಯಾರ್ಜನೆಗೆ ಅನುಕೂಲ ಮಾಡಿಕೊಟ್ಟರು.

ದೇಗುಲದ ಧರ್ಮದರ್ಶಿಯಾಗಿ

1989 ರಿಂದ 1994ರವರೆಗೆ ಕೊಲ್ಲೂರು ಮೂಕಾಂಬಿಕಾ ದೇವಸ್ಥಾನದ ಆಡಳಿತ ಧರ್ಮದರ್ಶಿಯಾಗಿ ಹಲವು ಹೊಸ ಯೋಜನೆಗಳನ್ನು ಜಾರಿಗೆ ತಂದರು. ಪ್ರವಾಸಿಗರಿಗೆ, ಯಾತ್ರಿಗಳಿಗೆ ವಿಶೇಷ ಅನುಕೂಲಗಳನ್ನು ಕಲ್ಪಿಸಿದರು. ಪ್ರಥಮ ಬಾರಿಗೆ ಕ್ಷೇತ್ರದಲ್ಲಿ ರಾತ್ರಿ ಊಟದ ವ್ಯವಸ್ಥೆಗೆ ಚಾಲನೆ ನೀಡಿದ್ದರು. ಎರಡನೇ ಅವಧಿಗೆ (2000-2005) ಕೊಲ್ಲೂರು ದೇವಳದ ಆಡಳಿತ ಧರ್ಮದರ್ಶಿಗಳಾಗಿ ಸೇವೆ ಮಾಡುವ ಅವಕಾಶ ದೊರೆತಾಗ ಕ್ಷೇತ್ರದಲ್ಲಿ ಮಹತ್ವದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡರು. ಉಡುಪಿ ಜಿಲ್ಲೆಯಲ್ಲೇ ಅಂದು ಹಿಂದುಳಿದ ಪ್ರದೇಶ ಎಂದುಕೊಂಡಿದ್ದ ಬೈಂದೂರು ತಾಲೂಕಿನ ಕೊಡ್ಲಾಡಿಯ ಹೆಮ್ಮಕ್ಕಿ, ಅರೆಶಿರೂರು, ಮಾವಿನಕಟ್ಟೆ, ಹೊಸೂರುಗಳಲ್ಲಿ ಪ್ರೌಢ ಶಾಲೆಗಳನ್ನು ಕೊಲ್ಲೂರಿನಲ್ಲಿ ಪ್ರೌಢ ಹಾಗೂ ಪದವಿ ಪೂರ್ವ ಕಾಲೇಜು ಸ್ಥಾಪಿಸಿದರು.

ಕುಂದಾಪುರ ಎಜ್ಯುಕೇಶನ್ ಸೊಸೈಟಿ

ಕುಂದಾಪುರ ಎಜ್ಯುಕೇಶನ್ ಸೊಸೈಟಿಯ ಅಧ್ಯಕ್ಷರಾಗಿರುವ ಸುಕುಮಾರ ಶೆಟ್ಟಿ ಅವರು ನಾಲ್ಕು ಶಿಕ್ಷಣ ಸಂಸ್ಥೆಗಳನ್ನು ಸಮರ್ಥವಾಗಿ ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. ಡಾ. ಬಿ.ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜು, ಆರ್.ಎನ್. ಶೆಟ್ಟಿ ಪದವಿ ಪೂರ್ವ ಕಾಲೇಜು, ವಿ.ಕೆ.ಆರ್. ಆಂಗ್ಲ ಮಾಧ್ಯಮ ಪ್ರೌಢ ಶಾಲೆ ಹಾಗೂ ಎಚ್.ಎಮ್.ಎಮ್. ಪ್ರೈಮರಿ ಆಂಗ್ಲ ಮಾಧ್ಯಮ ಸಂಸ್ಥೆಗಳಲ್ಲಿ ಪ್ರಸ್ತುತ ಸಹಸ್ರಾರು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. 600 ವಿದ್ಯಾರ್ಥಿಗಳಿದ್ದ ಸಂಖ್ಯೆ ಇದೀಗ 5000ಕ್ಕೇರಿದೆ. ಇದರ ಹಿಂದೆ ಸುಕುಮಾರ್ ಶೆಟ್ಟಿ ಅವರ ಪರಿಶ್ರಮವಿದೆ.

ಚಿನ್ನದ ರಥ

ಸುಕುಮಾರ ಶೆಟ್ಟಿ ಅವರು ಧರ್ಮದರ್ಶಿ ಆಗಿದ್ದ ಅವಧಿಯಲ್ಲೇ ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನಕ್ಕೆ ಚಿನ್ನದ ರಥ, ವಸತಿ ಗೃಹ, ಮೂಕಾಂಬಿಕಾ ಸಭಾಭವನ, ಮುಖ್ಯ ದ್ವಾರದ ಸ್ಥಾಪನೆ, ಹೀಗೆ ಹತ್ತು ಹಲವು ಅಭಿವೃದ್ಧಿ ಕಾರ್ಯಗಳಾದವು. ಕೊಲ್ಲೂರು ದೇಗುಲಕ್ಕೆ ಬರುವ ರಾಜ್ಯದ ಮತ್ತು ಹೊರ ರಾಜ್ಯದ ಯಾತ್ರಿಗಳಿಗೆ ಹಲವು ಅನುಕೂಲಗಳನ್ನು ಮಾಡಲಾಗಿದೆ. ಬೈಂದೂರು ಸನಿಹವಿರುವ ಶಿರೂರು ಭಾಗದ ಒತ್ತಿನೆಣೆಯಲ್ಲಿ ವಿಮಾನ ನಿಲ್ದಾಣದ ವ್ಯವಸ್ಥೆ, ಇಂಜಿನಿಯರಿಂಗ್ ಕಾಲೇಜಿಗೆ ಅನುಮೋದನೆ, ಕೊಲ್ಲೂರಿನಲ್ಲಿ ಕೊಡಚಾದ್ರಿಗೆ ರೋಪ್‌ವೇ ನಿರ್ಮಾಣದಂತಹ ಮಹತ್ತರ ಯೋಜನೆ ಕುರಿತು ನೀಲಿ ನಕಾಶೆ ತಯಾರಿಸಿದ್ದಾರೆ.

ನೆರವು: ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಪ್ರತಿ ವರ್ಷ ಸುಮಾರು 45 ಲಕ್ಷ ರೂ. ಪ್ರವೇಶಾತಿ ಶುಲ್ಕದಲ್ಲಿ ವಿನಾಯಿತಿ ನೀಡುತ್ತ ಸಹಾಯಧನ ನೀಡಿದ್ದಾರೆ. ಕೋವಿಡ್ ಸಂದರ್ಭದಲ್ಲಿ 95 ಲಕ್ಷ ರೂ. ಶುಲ್ಕ ವಿನಾಯಿತಿ ನೀಡಿದ್ದಾರೆ. ಅನೇಕ ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೆ ನೆರವಾಗಿದ್ದಾರೆ. ರಾಜ್ಯ ಸರಕಾರ ಅಕ್ಷರ ದಾಸೋಹ ಯೋಜನೆ ಜಾರಿಗೊಳಿಸುವ ಮುನ್ನವೇ ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನದ ವತಿಯಿಂದ ಸುಮಾರು 26,000 ವಿದ್ಯಾರ್ಥಿಗಳಿಗೆ ಉಚಿತವಾಗಿ ಮಧ್ಯಾಹ್ನದ ಊಟದ

ವ್ಯವಸ್ಥೆಯನ್ನು ಕಲ್ಪಿಸಿರುವುದು ಸುಕುಮಾರ ಶೆಟ್ಟಿ ಅವರ ಶೈಕ್ಷಣಿಕ ಕಾಳಜಿಗೆ ಹಿಡಿದ ಕೈಗನ್ನಡಿ.

ಕರಾವಳಿಯ ಜನಪ್ರಿಯ ಶಾಸಕರಾಗಿ ಜನಾನುರಾಗಿಯಾಗಿದ್ದ ಸುಕುಮಾರ ಶೆಟ್ಟಿ ಅವರು ತನ್ನ ಶಾಸಕತ್ವದ ಅವಧಿಯಲ್ಲಿ ಬೈಂದೂರಿನಲ್ಲಿ 100 ಹಾಸಿಗೆಗಳ ಆಸ್ಪತ್ರೆ ನಿರ್ಮಾಣ, ಕಿರಿಮಂಜೇಶ್ವರದಲ್ಲಿ ಅಗ್ನಿಶಾಮಕ ಠಾಣೆ ಸ್ಥಾಪನೆ, ಕೊಲ್ಲೂರು-ಹೆಮ್ಮಾಡಿ ದ್ವಿಪಥ ಹೆದ್ದಾರಿಯಾಗಿ ಅಭಿವೃದ್ಧಿ, ಕೊಲ್ಲೂರು ದೇವಳದ ಮುಖ್ಯ ಬೈಪಾಸ್ ರಸ್ತೆ ನಿರ್ಮಾಣಕ್ಕೆ 30 ಕೋಟಿ ರೂ. ಅನುದಾನ, ಸೌಕೂರು ಏತ ನೀರಾವರಿ ಯೋಜನೆಗೆ 73 ಕೋಟಿ ರೂ., ಯಡ್ತರೆಯ ಸಬ್ಬರಡಿ ಕಿಂಡಿ ಅಣೆಕಟ್ಟಿಗೆ 34 ಕೋಟಿ ರೂ. ಕ್ಷೇತ್ರದ ರಸ್ತೆ ಅಭಿವೃದ್ಧಿಗೆ ಲೋಕೋಪಯೋಗಿ ಇಲಾಖೆಯಿಂದ ಸುಮಾರು 100 ಕೋಟಿ ರೂ., ಸಣ್ಣ ನೀರಾವರಿ ಇಲಾಖೆಯಿಂದ 60 ಕೋಟಿ ರೂ., ಪಿ.ಎಮ್.ಜಿ.ಎಸ್.ವೈ ಇಲಾಖೆಯಿಂದ 50 ಕೋಟಿ ರೂ., ಜಲಸಂಪನ್ಮೂಲ ಇಲಾಖೆಯಿಂದ 120 ಕೋಟಿ ಅನುದಾನವನ್ನು ತರುವಲ್ಲಿ ಯಶಸ್ವಿಯಾಗಿದ್ದರು. 2018ರಿಂದ 2023ರ ವರೆಗಿನ ತನ್ನ ಶಾಸಕತ್ವದ ಸಮಯದಲ್ಲಿ ಕ್ಷೇತ್ರಕ್ಕೆ 3000 ಕೋಟಿ ರೂ. ಬೃಹತ್ ಮೊತ್ತದ ಅನುದಾನವನ್ನು ಕ್ಷೇತ್ರಕ್ಕೆ ತಂದು ಕ್ಷೇತ್ರದ ಅಭಿವೃದ್ಧಿಗೆ ಕಾರಣರಾಗಿದ್ದಾರೆ.

ಬೆಟ್ಟ ಗುಡ್ಡಗಳಿಂದ, ಕಾಡು ಪ್ರದೇಶಗಳಿಂದ ಕೂಡಿದ ಬೈಂದೂರು ಕ್ಷೇತ್ರದ ಶಾಸಕರಾಗಿ, ಆ ಪ್ರದೇಶವನ್ನು ಅಭಿವೃದ್ಧಿ ಪಥದತ್ತ ಸಾಗಿಸುವಲ್ಲಿ ವಿಶೇಷ ಪರಿಶ್ರಮ ವಹಿಸಿರುವ ಬಿ.ಎಂ. ಸುಕುಮಾರ ಶೆಟ್ಟಿ ಅವರು 'ವಿಶ್ವವಾಣಿ ಗ್ಲೋಬಲ್ ಅಚೀವರ್ಸ್' ಪ್ರಶಸ್ತಿಗೆ ಭಾಜನರಾಗಿದ್ದಾರೆ ಮತ್ತು ಇತ್ತೀಚೆಗೆ ಜಾರ್ಜಿಯಾ ದೇಶದಲ್ಲಿ ನಡೆದ ವಿಶೇಷ ಸಮಾರಂಭದಲ್ಲಿ ಅವರು ಪ್ರಶಸ್ತಿಯನ್ನು ಸ್ವೀಕರಿಸಿದ್ದಾರೆ.

ಹನಿ ಮಳೆ

ಪ್ರಶ್ನೋತ್ತರ

ನನ್ನವಳ ಪ್ರಶ್ನೆ
ಕೊಡಿಸಿರಬಹುದೆ ಸೀರೆ ಚಿನ್ನ
ನೋಡಲು ನೆರೆಮನೆ

ಮೀನಾ ಅದೆಷ್ಟು ಪ್ರಸನ್ನ?
ಆದರೆ ಅವಳ ರಹಸ್ಯ ಬೇರೆ!
ಮನೆ ಮಕ್ಕಳು ನೋಡಿಕೊಂಡು
ಕೆಲಸ ಮಾಡಿ ಮಾಡಿ
ಆಗಿದ್ದಾಳೆ ಸಣ್ಣ!

● ಮಹಾಂತೇಶ ಮಾಗನೂರ

ಕಕುದ್ರುಮನೆಂಬ ನಕಲಿ ರಾಜ

ಒಂದು ಕಾಡಿನಲ್ಲಿದ್ದ ನರಿಯೊಂದಕ್ಕೆ ಬಹಳ ಹಸಿವಾಯಿತು. ಎಷ್ಟು ಹುಡುಕಿದರೂ ತಿನ್ನಲು ಏನೂ ಸಿಗಲಿಲ್ಲ. ಹಸಿವು ತಡೆಯಲಾರದೆ ಕಾಡಿನ ಮಗ್ಗಲಿನಲ್ಲಿದ್ದ ಒಂದು ಊರಿನೊಳಗೆ ಆಹಾರ ಹುಡುಕಿಕೊಂಡು ಬಂದಿತು. ಊರಿನಲ್ಲಿದ್ದ ಬೀದಿ ನಾಯಿಗಳು ಒಟ್ಟಾಗಿ, ಒಂದೇ ಸಮನೆ ಬೊಗುಳುತ್ತಾ, ನರಿಯನ್ನು ಕಚ್ಚಲು ಹೋದವು. ನರಿ ಹೇಗೋ ನಾಯಿಗಳ ಕಾಟದಿಂದ ತಪ್ಪಿಸಿಕೊಂಡು, ಬಟ್ಟೆಗೆ ಬಣ್ಣ ಹಾಕುವವನ ಮನೆ ಹಿಂಭಾಗದಲ್ಲಿ ನುಗ್ಗಿತು. ಗಾಬರಿಯಿಂದ ಆತ ಬಟ್ಟೆಗೆ ಬಣ್ಣ ಹಾಕಲೆಂದು ಕದಡಿಟ್ಟಿದ್ದ, ಬಣ್ಣದ ದೊಡ್ಡ ಕಡಾಯಿಯೊಳಗೆ ಬಿದ್ದು ಬಿಟ್ಟಿತು. ಅದರ ಮೈಗೆ ಬಟ್ಟೆಯ ಬಣ್ಣ ಮೆತ್ತಿಕೊಂಡು ಮೈಯೆಲ್ಲಾ ಕಡು ಕಪ್ಪು ಬಣ್ಣವಾಯಿತು. ಸ್ವಲ್ಪ ಸಮಯದ ನಂತರ ನಾಯಿಗಳ ಗಲಾಟೆ ಕಡಿಮೆಯಾದ ನಂತರ, ನರಿ ನಿಧಾನವಾಗಿ ಅಲ್ಲಿಂದ ಎದ್ದು ಹೊರಗೆ ಹೊರಟಿತು.

ಇದರ ಬಣ್ಣ ಬದಲಾದುದರಿಂದ ನಾಯಿಗಳಿಗೆ ಇದರ ಗುರುತು ಸಿಗಲಿಲ್ಲ. ಅವುಗಳು ತಮ್ಮ ಪಾಡಿಗೆ ತಾವು ಅಲ್ಲಿಂದ ಹೊರಟು ಹೋದವು. ನರಿ ಪುನಃ ಕಾಡಿಗೇ ಹೊರಟಿತು. ಕಾಡಿನಲ್ಲಿದ್ದ ಯಾವ ಪ್ರಾಣಿಗಳಿಗೂ ಇದರ ಗುರುತು ಸಿಗಲಿಲ್ಲ.

ನರಿ ತನ್ನನ್ನು ಬೆರಗಾಗಿ ನೋಡುತ್ತಿರುವ ಎಲ್ಲಾ ಪ್ರಾಣಿಗಳತ್ತ ದೃಷ್ಟಿ ಹರಿಸಿ, ಸ್ವಲ್ಪ ಧ್ವನಿ ಏರಿಸಿ, ಕಾಡಿನ ಮೃಗಗಳೇ, ಇಲ್ಲಿ ಕೇಳಿಸಿಕೊಳ್ಳಿ, ನನ್ನನ್ನು ನೋಡಿ ನೀವೇನೂ ಹೆದರಿಕೊಳ್ಳುವ ಅವಶ್ಯಕತೆ ಇಲ್ಲ. ಬ್ರಹ್ಮದೇವ, ಸ್ವಲ್ಪ ಸಮಯದ ಹಿಂದೆಯಷ್ಟೇ ನನ್ನನ್ನು ಸೃಷ್ಟಿ ಮಾಡಿದ್ದಾನೆ, ಈ ಕಾಡಿನಲ್ಲಿ ಒಬ್ಬ ಒಳ್ಳೆಯ ರಾಜನಿಲ್ಲ ಅದಕ್ಕಾಗಿ ಎಲ್ಲಾ ಪ್ರಾಣಿಗಳಿಗೂ ನೀನೇ ರಾಜನಾಗು ಎಂದು ಹೇಳಿ ನನಗೆ 'ಕಕುದ್ರುಮ' ಎಂದು ಹೆಸರು ಕೊಟ್ಟು, ನನ್ನನ್ನು ಇಲ್ಲಿಗೆ ಕಳುಹಿಸಿದ್ದಾನೆ. ಅವನ ಆದೇಶದ ಮೇರೆಗೆ ನಾನು ಇಲ್ಲಿಗೆ ಬಂದಿದ್ದೇನೆ ನೀವೆಲ್ಲರೂ ನನ್ನನ್ನು ರಾಜನನ್ನಾಗಿ ಸ್ವೀಕರಿಸಿ ನನ್ನ ಆಜ್ಞೆಯನ್ನು ಪ್ರಶ್ನಿಸದೇ, ಪರಿ ಪಾಲಿಸಬೇಕು ಇದು ಬ್ರಹ್ಮದೇವನ ಆದೇಶ ಎಂದಿತು.

ಕಾಡಿನ ಎಲ್ಲಾ ಪ್ರಾಣಿಗಳೂ ನರಿಯ ಮಾತನ್ನು ಒಪ್ಪಿಕೊಂಡವು. ನರಿ ಸಿಂಹಕ್ಕೆ ಪ್ರಧಾನ ಮಂತ್ರಿ ಪದವಿಯನ್ನೂ, ಹುಲಿಗೆ ತನ್ನ ಬೆಂಗಾವಲಿನ ಪದವಿಯನ್ನೂ ಆನೆಗೆ ತಾಂಬೂಲವನ್ನು ತಯಾರಿಸುವ ಕೆಲಸವನ್ನು ಕೊಟ್ಟಿತು. ತೋಳವನ್ನು ಬಾಗಿಲ ಕಾವಲುಗಾರನನ್ನಾಗಿ ಮಾಡಿಕೊಂಡಿತು. ಅಪ್ಪಿ ತಪ್ಪಿಯೂ ಕೂಡ ನರಿಗಳನ್ನು ಮಾತ್ರ ಒಳಗೆ ಸೇರಿಸಿಕೊಳ್ಳಲೇ ಇಲ್ಲ! ಎಲ್ಲಾ ನರಿಗಳನ್ನೂ ಕಾಡಿನಿಂದ ಆಚೆಗೆ ಓಡಿಸಿತು.

ರಾಜನಾದ, ಕಕುದ್ರುಮನಿಗೆ, ಸಿಂಹದಿಂದ ಹಿಡಿದು ಉಳಿದ ಎಲ್ಲಾ ಪ್ರಾಣಿಗಳೂ, ತಾವು ಬೇಟೆಯಾಡಿ ತಂದ ಮಾಂಸವನ್ನು ಮೊದಲು ಅದರ ಮುಂದೆ ಇಡುತ್ತಿದ್ದವು. ನರಿಯು ತನ್ನ ಪಾಲಿನ ಮಾಂಸವನ್ನು ಮೊದಲು ತಿಂದು ಉಳಿದಿದ್ದನ್ನು ಬೇರೆ ಪ್ರಾಣಿಗಳಿಗೆ ಹಂಚಿಕೊಳ್ಳಲು ಹೇಳುತ್ತಿತ್ತು.

ಒಂದು ಸಲ ನರಿ, ಎಲ್ಲಾ ಪ್ರಾಣಿಗಳೊಂದಿಗೆ ಸಭೆ ನಡೆಸುತ್ತಿದ್ದಾಗ ಪಕ್ಕದ ಕಾಡಿನಿಂದ ಗುಳ್ಳೆ ನರಿಗಳು ಗಟ್ಟಿಯಾಗಿ ಊಳಿಡುವ ಶಬ್ದ ಕೇಳಿಸಿತು. ಆಗ ರಾಜ ಕಕುದ್ರುಮನ ಕಿವಿ ನೆಟ್ಟಗಾಯಿತು. ಅವುಗಳ ಊಳಿಡುತ್ತಿರುವ ಶಬ್ದದಿಂದ ನರಿಗೆ ತನ್ನ ಹಿಂದಿನ ಸ್ಮರಣೆಯಾಗಿ, ಆನಂದದಿಂದ ಬಹಳ ರೋಮಾಂಚನಗೊಂಡಿತು. ಅದು ತನ್ನ ಸಿಂಹಾಸನದಿಂದ ಎದ್ದು ನಿಂತು ಸಂತೋಷದಿಂದ ತಾನೂ ಕೂಡ ಗಟ್ಟಿಯಾಗಿ ಊಳಿಡಲು ಶುರು ಮಾಡಿತು.

ಕಕುದ್ರುಮನ ಕಂಠದಿಂದ ಹೊರಬಿದ್ದ ಕರ್ಕಶ ಸ್ವರವನ್ನು ಕೇಳಿದ ತಕ್ಷಣವೇ, ಎಲ್ಲಾ ಪ್ರಾಣಿಗಳಿಗೂ ಇದು ಮಾಮೂಲಿ ನರಿ ಎಂದು ಗೊತ್ತಾಗಿ ಹೋಯಿತು. ಇಂತಹ ಮೋಸಗಾರ ನರಿಗೆ ನಾವು ರಾಜನೆಂದು ತಿಳಿದು ಮರ್ಯಾದೆ ಕೊಟ್ಟೆವಲ್ಲಾ, ನಮ್ಮಂತ ಮೂರ್ಖರು ಇನ್ನೊಬ್ಬರಿಲ್ಲ. ಈ ಮೋಸದ ನರಿ ನಮ್ಮಿಂದ ಎಲ್ಲಾ ರೀತಿಯ ಚಾಕರಿಯನ್ನು ಮಾಡಿಸಿಕೊಂಡಿತಲ್ಲಾ ಎಂಬ ಸಿಟ್ಟಿನಿಂದ ಅದನ್ನು ಎಲ್ಲಿಯೂ ತಪ್ಪಿಸಿಕೊಳ್ಳಲು ಬಿಡದೆ ಹರಿದು ತಿಂದು ಬಿಟ್ಟವು.

ನಾವು ಕೂಡ ಇಂತಹ ನಕಲಿ ವರ್ತನೆ ಇರುವ ಜನರನ್ನು ನಮ್ಮ ನಾಯಕರೆಂದು ಆರಿಸಿಕೊಂಡು, ಅವರಿಗೆ ಗೌರವ ಮರ್ಯಾದೆ ಕೊಡುತ್ತಿದ್ದೇವೆ. ಇನ್ನಾದರೂ ಪ್ರಜ್ಞಾವಂತರಾಗಿ, ಸ್ವಸ್ಥ ಸಮಾಜವನ್ನು ನಿರ್ಮಿಸೋಣ.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ನಾವು ಒಂದು ಎಳೆ ಮಾತ್ರ

**ದಿನದಿನವು ಹಳಸುವುವು, ದಿನದಿನವು ಕೊಳೆಯುವುವು
ಮನುಜಕುಲದೆಲ್ಲ ಕೃತಿವಿಜಯವಿಭವಗಳು
ಅನುದಿನವು ಮತ್ತವನು ತೊಳೆದು ಹೊಸತೆನಿಸುವುದೆ
ಜನುಮಸಫಲತೆ ನಿನಗೆ - ಮಂಕುತಿಮ್ಮ॥**

ಶುಭೋದಯಕ್ಕೊಂದು ಕಗ್ಗ



ರವೀ ಚಿಕ್ಕನಾಯಕನಹಳ್ಳಿ

ಇಂದಿನದು ನೂತನ, ಇಂದಿನ ನೂತನ ನಾಳೆಗೆ ಹಳತು, ನಾಡಿದ್ದು ಹಳಸು, ಮತ್ತೊಂದು ದಿನ ಕೊಳೆಯುವಿಕೆ ಎಂಬುದು ವಾಸ್ತವ ಸಂಗತಿಗಳೇ ಆಗಿವೆ. ಹಾಗೆಯೇ ಈ ಕ್ಷಣ, ಈ ದಿನ ಎಂಬುವುಗಳು ನಾಳೆಗೆ ಹಳತಾಗಿರುತ್ತವೆ. ಇಂದಿನ ನಮ್ಮ ಸಾಧನೆಯು ನಾಳೆಗೆ ಅದು ಹಳತಾಗುತ್ತದೆ. ಇಂದಿನ ಸಾಧನೆಗಳನ್ನೇ ನಾಳೆಯೂ, ನಾಡಿದ್ದು ಮತ್ತೆ ಮತ್ತೆ ಒರೆಗೆ ಹಚ್ಚಿ ಅದನ್ನು ಹೊಳಪನ್ನಾಗಿ ಮಾಡುತ್ತಿದ್ದೇವೆಯೇ ವಿನಃ ಈ ಜಗತ್ತಿಗೆ ನೀಡಿದ್ದಾರೂ ಏನು? ಇದೇ ನಿನ್ನ ಸಾಧನೆಯೇ? ಇರುವುದನ್ನೇ ನೀನು ಒರೆಗೆ ಹಚ್ಚುವುದಾದರೆ ನಿನ್ನ ಜೀವನದ ಸಫಲತೆಯಾದರೂ ಏನು? ಎಂಬುವ ಪ್ರಶ್ನೆ ಈ ಪದ್ಯದಲ್ಲಿ ಬರುತ್ತದೆ.

ಇಂದು ಮಾಡಿದ ಅನ್ನವು ಬಿಸಿಯಾಗಿ ಹೊಸತಾಗಿರುತ್ತದೆ. ಅದೇ ಅನ್ನವು ನಾಳೆ ತಂಗಳಾಗುತ್ತದೆ, ನಾಡಿದ್ದು ಅದೇ ಅನ್ನವು ಹಳಸಿಹೋಗುತ್ತದೆ, ಮತ್ತೊಂದು ದಿನ ಅದೇ ಅನ್ನವೂ ಕೊಳೆತು ಹೋಗುತ್ತದೆ. ಇದನ್ನೇ ಒಂದು ಉದಾಹರಣೆಯಾಗಿ ತೆಗೆದುಕೊಂಡಲ್ಲಿ ಮನುಷ್ಯನ ಜೀವನದಲ್ಲಿ ಬರುವ ಇಂದಿನ ದಿನ ಎಂಬುದು ನಾಳೆಗೆ ಹಳೆಯದೇ ಹೌದು. ಈ ಜಗತ್ತಿನಲ್ಲಿ ಈ ಮಾನವ ಜೀವಿಯ ಬುದ್ಧಿಮತ್ತೆ ಬೆಳೆದಂತೆಲ್ಲಾ ಆತನು ತನ್ನ ಜೀವನಕ್ಕೆ ಉಪಯೋಗವಾಗುವ ರೀತಿಯಲ್ಲಿ ಇಲ್ಲಿರುವ ವಸ್ತುಗಳನ್ನು ಮಾರ್ಪಡಿಸಿಕೊಂಡಿದ್ದನ್ನೇ ಹೊಸ ಅನ್ವೇಷಣೆಗಳೆಂದು ಕೊಂಡಿದ್ದಾನೆಯೇ ವಿನಃ ಆತನು ಈ ಜಗತ್ತಿಗೆ ಹೊಸ ವಸ್ತುವನ್ನು ಎಂದಿಗೂ ತರಲಾಗಿಲ್ಲ, ತರಲಾಗುವುದೂ ಇಲ್ಲ. ಆತನು ಅಕ್ಕಿಯಿಂದ ಅನ್ನ ಮಾಡುವುದನ್ನು ಅವಿಷ್ಕರಿಸಿದನೇ ಹೊರತು ಆತನು ಅಕ್ಕಿಯನ್ನು ತಾನೇ ಸ್ವತಃ ತಯಾರು ಮಾಡಲು ಸಾಧ್ಯವೇ ಇಲ್ಲ.

ಹಾಗೆಯೇ ಈ ಜಗತ್ತಿನಲ್ಲಿಯ ಎಲ್ಲಾ ಅನ್ವೇಷಣೆಗಳು, ಅವಿಷ್ಕಾರಗಳೆಲ್ಲವೂ ಸಹ ಇಲ್ಲಿರುವ ವಸ್ತುಗಳಿಂದಲೇ, ತನಗೆ ಉಪಕಾರಿಯಾಗುವ ರೀತಿಯಲ್ಲಿಯೇ ಮಾರ್ಪಾಡು ಮಾಡಿಕೊಂಡು ಅವುಗಳಿಂದ ಉಪಯೋಗ ಪಡೆಯುತ್ತಿದ್ದಾನೆಯೇ ಪರಂತು ಈತನಿಂದ ಯಾವ ಹೊಸ ವಸ್ತುಗಳೂ ಸಹ ಅವಿಷ್ಕಾರಗೊಂಡಿಲ್ಲ. ಇಂಥಹ ಅವಿಷ್ಕಾರಗಳನ್ನೇ ಮತ್ತೆ ಮತ್ತೆ ನವೀನಗೊಳಿಸುವುದೋ, ಶುಭ್ರಗೊಳಿಸುವುದೋ, ಮಾರ್ಪಾಡು ಮಾಡುವುದೇ ಈತನ ಜೀವನವಾದರೆ ಹೊಸ ವಸ್ತುಗಳಿಗೆ ಈ ಇಳೆಯಲ್ಲಿಯಾದರೂ ಸ್ಥಳವೆಲ್ಲಿ? ಈತನ ಜೀವನದ ಉತ್ಕಟತೆ ಕೇವಲ ಮಾರ್ಪಾಡು ಮಾಡುವುದರಲ್ಲಿ ಮಾತ್ರವೇ ಅಡಗಿಹುದೋ? ಅಥವಾ ಅಷ್ಟು ಮಾತ್ರಕ್ಕೇ ಈತನ ಜೀವನವು ನಿರ್ಭಂಧಿಸಿಹುದೋ? ಎಂಬ ಹಲವಾರು ಪ್ರಶ್ನೆಗಳು ಪುಟಿದೇಳುತ್ತವೆ. ಮನುಷ್ಯನು ಅವಿಷ್ಕರಿಸಿದ್ದನ್ನೇ ನಾ ಸಾಧಿಸಿದೆ, ನಾ ಜಯಿಸಿದೆ, ಎಂದು ಬೀಗುತ್ತಾ, ಕಾಲಾನುಕಾಲಕ್ಕೆ ಅವೂ ಸಹ ಹಳತಾಗಿ, ಕೊಳೆತು, ಹಳಸಿ ಹೋಗುತ್ತದೆ. ಹೀಗೆ ಈ ಜಗತ್ತಿನಲ್ಲಿ ಪರಮಾತ್ಮನಿಂದ ಸೃಷ್ಟಿಸಲ್ಪಟ್ಟ ವಸ್ತುಗಳನ್ನು ತನ್ನ ಪ್ರಯೋಜನಕ್ಕೆ ತಕ್ಕಂತೆ ಮಾರ್ಪಾಡು ಮಾಡಿಕೊಂಡು ಹೊಸ ಹೊಸತನ್ನು ಕಂಡುಕೊಳ್ಳುತ್ತಲೇ ಇರುತ್ತಾನೆ. ಇಷ್ಟೇ ಇವನ ಸಾಧನೆ ಮತ್ತು ಜಯ ಎಂಬುದೇ ಈ ಪದ್ಯದ ಸಾರಾಂಶವಾಗಿದೆ.

ಆ ಭಗವಂತ ಸೃಷ್ಟಿಸಿದ ಈ ಜಗತ್ತಿನಲ್ಲಿ ಎಲ್ಲವೂ ಹೊಸತು, ಎಲ್ಲವೂ ನವ ನವೀನತೆಯಿಂದಲೇ ಕೂಡಿರುತ್ತವೆ. ನಮ್ಮನ್ನೇ ಉದಾಹರಣೆಗೆ ತೆಗೆದುಕೊಂಡರೆ ಕಣ್ಣಿಗೆ ಕಾಣದ ಒಂದು ವೀರ್ಯಾಣುವು ಅಂಡಾಣುವಿನೊಂದಿಗೆ ಸಂಯೋಜನೆಗೊಂಡು, ನಮ್ಮಂಥಹ ಮನುಷ್ಯ ಈ ಜಗತ್ತಿಗೆ ಬಂದಿದ್ದಾನೆ. ಇದು ಆ ದೇವರ ಸೃಷ್ಟಿ, ಈ ಮನುಜನಲ್ಲಿ ಎಲ್ಲಾ ನವರಸಗಳನ್ನು ತುಂಬಿ, ಪ್ರಕೃತಿಯಲ್ಲಿಯೂ ಹೊಸತನ್ನು ತುಂಬಿ ಈ ಜೀವನ ಸುಖವಾಗಿರುವಂತೆ ಸೃಷ್ಟಿಯಾಗಿದೆ. ಈ ಜೀವನದಲ್ಲಿ ಬರುವ ತೃಣವಾದ ಆಸೆಗಳಿಗಾಗಿ ಇಲ್ಲಿರುವ ಸೌಂದರ್ಯವನ್ನು ನಾಶಗೈಯ್ಯುತ್ತಾ, ಮನಸ್ಸಿನ ಶಾಂತಿಯನ್ನು ಹಾಳುಗೆಡಹುತ್ತಾ ಜೀವಿಸುವುದು ಮಾನವನ ಜೀವನವೇ ಆಗಿದೆ. ಆದುದರಿಂದ ಆ ದೇವರು ಸೃಷ್ಟಿಸಿದ ಈ ಜಗತ್ತು ಎಂಬುದೊಂದು ಅನಂತವಾದದ್ದು. ನಾವೊದರೊಳು ಒಂದು ಎಳೆಯು ಮಾತ್ರ ಎಂಬ ಭಾವ ಈ ಪದ್ಯದಲ್ಲಿ ಹೊರ ಹೊಮ್ಮಿದೆ.

ವಿರಾಮ
ಪ್ರತಿ ಭಾನುವಾರ

ಪದಬಂಧ
● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

2. ಶೋಧಿಸು (3)
4. ಒಂದಕ್ಕೊಂದು ಹೆಣೆದುಕೊಂಡಿರುವುದು (3)
6. ಹೊಟ್ಟೆಯಿಂದ ಮುಂದೆ ಸರಿ (3)
7. ಆರಂಭವಲ್ಲ, ಕೊನೆ (3)
8. ಇರುಳು (3)
9. ಸೋಲಿಗೆ ಹೀಗೆ ಹೇಳಬಹುದೇ? (3)
12. ತೇಜಸ್ಸು (3)
13. ಕಡೆಗೂ ಸಿಕ್ಕಿತು ಸಾಲ (2)
17. ಮೂರಕ್ಷರದ ಆದಿಶೇಷ (3)
19. ರಕ್ಷಣಾ ಸಾಧನ (3)
20. ಲೋಹದಲ್ಲಿ ವರವಿದೆ! (3)

ಮೇಲಿಂದ ಕೆಳಕ್ಕೆ

1. ಪ್ರಯೋಜನವಿಲ್ಲದ ಮಾತುಗಳಲ್ಲಿ ಅಂತೆ ಕಂತೆ! (5)
2. ಕ್ರಿಮಿಯಲ್ಲಿ ಕಂಡ ದೋಷ (3)
3. ನೈದಿಲೆ (3)
4. ವೈಕುಂಠದ ದ್ವಾರಪಾಲಕರಿವರು (5)
5. ದೊರಕು (3)
10. ನಭದಿಂದ ಕೇಳಿಬರುವ ಮಾತು (5)
11. ಅಸ್ಪಷ್ಟ ಮಾತುಗಳು (5). ವಿಸ್ಮಯ (3)
15. ಆಶ್ಚರ್ಯಗೊಂಡ (3)
16. ಬೀಜದಲ್ಲಿ ಮೊಳಕೆ ಬಂದಾಗ (3)

ಸರಿಯುತ್ತರಗಳು

ಮೇಲಿಂದ ಕೆಳಕ್ಕೆ: 1. ಕಂತೆಪುರಾಣ 2. ಹುಳುಕು 3. ಕುಮುದ 4. ಜಯವಿಜಯ 5. ಲಭ್ಯ 10. ಅಶರೀರವಾಣಿ 11. ತದಬದ 14. ಬೆರಗು 15. ಚಕಿತ 16. ಅಂಕುರ

ಎಡದಿಂದ ಬಲಕ್ಕೆ: 2. ಹುಡುಕು 4. ಜಂಟಿ 6. ತೆವಳು 7. ಮುಕ್ತಾಯ 8. ರಾತ್ರಿ 9. ಅಜಯ 12. ಪ್ರಭೆ 13. ಕಡ 17. ವಾಸುಕಿ 19. ಗುರಾಣಿ 20. ತವರ

ನೀವೂ ಬರೆಯಬಹುದು | ನಮ್ಮ ವಿಳಾಸ: ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098 | e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ನಿವೃತ್ತಿ ಘೋಷಿಸಿದ ಪಿಯೂಷ್ ಚಾವ್ಲಾ

ಮುಂಬೈ: ಎರಡು ಬಾರಿ ವಿಶ್ವಕಪ್ ಗೆದ್ದ ಭಾರತ ತಂಡದ ಹಿರಿಯ ಲೆಗ್ ಸ್ಪಿನ್ನರ್ ಪಿಯೂಷ್ ಚಾವ್ಲಾ ಶುಕ್ರವಾರ ವೃತ್ತಿಪರ ಕ್ರಿಕೆಟ್‌ನ ಎಲ್ಲಾ ಸ್ವರೂಪಗಳಿಂದ ನಿವೃತ್ತಿ ಘೋಷಿಸಿದ್ದಾರೆ. 'ಎರಡು ದಶಕಗಳಿಗೂ ಹೆಚ್ಚು ಕಾಲ ಮೈದಾನದಲ್ಲಿ ಸೇವೆ ಸಲ್ಲಿಸಿದ ನಂತರ, ಈ ಸುಂದರ ಆಟಕ್ಕೆ ವಿದಾಯ ಹೇಳುವ ಸಮಯ ಬಂದಿದೆ' ಎಂದು 36 ವರ್ಷದ ಪಿಯೂಷ್ ಚಾವ್ಲಾ ಇನ್ ಸ್ಟಾಗ್ರಾಮ್ ಪೋಸ್ಟ್ ಮೂಲಕ ತಮ್ಮ ನಿವೃತ್ತಿ ಪ್ರಕಟಿಸಿದರು. 2007ರ ಟಿ 20 ವಿಶ್ವಕಪ್ ಮತ್ತು 2011ರ ಏಕದಿನ ವಿಶ್ವಕಪ್ ಗೆಲುವುಗಳಲ್ಲಿ ಭಾರತ ಪರ ಆಡಿದ ಚಾವ್ಲಾ, ವೃತ್ತಿಪರ ಕ್ರಿಕೆಟ್‌ನಲ್ಲಿ ಎಲ್ಲಾ ಸ್ವರೂಪಗಳಲ್ಲಿ 1000ಕ್ಕೂ ಹೆಚ್ಚು ವಿಕೆಟ್‌ಗಳನ್ನು ಗಳಿಸಿದ್ದಾರೆ. ಐದು ವರ್ಷಗಳಲ್ಲಿ ಭಾರತ ಪರ 3 ಟೆಸ್ಟ್, 25 ಏಕದಿನ ಮತ್ತು 7 ಟಿ20 ಪಂದ್ಯಗಳನ್ನು ಅವರು ಆಡಿದ್ದು, 2012ರಲ್ಲಿ ಕೊನೆಯ ಬಾರಿಗೆ ಭಾರತ ಪರ ಕಾಣಿಸಿಕೊಂಡಿದ್ದರು. ಒಟ್ಟಾರೆ ಟೀಮ್ ಇಂಡಿಯಾ ಪರ 43 ವಿಕೆಟ್‌ಗಳನ್ನು ಪಡೆದಿದ್ದಾರೆ. ಇದೇ ವೇಳೆ ಐಪಿಎಲ್ ಫ್ರಾಂಚೈಸಿಗಳಿಗೂ ಧನ್ಯವಾದ ಹೇಳಿರುವ ಚಾವ್ಲಾ, 'ನನ್ನ ಮೇಲೆ ನಂಬಿಕೆ ಇಟ್ಟಿದ್ದ ಐಪಿಎಲ್ ಫ್ರಾಂಚೈಸಿಗಳಾದ ಪಂಜಾಬ್ ಕಿಂಗ್ಸ್, ಕೋಲ್ಕತ್ತಾ ನೈಟ್ ರೈಡರ್ಸ್, ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಮುಂಬೈ ಇಂಡಿಯನ್ಸ್‌ಗೆ ಹೃತ್ಪೂರ್ವಕ ಧನ್ಯವಾದಗಳು. ಐಪಿಎಲ್ ಲೀಗ್ ನನ್ನ ವೃತ್ತಿಜೀವನದಲ್ಲಿ ನಿಜವಾಗಿಯೂ ವಿಶೇಷ ಅಧ್ಯಾಯವಾಗಿದೆ ಮತ್ತು ನಾನು ಅದರಲ್ಲಿ ಆಡಿರುವ ಪ್ರತಿ ಕ್ಷಣವನ್ನು ಆನಂದಿಸಿದ್ದೇನೆ ಎಂದಿದ್ದಾರೆ.

ಅಭಿಮಾನಿಗಳ ಜೀವ ಮುಖ್ಯ: ಕಪಿಲ್ ದೇವ್

ದೆಹಲಿ: ಆರ್‌ಸಿಬಿಯ ಈ ವರ್ಷದ ಪ್ರಶಸ್ತಿ ಗೆಲುವಿನ ಸಂಭ್ರಮಾಚರಣೆಯ ವೇಳೆ ಕಾಲ್ತುಳಿತದಿಂದ 11 ಮಂದಿ ಸಾವಿಗೀಡಾಗಿದ್ದರು ಹಾಗೂ 47 ಮಂದಿ ಗಾಯಕ್ಕೆ ತುತ್ತಾಗಿದ್ದ ಪ್ರಕರಣದ ಬಗ್ಗೆ ಭಾರತ ಮಾಜಿ ಕ್ರಿಕೆಟ್ ನಾಯಕ ಕಪಿಲ್ ದೇವ್ ಕೂಡ ಪ್ರತಿಕ್ರಿಯೆ ನೀಡಿದ್ದಾರೆ. 'ಈ ದುರ್ಘಟನೆ ಬಗ್ಗೆ ನನಗೆ ತುಂಬಾ ಬೇಸರವಾಗಿದೆ. ಈ ವಿಷಯದ ಬಗ್ಗೆ ನಾವು ಒಬ್ಬರಿಗೊಬ್ಬರು ಕಲಿಯಬೇಕಾಗಿದೆ. ಮುಂದಿನ ಸಲ ಈ ರೀತಿ ಸಂಭ್ರಮಾಚರಣೆಯಲ್ಲಿ ತೊಡಗುವಾಗ ತುಂಬಾ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಜನರು ತಪ್ಪುಗಳನ್ನು ಮಾಡುವುದು ಸಹಜ. ಸಂಭ್ರಮಾಚರಣೆಯ ಸವಿಯನ್ನು ಆನಂದಿಸುತ್ತಿರುವಾಗ ಜೀವಗಳನ್ನು ಕಳೆದುಕೊಳ್ಳುವಷ್ಟು ದೊಡ್ಡ ತಪ್ಪು ಮಾಡಬಾರದು. ಭವಿಷ್ಯದಲ್ಲಿ ಯಾವುದೇ ತಂಡ ಗೆದ್ದರೆ, ಅದನ್ನು ಶಾಂತವಾಗಿಡಿ. ಆಚರಣೆಗಿಂತ ಜೀವಗಳು ಮುಖ್ಯ, ಅದನ್ನು ಹಾಗೆಯೇ ಇಡೋಣ ಎಂದು ಮಾಜಿ ಆಲ್‌ರೌಂಡರ್ ಕಪಿಲ್ ದೇವ್ ಹೇಳಿದ್ದಾರೆ

ಸೆಮಿ ಫೈನಲ್‌ನಲ್ಲಿ ಸೋತ ಇಗಾ ಸ್ವಾಂಟೆಕ್ | ಬಾಯ್ಸನ್ ವಿರುದ್ಧ ಕೊಕೊ ಗಾಫ್‌ಗೆ ಗೆಲುವು

ಫ್ರೆಂಚ್ ಓಪನ್: ಇಂದು ಸಬಲೆಂಕಾ-ಗಾಫ್ ಫೈನಲ್

ಪ್ಯಾರಿಸ್: ಶನಿವಾರ ಇಲ್ಲಿ ನಡೆಯುವ ಫ್ರೆಂಚ್ ಓಪನ್ ಟೆನ್ನಿಸ್ ಟೂರ್ನಮೆಂಟ್‌ನ ಮಹಿಳೆಯರ ಸಿಂಗಲ್ಸ್ ಫೈನಲ್ ಪಂದ್ಯದಲ್ಲಿ ಶನಿವಾರ ಅರಿನಾ ಸಬಲೆಂಕಾ ಅವರು ಕೊಕೊ ಗಾಫ್ ಅವರನ್ನು ಎದುರಿಸಲಿದ್ದಾರೆ.

ಸತತ ನಾಲ್ಕನೇ ಬಾರಿ ಫ್ರೆಂಚ್ ಓಪನ್ ಕಿರೀಟ ಧರಿಸುವ ಇಗಾ ಸ್ವಾಂಟೆಕ್ ಪ್ರಯತ್ನಕ್ಕೆ ಸೆಮಿಫೈನಲ್‌ನಲ್ಲಿ ವಿಶ್ವದ ಅಗ್ರಮಾನ್ಯ ಆಟಗಾರ್ತಿ ಅರಿನಾ ಸಬಲೆಂಕಾ ಅಡ್ಡಗಾಲು ಹಾಕಿದರು. ಟೂರ್ನಿಯ ಸೆಮಿಫೈನಲ್ ಪಂದ್ಯವನ್ನು ಮೂರು ಸೆಟ್‌ಗಳಲ್ಲಿ ಗೆದ್ದ ಬೆಲರೂಸ್‌ನ ಆಟಗಾರ್ತಿ ಮೊದಲ ಬಾರಿ ರೋಲೆಂಡ್ ಗ್ಯಾರೋಸ್‌ನಲ್ಲಿ ಪ್ರಶಸ್ತಿ ಸುತ್ತಿಗೆ ಕಾಲಿಟ್ಟರು. ಸಬಲೆಂಕಾ 7-6 (7-1), 4-6, 6-0 ಸೆಟ್‌ಗಳಿಂದ ಜಯ ಗಳಿಸಿದರು. ಇದರೊಂದಿಗೆ ಪೋಲೆಂಡ್ ಆಟಗಾರ್ತಿಯ ಸತತ 26 ಗೆಲುವಿನ ಸರಪಣಿ ಮುರಿದು ಹೋಯಿತು.

'ಇದು ಅಪೂರ್ವ ಅನುಭವ, ಆದರೆ ನನ್ನ ಗುರಿ ಇನ್ನೂ ಮುಗಿದಿಲ್ಲ. ಸೆಮಿಫೈನಲ್ ಆಟದ ಪ್ರದರ್ಶನದಿಂದ ರೋಮಾಂಚನಗೊಂಡಿದ್ದೇನೆ' ಎಂದು 27 ವರ್ಷದ ಸಬಲೆಂಕಾ ಸಂಭ್ರಮದಿಂದ ಪ್ರತಿಕ್ರಿಯಿಸಿದ್ದಾರೆ. ಸಬಲೆಂಕಾ ನಾಲ್ಕನೇ ಗ್ರ್ಯಾಂಡ್‌ಸ್ಲಾಮ್ ಪ್ರಶಸ್ತಿಯ ಮೇಲೆ ಕಣ್ಣಿಟ್ಟಿದ್ದಾರೆ. 2024ರಲ್ಲಿ ಅಮೆರಿಕ ಓಪನ್ ಗೆದ್ದುಕೊಂಡ ಅವರು, 2023 ಮತ್ತು 2024ರಲ್ಲಿ ಆಸ್ಟ್ರೇಲಿಯಾ ಟೂರ್ನಿಯಲ್ಲೂ ಚಾಂಪಿಯನ್ ಆಗಿದ್ದರು. ಶ್ವಾಂಟೆಕ್, ವರ್ಷದ ಹಿಂದೆ ಇಲ್ಲಿ ಪ್ರಶಸ್ತಿ ಗೆದ್ದ ನಂತರ ಯಾವುದೇ ಡಬ್ಲ್ಯುಟಿಎ ಟೂರ್ನಿಯ ಫೈನಲ್ ತಲುಪಿರಲಿಲ್ಲ.

ಸೆಮಿಫೈನಲ್‌ನಲ್ಲಿ ಶುಕ್ರವಾರ ಅಮೆರಿಕದ ಕೊಕೊ ಗಾಫ್ ಅವರು ಫ್ರಾನ್ಸ್‌ನ ಲೂಯಿಸ್ ಬಾಯ್ಸನ್ ಅವರ ವಿರುದ್ಧ 6-1, 6-2 ಸೆಟ್‌ಗಳ ನೇರ ಅಂತರದಿಂದ ಗೆದ್ದರು. ಅವರು ಕಳೆದ ವರ್ಷ ಫ್ರೆಂಚ್ ಓಪನ್ ಡಬಲ್ಸ್ ಗೆದ್ದ ತಂಡದ ಪ್ರಮುಖ ಆಟಗಾರ್ತಿಯಾಗಿದ್ದರು. 2023ರ ಯು.ಎಸ್. ಓಪನ್ ಸಿಂಗಲ್ಸ್ ಕಿರೀಟ ಗೆದ್ದಿರುವ ಗಾಫ್, 2019ರಲ್ಲಿ ಮೊದಲ ಬಾರಿಗೆ ಗ್ರ್ಯಾಂಡ್‌ಸ್ಲಾಮ್ ಟೂರ್ನಿಯಲ್ಲಿ ಪ್ರವೇಶ ಪಡೆದಿದ್ದರು.

ಇರಾನಿ-ವಾವಸೋರಿ ಜೋಡಿಗೆ ಪ್ರಶಸ್ತಿ

ಇಟಲಿಯ ಸಾರಾ ಇರಾನಿ-ಆ್ಯಂಡ್ರೆ ವಾವಸೋರಿ ಜೋಡಿ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಮಿಶ್ರ ಡಬಲ್ಸ್ ಪ್ರಶಸ್ತಿ ಗೆದ್ದುಕೊಂಡಿತು, ಇದು ಈ ಜೋಡಿಗೆ ಎರಡನೇ ಗ್ರ್ಯಾಂಡ್‌ಸ್ಲಾಮ್ ಪ್ರಶಸ್ತಿಯಾಗಿದೆ.
ಗುರುವಾರ ನಡೆದಿದ್ದ ಫೈನಲ್‌ನಲ್ಲಿ ಇಟಲಿಯ ಜೋಡಿ 6-4, 6-2ರಿಂದ ಅಮೆರಿಕದ ಟೇಲರ್ ಟೌನ್ಸೆಂಡ್-ಇವಾನ್ ಕಿಂಗ್ ಜೋಡಿಯನ್ನು ಸೋಲಿಸಿತು. 2024ರಲ್ಲಿ ಸಾರಾ-ವಾವಸೋರಿ ಜೋಡಿ ಅಮೆರಿಕ ಓಪನ್ ಟೂರ್ನಿಯಲ್ಲೂ ಮಿಶ್ರ ಡಬಲ್ಸ್ ಪ್ರಶಸ್ತಿ ಜಯಿಸಿತ್ತು, ಆಗಲೂ ಟೌನ್ಸೆಂಡ್ ಫೈನಲ್‌ನಲ್ಲಿ ಸೋತ ಜೋಡಿಯಲ್ಲಿ ಒಬ್ಬರಾಗಿದ್ದರು. 38 ವರ್ಷ ವಯಸ್ಸಿನ ಸಾರಾ, 2012ರಲ್ಲೂ ರೋಲಂಡ್ ಗ್ಯಾರೋಸ್‌ನಲ್ಲಿ ಮಹಿಳಾ ಸಿಂಗಲ್ಸ್ ಫೈನಲ್ ತಲುಪಿದ್ದರು. ತನ್ನ ದೇಶದ ಜಾಸ್ಮಿನ್ ಪಾವೊಲಿನಿ ಅವರ ಜತೆಗೂಡಿ ಕಳೆದ ವರ್ಷ ಪ್ಯಾರಿಸ್ ಒಲಿಂಪಿಕ್ಸ್‌ನ ಮಹಿಳಾ ಡಬಲ್ಸ್ ಪ್ರಶಸ್ತಿ ಗೆದ್ದುಕೊಂಡಿದ್ದರು. ಐದು ಪ್ರಮುಖ ಟೂರ್ನಿಗಳಲ್ಲಿ ಡಬಲ್ಸ್ ಪ್ರಶಸ್ತಿ ಜಯಿಸಿದ ಕೀರ್ತಿ ಅವರದ್ದಾಗಿದೆ.

ಜೂನ್-20ರಿಂದ 5 ಪಂದ್ಯಗಳ ಭಾರತ-ಇಂಗ್ಲೆಂಡ್ ಟೆಸ್ಟ್ ಕ್ರಿಕೆಟ್

ಸರಣಿಗೆ ತೆಂಡೂಲ್ಕರ್ ಆ್ಯಂಡರ್ಸನ್ ಹೆಸರು

ಲಂಡನ್: ಬಹುನಿರೀಕ್ಷಿತ ಭಾರತ ಮತ್ತು ಇಂಗ್ಲೆಂಡ್ ನಡುವಿನ ಟೆಸ್ಟ್ ಸರಣಿಗೆ ಮರುನಾಮಕರಣ ಮಾಡಲಾಗಿದೆ. ಎರಡು ದೇಶಗಳ ದಿಗ್ಗಜ ಆಟಗಾರರಾದ ಸಚಿನ್ ತೆಂಡೂಲ್ಕರ್ ಹಾಗೂ ಜೇಮ್ಸ್ ಆ್ಯಂಡರ್ಸನ್ ಗೌರವಾರ್ಥ 'ತೆಂಡೂಲ್ಕರ್-ಆ್ಯಂಡರ್ಸನ್' ಸರಣಿ ಎಂದು ಹೆಸರಿಡಲಾಗಿದೆ. ಈ ಹಿಂದೆ ಎರಡೂ ತಂಡಗಳ ಸರಣಿಯನ್ನು ಪಟೌಡಿ ಟ್ರೋಫಿ ಎಂದು ಕರೆಯಲಾಗುತ್ತಿತ್ತು. 2007ರಲ್ಲಿ ಉಭಯ ದೇಶಗಳ ನಡುವಿನ ಟೆಸ್ಟ್‌ಗೆ 75 ವರ್ಷ ಪೂರ್ಣಗೊಂಡಾಗ ಆ ಹೆಸರನ್ನು ಇಡಲಾಗಿತ್ತು. ಇನ್ನು ಮುಂದೆ ಈ ಸರಣಿ 'ತೆಂಡೂಲ್ಕರ್-ಆ್ಯಂಡರ್ಸನ್' ಹೆಸರಿನಿಂದ ಕರೆಯಲ್ಪಡಲಿದೆ.

ಭಾರತದ ಇಂಗ್ಲೆಂಡ್ ಅಧಿಕೃತ ಪ್ರವಾಸವು ಜೂನ್ 20ರಂದು ಲೀಡ್ಸ್‌ನ ಹೆಡಿಂಗ್ಲಿಯಲ್ಲಿ ಆರಂಭಿಕ ಟೆಸ್ಟ್‌ನೊಂದಿಗೆ ಆರಂಭವಾಗಲಿದೆ. ಎಡ್ಜ್‌ಬಾಸ್ಟನ್, ಲಾರ್ಡ್ಸ್, ಓಲ್ಡ್ ಟ್ರಾಫರ್ಡ್ ಮತ್ತು ಕೆನ್ನಿಂಗ್ಟನ್ ಓವಲ್‌ನಲ್ಲಿ ಉಳಿದ ನಾಲ್ಕು ಟೆಸ್ಟ್‌ಗಳನ್ನು ಆಯೋಜಿಸಲಿವೆ.

ಭಾರತ ಟೆಸ್ಟ್ ತಂಡ: ಶುಭಮನ್ ಗಿಲ್ (ನಾಯಕ), ರಿಷಭ್ ಪಂತ್(ಉಪ ನಾಯಕ), ಯಶಸ್ವಿ ಜೈಸ್ವಾಲ್, ಕೆ.ಎಲ್ ರಾಹುಲ್, ಸಾಯಿ ಸುದರ್ಶನ್, ಅಭಿಮನ್ಯು ಈಶ್ವರನ್, ಕರುಣ್ ನಾಯರ್, ನಿತೀಶ್ ಕುಮಾರ್ ರೆಡ್ಡಿ, ರವೀಂದ್ರ ಜಡೇಜಾ, ಧ್ರುವ್ ಜುರೆಲ್, ವಾಷಿಂಗ್ಟನ್ ಸುಂದರ್, ಶಾರ್ದೂಲ್ ಠಾಕೂರ್, ಜಸ್‌ಪ್ರೀತ್ ಬುಮ್ರಾ(ಕೆಲವು ಪಂದ್ಯಕ್ಕೆ ಮಾತ್ರ), ಮೊಹಮ್ಮದ್ ಸಿರಾಜ್, ಪ್ರಸಿದ್ಧ್ ಕೃಷ್ಣ, ಆಕಾಶ್ ದೀಪ್, ಅರ್ಷದೀಪ್ ಸಿಂಗ್, ಕುಲದೀಪ್ ಯಾದವ್.

ಇಂಗ್ಲೆಂಡ್ ತಂಡ: ಬೆನ್ ಸ್ಟೋಕ್ಸ್ (ನಾಯಕ), ಶೋಯೆಬ್ ಬಶೀರ್, ಜಾಕೋಬ್ ಬೆಥೆಲ್, ಹ್ಯಾರಿ ಬ್ರೂಕ್, ಬ್ರೈಡನ್ ಕಾರ್ಸೆ, ಸ್ಯಾಮ್ ಕುಕ್, ಜ್ಯಾಕ್ ಕ್ರಾಲಿ, ಬೆನ್ ಡಕೆಟ್, ಜೇಮೀ ಓವರ್ಟನ್, ಓಲಿ ಪೋಪ್, ಜೋ ರೂಟ್, ಜೇಮೀ ಸ್ಮಿತ್, ಜೋಶ್ ಟಂಗ್, ಕ್ರಿಸ್ ವೋಕ್ಸ್.

ಆರ್‌ಸಿಬಿ ಪರ 18 ವರ್ಷ ಆಡಿದ್ದ ಕೊಹ್ಲಿ ಬಗ್ಗೆ ತಂಡದ ಯಶ್ ದಯಾಳ್ ಪ್ರಶಂಸೆ

ಕೊಹ್ಲಿಗಾಗಿ ಮತ್ತೊಂದು ಕಪ್ ಗೆಲ್ಲುತ್ತೇವೆ

ದೆಹಲಿ: ವಿಶ್ವದ ಅತ್ಯಂತ ಶ್ರೀಮಂತ ಫ್ರಾಂಚೈಸಿ ಕ್ರಿಕೆಟ್ ಲೀಗ್ ಎಂದೇ ಬಿಂಬಿಸಿಕೊಂಡಿರುವ ಐಪಿಎಲ್ ಟೂರ್ನಿಯಲ್ಲಿ ಪ್ರಶಸ್ತಿ ಗೆಲ್ಲಬೇಕೆಂಬ ರಾಯಲ್ ಚಾಲೆಂಜರ್ಸ್ ತಂಡದ ಮಾಜಿ ನಾಯಕ ವಿರಾಟ್ ಕೊಹ್ಲಿಯ ಕನಸನ್ನು ಕೊನೆಗೂ ನನಸಾಗಿಸಿದ್ದೇವೆ ಎಂದು ಆರ್‌ಸಿಬಿ ವೇಗಿ ಯಶ್ ದಯಾಳ್ ತಿಳಿಸಿದ್ದಾರೆ. ಭವಿಷ್ಯದಲ್ಲಿ ಇನ್ನೂ ಸಾಕಷ್ಟು ಟ್ರೋಫಿ ಗೆಲ್ಲುತ್ತೇವೆ ಎಂಬ ಭರವಸೆಯನ್ನು ಎಡಗೈ ವೇಗಿ ನೀಡಿದ್ದಾರೆ.

ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದ ಸಂತಸವನ್ನು ವೇಗಿ ಯಶ್ ದಯಾಳ್ ಹಂಚಿಕೊಂಡಿದ್ದು, ವಿರಾಟ್ ಕೊಹ್ಲಿಗಾಗಿ ನಾವು ಈಗ ಏನು ನೀಡಿದ್ದೇವೋ ಅದು ತುಂಬಾ ಕಡಿಮೆ. ಆರ್‌ಸಿಬಿ ಫ್ರಾಂಚೈಸಿ ಪರ 18 ವರ್ಷಗಳಿಂದ ಆಡಿರುವ ಅವರು, ಅನೇಕ ಏರಿಳಿತಗಳನ್ನು ಕಂಡಿದ್ದಾರೆ. ಆದರೆ ಕೊನೆಗೂ ಅವರಿಗಾಗಿ ಟ್ರೋಫಿ ಗೆದ್ದಿರುವುದು ಸಂತಸ ತಂದಿದೆ. ಭವಿಷ್ಯದಲ್ಲಿ ಇನ್ನೂ ಅವರಿಗೆ ಸಾಕಷ್ಟು ಟ್ರೋಫಿ ಗೆಲ್ಲುತ್ತೇವೆ ಎಂದು ಎಡಗೈ ವೇಗಿ ಭರವಸೆಯನ್ನು ನೀಡಿದ್ದಾರೆ.

ಆರ್‌ಸಿಬಿ ತಂಡದ ಅನುಭವಿ ವೇಗಿಗಳಾದ ಭುವನೇಶ್ವರ್ ಕುಮಾರ್ ಹಾಗೂ ಜಾಶ್ ಹೇಜಲ್‌ವುಡ್ ಅವರೊಂದಿಗೆ ಬೌಲಿಂಗ್ ಹಂಚಿಕೊಂಡ ಅನುಭವದ ಕುರಿತೂ ದಯಾಳ್ ತಮ್ಮ ಅನಿಸಿಕೆ ತಿಳಿಸಿದ್ದಾರೆ.

'ಅವರಿಬ್ಬರು ನಿಜಕ್ಕೂ ವಿಶ್ವಶ್ರೇಷ್ಠ ಬೌಲರ್‌ಗಳು. ಮೆಗಾ ಹರಾಜಿನಲ್ಲಿ ಭುವಿ ಭಯ್ಯಾ ಹಾಗೂ ಜಾಶ್ ಹೇಜಲ್‌ವುಡ್ ಅವರು ತಂಡ ಕೂಡಿಕೊಂಡ ನಂತರ ನನ್ನ ಕೆಲಸ ಸುಲಭವಾಯಿತು, ಅದರಿಂದ ನನ್ನ ಮೇಲಿನ ಒತ್ತಡವೂ ಕಡಿಮೆಯಾಯಿತು. ನಮ್ಮ ಬೌಲಿಂಗ್ ಯೋಜನೆಯು ಸರಳವಾಗಿದ್ದು, ಪ್ರತಿ ಪಂದ್ಯದಲ್ಲೂ ಅದಕ್ಕೆ ಬದ್ಧರಾಗಿದ್ದೆವು. ನಾನು ಅವರೊಂದಿಗೆ ಬೌಲಿಂಗ್ ಅನ್ನು ಆನಂದಿಸಿದ್ದು, ಮುಂದಿನ ದಿನಗಳಲ್ಲೂ ಅವರೊಂದಿಗೆ ಚೆಂಡು ಹಂಚಿಕೊಳ್ಳಲು ಸಂತಸಪಡುತ್ತೇನೆ. ಜಾಶ್ ಹೇಜಲ್‌ವುಡ್ ಅವರಿಂದ ಪರಿಪೂರ್ಣವಾಗಿ ಬೌಲ್ ಮಾಡುವ ವಿಧಾನ ಕಲಿತುಕೊಂಡೆ. ನಿಯಮಿತ ಸಮಯದವರೆಗೂ ನಾವು ನಾಣ್ಯವನ್ನು ಗುರಿಯಾಗಿಸಿ ಬೌಲ್ ಮಾಡುತ್ತಿದ್ದರೆ ಆಗ ಆಫ್ ಸ್ಟಂಪ್ ಮೇಲೆ ಬೌಲ್ ಮಾಡಲು ಸುಲಭವಾಗುತ್ತದೆ ಎಂದು ಯಶ್ ದಯಾಳ್ ಹೇಳಿದ್ದಾರೆ.

ಕ್ರಿಕೆಟ್ ಸರಣಿಗಳ ಬಳಿಕವೂ ಒತ್ತಡ ಸದಾ ಸಹಜ ಎಂದ ಹೆಡ್ ಕೋಚ್

ಟ್ರೋಫಿ ಗೆದ್ದ ಹೊರತಾಗಿಯೂ ಒತ್ತಡ: ಗಂಭೀರ್

ದೆಹಲಿ: ರೋಹಿತ್ ಶರ್ಮಾ ಅವರ ನಾಯಕತ್ವದಲ್ಲಿ ಭಾರತ ತಂಡವು 2025ರ ಐಸಿಸಿ ಚಾಂಪಿಯನ್ಸ್ ಟ್ರೋಫಿಯನ್ನು ಮುಡಿಗೇರಿಸಿಕೊಂಡಿತ್ತು, ಇದರ ಹೊರತಾಗಿಯೂ ನಮ್ಮ ಮೇಲೆ ಒತ್ತಡವಿತ್ತು ಎಂದು ಟೀಮ್ ಇಂಡಿಯಾ ಹೆಡ್‌ಕೋಚ್ ಗೌತಮ್ ಗಂಭೀರ್ ತಿಳಿಸಿದ್ದಾರೆ. ಭಾರತ ತಂಡ ಗೆಲ್ಲಲಿ ಅಥವಾ ಸೋಲಲಿ ಹೆಡ್ ಕೋಚ್ ಆಗಿ ನನ್ನ ಮೇಲೆ ಯಾವಾಗಲೂ ಒತ್ತಡ ಇರುತ್ತದೆ ಎಂದೂ ಅವರು ಹೇಳಿದ್ದಾರೆ.

ಗಂಭೀರ್ ಹೆಡ್ ಕೋಚ್ ಆದ ಬಳಿಕ ನ್ಯೂಜಿಲೆಂಡ್ ವಿರುದ್ಧದ ಟೆಸ್ಟ್ ಸರಣಿಯಲ್ಲಿ ಟೀಮ್ ಇಂಡಿಯಾ ವೈಟ್‌ವಾಷ್ ಆಘಾತ ಅನುಭವಿಸಿತ್ತು, ನಂತರ ಆಸ್ಟ್ರೇಲಿಯಾ ವಿರುದ್ಧ ಬಾರ್ಡರ್-ಗವಾಸ್ಕರ್ ಟ್ರೋಫಿಯಲ್ಲಿಯೂ ಸೋಲು ಅನುಭವಿಸಿತ್ತು. ಅದರ ಪರಿಣಾಮವಾಗಿ ಭಾರತ ತಂಡವು ಮೂರನೇ ಆವೃತ್ತಿಯ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್‌ಗೆ ಅರ್ಹತೆ ಪಡೆಯುವಲ್ಲಿ ವಿಫಲವಾಗಿತ್ತು.

ಇಂಗ್ಲೆಂಡ್‌ಗೆ ಪ್ರವಾಸಕ್ಕೆ ತೆರಳುವುದಕ್ಕೂ ಮುನ್ನ ನಾಯಕ ಶುಭಮನ್ ಗಿಲ್ ಜೊತೆ ಸುದ್ದಿಗೋಷ್ಠಿಯನ್ನು ಹಮ್ಮಿಕೊಂಡಿದ್ದ ಗೌತಮ್ ಗಂಭೀರ್ ಹಲವು ವಿಷಯಗಳ ಬಗ್ಗೆ ಮಾತನಾಡಿದ್ದಾರೆ.

'ಫಲಿತಾಂಶ ಪಡೆಯಲಿ ಅಥವಾ ಇಲ್ಲದೇ ಇರಲಿ, ನಾನು ಯಾವಾಗಲೂ ಒತ್ತಡದಲ್ಲಿರುತ್ತೇನೆ. ನ್ಯೂಜಿಲೆಂಡ್ ಸರಣಿಯ ಬಳಿಕ ನೀವು ಈ ಪ್ರಶ್ನೆಯನ್ನು ಕೇಳಿದ್ದರೂ, ಹೌದು, ನಾನು ಒತ್ತಡದಲ್ಲಿದ್ದೇನೆಂದು ಹೇಳುತ್ತಿದ್ದೆ. ಆಸ್ಟ್ರೇಲಿಯಾ ಪ್ರವಾಸದ ಬಳಿಕವೂ ಕೂಡ ನಾನು ಒತ್ತಡದಲ್ಲಿದ್ದೇನೆಂದು ಹೇಳುತ್ತಿದ್ದೆ' ಎಂದು ಗೌತಮ್ ಗಂಭೀರ್ ತಿಳಿಸಿದ್ದಾರೆ.

ನಾಯಕತ್ವದ ಬಗ್ಗೆ ಗಿಲ್ ಹೇಳಿಕೆ: 'ನಾನು ಅನುಸರಿಸಬೇಕಾದ ಯಾವುದೇ ಶೈಲಿ ನನಗೆ ಇಲ್ಲ. ನಾನು ಆಟಗಾರರೊಂದಿಗೆ ಸಂವಹನ ನಡೆಸುವುದನ್ನು ಇಷ್ಟಪಡುತ್ತೇನೆ, ಅವರಿಗೆ ಸುರಕ್ಷಿತ ಭಾವನೆ ಮೂಡಿಸುವುದನ್ನು, ಅವರ ದೌರ್ಬಲ್ಯ ಮತ್ತು ಸಾಮರ್ಥ್ಯಗಳ ಬಗ್ಗೆ ಮಾತನಾಡುವುದನ್ನು, ಅವರಿಗೆ ಸಾಂತ್ವನ ಮತ್ತು ಅವರೊಂದಿಗೆ ಬಾಂಧವ್ಯದಲ್ಲಿರುವುದನ್ನು ಇಷ್ಟಪಡುತ್ತೇನೆ. ಯಾವುದೇ ತಂಡದ ನಾಯಕನಾಗಿದ್ದಾಗ ಅದು ಬಹಳ ಮುಖ್ಯವಾಗುತ್ತದೆ. ಸುರಕ್ಷಿತ ಭಾವನೆ ಇದ್ದಾಗ ಮಾತ್ರ ಆಟಗಾರರು ತಂಡಕ್ಕೆ ಶೇ.100ರಷ್ಟು ಕೊಡುಗೆಯನ್ನು ನೀಡಲು ಸಾಧ್ಯ' ಎಂದು ಭಾರತ ತಂಡದ ನೂತನ ನಾಯಕ ಗಿಲ್ ತಿಳಿಸಿದ್ದಾರೆ.



ಭಾರ್ಗವನಿಗೆ ಮುಹೂರ್ತ

ಕುಟುಂಬ ಚಿತ್ರದ ಬಳಿಕ ನಿರ್ದೇಶಕ ನಾಗಣ್ಣ ಹಾಗೂ ಉಪೇಂದ್ರ ಮತ್ತೆ ಒಂದಾಗಿದ್ದಾರೆ. ಇವರಿಬ್ಬರ ಕಾಂಬಿನೇಷನ್‌ನಲ್ಲಿ ಭಾರ್ಗವ ಶೀರ್ಷಿಕೆಯಲ್ಲಿ ಸಿನಿಮಾ ಸೆಟ್ಟೇರಿದೆ. ಭಾರ್ಗವ ಚಿತ್ರದ ಮುಹೂರ್ತ ಅಲಸೂರು ಸೋಮೇಶ್ವರ ದೇವಸ್ಥಾನದಲ್ಲಿ ನೆರವೇರಿತು. ನಿರ್ಮಾಪಕ ಆನಂದಪ್ಪ ಚಿತ್ರದ ಮೊಲದ ಸನ್ನಿವೇಶಕ್ಕೆ ಕ್ಲಾಪ್ ಮಾಡಿ ಶುಭಕೋರಿದರು. ನಿರ್ದೇಶಕ ನಾಗಣ್ಣ, ಉಪೇಂದ್ರ, ನಿರ್ಮಾಪಕ ಸೂರಪ್ಪ ಬಾಬು ಮುಂತಾದವರು ಮುಹೂರ್ತ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಭಾರ್ಗವ ಶೀರ್ಷಿಕೆಯೇ ಅದ್ಭುತವಾಗಿದೆ. ಅಂತೆಯೇ ಒಳ್ಳೆಯ ಕಂಟೆಂಟ್ ಚಿತ್ರದಲ್ಲಿದೆ. ಉಪೇಂದ್ರ ಮತ್ತೊಮ್ಮೆ ಪವರ್ ಫುಲ್ ರೋಲ್‌ನಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ನಾಗಣ್ಣನ ಸಿನಿಮಾಗಳು ಎಂದರೆ ಫ್ಯಾಮಿಲಿ ಸೆಂಟಿಮೆಂಟ್ ಮುಖ್ಯವಾಗಿರುತ್ತದೆ. ಅದು ಈ ಚಿತ್ರದಲ್ಲಿಯೂ ಮುಂದುವರಿದೆ. ಅದರ ಜತೆಗೆ ಲವ್ ಸೆಂಟಿಮೆಂಟ್ ಕೂಡ ಸಿನಿಮಾದಲ್ಲಿ ಬೆರೆತಿದೆ.

ನಟಿ ಅಂಕಿತಾ ಅಮರ್ ಸೇರಿದಂತೆ ಹಲವರು ತಾರಾಬಳಗದಲ್ಲಿದ್ದಾರೆ. ಕೋಟಿಗೊಬ್ಬ 3ಯಂತಹ ಅದ್ದೂರಿ ಸಿನಿಮಾಗಳನ್ನು ನಿರ್ಮಿಸಿರುವ ಸೂರಪ್ಪ ಬಾಬು ಈ ಚಿತ್ರಕ್ಕೂ ಬಂಡವಾಳ ಹೂಡಿದ್ದು, ಭಾರ್ಗವ ಕೂಡ ಅದ್ದೂರಿಯಾಗಿ ಮೂಡಿಬರಲಿದೆ. ಇದೇ 23ರಿಂದ ಚಿತ್ರದ ಶೂಟಿಂಗ್ ಆರಂಭವಾಗಲಿದೆ. ಯುಐನಲ್ಲಿ ವಿಭಿನ್ನ ಕಥೆ ಹೇಳಿ ರಂಜಿಸಿದ ಉಪೇಂದ್ರ, ಸದ್ಯ ರಜನಿಕಾಂತ್ ಅಭಿನಯದ ಕೂಲಿ ಚಿತ್ರದಲ್ಲಿ ನಟಿಸುತ್ತಿದ್ದಾರೆ. ಅದರ ಜತೆಗೆ ಟಾಲಿವುಡ್ ಚಿತ್ರದಲ್ಲಿಯೂ ಅಭಿನಯಿಸುತ್ತಿದ್ದಾರೆ. ಹೀಗೆ ಸಾಲು ಸಾಲು ಸಿನಿಮಾಗಳಲ್ಲಿ ಉಪ್ಪಿ ಬ್ಯುಸಿಯಾಗಿದ್ದಾರೆ. ಇನ್ನೇನು ಭಾರ್ಗವ ಚಿತ್ರತಂಡ ಸೇರಲಿದ್ದಾರೆ.

ಅಂತಿಮ ಘಟ್ಟದಲ್ಲಿ ಸರಿಗಮಪ

ಕಿರುತೆರೆಯ ರಿಯಾಲಟಿ ಶೋಗಳಲ್ಲಿ ಸರಿಗಮನಪ ಪ್ರೇಕ್ಷಕರು ಮನಸೂರೆಗೊಂಡಿದೆ. ಗಾನ ಪ್ರತಿಭೆಗಳಿಗೆ ಸೂಕ್ತ ವೇದಿಕೆಯಾಗಿದೆ. ಆರು ವರುಷದಿಂದ ಅರವತ್ತು ವರುಷದವರೆಗಿನ ವಯೋಮಿತಿಯ ಸ್ಪರ್ಧಿಗಳು ಭಾಗವಹಿಸಿದ ಈ ಆವೃತ್ತಿ ಜನರ ಪ್ರಶಂಸೆಗೆ ಪಾತ್ರವಾಗಿದೆ.

ಇನ್ನು ಈ ಆವೃತ್ತಿಯು ಅಂತಿಮ ಘಟ್ಟ ತಲುಪಿದ್ದು ಆರು ಸ್ಪರ್ಧಿಗಳಲ್ಲಿ ಸ ರಿ ಗ ಮ ಪ ಟೈಟಲ್ ಯಾರ ಮುಡಿಗೇರಲಿದೆ ಎಂಬ ಕುತೂಹಲ ಎಲ್ಲರಲ್ಲಿಯೂ ಇದೆ. ಹೆಚ್ಚಾಗಿದೆ. ಈ ಆವೃತ್ತಿಯಲ್ಲಿ ಸ್ಪರ್ಧಿಗಳ ನಡುವೆ ಕೇವಲ ಪೈಪೋಟಿ ಮಾತ್ರವಲ್ಲದೇ ಅವರ ಸ್ಫೂರ್ತಿದಾಯಕ ಕಥೆಗಳು ಕೂಡ ಜನರನ್ನು ಪ್ರೇರೇಪಿಸಿದೆ. ಕಾರ್ಯಕ್ರಮದಲ್ಲಿ ಕರ್ನಾಟಕದ ಮತ್ತು ದೇಶದ ಹಲವು ಭಾಗಗಳಿಂದ ಸ್ಪರ್ಧಿಗಳು ಪಾಲ್ಗೊಂಡಿದ್ದರು. ದ್ಯಾಮೇಶ, ಬಾಳು ಬೆಳಗುಂದಿ, ಶಿವಾನಿ, ಆರಾಧ್ಯಾ ರಾವ್, ರಶ್ಮಿ, ಅಮೋಘ ವರ್ಷ ಫೈನಲ್ ತಲುಪಿದ್ದಾರೆ. ವಿಜಯ ಪ್ರಕಾಶ್, ರಾಜೇಶ್ ಕೃಷ್ಣನ್ ಮತ್ತು ಅರ್ಜುನ್ ಜನ್ಯ ಫಿನಾಲೆಯಲ್ಲಿ ತೀರ್ಪುಗಾರರಾಗಿದ್ದು, ಅತ್ಯುತ್ತಮ ಗಾಯಕನನ್ನು ಆರಿಸಲಿದ್ದಾರೆ. ವಿಶೇಷ ಎಂದರೆ ವೀಕ್ಷಕರು ಫಿನಾಲೆಯನ್ನು ಲೈವ್ ಆಗಿ ವೀಕ್ಷಿಸಬಹುದಾಗಿದೆ.

ಉಳಿದವರು ಕಂಡಂತೆ ಬರಲಿದೆ ಸೀಕ್ವೆಲ್

ನಟ, ನಿರ್ದೇಶಕ ರಕ್ಷಿತ್ ಶೆಟ್ಟಿ ಹುಟ್ಟುಹಬ್ಬದ ಸಂಭ್ರಮದಲ್ಲಿದ್ದಾರೆ. ರಕ್ಷಿತ್‌ಗೆ ಅಭಿಮಾನಿಗಳು, ಸ್ನೇಹಿತರು ಶುಭಕೋರಿ ಸಂಭ್ರಮಿಸಿದ್ದಾರೆ. ರಕ್ಷಿತ್ ಸಪ್ತ ಸಾಗದರಾಚೆ ಎಲ್ಲೋ ಚಿತ್ರದ ಬಳಿಕ ಯಾವ ಸಿನಿಮಾದಲ್ಲಿಯೂ ಕಾಣಿಸಿಕೊಳ್ಳಲಿಲ್ಲ. ಈ ಚಿತ್ರಕ್ಕೂ ಮೊದಲೇ ರಿಚರ್ಡ್ ಆಂಟನಿ ಸಿನಿಮಾದಲ್ಲಿ ನಟಿಸಲು ರಕ್ಷಿತ್ ತಯಾರಿ ಮಾಡಿಕೊಂಡಿದ್ದರು. ಹೊಂಬಾಳೆ ಫಿಲಂಸ್ ಬ್ಯಾನರ್‌ನಲ್ಲಿ ನಿರ್ಮಾಣವಾಗಲಿರುವ ಈ ಚಿತ್ರವನ್ನು ರಕ್ಷಿತ್ ಶೆಟ್ಟಿ ಅವರೇ ನಿರ್ದೇಶನ ಮಾಡಲಿದ್ದಾರೆ. ರಕ್ಷಿತ್ ಬರ್ತ್‌ಡೇಗೆ ರಿಚರ್ಡ್ ಆಂಟನಿ ಚಿತ್ರದಿಂದ ಗಿಫ್ಟ್ ಸಿಗಬಹುದು ಎಂಬ ನಿರೀಕ್ಷೆ ಇತ್ತು. ಆದರೆ ಚಿತ್ರತಂಡ ಯಾವುದೇ ಅಪ್ಡೇಟ್ ಸಿಕ್ಕಿಲ್ಲ. ಹಾಗಾಗಿ ರಿಚರ್ಡ್ ಆಂಟನಿ ಚಿತ್ರದ ಇನ್ನು ತಡವಾಗಬಹುದು ಎನ್ನಲಾಗುತ್ತಿದೆ. ಈ ಹಿಂದೆಯೇ ಚಿತ್ರದ ಟೈಟಲ್ ಟಿಸರ್ ರಿಲೀಸ್ ಆಗಿತ್ತು. ಆದರೆ ಚಿತ್ರದ ಶೂಟಿಂಗ್ ಕೊಂಚ ತಡವಾಗಲಿದೆ.

ಇನ್ನು ರಕ್ಷಿತ್ ನಟಿಸಿ, ನಿರ್ದೇಶಿಸಿದ್ದ ಉಳಿದವರು ಕಂಡಂತೆ ಸಿನಿಮಾ ತೆರೆಗೆ ಬಂದು ಹತ್ತು ವರ್ಷಗಳೇ ಕಳೆದಿವೆ. ಈಗ ಉಳಿದವರು ಕಂಡಂತೆ ಚಿತ್ರದ ಸೀಕ್ವೆಲ್ ಆಧರಿಸಿ ಮುಂದಿನ ಭಾಗ ಮೂಡಿಬರಲಿದೆ. ರಕ್ಷಿತ್ ಶೆಟ್ಟಿ ಅವರೇ ಈ ಚಿತ್ರವನ್ನು ನಿರ್ಮಾಣ ಮಾಡಲಿದ್ದಾರೆ. ಪ್ರಮೋದ್ ಶೆಟ್ಟಿ, ರಿಷಬ್ ಶೆಟ್ಟಿ ಈ ಸಿನಿಮಾದಲ್ಲಿ ನಟಿಸುವುದು ಬಹುತೇಕ ಖಚಿತವಾಗಿದೆ.

ಉಳಿದವರು ಕಂಡಂತೆ ಯಶಸ್ಸು ಕಂಡು, ಹಿಂದಿಗೂ ಡಬ್ ಆಗಿತ್ತು. ಹಾಗಾಗಿ ಚಿತ್ರದ ಮುಂದಿನ ಭಾಗ ಕೂಡ ಯಶಸ್ಸು ಪಡೆಯಲಿದೆ ಎಂಬ ನಿರೀಕ್ಷೆ ಸಿನಿಪ್ರಿಯರಲ್ಲಿದೆ. ಚಿತ್ರಕ್ಕಾಗಿ ಕಾದು ಕುಳಿತ್ತಿದ್ದಾರೆ. ಇನ್ನು ಈ ಚಿತ್ರದ ಜತೆಗೆ ಪುಣ್ಯಕೋಟಿ ಚಿತ್ರವನ್ನು ನಿರ್ದೇಶಿಸಲು ರಕ್ಷಿತ್ ತಯಾರಿ ಮಾಡಿಕೊಂಡಿದ್ದಾರೆ. ಇದು ಹೈಬಜೆಟ್ ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು, ಅದ್ದೂರಿಯಾಗಿ ನಿರ್ಮಾಣವಾಗಲಿದೆ. ಪುಣ್ಯ ಕೋಟಿ ಎರಡು ಭಾಗಗಳಲ್ಲಿ ಮೂಡಿಬರಲಿದೆ. ಎಲ್ಲವೂ ಅಂದುಕೊಂಡಂತೆ ಆದರೆ ಸಿನಿಮಾ ಶೀಘ್ರವೇ ಸೆಟ್ಟೇರಲಿದೆ.

ತೆರೆಗೆ ಸಿದ್ಧವಾದ ಜಿಎಸ್‌ಟಿ

ನಟ ಸೃಜನ್ ಲೋಕೇಶ್ ಹಲವು ಚಿತ್ರಗಳಲ್ಲಿ ನಟಿಸಿ ಪ್ರಸಿದ್ಧಿ ಪಡೆದಿದ್ದಾರೆ. ಅದರ ಜತೆಗೆ ಕಿರುತೆರೆಯ ಕಾಮಿಡಿ ರಿಯಾಲಿಟಿ ಶೋಗಳಲ್ಲಿ ಬ್ಯುಸಿಯಾಗಿದ್ದಾರೆ. ಪ್ರೇಕ್ಷಕರನ್ನು ಹಾಸ್ಯದ ಹೊನಲಿನಲ್ಲಿ ತೇಲಿಸುತ್ತಿದ್ದಾರೆ. ಸೃಜನ್ ಜಿಎಸ್‌ಟಿ ಚಿತ್ರವನ್ನು ನಿರ್ದೇಶಿಸಿದ್ದು ಆ ಮೂಲಕ ನಿರ್ದೇಶಕನಾಗಿಯೂ ಗುರುತಿಸಿಕೊಳ್ಳುತ್ತಿದ್ದಾರೆ. ಶೂಟಿಂಗ್ ಮುಗಿಸಿರುವ ಜಿಎಸ್‌ಟಿ ತೆರೆಗೆ ಬರಲು ಸಿದ್ಧವಾಗಿದೆ. ಅದ್ದೂರಿ ವೆಚ್ಚದ ಚಿತ್ರ ಇದಾಗಿದ್ದು, ಸಂದೇಶ್ ಪ್ರೊಡಕ್ಷನ್‌ನಲ್ಲಿ ಎನ್.ಸಂದೇಶ್ ನಿರ್ಮಾಣ ಮಾಡಿದ್ದಾರೆ. ಜಿಎಸ್‌ಟಿ ಚಿತ್ರವನ್ನು ವೀಕ್ಷಿಸಿದ ಪ್ರಾದೇಶಿಕ ಸೆನ್ಸಾರ್ ಮಂಡಳಿ ಯು/ಎ ಪ್ರಮಾಣಪತ್ರವನ್ನು ನೀಡಿದೆ. ಮನರಂಜನೆಯೇ ಪ್ರಧಾನವಾಗಿರುವ ಜಿಎಸ್‌ಟಿ ಚಿತ್ರಕ್ಕೆ ಘೋಸ್ಟ್ ಇನ್ ಟ್ರಬಲ್ ಎಂಬ ಅಡಿಬರಹವಿದೆ.

ಜಿಎಸ್‌ಟಿ ಚಿತ್ರ ಹಲವು ವಿಶೇಷತೆಗಳನ್ನೊಳಗೊಂಡಿದೆ. ಈ ಚಿತ್ರದಲ್ಲಿ ನಿರ್ಮಾಪಕ ಸಂದೇಶ್ ಪ್ರಮುಖ ಪಾತ್ರದಲ್ಲಿ ನಟಸಿದ್ದು, ಅವರ ಪಾತ್ರ ಏನೆಂಬುದ್ದನ್ನು ನಿರ್ದೇಶಕ ಸೃಜನ್ ಲೋಕೇಶ್ ರಿವಿಲ್ ಮಾಡಿಲ್ಲ. ಸೃಜನ್ ಲೋಕೇಶ್ ನಾಯಕನಾಗಿ ನಟಿಸಿದ್ದು, ಗಿರಿಜಾ ಲೋಕೇಶ್, ಸೃಜನ್ ಸೃಜನ್ ಪುತ್ರ ಸುಕೃತ್ ಮೂರು ಜನ ಈ ಸಿನಿಮಾದಲ್ಲಿ ಅಭಿನಯಿಸಿದ್ದಾರೆ. ಅಜ್ಜಿ, ಮಗ ಹಾಗೂ ಮೊಮ್ಮಗ ಮೂರು ಜನರನ್ನು ಒಟ್ಟಿಗೆ ತೆರೆಯ ಮೇಲೆ ಈ ಚಿತ್ರದಲ್ಲಿ ನೋಡಬಹುದು. ಸೃಜನ್ ಲೋಕೇಶ್‌ಗೆ ನಾಯಕಿಯಾಗಿ ರಜನಿ ಭಾರದ್ವಾಜ್ ನಟಿಸಿದ್ದಾರೆ. ಉಳಿದಂತೆ ಪ್ರಮೋದ್ ಶೆಟ್ಟಿ, ಗಿರಿಜಾ ಲೋಕೇಶ್, ಶೋಭ್ ರಾಜ್, ಶರತ್ ಲೋಹಿತಾಶ್ವ, ನಿವೇದಿತಾ, ಅರವಿಂದ್ ರಾವ್, ತಬಲ ನಾಣಿ, ರವಿಶಂಕರ್ ಗೌಡ, ವಿನೋದ್ ಗೊಬ್ಬರಗಾಲ, ಮುಂತಾದವರು ಈ ಸಿನಿಮಾದ ತಾರಾಬಳಗದಲ್ಲಿದ್ದಾರೆ. ಚಂದನ್ ಶೆಟ್ಟಿ ಸಂಗೀತ ನಿರ್ದೇಶನ ಹಾಗೂ ಗುಂಡ್ಲುಪೇಟೆ ಸುರೇಶ್ ಛಾಯಾಗ್ರಹಣ ಈ ಚಿತ್ರಕ್ಕಿದ್ದು, ರಾಜಶೇಖರ್ ಸಂಭಾಷಣೆ ಬರೆದಿದ್ದಾರೆ.



ವಿಟಾಕೀಸ್

ನೆನಪಿನ ಅಲೆಯಲಿ ಪ್ರೇಮದ ಪಯಣ

ಪ್ರೇಮಕಥೆಯ ಸಿನಿಮಾಗಳು ಯುವ ಸಮೂಹವನ್ನು ಸೆಳೆಯುತ್ತವೆ. ಅಂತೆಯೇ ಕಾಲೇಜ್ ಕಲಾವಿದ ಚಿತ್ರವೂ ಲವ್ ಸ್ಟೋರಿಯನ್ನು ಹೊತ್ತು ಬಂದಿದ್ದು ಎಲ್ಲರನ್ನೂ ರಂಜಿಸುತ್ತದೆ. ಕಾಲೇಜು ಎಂದ ಮೇಲೆ ಅಲ್ಲಿ ಹುಡುಗರ ತರಲೆ ತುಂಟಾಟ ಸಾಮಾನ್ಯ. ಅದು ಈ ಚಿತ್ರದಲ್ಲಿಯೂ ಇದೆ. ಆತ ಆರ್ಯ ಅದ್ಭುತ ಚಿತ್ರ ಕಲಾವಿದ ಎಲ್ಲರೂ ಆತನ ಚಿತ್ರಕಲೆಗೆ ಮಾರು ಹೋಗುತ್ತಾರೆ. ಹಾಗಾಗಿ ಆರ್ಯ ಎಂದರೆ ಎಲ್ಲರಿಗೂ ಅಚ್ಚುಮೆಚ್ಚು.

ಅವನಿಗೊಂದಷ್ಟು ಗೆಳೆಯರ ಬಳಗವೂ ಇರುತ್ತದೆ, ಹೀಗಿರುವಾಗ ಆ ಕಾಲೇಜಿಗೆ ನಾಯಕಿ ಸಾರಿಕಾ ತಡವಾಗಿ ದಾಖಲಾಗುತ್ತಾಳೆ. ಕೆಲವೇ ದಿನಗಳಲ್ಲಿ ಆಕೆಗೆ ಆರ್ಯನ ಚಿತ್ರಕಲೆಯ ಮೇಲೆ ಅಭಿಮಾನ ಮೂಡುತ್ತದೆ. ಚಿತ್ರಕಲೆಯೇ ಆರ್ಯ, ಸಾರಿಕಾಳನ್ನು ಬೆಸೆಯುತ್ತದೆ. ಇಬ್ಬರ ಗೆಳತನ ಪ್ರೀತಿಗೆ ತಿರುಗುತ್ತದೆ. ಇನ್ನೇನು ಇಬ್ಬರು ಒಂದಾಗುತ್ತಾರೆ ಎನ್ನುವಾಗಲೇ ಒಂದು ಟ್ವಿಸ್ಟ್, ಆರ್ಯ ಸಾರಿಕಾ ಇಬ್ಬರು ಬೇರೆಯಾಗುತ್ತಾರೆ. ಅದು ಯಾಕೆ ಏನು, ಎಂಬುದೇ ಸಸ್ಪೆನ್ಸ್. ಕೊನೆಗೆ ನಾಯಕ-ನಾಯಕಿ ಒಂದಾಗುತ್ತಾರಾ ಎಂಬುದನ್ನು ಸಿನಿಮಾ ನೋಡಿಯೇ ತಿಳಿಯಬೇಕು. ಇಂದಿನ ಕಾಲಕ್ಕೆ ಹೊಂದುವ ಕಳೆದ ಸುಮಧುರ ನೆನೆಪುಗಳನ್ನು ಮರುಕಳಿಸುವಂತೆ ಮಾಡುವ ಕಥೆಯನ್ನು ಹೆಣೆದಿರುವ ನಿರ್ದೇಶಕ ಸಂಜಯ್ ಮಳವಳ್ಳಿ ಅದನ್ನು ಎಲ್ಲರ ಮನಕ್ಕೆ ಮುಟ್ಟುವಂತೆ ತೆರೆಯಲ್ಲಿ ಕಟ್ಟಿಕೊಟ್ಟಿದ್ದಾರೆ. ಚಿತ್ರ ಕಲಾವಿದನ ಆರ್ಯನಾಗಿ ಆರವ್ ಸೂರ್ಯ ಮೆಚ್ಚುವ ಅಭಿನಯ ತೋರಿದ್ದಾರೆ. ಡ್ಯಾನ್ಸ್, ಫೈಟ್‌ನಲ್ಲಿ ಆರವ್‌ಗೆ ಫುಲ್ ಮಾರ್ಕ್ಸ್ ನೀಡಬಹುದು. ಇನ್ನು ಸಾರಿಕಾಳಾಗಿ ಚೈತ್ರಾ ಕೂಡ ಮುಗ್ಧ ಹುಡುಗಿಯಾಗಿ ಮನಸೆಳೆಯುತ್ತಾರೆ. ಹುಲಿ ಕಾರ್ತಿಕ್ ಇಲ್ಲಿಯೂ ಕಾಮಿಡಿ ಕಚಗುಳಿ ಇಡುತ್ತಾರೆ. ಅವರು ತೆರೆಯಲ್ಲಿ ಬಂದಾಗಲೆಲ್ಲ ನಗಿಸುತ್ತಾರೆ. ರಮೇಶ್ ಭಟ್ ನಾಯಕಿಯ ತಂದೆಯಾಗಿ ನಟಿಸಿದ್ದು ಅದ್ಭುತ ಅಭಿನಯದ ಮೂಲಕ ಮನಗೆಲ್ಲುತ್ತಾರೆ. ಹರಿಣಿ ಶ್ರೀಕಾಂತ್ ನಾಯಕಿಯ ತಾಯಿಯಾಗಿ ಕಾಣಿಸಿಕೊಂಡಿದ್ದು ತಮ್ಮ ಪಾತ್ರಕ್ಕೆ ಜೀವತುಂಬಿದ್ದಾರೆ.

ಸೂರಜ್ ಜೋಯಿಸ್ ಸಂಗೀತ ನಿರ್ದೇಶನದಲ್ಲಿ ಮೂಡಿಬಂದಿರುವ ಹಾಡುಗಳು ಮಧುರವಾಗಿದ್ದು ಮನದಲ್ಲಿ ಗುನುಗುನಿಸುತ್ತವೆ. ಛಾಯಾಗ್ರಹಣಕ್ಕೂ ಫುಲ್ ಮಾರ್ಕ್ಸ್ ನೀಡಬಹುದು. ಒಟ್ಟಾರೆ ಕಾಲೇಜ್ ಕಲಾವಿದ ಯುವ ಸಮೂಹಕ್ಕೆ ಸೀಮಿತವಾದ ಕಥೆಯಲ್ಲ ಇದು ಮನೆಮಂದಿಯೆಲ್ಲಾ ಕುಳಿತು ನೋಡಬಹುದಾದ ಸಿನಿಮಾವಾಗಿದೆ.

ಚಿತ್ರ : ಕಾಲೇಜ್ ಕಲಾವಿದ
ನಿರ್ದೇಶನ : ಸಂಜಯ್ ಮಳವಳ್ಳಿ
ನಿರ್ಮಾಣ : ತರುಣ್ ಶರ್ಮ
ತಾರಾಗಣ: ಆರವ್ ಸೂರ್ಯ, ಚೈತ್ರಾ, ರಮೇಶ್ ಭಟ್, ಹರಿಣಿ, ಹುಲಿ ಕಾರ್ತಿಕ್ ಮುಂತಾದವರು.
ರೇಟಿಂಗ್ : ★★★